
ಕಸ್ತೂರಿ

ಮೇ, ೧೯೭೭



ಬೆಲೆ:


ಸದಾ ಲವಲವಿಕೆಯಿಂದಿರಿ
NESTLE
ಸತ್ವಭರಿತ ಉತ್ತೇಜಕರ ನೆಸ್‌ಕಾಫೆಯ
ರುಚಿ ಸವಿಯಿರಿ
ನೆಸ್‌ಕಾಫೆ®
NESCAFE
instant coffee
100% ಶುದ್ಧವಾದ ಕಾಫಿಯಿಂದ
ತಯಾರಿಸಲ್ಪಟ್ಟ ಏಕಮಾತ್ರ
ಇನ್‌ಸ್ಟೆಂಟ್ ಕಾಫಿ
ವಿಶ್ವದಲ್ಲೇ
ಅತ್ಯಂತ ಹೆಚ್ಚು
ಮಾರಾಟವಾಗುವ
ಇನ್‌ಸ್ಟೆಂಟ್ ಕಾಫಿ
NS-CAS-3/77 KAN

ಕಸ್ತೂರಿ



ವ್ಯವಸ್ಥಾಪಕ ಸಂಪಾದಕ:
ರಂಗನಾಥ ದಿವಾಕರ

ಪ್ರಧಾನ ಸಂಪಾದಕ:
ಖಾದ್ರಿ ಶಾಮಣ್ಣ

ಕಲೆ:
ಜೆ. ಬಿ. ಕುಲಕರ್ಣಿ

ಮುಖಪುಟ:
ನಿರೀಕ್ಷೆ
ಎಂ. ಬಿ. ಪಾಟೀಲ

ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟಣೆಗಾಗಿ ಕಳುಹಿಸುವ ಲೇಖ, ಪ್ರಬಂಧ, ಕಥೆ ಮೊದಲಾದವನ್ನು ಕಾಗದದ ಒಂದೇ ಮಗ್ಗಲಿಗೆ ವಿರಳವಾಗಿ ಬರೆದಿರಬೇಕು. ಲೇಖಕರ ಹೆಸರು ವಿಳಾಸ ಸ್ಪಷ್ಟವಿರಬೇಕು. ಅನುವಾದ, ರೂಪಾಂತರ ಇಲ್ಲವೆ ಸಾಧಾರ ಲೇಖನಗಳಾದರೆ ಮೂಲ ಲೇಖಕರ ಮತ್ತು ಪ್ರಕಾಶಕರ ಹೆಸರು ವಿಳಾಸಗಳಿರಬೇಕು. ಇಂಥ ಲೇಖನಗಳಿಗೆ ಪೂರ್ವಾನುಮತಿ ದೊರಕಿಸಿಕೊಂಡರೆ ಉತ್ತಮ. ಅಸ್ವೀಕೃತ ಲೇಖನಗಳು ತಿರುಗಿ ಬೇಕಾಗಿದ್ದರೆ, ಜೊತೆಗೆ ಸಾಕಷ್ಟು ಅಂಚೆ ಚೀಟಿಗಳನ್ನು ಇರಿಸಿ. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗೆ ಇದೆ.

ಚಂದಾದಾರರಿಗೆ ಸೂಚನೆ

ಕಸ್ತೂರಿ ತಿಂಗಳ ಒಂದನೇ ದಿನಾಂಕದೊಳಗೇ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲುಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಚಂದಾ ದರ

೩ ವರ್ಷ	(ಅಂಚೆ ಸೇರಿ)	ರೂ. ೩೫-೦೦
೨ ವರ್ಷ	,,	ರೂ. ೨೫-೦೦
೧ ವರ್ಷ	,,	ರೂ. ೧೪-೦೦
ಅರ್ಧ ವರ್ಷ	,,	ರೂ. ೭-೫೦

ಈ ಸಂಚಿಕೆಯಲ್ಲಿ

ಪುಸ್ತಕ ವಿಭಾಗ

ಸಹಚಿಂತನ

ಗುಣ ಮಟ್ಟ

'ಕಸ್ತೂರಿ'ಯ ಗುಣದೊಂದಿಗೆ ಸೌಂದರ್ಯವನ್ನು ಹೆಚ್ಚಿಸುವ ಬಗ್ಗೆ ಎಪ್ರಿಲ್ ಸಂಚಿಕೆಯಲ್ಲಿ ಶ್ರೀಯುತ 'ಬಾಣ'ರವರ ಅನಿಸಿಕೆಯನ್ನೂ ಅದರೊಂದಿಗೆ 'ಕಸ್ತೂರಿ'ಯ ಆಶ್ವಾಸನೆಯನ್ನೂ ಓದಿದೆ.

ಲೇಖನದ ಮುಕ್ತಾಯದ ಅನಂತರ, ಸುಭಾಷಿತ ಅಥವಾ ನಗೆಹನಿಯನ್ನು ಹಾಕುವುದು ಚೆಂದವಲ್ಲವೆನ್ನುವ ಶ್ರೀಯುತ 'ಬಾಣ'ರವರ ಅಭಿಪ್ರಾಯ ಸರಿಯಲ್ಲ. 'ಕಸ್ತೂರಿ' ಕೈಗೆ ಸಿಕ್ಕಿದೊಡನೆ, ಇಂತಹ ಲೇಖನದ ಅನಂತರದ ಸುಭಾಷಿತಗಳನ್ನೂ ಸಣ್ಣ ಕಥೆಗಳನ್ನೂ ಹುಡುಕಿ ಓದುವ ಅನೇಕರನ್ನು ನಾನು ಕಂಡಿದ್ದೇನೆ. ಅಲ್ಲದೆ ಲೇಖನದ ಕೊನೆಯಲ್ಲಿ ಸ್ಥಳ ಉಳಿದರೆ ಅದನ್ನು ವೃಥಾ ಖಾಲಿ ಬಿಡುವುದು ಸರಿಯಲ್ಲ.

ಅರಕಲಗೂಡು —ಎಂ. ಸಿ. ಚಂದ್ರಶೇಖರಯ್ಯ

ನಾನೊಬ್ಬ 'ಕಸ್ತೂರಿ'ಯ ಓದುಗ ಮತ್ತು ಪ್ರೇಮಿ. ಬಹಳ ಕಾಲದಿಂದಲೂ, 'ಕಸ್ತೂರಿ'ಯಲ್ಲಿ ಬರುವ ವೈಚಾರಿಕ, ಚಿಂತನಶೀಲ ಮತ್ತು ಮುಖ್ಯವಾಗಿ ಪುಸ್ತಕ ವಿಭಾಗ ಇವುಗಳಿಗಾಗಿ ನಾನು ಅವನ್ನು ಬಹಳ ಆದರಿಸುತ್ತೇನೆ ಮತ್ತು ಮೆಚ್ಚುತ್ತೇನೆ.

ಆದರೆ ಈಗಿನ 'ಕಸ್ತೂರಿ'ಯು ಬಹಳವಾದ ಕುಂದು ಕೊರತೆ ಮತ್ತು ತಪ್ಪುಗಳಿಂದ ಕೂಡಿರುತ್ತದೆ ಎಂದು ತಿಳಿಸಲು ವಿಷಾದಿಸುತ್ತೇನೆ. ಅವು ಯಾವುವೆಂದರೆ,

೧. ಮೊದಲನೆಯದಾಗಿ ಫೆಬ್ರುವರಿ ೧೯೭೭ರ ಸಂಚಿಕೆಯಲ್ಲಿ ಪ್ರಕಟವಾಗಿದ್ದ 'ಬದುಕು ಕಲಿಯಿರಿ' ಪುಸ್ತಕ ವಿಭಾಗವು ಕೇವಲ ನಾಲ್ಕೈದು ಪುಟ ಮಾತ್ರವಿತ್ತು. ಇದಕ್ಕೆ ಬದಲಾಗಿ 'ಮೋಸಗಾರರು' ಮತ್ತು 'ಭೀಷ್ಮ: ಮಹಾಭಾರತದ ಯುದ್ಧಕ್ಕೆ ಮೂಲ ಕಾರಣ' ಇವೆರಡೂ ಎರಡೆರಡು ಬಾರಿ ಮುದ್ರಿಸಲ್ಪಟ್ಟಿದ್ದವು.

೨. ಇನ್ನೊಂದು ವಿಷಯವೆಂದರೆ ಎಪ್ರಿಲ್ 'ಕಸ್ತೂರಿ'ಯಲ್ಲಿ 'ಪ್ರಜಾತಂತ್ರವನ್ನು ಮೆಟ್ಟಿ ನಿಂತವರು' ಮತ್ತು 'ಅಕ್ಟೋಪಸ್' ಎರಡು ಲೇಖನಗಳು ಪೂರಾ ಪ್ರಕಟವಾಗದೆ ನಾಲ್ಕು ಖಾಲಿ ಹಾಳೆಗಳಿದ್ದವು.

ಒಳ್ಳೆಯ ಲೇಖನಗಳು ಬರುವುದೇ ಅಪರೂಪವಾಗುತ್ತಿರುವ ಈ ಕಾಲದಲ್ಲಿ ಬಂದ ಲೇಖನಗಳೂ ಅಪೂರ್ಣವಾಗಿದ್ದರೆ ಬಹಳ ಬೇಸರವಾಗುತ್ತದೆ ಮತ್ತು ಪುಸ್ತಕ ವಿಭಾಗದಲ್ಲಿ ಕಥೆಗಳಿಗೆ ಬದಲಾಗಿ ಜೀವನಚರಿತ್ರೆ, ಅದ್ಭುತ ಘಟನೆಗಳು ಮುಂತಾದುವನ್ನು ಪ್ರಕಟಿಸಿದರೆ ಓದಲು ಹರ್ಷವಾಗುತ್ತದೆ.

ಹಾಸನ —ರ. ಬಾಲಕೃಷ್ಣ

ದುರದೃಷ್ಟಕರ. ಏಕೆಂದರೆ ಫೆಬ್ರುವರಿ ಮತ್ತು ಎಪ್ರಿಲ್ ಎರಡೂ ದೋಷಪೂರ್ಣ ಸಂಚಿಕೆಗಳೇ ನಿಮಗೆ ಬಂದಿವೆಯಲ್ಲ. ಒಂದೊಂದು ಸಂಚಿಕೆಯಲ್ಲಿ ಕೆಲ ಪುಟ ಇಲ್ಲದಿರುವುದು; ಅದರ ಬದಲು ಮತ್ತೆ ಕೆಲ ಪುಟಗಳು ಎರಡೆರಡು ಸಾಲ ಸಾಲ ಬಿದ್ದಿರುವುದು; ಕೆಲವೊಮ್ಮೆ ಕೆಲ ಪುಟಗಳು ಮುದ್ರಿತವಾಗದೇ ಉಳಿಯುವುದು ತೀರ ಅಪರೂಪಕ್ಕೊಮ್ಮೊಮ್ಮೆ. ಅದೂ ಹತ್ತಾರು ಸಾವಿರ ಪ್ರತಿಗಳಲ್ಲಿ ಒಂದೆರಡರಲ್ಲಿ ಆಗುವ ಸಂಭವವಿದೆ. ಫೆಬ್ರುವರಿ ಮತ್ತು ಎಪ್ರಿಲ್ ಸಂಚಿಕೆಗಳ ಬೇರೆ ಪ್ರತಿಗಳನ್ನು ನೋಡಿದರೆ ಈ ವಿಷಯ ಖಂಡಿತ ನಿಮಗೆ ಮನದಟ್ಟಾಗುತ್ತದೆ. —ಸಂ]

ವ್ಯಕ್ತಿ ಚಿತ್ರಗಳು

ನಿಮ್ಮ ಎಪ್ರಿಲ್ ಸಂಚಿಕೆಯಲ್ಲಿ ಬಂದ ವ್ಯಕ್ತಿ ಚಿತ್ರಗಳ ಬಗ್ಗೆ ಒಂದೆರಡು ಮಾತು.

ಸಾಮಾನ್ಯವಾಗಿ ಭಾರತೀಯ ಭಾಷಾಪತ್ರಿಕೆಗಳಲ್ಲಿ ಜೀವಂತ ಭಾರತೀಯರ ಬಗ್ಗೆ, ಅದರಲ್ಲೂ ನಮಗೆ ಸಮೀಪ ಇರುವವರ ಬಗ್ಗೆ ಬರೆಯಬೇಕಾದಾಗ ಹಲವು ಪರಿಮಿತಿಗಳ ಚೌಕಟ್ಟಿನೊಳಗೇ ಬರೆಯಬೇಕಾಗುತ್ತದೆಂಬುದರ ಅರಿವು ನನಗಿದೆ. ಪಾಶ್ಚಾತ್ಯರಂತೆ ಯಾವುದೇ ವ್ಯಕ್ತಿಯ, ವ್ಯಕ್ತಿತ್ವದ ಸಾಧನೆಯ ಇತಿಮಿತಿಗಳನ್ನು ಕುರಿತು ನಮ್ಮ ಸ್ಪಷ್ಟ ಅಭಿಪ್ರಾಯಗಳನ್ನೂ, ಅನಿಸಿಕೆಗಳನ್ನೂ ನಾವು ಬರೆಯುವುದಿಲ್ಲ. ಅದಕ್ಕೆ ಕೆಲ ಮಟ್ಟಿಗೆ ನಮ್ಮ ಸಾಮಾಜಿಕ ಪರಿಸರಗಳೂ ಕಾರಣವಿರಬೇಕು. ಆದರೆ 'ಕಸ್ತೂರಿ'ಯಲ್ಲಿ ಸುಮಾರಾಗಿ ಕಳೆದೆರಡು ವರ್ಷಗಳನ್ನುಳಿದರೆ ಮೊದಲು ಬರುತ್ತಿದ್ದ ವ್ಯಕ್ತಿಚಿತ್ರಣಗಳಲ್ಲಿ ಒಂದು ಅಂಶ ಸ್ಪಷ್ಟವಾಗಿ ಒಡೆದು ಕಾಣುತ್ತಿತ್ತು. ಅದೆಂದರೆ ಕನ್ನಡದ ಬೇರಾವುದೇ ಪತ್ರಿಕೆಯಲ್ಲಿ ಬರುವ ಚಿತ್ರಣಕ್ಕಿಂತ 'ಕಸ್ತೂರಿ'ಯಲ್ಲಿ ಬಂದುದು ಭಿನ್ನವಾಗಿರುತ್ತಿತ್ತು. ಚಿತ್ರಣಕ್ಕೆಂದು ಆಯ್ದುಕೊಂಡ ವ್ಯಕ್ತಿಯು ಅವನ ಬಗ್ಗೆ ಬರೆದುದನ್ನು ಓದಿ ಮುಗಿಸಿದ ನಂತರ ಓದುಗರಿಗೆ ನಿಜಕ್ಕೂ ಅರ್ಥವಾಗುತ್ತಿದ್ದ. ಅದಕ್ಕೆ ಕಾರಣ ಅವನನ್ನು ಲೇಖಕರು ತಮ್ಮ ಬತ್ತಳಿಕೆಯಲ್ಲಿನ ವಿಶೇಷಣಗಳನ್ನೆಲ್ಲ ಸುರಿದು ವರ್ಣಿಸುತ್ತಿದ್ದುದರಿಂದಲ್ಲ. ಅವನ ಜೀವನದ ಸಾಧನೆಗಳ ಮೇಲೆ ಹಾಗೂ ಅವನ ವಿಚಾರಗಳ ಮೇಲೆ, ಅಭಿಪ್ರಾಯಗಳ ಮೇಲೆ ಪರ್ಯಾಯವಾಗಿ ಬೆಳಕು ಚೆಲ್ಲುವಂತಹ ಘಟನೆಗಳನ್ನು ಅವಶ್ಯಕತೆಗೆ ಮೀರದ ಶಬ್ದಗಳಲ್ಲಿ ಹೇಳುತ್ತಿದ್ದುದರಿಂದ.

ಈ ದೃಷ್ಟಿಯಿಂದ ನೋಡಿದಾಗ ಎಪ್ರಿಲ್ 'ಕಸ್ತೂರಿ'ಯಲ್ಲಿ ಬಂದ 'ಶಾರದಾ ಹಾನಗಲ' ಮತ್ತು 'ಹಂಪಿಯ ತರುಣ ತಪಸ್ವಿ' ಎರಡೂ ಲೇಖನಗಳು ಪ್ರಾಜ್ಞ ಓದುಗರನ್ನು ತಣಿಸುತ್ತವೆಂದು ನನಗಂತೂ ಅನಿಸಿಲ್ಲ. ಶ್ರೀಮತಿ ಶಾರದಾರ ಬಗ್ಗೆ ಬರೆದಿರುವ ಲೇಖಕರಿಗೆ ಅನೇಕ ವರ್ಷಗಳಿಂದ ಅವರ ನಿಕಟ ಪರಿಚಯದ ಅನುಕೂಲವಿರುವಾಗ ಇನ್ನೂ ಕಡಿಮೆ ಶಬ್ದಗಳಲ್ಲಿ ಇನ್ನೂ ಅರ್ಥಪೂರ್ಣವಾದ ಪ್ರಸಂಗಗಳನ್ನು

ಹೇಳಬಹುದಿತ್ತು. 'ಕಸ್ತೂರಿ'ಯು ಈ ಎಂಟು ಪುಟಗಳನ್ನು ಓದಿದಾಗ ಮೂರು ನಾಲ್ಕು ಬೇರೆ ಬೇರೆ ಘರಾಣೆಗೆ ಸೇರಿದ ಗುರುಗಳ ಬಳಿ ಅಭ್ಯಾಸ ಮಾಡಿದರು ಎಂಬುದನ್ನು ಹೊರತು ಹೆಚ್ಚೇನೂ ವೇದ್ಯವಾಗುವುದಿಲ್ಲ

ಹಂಪಿಯ ತರುಣ ತಪಸ್ವಿಗಳ ಕುರಿತಿರುವ ಲೇಖನದ ಬಗ್ಗೆ ಹೇಳಬೇಕಾದದ್ದು ಒಂದೇ ಒಂದು ಮಾತು. ಶ್ರೀ ಸ್ವಾಮಿಗಳ ಬಗ್ಗೆ ಈಗಾಗಲೇ ಬರೆಯುವಂಥ ಅವಸರವೇನಿತ್ತು? ಅವರು ಇನ್ನೂ ಹಲವಾರು ವರ್ಷಗಳಲ್ಲಿ ಸಾರ್ವಜನಿಕರಿಗೆ ಅವಶ್ಯ ತಿಳಿಯಬೇಕಾದಂಥದ್ದೇನಾದರೂ ಸಾಧಿಸಿದರೆ ಪವಾಡಸದೃಶ ಐತಿಹ್ಯಗಳನ್ನುಳಿದು-ಆಗ ಬರೆಯಬಹುದಿತ್ತು

'ಕಸ್ತೂರಿ' ಹಿಂದಿನಂತೆ ವ್ಯಕ್ತಿಚಿತ್ರಣಗಳಲ್ಲಿ ಹಾಗೂ ಇತರ ಲೇಖನಾದಿಗಳ ವಿಷಯದಲ್ಲಿ ಕೂಡ ಮೌಲಿಕವಾದುದನ್ನು, ಇತರರಿಂದ ಭಿನ್ನವಾದುದನ್ನು ನೀಡಬೇಕೆಂದೂ ಅದು ನಿತ್ಯನೂತನವಾಗಿರಬೇಕೆಂದೂ ಅಪೇಕ್ಷಿಸುತ್ತೇನೆ.

ಬೆಳಗಾವಿ -ಕಮಲಾಕರ

ಏಪ್ರಿಲ್ 'ಕಸ್ತೂರಿ'ಯಲ್ಲಿ ಪ್ರಕಟವಾದ ಲಕ್ಷ್ಮೀ ನಾಗರಾಜಯ್ಯ ಅವರು ಬರೆದ 'ಉತ್ಕಲಮಣಿ ಗೋಪಬಂಧು ದಾಸರು' ಹಾಗೂ ಅದೇ ಸಂಚಿಕೆಯಲ್ಲಿ ಶ್ರೀ ಎನ್ಕೆ ಅವರು ಬರೆದ ಸಂಗೀತ ಮಹಾವಿದ್ಯಾಲಯದ ಪ್ರಥಮ ಪ್ರಾಚಾರ್ಯೆ 'ಶಾರದಾ ಹಾನಗಲ್' ಲೇಖನಗಳು ತುಂಬಾ ಸ್ವಾರಸ್ಯಮಯವಾಗಿವೆ.

ಭುವನೇಶ್ವರ -ಸುರೇಶ ಜೋಶಿ

ಮುದ್ರಣ ದೋಷ

ಏಪ್ರಿಲ್ ತಿಂಗಳ 'ಕಸ್ತೂರಿ' ಕೈ ಸೇರಲು ಬಹು ತಡವಾಯಿತೆಂಬ ಅಸಮಾಧಾನ ಅದರ ಪುಟಗಳಲ್ಲಿ ಕಣ್ಣಾಡಿಸಿದಾಗ ಇಲ್ಲವಾಯಿತು. ಕಾರಣ, ಈ ಸಾರಿಯ ಸ್ಫುಟವಾದ ಮುದ್ರಣ. ಕೊಂಬು, ಒತ್ತಕ್ಷರಗಳನ್ನು ಊಹಿಸಿ ಓದಿಕೊಳ್ಳಬೇಕಾಗಿದ್ದ ಹಳೆಯ ಅಚ್ಚಿನ ಬದಲು ಸುಂದರವಾದ ಈ ಮುದ್ರಣವಿನ್ಯಾಸ ಮುಂದೆಯೂ ಇರುತ್ತದೆಂದು ಹಾರೈಸುವೆ.

ಮತ್ತೊಂದು ಮಾತು. ಮುದ್ರಣದೋಷಗಳ ನಿವಾರಣೆಗೆ 'ಕಸ್ತೂರಿ' ಇನ್ನೂ ಹೆಚ್ಚು ಲಕ್ಷ್ಯ ವಹಿಸಬೇಕೆಂದು ನನ್ನ ಅನಿಸಿಕೆ. ಸ್ವಚ್ಛವಾದ ಬಟ್ಟೆಯ ಮೇಲಿನ ಕಲೆಗಳು ಇನ್ನೂ ಎದ್ದು ಕಾಣುತ್ತವೆ; ಅಂತೆಯೇ ಸ್ಫುಟವಾದ ಅಚ್ಚಿನಲ್ಲಿ ಮುದ್ರಣ ದೋಷಗಳು. ದೋಷರಹಿತ ಮುದ್ರಣ ಓದುಗನಿಗೆ ಆನಂದದಾಯಕ.

ತುಮಕೂರು - ಜಿ. ಮೃತ್ಯುಂಜಯ

ಅಪಹೃತ

ಸನ್ ಯಾತ್‌ಸೆನ್ ಅವರ ಸಾಹಸ ಜೀವನ ಚರಿತ್ರೆಯು ಈಗಾಗಲೇ ನಿಮ್ಮ ಪತ್ರಿಕೆಯಲ್ಲಿ ಸುಮಾರು ೧೨-೧೫ ತಿಂಗಳುಗಳ ಹಿಂದೆ ಇದೇ ಪುಸ್ತಕ ವಿಭಾಗದಲ್ಲಿ ಕಂಡಿದೆ. ತಾವು ದಯವಿಟ್ಟು ಪರಿಶೀಲಿಸಬೇಕಾಗಿ ವಿನಂತಿ. ಇನ್ನು ಮುಂದೆ 'ಕಸ್ತೂರಿ'ಯ ಓದುಗರ ಜ್ಞಾಪಕಶಕ್ತಿಗೆ ದಯಮಾಡಿ ಸವಾಲನ್ನು ಹಾಕಬೇಡಿ. ಮತ್ತು ಇಂತಹ ಪ್ರಮಾದಗಳು 'ಕಸ್ತೂರಿ'ಗೆ ಶೋಭಿಸುವುದಿಲ್ಲ ಎಂಬುದನ್ನು ವಿಶದಪಡಿಸುತ್ತೇನೆ.

ಬೆಂಗಳೂರು -ಆರ್. ಸಿ. ವೆಂಕಟೇಶರಾವ್

[ಸನ್‌ಯಾತ್‌ಸೇನರ ಜೀವನದಲ್ಲಿಯ ಈ ಪ್ರಕರಣ ಈ ಮೊದಲೆಂದೂ 'ಕಸ್ತೂರಿ'ಯಲ್ಲಿ ಬಂದಿಲ್ಲ. ೧೯೬೫ರ ಆಗಸ್ಟ್ 'ಮಯೂರ'ದಲ್ಲಿ ಬೇರೆಯವರು ಈ ವಿಷಯವನ್ನು ಕುರಿತು ಬರೆದಿದ್ದಾರೆಂದು ನಂತರ ತಿಳಿಯಿತು. 'ಕಸ್ತೂರಿ'ಯ ಪುಸ್ತಕ ವಿಭಾಗದಲ್ಲಿ 'ಅಪಹೃತ'ವನ್ನು ಪ್ರಕಟಿಸುವಾಗ ಅದು ಆಧಾರಿತ ಲೇಖನವೆಂದು ಸೂಚಿಸಬೇಕಿದ್ದುದು ಕಣ್ತಪ್ಪಿನಿಂದ ಉಳಿದು ಹೋಗಿದ್ದಕ್ಕೆ ವಿಷಾದಿಸುತ್ತೇನೆ. ಎಡ್ಗರ್ ಸ್ನೋ, ಎಗ್ನೇಸ್ ಸ್ಮೆಡ್ಲಿ, ಇಟರ್‌ಸಿಂಗರ್ ಮೊದಲಾದವರು ಈ ವಿಚಾರದಲ್ಲಿ ಬರೆದಿದ್ದ ಲೇಖನಗಳಿಂದ ಶ್ರೀ ಚಂದ್ರಶೇಖರರು ಇದನ್ನು ಸಂಗ್ರಹಿಸಿದ್ದಾರೆ. -ಸಂ]

ಸಮಯೋಚಿತ

ಏಪ್ರಿಲ್ ೭೭ರ ಸಂಚಿಕೆಯಲ್ಲಿ ಖಾ. ಶಾ. ಅವರ "ಜನತಂತ್ರದ ಪವಾಡ" ಹಾಗೂ ಲಾಂಗೂಲಾಚಾರ್ಯರ 'ಪ್ರಜಾಸತ್ತೆಯ ದೇಖಾವೆ' ಸಮಯೋಚಿತವೂ ವಿಚಾರಪೂರ್ಣವೂ ಆಗಿವೆ.

ಗುಲಬರ್ಗಾ - ಆರ್. ಕೆ. ಕುಲಕರ್ಣಿ

ಆಧುನಿಕ ಔಷಧಿ

ಏಪ್ರಿಲ್ ಸಂಚಿಕೆಯಲ್ಲಿ ಪ್ರಕಟವಾದ ಲೇಖನ "ಅಪರಾಧಿ ಸ್ಥಾನದಲ್ಲಿ ಆಧುನಿಕ ಔಷಧ" ಸಕಾಲಿಕವಾಗಿದೆ. ಯಾವುದೇ ಕಾಯಿಲೆಗೆ ಡಾಕ್ಟರರನ್ನು ಭೇಟಿಯಾಗದೆ ಔಷಧಿ ಅಂಗಡಿಯಿಂದ ಔಷಧಿಗಳನ್ನು ತಂದು ನುಂಗುವುದು ಈಗ ಸರ್ವೇ ಸಾಮಾನ್ಯವಾದ ಚಟವಾಗಿಬಿಟ್ಟಿದೆ. ಹೊಸ ಔಷಧಿಗಳನ್ನು ಸಾಕಷ್ಟು ಪರೀಕ್ಷೆ ಮಾಡದೆ ದಿಢೀರನೇ ಪೇಟೆಗೆ ಬಿಡುತ್ತಿರುವ ಕಂಪನಿಗಳ ಜೊತೆಗೆ ಪೂರ್ವಾಪರ ವಿಚಾರವಿಲ್ಲದೆ ಔಷಧಿ ತಯಾರಕರ ಪ್ರತಿನಿಧಿಗಳು ಒದಗಿಸಿದ ಪ್ರಚಾರ ಸಾಹಿತ್ಯ ಮತ್ತು ಸ್ಯಾಂಪಲುಗಳ ಆಧಾರದ ಮೇಲೆ ಔಷಧಿಗಳನ್ನು ಸಿಫಾರಸು ಮಾಡುವ ವೈದ್ಯರುಗಳು ಸಹ ಈ ವಿಷಚಕ್ರದಲ್ಲಿ ಪಾಲುಗೊಂಡಿದ್ದಾರೆ. 'ಔಷಧಿ ಶಿಫಾರಸು ಚೀಟಿ' ಇಲ್ಲದೆ ಔಷಧಗಳನ್ನು ಕೊಡಕೂಡದೆಂಬ ನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದರೆ ಸ್ವಯಂ-ಔಷಧೀಕರಣವನ್ನು ಭಾಗಶಃ ತಡೆಯಬಹುದು.

ಈ ಸಂಚಿಕೆಯ ಕಥೆ 'ಸತ್ಯದ ಶಕ್ತಿ' ಅಮೋಘವಾಗಿದೆ. ಇತ್ತೀಚಿನ ದಿನಗಳಲ್ಲಿ 'ಕಸ್ತೂರಿ'ಯಲ್ಲಿ ಈ ತರಹದ ಕಥೆಗಳೇ ಬಂದಿರಲಿಲ್ಲ.

ಶಿರಾಳಕೊಪ್ಪ -ಆನಂದ ಗಲಗಲಿ

ಕಸ್ತೂರಿ

ಸಂಚಿಕೆ : ೫ | ಕಸ್ತೂರಿ, ಮೇ ೧೯೭೭ | ವರ್ಷ : ೨೧

ಪತ್ರಿಕೆ - ಸ್ವಾತಂತ್ರ್ಯ - ಓದುಗ

ಖಾ. ಶಾ

ಪತ್ರಿಕಾ ಸ್ವಾತಂತ್ರ್ಯ ಜನತಂತ್ರದಲ್ಲಿ ಒಂದು ಜ್ವಲಂತ ಪ್ರಶ್ನೆ. ಪತ್ರಿಕೆ ಹಾಗೂ ಇತರ ಸಮೂಹ ಮಾಧ್ಯಮಗಳನ್ನು ಒಂದು ರಾಷ್ಟ್ರದ ಕಣ್ಣು ಕಿವಿ ಎನ್ನುತ್ತಾರೆ. ಕಳೆದ ೧೮-೨೦ ತಿಂಗಳುಗಳ ಅನುಭವದ ಬಳಿಕ ಪತ್ರಿಕಾ ಸ್ವಾತಂತ್ರ್ಯದ ಅಗತ್ಯ, ಮಹತ್ವ ನಮಗೆ ಅರಿವಾಗಿದೆ. ಮತ್ತೆ ನಮಗೆ ಅದು ಸಿಕ್ಕೀತೋ ಇಲ್ಲವೋ ಎನ್ನುವ ಪರಿಸ್ಥಿತಿ ಇತ್ತು. ಸುದೈವ, ಭಾರತ ಜನತೆ ಮಹಾಮಹಿಮರು. ಇತರ ಮೂಲ ಸ್ವಾತಂತ್ರ್ಯಗಳೊಂದಿಗೆ ಪತ್ರಿಕಾಸ್ವಾತಂತ್ರ್ಯವನ್ನೂ ಮತ್ತೆ ನಮಗೆ ನೀಡಿದ್ದಾರೆ.

ಪತ್ರಿಕಾಸ್ವಾತಂತ್ರ್ಯ ಎಂದರೆ ಮಾಲಿಕನ ಸ್ವಾತಂತ್ರ್ಯವೇ ಅಥವಾ ಸಂಪಾದಕನ ಸ್ವಾತಂತ್ರ್ಯವೇ? ಮಾಲಿಕನ ಸ್ವಾತಂತ್ರ್ಯ ಎಂದಿಗೂ ಅಲ್ಲ, ಆಗಬಾರದು. ಸಂಪಾದಕನ ಸ್ವಾತಂತ್ರ್ಯ, ಸಂಪಾದಕೀಯ ವರ್ಗದ ಸ್ವಾತಂತ್ರ್ಯ. 'ಹೇಳಿ ಬರೆಯಿಸಿ' ಮಾದರಿಯ ಸಂಪಾದಕರಿಗೆ ಯಾವ ದೇಶದಲ್ಲೂ ಕೊರತೆ ಇಲ್ಲ. ಆದರೆ ಅಂಥವರು ವೃತ್ತಿಯ ಘನತೆ ಎತ್ತಿಹಿಡಿಯಲಾರರು. ನಿಜವಾಗಿ ಸ್ವಾತಂತ್ರ್ಯ ಚಲಾಯಿಸಬಲ್ಲ ಸಂಪಾದಕರು ಇಂದು ಬೇಕು. ಹಿಂದೆ ಇದ್ದರು.

ಪತ್ರಿಕಾವೃತ್ತಿಯಲ್ಲಿ ಒಂದು ಮೂಲ ನಿಯಮ ಇದೆ: "ಸತ್ಯ ಪವಿತ್ರ, ಟೀಕೆ ಮುಕ್ತ"- ಸತ್ಯ ಸಂಗತಿಗಳನ್ನು ಮುಚ್ಚಿಡಲು, ತಿರುವು ಮುರುವು ಮಾಡಿ ಹೇಳಲು ಯಾವ ಪತ್ರಕರ್ತನಿಗೂ ಅಧಿಕಾರವಿಲ್ಲ. ಅಭಿಪ್ರಾಯ ತಿಳಿಸುವ ಎಲ್ಲ

ಸ್ವಾತಂತ್ರ್ಯವೂ ಉಂಟು. ಇದು ಆದರ್ಶ ಸ್ಥಿತಿ. ಎಲ್ಲ ಸಮಾಜಗಳಲ್ಲೂ ಓರೆಕೋರೆ, ಕೊರತೆ ಇರುತ್ತದೆ, ಅಂತೆಯೇ ನಮ್ಮಲ್ಲೂ.

ಪತ್ರಿಕಾ ಸ್ವಾತಂತ್ರ್ಯಕ್ಕೆ ಯಾರು ಯಾರಿಂದ ಗಂಡಾಂತರ? ಪ್ರಭುತ್ವದಿಂದ, ಪಕ್ಷಗಳಿಂದ, ಪಟ್ಟಭದ್ರ ಹಿತಗಳಿಂದ, ಮಠ-ಮಸೀದಿ- ಚರ್ಚುಗಳಿಂದ ಒದಗಬಹುದು. ಪ್ರಭುತ್ವದ ಕೈಲಿ ದಂಡಶಕ್ತಿ, ಪಟ್ಟಭದ್ರಹಿತದ ಕೈಲಿ ಧನಶಕ್ತಿ, ಇತರರ ಕೈಲಿ ಒಂದೊಂದು ಮಿತಿಯಲ್ಲಿ ಜನಶಕ್ತಿ. ಇವಾವುದಕ್ಕೆ ಹೆದರಿ ನಡೆದರೂ ಸ್ವಾತಂತ್ರ್ಯ ಮುಕ್ಕಾಗುತ್ತದೆ.

ಪತ್ರಿಕೆಗಳು ಹಿಂದೊಂದು ಕಾಲದಲ್ಲಿ ದೀಕ್ಷೆ ಆಗಿದ್ದುವು, 'ಮಿಷನ್' ಎನಿಸಿದ್ದವು. ಈಗ ಅದೊಂದು ಉದ್ಯಮ. ಭಾರಿ ಬಂಡವಾಳ ಬೇಕು. ಭಾರಿ ಯಂತ್ರ ಉಪಕರಣಬೇಕು. ಬೃಹತ್ ಸಿಬ್ಬಂದಿ–ಸೌಕರ್ಯ ಬೇಕು. ಅವಕ್ಕೆಲ್ಲ ಸಾಕಷ್ಟು ಹಣ ಬೇಕು. ಅದು ಬರುವುದು ಎಲ್ಲಿಂದ? ಓದುಗರು ಕೊಡುವ ಪೈಸೆ ಪುಡಿಗಾಸು ಕಾಗದಕ್ಕೆ, ಮುದ್ರಣದ ಶಾಯಿಗೆ ಸಾಕಾಗಬಹುದು; ಉಳಿದ ಖರ್ಚು ವೆಚ್ಚ ತೂಗಿಸುವುದು ಹೇಗೆ? ಪತ್ರಿಕೆಯ ಸ್ಥಳವನ್ನು ಜಾಹಿರಾತುದಾರರಿಗೆ ಮಾರುವುದರಿಂದ. ಜಾಹಿರಾತು ಕೊಡುವವರು ಯಾರು? ಸರಕಾರ, ಖಾಸಗಿ ಉದ್ಯಮರಂಗ. ಅದಕ್ಕೆ ಯಾವ ಆಧಾರ? ಯಾವ ಪತ್ರಿಕೆಯನ್ನು ಹೆಚ್ಚು ಜನ ಓದುವರೋ ಅದಕ್ಕೆ ಹೆಚ್ಚು ಜಾಹಿರಾತು. ಇದು ವ್ಯವಹಾರ ಸಂಬಂಧ.

ಆದರೆ ಯಾವಾಗಲೂ ಹಾಗೆ ಆಗುವುದಿಲ್ಲ. ಮುಖ ನೋಡಿ ಮಣೆ ಹಾಕುತ್ತಾರೆ. ಪತ್ರಿಕೆಯ ನೀತಿ ನೋಡಿ ಸರಕಾರ, ಸ್ಥಳೀಯ ಸಂಸ್ಥೆಗಳು, ಸಹಕಾರ ಸಂಸ್ಥೆಗಳು ತಮ್ಮ ಜಾಹಿರಾತು ನೀತಿ ನಿರ್ಧರಿಸುವುದುಂಟು. ಇಲ್ಲಿ ಪಕ್ಷಪಾತಕ್ಕೆ ಎಡೆ ಇದೆ. ಭಾರಿ ಬಂಡವಾಳಗಾರರ ಕೈಲಿ ಇರುವ ಉದ್ಯಮರಂಗ ತಮಗೆ ಬೇಕಾದವರಿಗೆ ಪೋಷಣೆ ನೀಡಬಹುದು. ಇದಕ್ಕೆಲ್ಲ ನೀತಿ ನಿಯಮ ಇರಬೇಕು. ಇದ್ದರೆ ಯಾರಿಗೂ ಯಾರ ಹಂಗೂ ಇರುವುದಿಲ್ಲ.

ಪತ್ರಿಕೆಗೆ ಯಾರ ಹಂಗೂ ಇರಬಾರದು. ಓದುಗರ ಹಂಗು ಮಾತ್ರ ಇರಬೇಕು. ಓದುಗರಿಗೆ ಪತ್ರಿಕೆಯ ಹಂಗು ಇರಬೇಕು. ಇಪ್ಪತ್ತು, ಮೂವತ್ತು, ಐವತ್ತು, ನೂರು ಪೈಸೆ ಕೊಟ್ಟು ಪತ್ರಿಕೆ ಕೊಂಡು ಓದುವವನೇ ಪತ್ರಿಕೆಯ ನಿಜವಾದ ಒಡೆಯ. ಅವನ ಇಷ್ಟಾನಿಷ್ಟಗಳಿಗೆ ಸಂಪಾದಕ–ವ್ಯವಸ್ಥಾಪಕ ಬೆಲೆ ಕೊಡಬೇಕು. ಪತ್ರಿಕೆ ಜನಮನದ ಕನ್ನಡಿಯೂ ಹೌದು; ಜನಮನವನ್ನು ರೂಪಿಸುವ ಸಾಧನವೂ ಹೌದು. ಜನಪದದ ನಾಡಿಯ ಬಡಿತ ಗೊತ್ತಿರಬೇಕು, ಜನಕ್ಕೆ ದಿಕ್ಕುದೆಸೆ ತೋರಿಸಬೇಕು. ಇದು ಪತ್ರಿಕೆ ಹಾಗೂ ಓದುಗರ ನಡುವಣ ವಿಹಿತ, ಸಮುಚಿತ ಸಂಬಂಧ. ✡

3-1-1977

ದೇವನ ಅರಿವು

ದೇವನ ಅಸ್ತಿತ್ವದ ಅರಿವುಂಟಾಗುವುದು ಏಕಾಂತದಲ್ಲಿ, ನನ್ನಲ್ಲಿ, ನನ್ನ ಅಂತರಾತ್ಮದಲ್ಲಿ. ಆಕಾಶದಲ್ಲಾಗಲಿ, ಅಪರಿಮಿತ ಅವಕಾಶದಲ್ಲಾಗಲಿ ಈ ಅನುಭವ ಅಸಾಧ್ಯ. ಅದರೂ ಯೇಸುವು ಹೇಳುವಂತೆ (ಕಣ್ಣಿಗೆ ಕಾಣದ ಆತ್ಮಮಂದಿರದ) ಬಾಗಿಲುಗಳು ತೀರ ಇಕ್ಕಟ್ಟಾಗಿವೆ; ಅಪರೂಪಕ್ಕೆ ಕೆಲವೇ ಕೆಲವರು ಮಾತ್ರ ಅದನ್ನು ಪ್ರವೇಶಿಸಲು ಧೈರ್ಯ ಮಾಡುತ್ತಾರೆ. ಆದರೆ ಅದನ್ನೊಳಸೇರಿದವರು ಹಾಳಾಗುವುದಿಲ್ಲ, ಪುನಃ ಜನಿಸುತ್ತಾರೆ.

—ಹ್ಯೂ ಲಾವೇರಿ


ಅರ್ನ್ಸ್ಟ್ ಬಾರ್ಲಾಕ್ ಮತ್ತು ಅವನ ಶಿಲ್ಪ

ಜಗತ್ತಿನಲ್ಲಿ ಮನುಷ್ಯ ಬೆನ್ನು ಸೆಟೆಸಿ ಎರಡು ಕಾಲುಗಳ ಮೇಲೆ ನಿಲ್ಲತೊಡಗಿ ಲಕ್ಷಾವಧಿ ವರ್ಷಗಳು ಸಂದಿರಬೇಕು. ತನ್ನ ಕೈಗಳನ್ನು, ಮುಖವನ್ನು ಮನುಷ್ಯತ್ವದ ವಿಕಾಸಕ್ಕಾಗಿ ಅವನು ಬಳಸತೊಡಗಿದಾಗಿನಿಂದಲೂ ಒಂದಿಲ್ಲೊಂದು ಪ್ರಕಾರದ ಕಲೆ ಹುಟ್ಟುತ್ತಲೇ ಬಂದಿದೆ. ಬಹುಶಃ ನಿಸರ್ಗದ ಅನುಕರಣವಾಗಿ ಮೊದಲು ಅವನು ಮೈಗೂಡಿಸಿಕೊಂಡಿರಬಹುದಾದ ಕ್ರಿಯೆಯೇ ಅವನ ಮನಸ್ಸು ವಿಕಾಸಗೊಂಡಂತೆ ಸಂಗೀತ, ಶಿಲ್ಪ, ಚಿತ್ರಕಲೆಗಳ ರೂಪ ಪಡೆದಿರಬೇಕು. ಬಹುಶಃ ಮಾನವಶಾಸ್ತ್ರಜ್ಞರು ಈ ಕುರಿತು ಅಭ್ಯಾಸಮಾಡಿ ಹೆಚ್ಚು ಬೆಳಕು ಬೀರಲು ಸಮರ್ಥರು.

ಆದರೆ ಒಂದು ಮಾತು ಮಾತ್ರ ಖಂಡಿತ. ಇಂದಿನವರಿಗೆ ಮರೆತುಹೋದ ಆದಿಮಾನವನ ಕಾಲದಿಂದ ಇಂದಿನವರೆಗೆ ಲಕ್ಷೋಪಲಕ್ಷ ಜನ ಕಲಾವಿದರು ಈ ಭೂಮಿಯ ಮೇಲೆ ಹುಟ್ಟಿ ಕೃತಿಗಳು ಇಲ್ಲವೆ ಅವುಗಳ ಅವಶೇಷಗಳು ನಮಗಿಂದು ಉಳಿದಿರಬೇಕು. ಅವುಗಳಲ್ಲಿ ಈ ಕೃತಿ ಇಂಥದೇ ಕಲಾವಿದನ ಸೃಷ್ಟಿಯೆಂದು ಇತಿಹಾಸಕಾರರು ಗುರುತಿಸಬಲ್ಲರು. ಅನೇಕರು ಹಲವಾರು ಐತಿಹ್ಯಗಳಲ್ಲಿ ಅಡಗಿ ಹೇಳಹೆಸರಿಲ್ಲದವರಾಗಿದ್ದಾರೆ— ಜನಸಾಮಾನ್ಯರ ಬಾಯಲ್ಲಿ ಕರ್ನಾಟಕದ ಗುಡಿಗೋಪುರಗಳೆಲ್ಲ ಜಕ್ಕಣಾಚಾರ್ಯನ ಕಟ್ಟಡಗಳೇ ಆಗಿರುವಂತೆ.


ಕೆಲವು ಜನ ಕಲಾವಿದರು ತಮ್ಮ ಯೋಗ್ಯತೆ ಮಾತ್ರದಿಂದಲೇ ಹೆಸರಾಂತ ವ್ಯಕ್ತಿಗಳಾಗುತ್ತಾರೆ. ಮತ್ತೆ ಕೆಲವರಿಗೆ ಯೋಗ್ಯತೆಯ ಜೊತೆಗೆ ಅವಕಾಶಗಳೂ ಅನುಕೂಲಗಳೂ ದೊರೆತು ಬೆಳಕಿಗೆ ಬರುತ್ತಾರೆ. ಇನ್ನು ಹಲವರು ಸ್ವಂತ ಯೋಗ್ಯತೆ ಹೇಳಿಕೊಳ್ಳುವಷ್ಟಿಲ್ಲದಿದ್ದಾಗಲೂ ದೊರೆತ, ದೊರಕಿಸಿಕೊಂಡ ಪ್ರಚಾರಾವಕಾಶಗಳ ಬಲದಿಂದಲೇ ದೊಡ್ಡವರಾಗಿ ಬಿಡುತ್ತಾರೆ. ಆದರೆ ಅದೆಷ್ಟೋ ಜನ ಯೋಗ್ಯತಾವಂತರು ಅಪ್ಪಟ ದುರ್ದೈವದಿಂದ ಸಂದಿಗೊಂದಿಗಳಲ್ಲಿ ಎಲ್ಲೋ ಹುಟ್ಟಿ ಬೆಳೆದು, ವಿಶೇಷತಃ ಅವರ ಕೃತಿಗಳು ಬೀಳಬೇಕಾದವರ ಕಣ್ಣಿಗೆ ಬೀಳದೆ ಅನಾಮಧೇಯರಂತೆ ಸತ್ತು ಹೋಗುತ್ತಾರೆ.


ಜೀವನದ ಒಂದು ಹಂತದಲ್ಲಿ ಕೀರ್ತಿ ಶಿಖರಕ್ಕೇರಿದ ಕೆಲವರು ಕಲೆಗೆ ನೇರವಾಗಿ ಸಂಬಂಧವಿಲ್ಲದಂಥ ಯಾವುದೋ ಒಂದು ಕಾರಣಕ್ಕಾಗಿ





ಅರ್ನ್ಸ್ಟ್ ಬಾರ್ಲಾಕ್







ಮತ್ತು ಅವನ ಶಿಲ್ಪ




ಸಾರ್ವಜನಿಕರ ಕಂಗಳಿಂದ ಮರೆಯಾಗಿಬಿಡುತ್ತಾರೆ. ಮುಂದೆ ಯಾವಾಗಲೋ ಒಮ್ಮೆ ಜನಕ್ಕೆ ಅವರ ಕಲೆಯಲ್ಲಿ, ಕಲಾಕೃತಿಗಳಲ್ಲಿ ಒಮ್ಮೆಲೆ ಆಸ್ಥೆ ಪುಟಿದೆದ್ದು ಕಲಾವಿದ ಪುನಃ ಜನರ ಕಣ್ಣೆದುರು ಕುಣಿಯುತೊಡಗುತ್ತಾನೆ. ಈ ಶತಮಾನದ ಪ್ರಥಮಾರ್ಧದಲ್ಲಿ ಆಗಿ ಹೋದ ಜರ್ಮನ್ ಕಲಾವಿದ ಅರ್ನ್ಸ್ಟ್ ಬಾರ್ಲಾಕ್ ಕೊನೆಯ ವರ್ಗದಲ್ಲಿ ಬರುವಂಥವನು.

೧೮೭೦ರ ಫೆಬ್ರುವರಿ ೨ರಂದು ಹೋಲ್‌ಸ್ಟೈನ್ ಜಿಲ್ಲೆಯ ವೆಡೆಲ್‌ನಲ್ಲಿ ಜನಿಸಿದ ಬಾರ್ಲಾಕ್ ಹ್ಯಾಂಬರ್ಗ್, ಡ್ರೆಸ್ಡನ್ ಹಾಗು ಪ್ಯಾರಿಸ್ ನಗರಗಳಲ್ಲಿ ವಿದ್ಯಾಭ್ಯಾಸ ಮುಗಿಸಿದ. ಅನಂತರ ಕೆಲ ವರ್ಷ ಹ್ಯಾಂಬರ್ಗ್ ಮತ್ತು ಬರ್ಲಿನ್‌ಗಳಲ್ಲಿ ನೆಲಸಿದ್ದ ಅವನು ಈ ಶತಮಾನದ ಮೊದಲ ದಶಕದಲ್ಲಿ ರಶಿಯವನ್ನು ಸಂದರ್ಶಿಸಿದನು. ಈ ಸಂದರ್ಶನ ಅವನ ಮೇಲೆ, ಅವನ ಅಭಿವ್ಯಕ್ತಿ ಮಾಧ್ಯಮವಾದ ಶಿಲ್ಪಕಲೆಯ ಮೇಲೆ ಗಾಢ ಪರಿಣಾಮ ಬೀರಿತು. ದಕ್ಷಿಣ ರಶಿಯದ ಪ್ರಶಾಂತಚಿತ್ತರಾದ ಹಷ್ಟಪುಷ್ಟ ಕೃಷಿಕರನ್ನು ಕಂಡಾಗ ಅವನ ಮನಸ್ಸು ಪ್ರಸನ್ನವಾಯಿತು. "ಓಹ್! ಇವೇ ನನ್ನ ಕಂಚಿನ ಪ್ರತಿಮೆಗಳು! ಭಕ್ತಿಯ, ಪಾವಿತ್ರ್ಯದ ಸೌಮ್ಯ ಕಳೆಯಿಂದಾರಂಭಿಸಿ ರೊಚ್ಚಿನಿಂದ ಪುಟಿದೇಳುವ ಭಯಂಕರ ಪ್ರತಿಕ್ರಿಯೆಯ ವರೆಗಿನ ಎಂಥ ಭಾವವನ್ನು ಅತ್ಯಂತ ನೈಸರ್ಗಿಕ ರೀತಿಯಲ್ಲಿ ಅವರ ಮುಖಗಳಲ್ಲಿ ಕಾಣಬಹುದು!" ಎಂದವನು ಹೇಳುತ್ತಿದ್ದ.

ಬಾರ್ಲಾಕ್ 'ಮೊದಲಿನಿಂದಲೂ ಅಂತರ್ಮುಖಿ. ಸ್ವರ್ಗ ಮತ್ತು ಪೃಥ್ವಿಗಳಂತಹ ಎರಡು ಪರಸ್ಪರ ವಿರೋಧಿ ಶಕ್ತಿಗಳ ನಡುವೆ ಮನುಷ್ಯ ಸಿಕ್ಕು ಹರಿದು ಚೆಲ್ಲಾಪಿಲ್ಲಿಯಾಗಿ ಹೋಗಿದ್ದಾನೆಂದು ಕಂಡಿದ್ದ. ಫ್ರಾನ್ಸ್ ಮತ್ತು ಇಟಲಿಗಳಲ್ಲಿ ನೆಲೆಸಿ ತನ್ನ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳಬೇಕೆಂದು ಬಗೆದಿದ್ದ ಅವನಿಗೆ ಅಲ್ಲಿ ಸಮಾಧಾನ ಸಿಕ್ಕದೇ ಸ್ವದೇಶಕ್ಕೆ ಮರಳಿದನು. ಅವನ ಲೇಖನಿ ಕೂಡ ಸಾಕಷ್ಟು ಫಲಭರಿತವಾಗೇ ಇತ್ತು. ಅವನ ವಿಚಾರಗಳಲ್ಲಿಯ ಪ್ರೌಢ ಪ್ರಗಲ್ಭತೆಯಿಂದಾಗಿ ಜನ ಬಾರ್ಲಾಕನನ್ನು ತತ್ತ್ವಜ್ಞಾನಿಯೆಂದೇ ಕರೆಯುತ್ತಿದ್ದರು. ಆದರೆ ಅವನು ತನ್ನ ಅಭಿವ್ಯಕ್ತಿ ಮಾಧ್ಯಮವಾಗಿ ಮುಖ್ಯವಾಗಿ ಬಳಸಿದ್ದು ಮೂರ್ತಿಶಿಲ್ಪವನ್ನೇ. ಕಂಚು ಹಾಗು ಕಟ್ಟಿಗೆಗಳಲ್ಲಿ ಅವನು ರೂಪಿಸಿದ ಶಿಲ್ಪಗಳು ಅವನ ಕಲಾಸಾಮರ್ಥ್ಯಕ್ಕೆ ಸಾಕ್ಷಿಯಾಗಿ ಈಗಲೂ ಯುರೋಪ್, ಅಮೇರಿಕಗಳಲ್ಲಿ ನೋಡಲು ಸಿಕ್ಕುತ್ತವೆ.

ಬಾರ್ಲಾಕನು ೧೯೨೦ರ ದಶಕದಲ್ಲಿ ಮ್ಯಾಗ್ಡೆಬರ್ಗ್ ಮತ್ತು ಹ್ಯಾಂಬರ್ಗ್‌ಗಳಲ್ಲಿ ರಚಿಸಿದ 'ಸಮರಸ್ಮೃತಿ'ಗಳಿಂದಾಗಿ ಹಾಗೂ ಲೂಬೆಕ್ಕಿನ ಸೇಂಟ್ ಕೆಥರೀನ್ ಚರ್ಚಿಗಾಗಿ ರಚಿಸಿದ ಧಾರ್ಮಿಕ ವಿಗ್ರಹಗಳಿಂದಾಗಿ ಅವನ




ಇದು ಮನುಷ್ಯ ಗಾತ್ರದ ಕಂಚಿನ ವಿಗ್ರಹ 'ತೇಲುತ್ತಿರುವ ದೇವತೆ'. ಬಾರ್ಲಾಕನು ತನ್ನ ಕೃತಿಗಳಲ್ಲೇ ಬಹುವಾಗಿ ಮೆಚ್ಚಿದ್ದ 'ತೇಲುತ್ತಿರುವ ದೇವತೆ'ಯ ಮೂಲ ವಿಗ್ರಹವನ್ನು ನಾಝಿಗಳು ೧೯೩೮ರಲ್ಲಿ ನಾಶಮಾಡಿದರಷ್ಟೆ. ಇದು ಅವನೇ ಮಾಡಿದ್ದ ಅದರ ಪ್ರತಿಕೃತಿ. ಅವನ ಮಿತ್ರರು ಯುದ್ಧಕಾಲದಲ್ಲಿದನ್ನು ನಾಝಿಗಳ ಕಣ್ಣಿಗೆ ಬೀಳದಂತೆ ಮುಚ್ಚಿಟ್ಟಿದ್ದರು. ಈಗ ಇದನ್ನು ಕೋಲೋನ್ ನಗರದ ಪ್ರೊಟೆಸ್ಟಂಟ್ ಚರ್ಚಿನಲ್ಲಿ ಈ ಶತಮಾನದ ಎರಡು ಮಹಾಯುದ್ಧಗಳ ಸ್ಮಾರಕವಾಗಿ ತೂಗು ಹಾಕಲಾಗಿದೆ.

ಹೆಸರು ಎಲ್ಲೆಲ್ಲೂ ಬೆಳಗತೊಡಗಿತು. ಜರ್ಮನಿ ಮತ್ತು ಇತರತ್ರ ವಸ್ತುಸಂಗ್ರಹಾಲಯಗಳು ಅವನ ಕೃತಿಗಳನ್ನು ದೊಡ್ಡ ಸಂಖ್ಯೆಯಲ್ಲಿ ಪ್ರದರ್ಶಿಸತೊಡಗಿದುವು. ಆದರೆ ಜರ್ಮನಿಯಲ್ಲಿ ಹಿಟ್ಲರ್‌ಶಾಹಿಯ ಉದಯದೊಂದಿಗೆ ಅರ್ನ್ಸ್ಟ್ ಬಾರ್ಲಾಕ್ ಇಳಿಮುಖನಾಗತೊಡಗಿದ. ಬಾರ್ಲಾಕನ ಕಲೆ ಔಚಿತ್ಯವನ್ನು ಮೀರಿದ ಕಸದ ಕಂತೆಯೆಂದು ಸಾರಿ ನಾಝಿ ಸರಕಾರ ಮೊದಲು ದೇಶದಲ್ಲಿಯ ಎಲ್ಲ ವಸ್ತುಸಂಗ್ರಹಾಲಯಗಳಿಂದಲೂ ಅವನ ಕೃತಿಗಳನ್ನು ತೆಗೆಸಿಹಾಕಿತು. ನಂತರ ಅವನ ವಿರುದ್ಧ ಅಪಪ್ರಚಾರದ ಬಿರುಗಾಳಿಯನ್ನೇ ಎಬ್ಬಿಸಿ ಕೈಗೆ ಸಿಕ್ಕ ಬಾರ್ಲಾಕ್ ಕೃತಿಗಳನ್ನು ನಾಶಮಾಡಿಬಿಟ್ಟಿತು. ಸ್ವತಃ ತನ್ನ ಕೃತಿಗಳಲ್ಲಿ ಬಾರ್ಲಾಕ್ ಮೆಚ್ಚಿಕೊಂಡಿದ್ದ 'ತೇಲುತ್ತಿರುವ ದೇವತೆ' (ಚಿತ್ರ ಪುಟ)ಯನ್ನು ನವ ನಾಝಿಗಳು ಒಡೆದು ಹಾಕಿದರು. ಅದರಿಂದುಂಟಾದ ಆಘಾತದಿಂದ ಬಾರ್ಲಾಕ್ ಚೇತರಿಸಿಕೊಳ್ಳಲಿಲ್ಲ. ೧೯೩೮ರ ಅಕ್ಟೋಬರ್ ೨೪ರಂದು ಹೃದ್ರೋಗದಿಂದ ಅವನು ೧೯೧೦ರಿಂದಲೂ ವಾಸವಾಗಿದ್ದ ಗುಸ್ಟ್ರೋವ್‌ನಲ್ಲೇ ನಿಧನ ಹೊಂದಿದನು.

ಜರ್ಮನಿಯಲ್ಲಿ ನಾಝಿ ಆಡಳಿತ ಪ್ರಾರಂಭವಾದಾಗಿನಿಂದ ದ್ವಿತೀಯ ಮಹಾಯುದ್ಧ ಮುಗಿದ ನಂತರ ಹಲವು ವರ್ಷ ಕೂಡ ಅರ್ನ್ಸ್ಟ್ ಬಾರ್ಲಾಕ್ ಜಗತ್ತಿನ ಕಲಾಪ್ರೇಮಿಗಳ ಕಣ್ಣಿಂದ ಅಳಿಸಿಹೋಗಿದ್ದ. ಆದರೆ ೧೯೫೦ರ ಸುಮಾರಿಗೆ ಅದೇನು ಕಾರಣವೋ ಅವನ ವ್ಯಕ್ತಿತ್ವ ಮತ್ತು ಕೃತಿಗಳಲ್ಲಿ ಆಸಕ್ತಿ ಕುದುರಿತು. ಇದೀಗ ಹೊಸತಾಗಿ ಅವನ 'ಸಂಶೋಧನೆ' ಮಾಡಿದಂತೆ ಜನ ೧೯೭೦ನ್ನು 'ಬಾರ್ಲಾಕ್ ವರ್ಷ'ವೆಂದು ಆಚರಿಸಿದರು.

ಬಾರ್ಲಾಕನ ಕೆಲವು ಕೃತಿಗಳನ್ನು ಇಲ್ಲಿನ ಪುಟಗಳಲ್ಲಿ ರೇಖಾಚಿತ್ರಗಳಲ್ಲಿ ಒದಗಿಸಲಾಗಿದೆ: ಚಿತ್ರ ೧ ರಲ್ಲಿರುವುದು 'ಆನಂದಮಯಿ.' ಸತ್ಯದರ್ಶನವಾದಾಗ ಮಾನವನಿಗಾಗುವ ಆನಂದ ಅವನ ಮೈಯ ಕಣ ಕಣಗಳಲ್ಲೂ ವ್ಯಕ್ತವಾಗುತ್ತದೆ. ಚಿತ್ರ ೨ ರಲ್ಲಿದ್ದಾಕೆ 'ನಗೆಮುಂಬಿದ ಮುದುಕಿ.' ಮುಂದೆಯೂರಿ ಕುಳಿತ ಈ ಎಲುಬಿನ ಹಂದರವಾದ ಆಕೆ ನಗುವುಕ್ಕಿ ಬಂದಾಗ ಹಿಂಬಾಗಿ ದಂತರಹಿತ ಮುಖ ತೆರೆದು ಮೈಮರೆತಿದ್ದಾಳೆ. ಈ ಅವಸ್ಥೆ ನಮ್ಮ ನಶ್ವರ ಜಗತ್ತಿನ ಎರಡು ವೈಪರೀತ್ಯಗಳನ್ನು –ಸೌಖ್ಯವನ್ನು ಸೂಚಿಸುವ ನಗು ಹಾಗೂ ದುಃಖಾಂತವನ್ನು ತೋರುವ ಎಲುಬಿನ ಹಂದರ–ಸಂಕೇತಿಸುತ್ತದೆ. ೩ ಮತ್ತು ೪ ನೆಯ ಚಿತ್ರಗಳಲ್ಲಿರುವುದು ಒಂದೇ ಕೃತಿಯ ಎರಡು ಬದಿಯ ಚಿತ್ರಗಳು. ೧೯೧೪ರಲ್ಲಿ ಅವನಿಂದ ರಚಿತವಾದ ಈ ಶಿಲ್ಪಕ್ಕೆ ಅವನಿತ್ತ ಹೆಸರು 'ಸೇಡು' ಎಂದು. ಸೇಡು ತೀರಿಸಿಕೊಳ್ಳುವ ರೋಷದಿಂದ ಈ ಮನುಷ್ಯ ಶಸ್ತ್ರವೊಂದನ್ನೆತ್ತಿ ಹಿಡಿದು ಮುಂದಾಗುತ್ತಿದ್ದಾನೆ. ಬಹುಶಃ ಆಗಲೇ ಪ್ರಥಮ ಜಾಗತಿಕ ಮಹಾಯುದ್ಧದ ಕಾರ್ಮೋಡಗಳು ಕವಿಯುತ್ತಿದ್ದ ಕಾಲದಲ್ಲಿ ರಚಿತವಾದ ಇದು ಬರಲಿದ್ದ ಅನಾಹುತದ ಸೂಚಕವೆಂದು ಬಲ್ಲವರು ಬಗೆಯುತ್ತಾರೆ. ಇದು ವರೆಗಿನ ಕೃತಿಗಳು ಕಂಚಿನವಾಗಿದ್ದರೆ ಮುಂದಿನವೆರಡು ಕಟ್ಟಿಗೆಯವು. ಚಿತ್ರ ೫ ರಲ್ಲಿನದು ಯೇಸು ಕ್ರಿಸ್ತ ಮತ್ತು ಥಾಮಸ್ ಅವರ ಪುನರ್ಮಿಲನ. ೧೯೨೬ರಲ್ಲಿ ರಚಿತವಾದ ಈ ಕೃತಿ ಹ್ಯಾಂಬರ್ಗಿನ ಸಿಗರೇಟ್ ಕಾರಖಾನೆಯ ಒಡೆಯ ಹರ್ಮನ್ ರೀಟ್ಸ್‌ಮಾನ ಸಂಗ್ರಹದಲ್ಲಿದೆ. ಬಾರ್ಲಾಕ್ ಕೃತಿಗಳ ಬಹು ದೊಡ್ಡ ಖಾಸಗಿ ಸಂಗ್ರಹ ಇವನ ಬಳಿಯೇ ಇದೆ. ಚಿತ್ರ ೬ ರಲ್ಲಿ ಬಾರ್ಲಾಕನ ಮೇಲಾದ ರಷ್ಯನ್ ವರ್ಚಸ್ಸನ್ನು ಗುರುತಿಸಬಹುದು. ಆಕಾಶದಲ್ಲಿ ಕಾಣಬಾರದ್ದನ್ನು ಕಂಡ ಇಬ್ಬರು ರಷ್ಯನ್ ಕೃಷಿಕರಿವರು. ಅವರ ಮುಖದಲ್ಲಿ ಭಯದ ಮುದ್ರೆಯನ್ನು ಬಾರ್ಲಾಕ್ ಕಟ್ಟಿಗೆಯಲ್ಲಿ ಕೆತ್ತಿದ ೧೯೧೨ರಲ್ಲಿ.



ಶಿಸ್ತುಗಾರ

ಕೆ. ಜನಾರ್ದನ

[illegible] ಏಪ್ರಿಲ್ [illegible]ರಂದು ಲೋಕಸಭೆಯಲ್ಲಿ ನಡೆದ ಪ್ರಸಂಗ. ಅರ್ಥಮಂತ್ರಿ ಶ್ರೀ ಮೊರಾರ್ಜಿ ದೇಸಾಯಿ ಅವರ ಕಡ್ಡಾಯ ಠೇವಣಿ ಯೋಜನೆಯ ಮೇಲೆ ಚರ್ಚೆ.

"ಸದನದ ಮಾನ್ಯ ಸದಸ್ಯರ ಬಗ್ಗೆ ನನಗೆ ಅತ್ಯಂತ [illegible] ಗೌರವವಿದೆ. ಅವಕ್ಕೂ [illegible] ಗೌರವ [illegible] ಮೇಲೆ (ಲೋಕಸಭೆ ಅಧ್ಯಕ್ಷರ ಮೇಲೆ) ಇದೆ. ಆದರೆ ಅವರ ಅರ್ಥ ಪ್ರತಿಯೊಂದು ಬೇಡಿಕೆಯನ್ನೂ ಅದು ಸರ್ವಾನುಮತದ್ದಾದರೂ ಕೂಡ ನಾನು ಒಪ್ಪಿಕೊಳ್ಳಬೇಕಿಲ್ಲ. ಒಬ್ಬ ತನ್ನ ಕರ್ತವ್ಯ ನಿವೇದಿಸಲೇ [illegible] ಕೆಲವು [illegible]... ಅಟಾರ್ನಿ [illegible] ಭಾರತ ಸರಕಾರದ ಒಬ್ಬ ಅಧಿಕಾರಿ... ಅವರನ್ನು ಸದನದ ಮುಂದೆ ಕರೆಸುವ ಅವಕಾಶ ಸಂವಿಧಾನದಲ್ಲಿ ಇಲ್ಲ..."

ಮೊರಾರ್ಜಿ ಮಾತು ಸದನವನ್ನು ದಂಗು [illegible]. [illegible] ಮೌನ [illegible].

[illegible], ಸತ್ಯನಿಷ್ಠ ಮೊರಾರ್ಜಿ ದೇಸಾಯಿ ಅವರನ್ನು ಈ ಒಂದು ನಿರ್ದಿಷ್ಟ ನಿಲುವು, ದೇಶದ ದೃಷ್ಟಿಯಲ್ಲಿ ಸರ್ವಾಧಿಕಾರಿ ಪ್ರವೃತ್ತಿಯ ಅಪಾಯಕಾರಿ ವ್ಯಕ್ತಿಯನ್ನಾಗಿ ಮಾಡಿತು. ಕೆಲವರು ಸೇರಿ ಅದನ್ನು ದೊಡ್ಡ ಭೂತವಾಗಿ ಬೆಳೆಸಿದರೆಂದರೂ ಅಡ್ಡಿಯಿಲ್ಲ. ಹದಿನಾಲ್ಕು ವರ್ಷಗಳ ಕಾಲ ಈ ಭೂತ ಒಂದಲ್ಲ ಒಂದು ರೀತಿಯಲ್ಲಿ ಅವರ [illegible]—ಕಳೆದ [illegible] ಭಾರತದ ನಾಲ್ಕನೆಯ ಪ್ರಧಾನಮಂತ್ರಿಯಾಗಿ ಅಧಿಕಾರ ಸ್ವೀಕರಿಸುವ ವರೆಗೆ.

ಒಂದು ಕ್ಷಣ ಈ ಭೂತ [illegible] ಇಲ್ಲ ಎನ್ನಿಸಿತ್ತು—ಮಹಿಳೆಯರ ಬಗ್ಗೆ ಅವರು ಆಡಿದ ಮಾತು, ಮಾರ್ಚ್ ಕೊನೆಯ ಹಾಗೂ ಏಪ್ರಿಲ್ ತಿಂಗಳ ಮೊದಲ ವಾರದಲ್ಲಿ ಹುಟ್ಟಿಸಿದ ಕಾವಿನ ವಿವಾದವನ್ನು ಗಮನಿಸಿದಾಗ:

"ಒಬ್ಬ ಮಹಿಳೆ ರಾಕ್ಷಸಿಯಾದಳೆಂದರೆ ಆಕೆ ಎಲ್ಲ ದಾಖಲೆಗಳನ್ನೂ ಮುರಿಯುತ್ತಾಳೆ. ಯಾವ ಪುರುಷನೂ ಆಕೆಗೆ ಸಾಟಿಯಿಲ್ಲ."

ಉತ್ತರ ಭಾರತದಿಂದ ಹಾಗೂ ಕೇಂದ್ರ ಗದ್ದುಗೆಯಿಂದ ಕಾಂಗ್ರೆಸ್ಸನ್ನು ವನವಾಸಕ್ಕೆ ಅಟ್ಟಿ ಪ್ರಧಾನಿ ಪಟ್ಟಕ್ಕೆ ಏರಿದ ಕೆಲವೇ [illegible]ಗಳಲ್ಲಿ ಎದ್ದ ಈ ವಿವಾದ, ವಿದೇಶೀ ಮಹಿಳೆಯರ ಬಗ್ಗೆ ಕ್ಷಮೆ ಕೇಳುವುದರೊಂದಿಗೆ [illegible] ತಣ್ಣಗಾಯಿತು. ಆದರೆ ಭಾರತೀಯ [illegible] ಕ್ಷಮೆ ಕೇಳಬೇಕೆಂಬ ಒತ್ತಾಯ [illegible] "ನಾನದನ್ನು ಮಾಡುವುದಿಲ್ಲ. [illegible] ದರೂ ಮಾಡಿ," ಎಂದು ಮಹಿಳೆಯರಿಗೆ ಮರು ಪ್ರಹಾರ ನೀಡಿದ ಮೊರಾರ್ಜಿಗೆ, ಭಾರತೀಯ ಮಹಿಳೆಯರಲ್ಲಿ ಇಂದಿರಾ ಗಾಂಧಿಯವರು ಇದ್ದಾರಲ್ಲ ಎಂದು ಅನ್ನಿಸಿರಬೇಕು.

೧೯೬೯ರ ಬ್ಯಾಂಕ್ ರಾಷ್ಟ್ರೀಕರಣ ಘಟ್ಟದಲ್ಲಿ ಇಂದಿರಾ ಗಾಂಧಿ ಅವರ ವಿರುದ್ಧ ಸಿಡಿದು ರಾಜೀನಾಮೆ ನೀಡಿದಾಗ ಉಪಪ್ರಧಾನಿಯಾಗಿದ್ದ ಅವರು ಒಂದು ಮಾತು ಹೇಳಿದ್ದರು: "ಕಾಲ ಕೂಸನಂತೆ ನನ್ನನ್ನು [illegible]."

ಮಾರ್ಚ್ ತಿಂಗಳಲ್ಲಿ ರಾಯ್‌ಬರೇಲಿ ಕ್ಷೇತ್ರದಿಂದ ಇಂದಿರಾ ಗಾಂಧಿ ಪತನದ ಸುದ್ದಿ ಬಂದಾಗ ಒಂದು ಕ್ಷಣ ಸುಮ್ಮನಿದ್ದು ಹೇಳಿದ್ದರು: "ದೇವರ[illegible] ಹಾಗಿಟ್ಟಿದ್ದರೆ ಆಗಲೇಬೇಕು."

ಚಕ್ರ ಪೂರ್ತಿ ತಿರುಗಿದೆ. ಅವರ ಅಪ್ಪ[illegible]

ಗುಣಗಳ ಬಗ್ಗೆ ನೂರು ಮುಖಗಳ ಮಥನ ನಡೆದಿದೆ. ಇರುವ ಇಲ್ಲದ ಎಲ್ಲ ಗುಣಗಳ ಮಾಲೆ ಕಟ್ಟಿ ಕಿರೀಟ ಇರಿಸಿದ್ದಾರೆ. ಆದರೆ ಅವರನ್ನು ನಿಜವಾಗಿ ಅರ್ಥಮಾಡಿಕೊಂಡವರೆಷ್ಟು ಮಂದಿ? ನಾಲ್ಕು ವರ್ಷಗಳಿಗೊಮ್ಮೆ ಬರುವ ಫೆಬ್ರುವರಿ ೨೯ರಂದು ಜನಿಸಿದ ಮುರಾರ್ಜಿಯವರನ್ನು ಅರ್ಥಮಾಡಿಕೊಂಡ ಜನ, ಅವರ ಜನ್ಮದಿನದಲ್ಲಿ ಜನಿಸಿದವರಷ್ಟೇ ವಿರಳ. ಅರ್ಥ ಮಾಡಿದರೆಷ್ಟು, ಬಿಟ್ಟರೆಷ್ಟು? ಅದೇ ಅವರ ಛಲ.

ಎಂಥವರು ಈ ಮುರಾರ್ಜಿ?

ಎಂಟು ಮಂದಿ ಮಕ್ಕಳಲ್ಲಿ ಹಿರಿಯವನಾಗಿ ಜನಿಸಿದ ಮುರಾರ್ಜಿ ಶಾಲಾ ದಿನಗಳಲ್ಲಿ ಶುದ್ಧ ಹೇಡಿ; ಓದು ಮುಗಿದು ಬದುಕಿನಲ್ಲಿ ಜಿಗಿದೊಡನೆ ಸಂಪೂರ್ಣ ಪರಿವರ್ತನೆ.

ಮುರಾರ್ಜಿಯವರ ತಂದೆ ಶಿಕ್ಷಕ. ಒಂದು ದಿನ ಪಾಠ ಮುಂದುವರಿಯುತ್ತಿದ್ದಾಗ ಶಾಲೆಗೆ ಮಹಾರಾಜರು ಬಂದರು. ಅವರು ಪಾಠ ನಿಲ್ಲಿಸಲಿಲ್ಲ. ಬಂದವರನ್ನು ಗಮನಿಸದಂತೆ ಮುಂದುವರಿದರು. ಎಲ್ಲರಿಗೂ ಆಶ್ಚರ್ಯ. "ಗುರುವಿಗಿಂತ ಮಹಾರಾಜ ಹೆಚ್ಚಿನವರೆಂಬುದನ್ನು ಮಕ್ಕಳು ಅರಿತರೆ ಗುರುವಿಗೆ ಗೌರವ ಕಡಿಮೆಯಾಗುತ್ತದೆ, ಅದಕ್ಕೇ ಪಾಠ ನಿಲ್ಲಿಸಲಿಲ್ಲ," ಎಂಬುದು ಅವರ ಉತ್ತರ. ಮುರಾರ್ಜಿಯವರ ದಿಟ್ಟತನ, ನೇರ ಮಾತು, ನಿರ್ದಾಕ್ಷಿಣ್ಯ ಪ್ರವೃತ್ತಿಗೆ ಅವರ ತಂದೆಯವರಿಂದಲೇ ಓನಾಮ.

ಹದಿನಾಲ್ಕನೇ ವಯಸ್ಸಿನಲ್ಲಿ ದೊಡ್ಡ ಆಘಾತ. ಮದುವೆಗೆ ಎರಡು ದಿನಗಳಿರುವಾಗ ತಂದೆಯ ಸಾವು. ಶಾಲೆಯಲ್ಲಿ ಮೆಟ್ರಿಕ್ಯುಲೇಷನ್ ಮಟ್ಟ; ಜೀವನದಲ್ಲಿ ಪದವಿ ಘಟ್ಟ. ತಂದೆ–ತಾಯಿಗಳ ಆಶ್ರಯದಲ್ಲಿ ಮೊಗ್ಗಾಗಿದ್ದ ಮುರಾರ್ಜಿ, ಕುಟುಂಬದ ಹೊಸ ಹೊಣೆಯನ್ನು ಹೊರಲು ಅರಳಿದ ರೀತಿ ಅದ್ಭುತ. ತಂದೆ ಬಿಟ್ಟು-ಹೋದುದು ೧೩೦ ರೂಪಾಯಿಗಳು; ಜೊತೆಗೆ ೨೦೦ ವರ್ಷಗಳ ಹಳೆಯದಾದ ಪಿತ್ರಾರ್ಜಿತ ಮನೆ. ಒಳಗಿನಿಂದ ಗಳಿಕೆಯಿಲ್ಲ; ಹೊರಗಿನಿಂದ ಸಹಾಯ ಪಡೆಯುವ ಇಚ್ಛೆಯಿಲ್ಲ. ಆದರೂ ಸಂಸಾರ ಸಾಗಿತು. ಏಳೆಂಟು ವರ್ಷಗಳಾದ ನಂತರವೇ ಅವರ ಸೋದರ ಸೋದರಿಯರಿಗೆ ಗೊತ್ತಾದುದು–ತಾವು ಉಣ್ಣುವ ಅನ್ನ, ಅಣ್ಣನ ಸ್ಕಾಲರ್‌ಶಿಪ್‌ನಿಂದ ಬಂದುದು ಎಂಬುದು.

ಶಿಸ್ತುಗಾರ

ಮುರಾರ್ಜಿ ಶಿಸ್ತುಗಾರ; ೧೯೧೭ರಲ್ಲಿ ಪ್ರಥಮ ದರ್ಜೆಯಲ್ಲಿ ಆನರ್ಸ್ ತೇರ್ಗಡೆ. ಮುಂಬಯಿ ಪ್ರಾಂತೀಯ ಸೇವೆಯಲ್ಲಿ ಕೆಲಸ. ಹೆಚ್ಚಿನ ಅಧ್ಯಯನಕ್ಕೆ ವಿದೇಶಕ್ಕೆ ಹೋಗಲು ಅವಕಾಶ; ಐ. ಸಿ. ಎಸ್. ಸುಲಭದಲ್ಲೇ ಮುರಾರ್ಜಿ ಪಾಲಿಗೆ ಬರುತ್ತಿತ್ತು. ತಾಯಿಯ ಅಭಿಪ್ರಾಯ ಕೇಳಿದರು.

"ಇಲ್ಲ. ನಿನ್ನ ತಂದೆಯ ಸಾವಿನ ನಂತರ ೭–೮ ವರ್ಷ ನಾನು ಕಷ್ಟಪಟ್ಟಿದ್ದೇನೆ. ನಾಲ್ಕು ವರ್ಷಗಳ ಕಾಲ ನೀನೂ ದೂರವಿದ್ದೆ. ಇಲ್ಲಿ ಬಲ್ಸಾರದಲ್ಲಿ ತಿಂಗಳಲ್ಲಿ ೩೦ ರೂಪಾಯಿಗಳು ಬಂದರೂ ಸಾಕು; ಅದೇ ನನಗೆ ತೃಪ್ತಿ."

ಮಹಾ ಆಶಾಭಂಗ. ಆದರೆ ತಾಯಿಯ ಅಭಿಪ್ರಾಯದ ವಿರುದ್ಧ ಚಕಾರ ಇಲ್ಲ. ತಲೆಬಾಗಿ ಒಪ್ಪಿದ ಶಿಸ್ತುಗಾರ.

ಪ್ರತಿಭಾವಂತ, ದಕ್ಷ, ಪ್ರಾಮಾಣಿಕ ಜಿಲ್ಲಾಧಿಕಾರಿ; ೩೪ನೇ ವಯಸ್ಸಿನಲ್ಲಿ ಈ ಕೆಲಸಕ್ಕೆ ರಾಜೀನಾಮೆ ನೀಡಿದಾಗ ವಿದೇಶಿಯರೂ ಮರುಗಿದರು. ಅದು ವರೆಗಿನ ಒಟ್ಟು ಸಂಪಾದನೆ ಪ್ರಾವಿಡೆಂಟ್ ಫಂಡ್‌ನಲ್ಲಿದ್ದ ೧೦,೦೦೦ ರೂಪಾಯಿಗಳು. ಅಹಮದಾಬಾದ್‌ನಲ್ಲಿದ್ದ ಸೋದರ ಅಂಬೇಲಾಲ್ ಬಳಿಗೆ ಪತ್ನಿಯನ್ನೂ ಮಕ್ಕಳನ್ನೂ ಕರೆದುಕೊಂಡು ಹೋಗಿ ಬಿಟ್ಟರು; ಜತೆಗೆ ೧೦,೦೦೦ ರೂಪಾಯಿಗಳನ್ನೂ ನೀಡಿದರು. ನೇರವಾಗಿ ಸ್ವಾತಂತ್ರ್ಯ ಸಂಗ್ರಾಮದ ಕಣಕ್ಕೆ ಇಳಿದರು. ಹೆಂಡತಿ ಮಕ್ಕಳನ್ನೂ ಮರೆತರು; ಹಣವನ್ನೂ ಮರೆತರು. ಹಣದ ಬಗ್ಗೆ ಮುರಾರ್ಜಿ, ಅಂಬೇಲಾಲರನ್ನು ಇದು ವರೆಗೂ ಕೇಳಿಲ್ಲ.

ಮುಂಬಯಿ ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಸಮಾಜವಿರೋಧಿ ಶಕ್ತಿಗಳಿಗೂ ಮುರಾರ್ಜಿಗೂ ನೇರ ತಿಕ್ಕಾಟ ಗಲಭೆ ಸ್ವರೂಪ ತಾಳಿತು. ಅಂಕೆಗೆ ಬಾರದೇ ಹೋದಾಗ ಗೋಳೀಬಾರಿಗೆ ಆದೇಶ. ಅಹಿಂಸೆ ಬಲಹೀನತೆಯ

ಲಕ್ಷಣವಲ್ಲ. ಅದರ ದುರುಪಯೋಗವನ್ನು ಯಾರೂ ಮಾಡುವಂತಿಲ್ಲ. ಸಿದ್ಧಾಂತದ ಹೆಸರಲ್ಲಿ ಶಾಂತಿ, ಸುವ್ಯವಸ್ಥೆಯ ಕೊಲೆಯಾಗಬಾರದು. ಅದಕ್ಕಿಂತ ಕೆಲವು ವರ್ಷಗಳ ಹಿಂದೆ ೧೯೩೭ರಲ್ಲಿ ಕಂದಾಯ ಮಂತ್ರಿಗಳಾಗಿದ್ದರು. ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿದ್ದ ಬ್ರಿಟಿಷ್ ಅಧಿಕಾರಿ ಪೈಪ್ ಸೇದುತ್ತಾ ಮೊರಾರ್ಜಿ ಕೊಠಡಿ ಪ್ರವೇಶಿಸಿದ. ಮೊರಾರ್ಜಿ ದುರುಗುಟ್ಟಿ ನೋಡಿದರು; ಅಧಿಕಾರಿ ಪೈಪ್ ತೆಗೆದು ಕ್ಷಮೆ ಕೇಳಿದ.

ಮೊರಾರ್ಜಿ: ಪೈಪ್ ಬಾಯಲ್ಲಿಟ್ಟು, ನೀನು, ಗವರ್ನರ್ ಕೊಠಡಿ ಪ್ರವೇಶಿಸುತ್ತೀಯೇನು?

ಮುಖ್ಯ ಕಾರ್ಯದರ್ಶಿ: ಇಲ್ಲ, ಸರ್.

ಮೊರಾರ್ಜಿ: ಹಾಗಿದ್ದರೆ ಗವರ್ನರ್‌ಗೆ ತೋರಿಸುವಷ್ಟೇ ಗೌರವವನ್ನು ಮಂತ್ರಿಗಳಿಗೂ ತೋರಿಸಬೇಕು.

ಕೋಮು ಗಲಭೆ ಹರಡಿದ ೧೯೪೬ರ ಸಮಯ. ಕುಪ್ರಸಿದ್ಧ ಕೇಡಿಗಳ ಹೆಸರಲ್ಲಿರುವ ರೇಷನ್ ಕಾರ್ಡುಗಳನ್ನು ವಾಪಸು ತೆಗೆದುಕೊಳ್ಳೋಣ ಎಂಬ ಸಲಹೆ ಅಧಿಕಾರಿಯೊಬ್ಬನಿಂದ.

ಮೊರಾರ್ಜಿ: ಶಾಂತಿ ಕಾಪಾಡಲು ನಾನು ರೇಷನ್ ಕಾರ್ಡು ಉಪಯೋಗಿಸಬೇಕಾಗಿಲ್ಲ. ಆ ಮೂಲಕ ಕೇಡಿಗಳ ಮುಗ್ಧ ಕುಟುಂಬಗಳಿಗೆ ಶಿಕ್ಷೆ ವಿಧಿಸಲು ನಾನು ಸಿದ್ಧನಿಲ್ಲ.

ನೆಹರೂ ನಿಧನಾನಂತರ ಮೂರು ಬಾರಿ ಪ್ರಧಾನಿ ಪಟ್ಟಕ್ಕೆ ಪ್ರಯತ್ನ. ಆದರೆ ವಿಫಲ. ಕಳೆದ ಒಂದು ದಶಕ ಕಾಲ ಅವರ ರಾಜಕೀಯ ಜೀವನಕ್ಕೆ ಬಹುತೇಕ ಗ್ರಹಣ. ಅದಕ್ಕೆ ಅವರ ಜೋರ ವಿರೋಧಿಗಳೂ ಕಾರಣ. "ತಾನು ನಂಬಿಕೊಂಡ ದಾರಿ ಪರರಿಗೆ ಅರ್ಥವಾಗದೇ ಹೋದಾಗ ಅದು ಸೃಷ್ಟಿಸಿದ ವಿಚಿತ್ರ ಸನ್ನಿವೇಶಗಳೂ ಕಾರಣ.

(ದಿವಂಗತ ಫ್ರಾಂಕ್ ಮೊರೇಸ್ 'ವಿಟ್‌ನೆಸ್ ಟು ಆನ್ ಇರಾ' ಪುಸ್ತಕದಲ್ಲಿ ಮೊರಾರ್ಜಿ ಕುರಿತು ಇಂತು ಬರೆದಿದ್ದಾರೆ: (ಸನ್ನಿವೇಶ: ಶಾಸ್ತ್ರಿ ವಿರುದ್ಧ ಸ್ಪರ್ಧಿಸಿ, ಪರಾಜಿತರಾದಾಗ)

"...ಮೊರಾರ್ಜಿ ದೇಸಾಯಿಯವರ ಮನ-ಸ್ಸಿಗೆ ಕಹಿಯಾಗಿತ್ತು. ಅವರು ತಮಗಾದ ನಿರಾಶೆಯನ್ನಾಗಲಿ ತಮ್ಮ ಕೋಪವನ್ನಾಗಲಿ ಮುಚ್ಚಿಡಲು ಪ್ರಯತ್ನಿಸಲಿಲ್ಲ. ಸ್ವಾತಂತ್ರ್ಯೋತ್ತರ ಮುಂಬಯಿ ಸರಕಾರ(ಈಗ ಮಹಾರಾಷ್ಟ್ರ)ದ ಪ್ರಥಮ ಮಂತ್ರಿಮಂಡಳದಲ್ಲಿ ಅವರು ಮಂತ್ರಿಯಾಗಿದ್ದಾಗಿನಿಂದಲೂ ನಾನು ಅವರನ್ನು ಬಲ್ಲೆ. ಅವರೊಂದು ಒಡೆಯಲಾಗದ ಒಗಟಾಗಿಯೇ ಉಳಿದಿದ್ದಾರೆ. ಮುಂಗೈಜೋರನ್ನು ಶಕ್ತಿಯೆಂದು ಬಗೆಯುವಂಥ, ವೈಯಕ್ತಿಕ ಗೀಳುಗಳನ್ನು ಸಾಮಾಜಿಕ ನೀತಿಯೆಂದು ಘೋಷಿಸುವಂಥ ವಿಚಿತ್ರ ವಿರೋಧಾಭಾಸಗಳ ಕಂತೆ ಅವರು. ಮದ್ಯಪಾನಿಯನ್ನು ನೈತಿಕ ಬಹಿಷ್ಕೃತನೆಂದು ಭಾವಿಸುವ ಅವರಿಗೆ ಕಟ್ಟಾ ಲಾಭಬಡುಕರ ಸಂಗದಲ್ಲಿ ಅನುಚಿತವಾದದ್ದೇನೂ ತೋರುವುದಿಲ್ಲ. ತಮ್ಮನ್ನಳೆಯುವುದಕ್ಕೆ ತಮ್ಮನ್ನೇ ಅಳತೆಗೋಲಾಗಿಸಿಕೊಳ್ಳುವಂಥ ಆತ್ಮನಿಷ್ಠ ವ್ಯಕ್ತಿ ಅವರು. ಅದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ಇತರರನ್ನು ಅಳೆಯುವುದಕ್ಕೂ ತಮ್ಮ ನಿಲುವುಗಳೇ ಅಳತೆಗೋಲೆಂದು ಸಾಧಿಸುತ್ತಾರೆ. ಭಾರತ ಸರಕಾರದ ಮಂತ್ರಿಯಾಗಿ ವಿದೇಶ ಸಂಚಾರ ಹೋದಾಗ ಕಾಲರಾ ಹಾಗು ಮೈಲಿಬೇನೆಗಳ (ರೋಗ) ಪ್ರತಿಬಂಧಕ ಚುಚ್ಚುಮದ್ದು ಹಾಕಿಸಿಕೊಳ್ಳಬೇಕೆಂಬಂಥ ಅಂತಾರಾಷ್ಟ್ರೀಯ ನಿಯಮಗಳಿಗೆ ಬದ್ಧರಾಗಲು ಅವರು ಒಪ್ಪಲಿಲ್ಲ. ಕೆಲ ವಿದೇಶಿ ಸರಕಾರಗಳು ಅಚಾತುರ್ಯದಿಂದ ಅವರು ತಮ್ಮಿಚ್ಛೆಯಂತೆಯೇ ನಡೆಯುವುದಕ್ಕೆ ಒಪ್ಪಿಗೆ ನೀಡಿದುವು. ಆದರೆ ಇತರರು ಸಾಮಾಜಿಕ ರಂಗದಲ್ಲಿ ಮಾತ್ರವಲ್ಲ, ರಾಜಕೀಯ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಸಹ ತಮ್ಮ (ಮೊರಾರ್ಜಿಯವರ) ರೂಢಿ, ನಿಯಮಗಳಿಗೆ ಅನುಗುಣವಾಗಿರಬೇಕೆಂದು ಸತತವಾಗಿ ಉಪದೇಶಿಸುವುದು, ನಿರೀಕ್ಷಿಸುವುದು ನಿಜಕ್ಕೂ ಅವರಿಗೆ ಕುತ್ತಾಗಿಯೇ ಪರಿಣಮಿಸಿದೆ." ✡

ಕಲ್ಲಿನ ಕಂಬದಲ್ಲಿ ಹುಲ್ಲಿನ ಬೇರು ಹುಟ್ಟಿ, ಬೇರು ಕಲ್ಲು ತಿಂದಿತ್ತು. -ಬಿಬ್ಬ ಬಾಚಯ್ಯ

ಮೂರ್ಖತನ ವರದಾನವೇ!

ಲಾಂಗೂಲಾಚಾರ್ಯ

ಬ್ರಿಟಿಶ್ ಜನ ನಮ್ಮ ದೇಶವನ್ನು ಆಕ್ರಮಿಸಿ ಆಳಿದ್ದರಿಂದ ಮತ್ತೆ ಏನೂ ಒಳ್ಳೇದಾಗಿರಲಿಕ್ಕಿಲ್ಲ. ಆದರೆ ಒಂದು ಕೊಡುಗೆಗಾಗಿ ಮಾತ್ರ ನಾವು ಅವರಿಗೆ ಋಣಿಗಳಾಗಿರಬೇಕು– ಅದು ಯಾವುದು ಅಂದರೆ, ನಮ್ಮಲ್ಲಿ ಮೂರ್ಖ ಪ್ರಜ್ಞೆಯನ್ನು ಜಾಗ್ರತಗೊಳಿಸಿದ್ದು. ಈ ಅಮೂಲ್ಯ ಕೊಡುಗೆಯ ಪ್ರತೀಕವಾಗಿ ನಾವು ಕೂಡ ಪ್ರತಿ ವರ್ಷ ಏಪ್ರಿಲ್ ೧ನೇ ದಿನ ಆಲ್ ಫೂಲ್ಸ್ ಡೇ–ಸಕಲ ಮೂರ್ಖರ ದಿನ–ಆಚರಿಸುತ್ತಾ ಇದ್ದೇವೆ ಮತ್ತು ವಿಶ್ವದ ಮೂಲ ಮೂರ್ಖತನದಲ್ಲಿ ಸಮರಸರಾಗಿ, ನಮ್ಮತನದ ಗ್ರಂಥಿಗಳಿಂದ ಬಿಡುಗಡೆ ಹೊಂದುತ್ತೇವೆ– ಒಂದು ದಿನದ ಮಟ್ಟಿಗಾದರೂ. ಬ್ರಿಟಿಶ್ ಆಳಿಕೆಯಿಂದ ನಮಗೆ ಮೂರ್ಖ ಪ್ರಜ್ಞೆ ಬಂತು ಅಂದಾಕ್ಷಣ ಅವರು ಬರುವ ಮುಂಚೆ ನಮ್ಮಲ್ಲಿ ಮೂರ್ಖರಾಗಲಿ ಮೂರ್ಖತನವಾಗಲಿ ಇದ್ದಿಲ್ಲ ಅಂತ ನನ್ನ ತಾತ್ಪರ್ಯ ಅಲ್ಲ. ನಮ್ಮ ಪಾಲಿನ ಅಥವಾ ಅವರಕ್ಕಿಂತ ಸ್ವಲ್ಪ ಹೆಚ್ಚೇ ಮೂರ್ಖತನ ನಮ್ಮಲ್ಲಿ ಇದ್ದೇ ಇತ್ತು. ಅದನ್ನು ಆಮದು ಮಾಡಿಕೊಳ್ಳುವ ಅಗತ್ಯ ಯಾವಾಗಲೂ ನಮಗೆ ಇದ್ದಿಲ್ಲ. ಇದಕ್ಕೆ ವೇದಕಾಲದಿಂದ ಮರಾಠಾ ಕಾಲದ ವರೆಗಿನ ಇತಿಹಾಸದಿಂದ ಬೇಕಾಗೆ ಪುರಾವೆಗಳನ್ನು ಒದಗಿಸಬಲ್ಲೆ. ನಮ್ಮಲ್ಲಿ ಬುದ್ಧಿವಂತರು ಹಾಗೆ ತೋರಿಸಿಕೊಳ್ಳುವ ಬುದ್ಧಿವಂತರೂ ಇದ್ದರು– ಇದ್ದಾರೆ ಅಂತ ಬೇಕಾದರೆ ಹೇಳಿ.

ಆದರೆ ನಮ್ಮ ಪುರಾತನರು ಮೂರ್ಖತನಕ್ಕೆ ತಕ್ಕ ಸ್ಥಾನ ಕೊಟ್ಟಿರಲಿಲ್ಲ. ನಮ್ಮ ನೀತಿಕಾರರ ಶಿರೋಮಣಿ ಭರ್ತೃಹರಿ ಕವಿ "ಮೂರ್ಖಸ್ಯ ನಾಸ್ತ್ಯೌಷಧಂ"– ಮೂರ್ಖನಿಗೆ ಮದ್ದಿಲ್ಲ ಅಂತ ತಿರಸ್ಕಾರಪೂರ್ವಕ ಹೇಳಿದ್ದಾನೆ. ನಮ್ಮ ಸರ್ವಜ್ಞನಾದರೂ "ಮೂರ್ಖನಿಗೆ ಬುದ್ಧಿಯನ್ನು ನೂರ್ಕಾಲ ಹೇಳಿದರೆ ಗೋರ್ಕಲ್ಲ ಮೇಲೆ ಮಳೆಗರೆದರಾ ಕಲ್ಲು ನೀರ್ಕುಡಿದು ಮೃದುವಹುದೆ ಸರ್ವಜ್ಞ !" ಅಂತ ಪ್ರಶ್ನೆ ಹಾಕುತ್ತಾನೆ. ಚಾಣಕ್ಯ ಬುದ್ಧಿವಂತ "ಮೂರ್ಖೋಹಿ ಮೂರ್ಖಃ ಗರ್ದಭತ್ವಂ ಕರೋತಿ"– ಮೂರ್ಖ, ಮೂರ್ಖ ಮತ್ತು ಕತ್ತೆ ಇವಿಷ್ಟು ಒಂದೇ ಕುಟುಕ್ಕೆ ಸೇರಿದ್ದು ಅನ್ನುತ್ತಾನೆ. "ಮೂರ್ಖರ ಮನ

ಹೋವತ ಕ್ಯೋಂ ಹೈರಾನ್?"– ಮೂರ್ಖ ಮನಸ್ಸೇ, ನೀ ಯಾಕೆ ಹೈರಾಣಾಗುತ್ತೀ? ಅಂಬೋದು ಇನ್ನೊಬ್ಬ ಹಿಂದೀ ಕವಿಯ ಪ್ರಶ್ನೆ.

ನಾನು ಹೇಳುತ್ತೇನೆ, ಈ ಎಲ್ಲ ಬುದ್ಧಿವಂತರು ಮೂರ್ಖತನವನ್ನು ಅರ್ಥಮಾಡಿಕೊಂಡೇ ಇಲ್ಲ. ಭರ್ತೃಹರಿಯನ್ನೇ ತೆಗೆದುಕೊಳ್ಳಿ. ಅವನ ಬಗ್ಗೆ ನನಗೆ ಅಪಾರ ಗೌರವ ಉಂಟು. ಆದರೆ ಅವನಿಗೆ ಮೂಲಭೂತ ವಿಷಯವೇ ಗೊತ್ತಿಲ್ಲ. ಅವನು ಅಥೆಂಟಿಕ್ ಮೂರ್ಖರನ್ನು ಕಂಡಿರಲಿಕ್ಕೇ ಇಲ್ಲ. ಮೂರ್ಖನಿಗೆ ಮದ್ದಿಲ್ಲ ಅನ್ನುವ ಅವನ ತೀರ್ಮಾನದ ಬಗ್ಗೆ ನನ್ನ ತಕರಾರು ಇಲ್ಲ. ಆದರೆ ಮೂರ್ಖನಿಗೆ ಔಷಧ ಯಾಕೆ ಬೇಕು? ಅನ್ನೋದನ್ನ ಮಾತ್ರ ಆತ ವಿಚಾರ ಮಾಡಿಲ್ಲ. ಮೂರ್ಖನಿಗೆ ಯಾವ ಔಷಧವೂ ಇಲ್ಲ–ಯಾಕಂದರೆ ಅವನಿಗೆ ಯಾವ ರೋಗವೂ ಇಲ್ಲ. ಅವನು ಪೂರ್ಣ ಆರೋಗ್ಯಶಾಲಿ. ಅವನು ತನಗಾಗಲಿ ಪ್ರಪಂಚಕ್ಕಾಗಲಿ ಏನಾದರೂ ಆಗಿದೆ ಅಂತ ತಿಳಿದುಕೊಂಡೇ ಇಲ್ಲ. ಎಲ್ಲಿಯೋ ಏನೋ ಸರಿಯಾಗಿಲ್ಲ, ಅಥವಾ ಎಲ್ಲಿಯೂ ಏನೂ ಸರಿಯಾಗಿಲ್ಲ ಅಂತ ತಿಳಿದುಕೊಂಡವರಿಗೆ ಮಾತ್ರ ರೋಗ ಬರುತ್ತದೆ. ಮೊದಲು ಅವರ ತಲೆ ಕರಡಾಗುತ್ತದೆ, ಆಮೇಲೆ ಹೃದಯ ಬಡಬಡಿಸುತ್ತದೆ. ಬಳಿಕ ಅವರ ಹೊಟ್ಟೆ ಕೆಡುತ್ತದೆ. ಅವರು ಮದ್ದು ಕೇಳಲು ಭರ್ತೃಹರಿಯ ಹತ್ತಿರ ಹೋಗುತ್ತಾರೆ. ಮೂರ್ಖನಿಗೆ ಭರ್ತೃಹರಿಯ ಔಷಧ ಬೇಕಾಗಿಲ್ಲ. ಮೂರ್ಖನಿಗೆ ಅವನ ಮೂರ್ಖತನವೇ ಔಷಧ, ಅದೇ ಟಾನಿಕ್. ಅದರಿಂದಲೇ ಶಕ್ತಿಯನ್ನೂ ಉತ್ಸಾಹವನ್ನೂ ಪಡೆದು ಮೂರ್ಖ ಮಜವಾಗಿ ಬದುಕುತ್ತಾನೆ.

ಇನ್ನು ಸರ್ವಜ್ಞನ ದೂರನ್ನು ವಿಚಾರಿಸುವಾ. ಮೂರ್ಖನಿಗೆ ಬುದ್ಧಿ ಹೇಳೋದೂ ಬೋರ್ಕಲ್ಲಿಗೆ ನೀರು ಹೊಯ್ಯೋದೂ ವ್ಯರ್ಥ ಅಂಬೋ ಅವನ ಅಭಿಪ್ರಾಯದಲ್ಲಿ ತಪ್ಪೇನೂ ಇಲ್ಲ. ಆದರೆ ಬೋರ್ಕಲ್ಲು ಯಾಕೆ ನೀರ್ಕುಡಿಯಬೇಕು? ಅದಕ್ಕೆ ನೀರಡಿಕೆ ಆಗಿದ್ದರೆ ತಾನೇ? ಅದು ಎಂದಾದರೂ, "ಅಪ್ಪಾ ಸರ್ವಜ್ಞಾ, ನನಗೆ ಒಂದಿಷ್ಟು ನೀರು ಹನಿಸು," ಅಂತ ಅಲ್ಪರಿದದ್ದು ಉಂಟೆ? ಬುದ್ಧಿವಂತರ ಕಷ್ಟ ಇದೇ ನೋಡಿ. ನಿಮಗೆ ಬೇಡವಾದ್ದನ್ನು ಅವರು ನಿಮಗೆ ಕೊಡೋದಕ್ಕೆ ಬರುತ್ತಾರೆ. ನೀವು ತೆಗೆದುಕೊಳ್ಳದೆ ಹೋದರೆ ನೊಂದುಕೊಳ್ಳುತ್ತಾರೆ. ಮೂರ್ಖನಿಗೆ ತನಗಿರುವ ಬುದ್ಧಿ ಧಾರಾಳವಾಗಿದೆ ಅಂತ ಅನಿಸುತ್ತೆ. ಆದ್ದರಿಂದ ಅವನು ನಿಮ್ಮ ಬುದ್ಧೀಮಾತು ಕೇಳೋದಿಲ್ಲ. ಬುದ್ಧಿ ಹೆಚ್ಚಾಗಿ ಜಗತ್ತು ಕೆಡುತ್ತೆಯೇ ಹೊರತು, ಬುದ್ಧಿ ಕಮ್ಮಿಯಾಗಿ ಹಾಳಾಗೋದಿಲ್ಲ ಅಂತ ಮೂರ್ಖ ಬಲ್ಲ. "ಸ್ವಾಮೀ, ನಿಮ್ಮ ಬುದ್ಧಿಯನ್ನು ನೀವೇ ಇಟ್ಟುಕೊಳ್ಳಿ–ನಮ್ಮ ಮೇಲೆ ಖರ್ಚು ಮಾಡಬೇಡಿ," ಅಂತ ಮೂರ್ಖ ಹೇಳುತ್ತಾನೆ. ಬುದ್ಧಿಯನ್ನು ಅವನ ತಲೆ ಮೇಲೆ ಬಲಾತ್ಕಾರವಾಗಿ ಹೇರೋ ಹಕ್ಕು ನಿಮಗೆ ಯಾರು ಕೊಟ್ಟರು?

ಆದರೆ ಮೊದಲನೇ ಪ್ರಶ್ನೆ ಮೊದಲು ಯೋಚಿಸುವಾ. ಮೂರ್ಖ ಅಂದರೆ ಯಾರು ? ಅದರ ಡೆಫಿನೇಶನ್ ಮೊದಲು ಆಗಬೇಕಲ್ಲವೆ ? ಇಂಗ್ಲಿಷ್ ಶಬ್ದಕೋಶಗಳ ಪ್ರಕಾರ, ಮೂರ್ಖ ಅಥವಾ ಫೂಲ್ ಎಂಬ ಶಬ್ದ ಫ್ರೆಂಚ್ 'ಫಾಲಿಸ್' ಎಂಬುದರಿಂದ ಹುಟ್ಟಿದ್ದು. 'ಫಾಲಿಸ್' ಅಂದರೆ ಗಾಳಿ ತುಂಬಿದ ಚೀಲ, ಫೂಲ್ ಎಂಬುದರ ಲಕ್ಷಣಾರ್ಥ, ಆಲೋಚನೆ ಮಾಡದೆ ಕೆಲಸ ಮಾಡುವಾತ, ಗೊತ್ತಿದ್ದೂ ತಪ್ಪು ಮಾಡುವಾತ ಇತ್ಯಾದಿ. ನಮ್ಮ ಮೂರ್ಖ ಶಬ್ದಕ್ಕೂ ಹೆಚ್ಚು ಕಡಿಮೆ ಅದೇ ಅರ್ಥ-ತನ್ನದೇ ಸರಿ ಅಂತ ಪಟ್ಟು ಹಿಡಿಯುವಾತ, ಇತ್ಯಾದಿ.

ಫೂಲ್ ಗಾಳೀಚೀಲದ ಹಾಗೆ ಹಗುರವಾಗಿದ್ದಾನೆ; ತುಂಬಾ ಸತ್ಯ ಸ್ವಾಮಿ, ಹಗುರ. ಅದೀಗ ಸುಖಜೀವನದ ಮರ್ಮ. ಮೂರ್ಖ ನೆಲದ ಮೇಲೆ ಧಪ್ ಧಪ್ ಹೆಜ್ಜೆ ಇಡುತ್ತಾ ನಡೆಯೋದಿಲ್ಲ. ಗಾಳೀಚೀಲದ ಹಾಗೆ ಹಗುರಾಗಿ

ತೇಲುತ್ತಾನೆ. ನಡೆಯುವವರಿಗೆ ಕಾಲಿಗೆ ಮುಳ್ಳು ನಡುತ್ತೆ; ತೇಲುವವರಿಗೆ ಮುಳ್ಳಿನ ಭಯವಿಲ್ಲ. ಇದನ್ನು ಮೂರ್ಖ ಚೆನ್ನಾಗಿ ಅರಗಿಸಿಕೊಂಡಿದ್ದಾನೆ. ಆದ್ದರಿಂದ ಅವನು ಹೊರಗಿನದೇನನ್ನೂ ಹಚ್ಚಿಕೊಳ್ಳದೆ ತನ್ನೊಳಗಿನ ಗಾಳಿಯನ್ನೇ ಆಧರಿಸಿ ನಡೆಯುತ್ತಾನೆ. ಒಳ್ಳೇದು. ಅವನು ಸುಖವಾಗಿ ತನ್ನ ಮೂರ್ಖತನದಲ್ಲಿ ಬಾಳಿದ, ಉಳಿದವರ ವಿಚಾರ ಏನು? ಉಳಿದವರ ಬಗ್ಗೆ ಅವನ ಕಾಳಜಿಯೇ ಇಲ್ಲ. ಪ್ರಪಂಚದ ಎಲ್ಲ ಕಷ್ಟಗಳೂ ಹುಟ್ಟೋದು ಎಲ್ಲಿ? ಇನ್ನೊಬ್ಬರ ಬಗ್ಗೆ ಕಾಳಜಿ ಮಾಡುವವರ ಬುದ್ಧಿಯಲ್ಲಿ. ಲೋಕವನ್ನು ಸರಿ ಮಾಡಬೇಕು, ಉದ್ಧಾರ ಮಾಡಬೇಕು ಅನ್ನುವವರೇ ಅಲ್ಲವೇ ಯುದ್ಧ, ಬಲಾತ್ಕಾರ ಎಲ್ಲವನ್ನೂ ಮಾಡೋದು? ಹಗುರ ಇದ್ದವರು ಯಾರ ಕಾಲನ್ನೂ ಮೆಟ್ಟುವುದಿಲ್ಲ. ಮೆಟ್ಟಿದರೂ ನೋವಾಗುವುದಿಲ್ಲ. ಗಂಭೀರವಾಗಿ, ಭಾರವಾಗಿ ಹೆಜ್ಜೆ ಹಾಕುವವರೇ ನಿಮ್ಮ ಕಾಲು ಮೆಟ್ಟಿ ನೋವು ಮಾಡೋದು. ಮೂರ್ಖ ಆಲೋಚನೆ ಮಾಡುವುದಿಲ್ಲ. ಆಲೋಚನೆ ಮಾಡಿದರೆ ನಿಮ್ಮ ತಲೆ ಭಾರವಾಗುತ್ತೆ, ಕಾಲೂ ಭಾರವಾಗುತ್ತೆ ಅಂತ ಅವನು ಬಲ್ಲ. ಮತ್ತೆ ಈ ಪ್ರಪಂಚದಲ್ಲಿ ಹುಟ್ಟಿ ಬಂದ ಮೇಲೆ ಆಲೋಚನೆ ಮಾಡೋದು ಏನಿದೆ? ಆಲೋಚನೆ ಮಾಡುವುದಾದರೆ ಹುಟ್ಟೋ ಮುಂಚೇನೇ, ಹುಟ್ಟಬೇಕೋ ಬೇಡವೋ ಅಂತಲೇ ಆಲೋಚನೆ ಮಾಡಬೇಕು. ದೇವರು ಮಿದುಳು ಕೊಟ್ಟಿದ್ದಾನೆ ಅಂದಾಕ್ಷಣ ಆಲೋಚನೆ ಮಾಡಲೇಬೇಕೆ? ದೇವರು ನಮ್ಮನ್ನು ಫೂಲ್ ಮಾಡಬೇಕಂತಲೇ ನಮಗೆ ಮಿದುಳು ಕೊಟ್ಟ ಅಂತ ನನಗೆ ಸಂಶಯ ಇದೆ. ಆಲೋಚನೆ ಉಳ್ಳವರು ಯಾರಾದರೂ ಬದುಕಿದ್ದನ್ನು ನಾನಂತೂ ಕಂಡಿಲ್ಲ. ತಾನು ಸುಖವಾಗಿ ಇಲ್ಲದವನು ಇತರರಿಗೂ ಸುಖ ಕೊಡುವುದಿಲ್ಲ. ಚಿಂತಾರೋಗವನ್ನು ಎಲ್ಲರಿಗೂ ಅಂಟಿಸುತ್ತಾ ತಿರುಗುತ್ತಾನೆ.

ಮಹಾಭಾರತದ ಮಹಾಮೂರ್ಖ ಯಾರು? ದುರ್ಯೋಧನ? ಧರ್ಮರಾಯ? ಶಕುನಿ?— ಅಲ್ಲ, ಉತ್ತರಕುಮಾರ. ಅವನ ಬಗ್ಗೆ ಓದಿದಷ್ಟೂ ನನ್ನ ಆದರ ಹೆಚ್ಚಾಗುತ್ತದೆ. ಅಂತಃಪುರದಲ್ಲಿ ಕೂತು ದುರ್ಯೋಧನನ ಸೈನ್ಯವನ್ನು ಧೂಳೀಪಟ ಮಾಡುತ್ತೇನೆ ಅಂತ ಹೇಳಿಕೊಳ್ಳುತ್ತಾನೆ. ಪೂರ್ತಿ ಅಹಿಂಸಾತ್ಮಕವಾಗಿ ಉತ್ತರಕುಮಾರ ತನ್ನ ಮನಸಿನಲ್ಲೇ ಯುದ್ಧ ಮಾಡುತ್ತಾನೆ. ಯುದ್ಧರಂಗಕ್ಕೆ ಹತ್ತಿರವಾದ ಕೂಡಲೇ ಅವನಿಗೆ ಯುದ್ಧವೆನ್ನುವುದು ಸುಲಿದ ಬಾಳೇಹಣ್ಣಲ್ಲ ಅಂತ ಗೊತ್ತಾಗುತ್ತೆ. ಅವನು ರಥದ ಹಿಂಭಾಗದಿಂದ ಜಿಗಿದು "ಬಿಟ್ಟ ಮಂಡೆಯಲಿ" ಓಡುತ್ತಾನೆ. ಅರ್ಜುನ ಅವನಿಗೆ ಸ್ವರ್ಗದ ಅಪ್ಸರೆಯರ ಆಶೆ ತೋರಿಸಿದರೆ ಅವನೇನೂ ಜಪ್ಪೆನ್ನುವುದಿಲ್ಲ. "ನಮಗೆ ನಮ್ಮ ಅಂತಃಪುರದ ಸುಂದರಿಯರೇ ಸಾಕು" ಅನ್ನುತ್ತಾನೆ. "ಹೇಂಗಳೆಯರ ಮುಂದೆ ಕೊಚ್ಚಿದೆಯಲ್ಲ ಈಗ ಓಡುವುದಕ್ಕೆ ನಾಚಿಕೆಯಾಗುವುದಿಲ್ಲವೆ ?" ಅಂದರೆ ಅವನಿಗೆ ಏನೂ ನಾಚಿಕೆಯಾಗುವುದಿಲ್ಲ. ಯಾಕೆ ನಾಚಿಕೆಯಾಗಬೇಕು? Consistency is a fool's virtue ಅಂತ ಬುದ್ಧಿವಂತರು ಗಾದೆ ಮಾಡಿದ್ದಾರೆ. ಹೇಳಿದಂತೆ ನಡೆಯಬೇಕೆನ್ನೋದು ಮೂರ್ಖರ ಗುಣವಂತೆ. ಆದರೆ ಈ ಗಾದೆ ಸುಳ್ಳು. ಮೂರ್ಖರು ಎಂದೂ consistency ಯನ್ನು ನಂಬಿದವರಲ್ಲ. ನಿನ್ನೆ ಹೇಳಿದ್ದು ನಿನ್ನೆಗೆ, ಇಂದು ಹೇಳಿದ್ದು ಇಂದಿಗೆ. ನಾಚಿಕೆ ಅನ್ನೋದು ಕೂಡ ಬುದ್ಧಿವಂತರದೇ ಲಕ್ಷಣ ಅಥವಾ ಹೇಡಿಗಳ ಲಕ್ಷಣ ಅಂದರೂ ಸರಿಯೆ. ನಾಚಿಕೆಯ ಹೆಸರಲ್ಲಿ ಜೀವ ಕಳೆದುಕೊಳ್ಳೋದೇನು ಜಾಣತನ? ಜೀವನ್ ಧರ್ಮ್ರಾಣಿ ಪಶ್ಯತಿ. ಅದಕ್ಕೆ ನಾನು ಹೇಳುತ್ತೇನೆ, ಕಡೆಗೆ ನೋಡಿದರೆ ಮೂರ್ಖರೇ ಜಾಣರು.

ಪುರಾಣದಲ್ಲಿ ಇನ್ನೊಂದು ತರಹದ ಮೂರ್ಖ ಬರುತ್ತಾನೆ— ಅವನ ಹೆಸರು ಜಡಭರತ. ಈ ಮಹಾಪುರುಷ ಪ್ರಪಂಚದ ಯಾವ ಯೋಚ-

ಬಟ್ಟೆ ಇಲ್ಲದೆ ಅಡವೀಲಿ ತಿರುಗಾಡುತ್ತಾ ಇದ್ದ. ಒಬ್ಬ ರಾಜ ದಂಡಿಗೇಲಿ ಕೂತು ಅದೇ ದಾರೀಲಿ ಬರುತ್ತಾ ಇದ್ದ. ಏನೋ ಆಗಿ ದಂಡಿಗೇ ಹೊರೋದಕ್ಕೆ ಅವನಿಗೆ ಇನ್ನೊಬ್ಬ ಬೇಕಾಗುತ್ತಾನೆ. ಜಡಭರತ ಅವನ ಕಣ್ಣಿಗೆ ಬಿದ್ದ. ಎಲ್ಲ ಮೂರ್ಖರ ಹಾಗೆ ಅವನೂ ಯಾವ ರಾಜಭೋಗವೂ ಇಲ್ಲದೆ ಚೆನ್ನಾಗಿ ಉಬ್ಬಿಕೊಂಡು ಬೆಳೆದಿದ್ದ. ಎಳಕೊಂಡು ಬನ್ನಿ ಅವನ್ನ, ಅಂದ ರಾಜ. ಎಳಕೊಂಡು ಬಂದರು. ಹೊರು ದಂಡಿಗೇನ ಅಂದ. ಏನೂ ಮಾತಾಡದೇ ಆತ ಹೊತ್ತ. ಗಾಳೀಲಿ ನಡೆದ ಹಾಗೆ ನಡೆಯೋ ಈ ನಿರಾಮಯ ಮೂರ್ಖನ್ನ ಕಂಡು ಮಹಾತ್ಮ ಅನ್ನಿಸಿ ರಾಜ ಅವನನ್ನು ಬೇಕಾದ ಹಾಗೆ ನಕಲಿ ಮಾಡಿದ. ಅವನು ಏನೂ ಅನ್ನಲಿಲ್ಲ. ಕೊನೆಯಲ್ಲಿ ತನ್ನ ಒಳಗೇ ಅನ್ನೋ ಹಾಗೆ ಒಂದು ಮಾತು ಆಡಿದ. ರಾಜನಿಗೆ ಜಬ್ ಎಂದ ಹಾಗಾಯಿತು. ಅವನು ದಂಡಿಗೆ ಇಳಿಸಿ ಜಡಭರತನಿಗೆ ಸಾಷ್ಟಾಂಗ ಹಾಕಿದ. ಈ ಮೂರ್ಖ ನಿಜಕ್ಕೂ ಮಹಾ ತತ್ತ್ವಜ್ಞಾನಿ ಅಂತ ರಾಜನಿಗೆ ಗೊತ್ತಾಯಿತು. ಮೂರ್ಖರೇ ನಿಜವಾದ ತತ್ತ್ವಜ್ಞಾನಿಗಳು ಅಂಬೋ ಸತ್ಯ ಎಲ್ಲಾ ರಾಜರಿಗೂ ಮಂತ್ರಿಗಳಿಗೂ ಇಷ್ಟು ಬೇಗ ಹೊಳೆಯೋದಿಲ್ಲ-ವಲ್ಲ, ಇದು ಪ್ರಪಂಚದ ದುರ್ದೈವ.

ಮಹಾಪುರುಷರ ಕುಲದಲ್ಲಿ ಮೂರ್ಖರು ಹುಟ್ಟುತ್ತಾರೆ. ಇದು ನಿಸರ್ಗದ ಸಮತೋಲ-ನದ ನಿಯಮ. ಪೇಶ್ವೆ ಸಾಮ್ರಾಜ್ಯದ ಹೆಸರಾಂತ ಬಾಜೀರಾಯರ ಕುಲದಲ್ಲಿ ಉಂಡೀ ಬಾಜೀರಾಯ ಅನ್ನುವ ಮೂರ್ಖ ಹುಟ್ಟಿದ. ಅವನಿಗೆ ಉಂಡೆಗಳೆಂದರೆ ಜೀವ. ಯಾವಾಗಲೂ ಉಂಡೆಗಳ ಸಪ್ಲೈ ಬೇಕೇ ಬೇಕು. ಸಿಂಹಾಸನ-ದಲ್ಲಿ ಕೂತಾಗ ಉಂಡೆ ಮೆಲ್ಲುವುದು ತನ್ನ ಲೋಕಕ್ಕೆ ಕಷ್ಟ ಅಂತ ಬಾಜೀರಾಯ ಎಂದೂ ಯೋಚಿಸಲಿಲ್ಲ. ಒಂದುಂಡೆ ಯಾವಾಗಲೂ ದವಡೆಯ ಒಳಭಾಗದಲ್ಲಿ ಇದ್ದೇ ಇರುತ್ತಿತ್ತು. ಲೋಕ ಮನುಷ್ಯರು ಎಲ್ಲ ಬುದ್ಧಿವಂತರ ಹುಚ್ಚು. ತನಗೆ ಉಂಡೆ ಅಂದರೆ ಪ್ರೀತಿ, ಪ್ರೀತಿ ಅಂದರೆ ಪ್ರೀತಿ. ಜೋ ಪ್ಯಾರ ಕಿಯಾ ತೋ ಡರನಾ ಕ್ಯಾ? ಉಂಡೀ ಬಾಜೀರಾಯನ ಕಾಲದಲ್ಲಿ, ಆ ರಾಜ್ಯದಲ್ಲಿ ನಾನು ಹುಟ್ಟಿ ಬದುಕಲಿಲ್ಲವಲ್ಲ ಅಂತ ನನಗೆ ಯಾವಾಗಲೂ ಪಶ್ಚಾತ್ತಾಪ. ಬಾಜೀ-ರಾಯ ಒಂದು ಕ್ಷಣವೂ ಉಂಡೆಯನ್ನ ಬಿಟ್ಟಿ-ದ್ದವನಲ್ಲ, ಒಂದು ಕ್ಷಣ ಯೋಚಿಸಿದವನೂ ಅಲ್ಲ. ಜಗತ್ತಿನ ಬಗ್ಗೆ ಯಾವಾಗಲೂ ಅವನು ಕೇರೆಣಿಸಿದವನಲ್ಲ. ಅವನ ಚಿಕ್ಕಪ್ಪ ರಾಘೋಬಾ ಅವನನ್ನ ಕೊಲೆ ಮಾಡಿಸಿದಾಗ, "ಚಿಕ್ಕಪ್ಪಾ, ನನ್ನ ಕಾಪಾಡು," ಅಂತ ಕೂಗಿದ ಅಷ್ಟೇ, ಅಥವಾ ಅವನ ಕೂಗನ್ನ ರಾಘೋಬಾ ತಪ್ಪಾಗಿ ಕೇಳಿಸಿಕೊಂಡನೋ? "ಕಾಕಾ, ಇನ್ನೊಂದು ಉಂಡೆ ಕೊಡಿಸು" ಅಂತ ಪ್ರಾಣೋತ್ಕ್ರಮಣ ಕಾಲದಲ್ಲಿ ಕೂಗಿರಲಿಕ್ಕಿಲ್ಲವೆ? ಏನೇ ಇರಲಿ, ಎಂಥ noble lovabe fool!

ಪ್ರೇಮ ಎಂಬುದು ಮನುಷ್ಯನ ಅತ್ಯಂತ ಉದಾತ್ತ ಗುಣ. ಇದಕ್ಕೆ ಎಲ್ಲ ಕವಿಗಳೂ ಬೆಂಬಲ ಕೊಟ್ಟಿದ್ದಾರೆ. ಪ್ರೇಮದಲ್ಲಿ ಸಿಕ್ಕಿ-ದೊಡನೆ ಮನುಷ್ಯ ಫೂಲ್—ಮೂರ್ಖ ಆಗು-ತ್ತಾನೆ ಅನ್ನುವುದನ್ನೂ ಕವಿಗಳು ಒಪ್ಪಿದ್ದಾರೆ. ಒಬ್ಬ ಕವಿಯಂತೂ I am two fools—ನಾನು ಇಮ್ಮಡಿ ಮೂರ್ಖ ಅಂತ ಹೇಳಿಕೊಳ್ಳು-ತ್ತಾನೆ.

"ಇಮ್ಮಡಿ ಮೂರ್ಖ ನಾನು
ಪ್ರೇಮ ಮಾಡುತ್ತೇನೆ.
ಅದನು ಗೋಗರೆದು ಹಾಡುತ್ತೇನೆ"

ಅನ್ನುತ್ತಾನೆ ಆತ. ಈ ಮೂರ್ಖತನದ ಫಲ-ವಾಗಿಯೇ ಜಗತ್ತಿನ ಅತಿ ಶ್ರೇಷ್ಠ ಕಾವ್ಯಗಳೂ ಕಥೆಗಳೂ ಹುಟ್ಟಿವೆ. ಇದಕ್ಕಾಗಿ ಕವಿಗಳನ್ನೂ ಮೂರ್ಖರನ್ನೂ ನೀವು ಕೊಂಡಾಡಬೇಕು.

ಹಾಗೆ ಕೇಳಿದರೆ ಕವಿಗಳೂ ಪ್ರೇಮಿಗಳೂ ಮೂರ್ಖರೆ. ಅವರೆಲ್ಲರೂ ತಾತ್ಕಾಲಿಕವಾಗಿ-ಯಾದರೂ ಜಗತ್ತೆಲ್ಲ ಎದುರುಬಿದ್ದರೂ ತಮ್ಮ

ಪ್ರಾರಬ್ಧ ಬಿಡುವವರಲ್ಲ. ಯಾವ ನಿಜವಾದ ಕವಿಯನ್ನೂ ಬುದ್ಧಿ ಹೇಳಿ ನೀವು ಅವನ ಬರವಣಿಗೆಯಿಂದ ಬಿಡಿಸಲಾರಿರಿ; ಪ್ರೇಮಿಯನ್ನು ಪ್ರೇಮದಿಂದ ಬಿಡಿಸಲಾರಿರಿ; ಮೂರ್ಖನನ್ನು ಮೂರ್ಖತನದಿಂದ ಬಿಡಿಸಲಾರಿರಿ. ತಮ್ಮ ಯತ್ನಗಳು ನಿರರ್ಥಕವೆಂದು ಗೊತ್ತಿದ್ದೂ ಅವರು ಅದನ್ನು ಬಿಡುವುದಿಲ್ಲ. ಈ ಮೂವರಲ್ಲಿರುವ ಇನ್ನೊಂದು ಸಾಮ್ಯ ಅಂದರೆ, ಅದು ಬಹುಮಟ್ಟಿಗೆ ಹುಟ್ಟುಗುಣ, ಅಪ್ಪಟ ಮೂರ್ಖರಾಗಿರಬೇಕಾದರೆ ನೀವು ಹುಟ್ಟು ಮೂರ್ಖರಾಗಿರಬೇಕು, ಕವಿಗಳೂ ಪ್ರೇಮಿಗಳೂ ಹಾಗೆಯೇ. ಪ್ರಯತ್ನದಿಂದ ನೀವು ಕವಿಗಳಾಗಲಾರಿರಿ, ಮೂರ್ಖರಾಗಲಾರಿರಿ. ಹುಟ್ಟಾ ಕಿಂಚಿತ್ತಾವರೂ ಮೂರ್ಖರಾಗಿದ್ದರೆ ಮಾತ್ರ ನೀವು ತಾತ್ಕಾಲಿಕವಾಗಿಯಾದರೂ ಖರೇ ಮೂರ್ಖತನ ಪ್ರದರ್ಶಿಸಬಲ್ಲಿರಿ. ಬರೇ ಪ್ರಯತ್ನ ಮಾಡಿದರೆ ನೀವು ಮೂರ್ಖತನವನ್ನು ನಟಿಸಬಹುದೇ ಹೊರತು ನೈಜ ಮೂರ್ಖರಾಗಲಾರಿರಿ; ವಸ್ತುಸ್ಥಿತಿಯ ಬಿಸಿ ತಗಲಿದ ಕೂಡಲೇ ಮೂರ್ಖತನ ನಿಮ್ಮನ್ನು ಬಿಟ್ಟು ಓಡಿಹೋಗಿ ನಿಮ್ಮನ್ನು ಬೆತ್ತಲೆ ಮಾಡಿ ಬಿಡುತ್ತದೆ. ಕವಿತ್ವವೂ ಹಾಗೆಯೇ ಅಲ್ಲವೆ? ಸಂಪಾದಕರು ನಿಮ್ಮ ಮೊದಲ ಕವನವನ್ನು ವಾಪಸ್ಸು ಕಳಿಸಿದ ಕೂಡಲೇ ಕವಿತ್ವ ನಿಮ್ಮನ್ನು ಬಿಟ್ಟು ಹೋದರೆ ನೀವು ವರಕವಿಯೂ ಅಲ್ಲ, ಖರೇ ಕವಿಯೂ ಅಲ್ಲ.

ಮೂರ್ಖತನದ ಮತ್ತು ಪ್ರೇಮದ ಬೀಜ ನಿಮ್ಮಲ್ಲಿದ್ದರೆ ಯಾವ ಮಳೆಗೆ ಅದು ಮೊಳೆತು ಬೆಳೆದು ಹೆಮ್ಮರವಾದೀತೆಂದು ಹೇಳಲು ಬರುವಂತಿಲ್ಲ. It is never too late to be a fool. ನಿಮ್ಮ ಮೂರ್ಖತನ ತಡವಾಗಿ ಚಿಗುರಿದರೆ ಅದು ಇನ್ನಷ್ಟು ಬಲವಾಗಿರುತ್ತದೆ, No fool like an old fool. A fool at forty is a fool indeed. ಸಲವತ್ತರ ಮೂರ್ಖ ಬಲವತ್ತರ ಮೂರ್ಖನೇ ಸೈ.

ಮುಗಿಸುವ ಮೊದಲು ಮೂರ್ಖರ ಬಗ್ಗೆ ಸಂಸ್ಕೃತ ಕವಿಯೊಬ್ಬನ ಸುಂದರ ಪದ್ಯವನ್ನು ಇಲ್ಲಿ ಉದಾಹರಿಸುತ್ತೇನೆ:

"ಮೂರ್ಖತ್ವಂ ಸುಲಭಂ ಭಜಸ್ವ
ಕುಮತೇ, ಮೂರ್ಖಸ್ಯ ಚಾಷ್ಟೌ
ಗುಣಾ ನಿಶ್ಚಿಂತೋ ಬಹುಭೋಜನೋ ಅತಿ
ಮುಖರೋ ರಾತ್ರಿಂ ದಿವಂ ಸ್ವಪ್ನ ಭಾಕ್.
ಕಾರ್ಯಾ ಕಾರ್ಯ ವಿಚಾರಣಾಂ
ಧಬದಿರೋ ಮಾನಾಪಮಾನೇ ಸಮಃ,
ಪ್ರಾಯೇಣಾಮಯವರ್ಜಿತೋ
ದೃಢವಪುಃ ಮೂರ್ಖಃ ಸುಖಂ ಜೀವತಿ.''

"ಮೂರ್ಖತನ ನನಗೆ ಬಲು ಮೆಚ್ಚು,
ಅವರಲ್ಲುಂಟು ಗುಣಗಳೆಂಟು
ನಿಶ್ಚಿಂತೆ, ತಿಂದಷ್ಟು ತಿಂಬಾಸೆ, ಹಗಲಿರುಳು
ನಿದ್ದೆನಂಟು
ವಿಧಿ ನಿಷೇಧಕೆ ಕುರುಡು ಕಿವುಡು,
ಮಾನಾಮಾನ ಎಲ್ಲವೊಂದೇ
ಎಲ್ಲವರ ಬಲ್ಲವರ ತಲೆ ಮೆಟ್ಟಿ
ಬದುಕುವನು ಮೂರ್ಖ ಸುಖದಿಂದೆ."

ಹೌದು ಸ್ವಾಮಿ, ಎಲ್ಲವರ, ಬಲ್ಲವರ ತಲೆ ಮೆಟ್ಟಿ ಮೂರ್ಖ ಸುಲಲಿತವಾಗಿ ಬಾಳುತ್ತಾನೆ. ಇಂಥಾ ಮೂರ್ಖತನ ವರದಾನ ಅನ್ನೋದನ್ನ ವಿರೋಧಿಸುವ ಎಂಟೆದೆ ಯಾರಿಗುಂಟು ? ✡

ನಾನು ದೇವರು ಎಂಬುದನ್ನು ಮೂರ್ಖರು ನಿಸರ್ಗ ಎನ್ನುತ್ತಾರೆ.

–ರಾಬರ್ಟ್ ಬ್ರೌನಿಂಗ್

ಮೌನ ಮೂರ್ಖರ ಸದ್ಗುಣ.

–ಫ್ರಾನ್ಸಿಸ್ ಬೇಕನ್

ಮೇ 1977

ಅವಿಸ್ಮರಣೀಯರು 'ಟೀಯೆಸ್ಸಾರ್'

ಜಂಬುಶೀಲ

ರಾಜ್ಯ ಪತ್ರಕರ್ತರ ಸಂಘದ ಕಾರ್ಯಕ ಚಟುವಟಿಕೆಗಳಲ್ಲಿ ನಿರತನಾಗಿದ್ದ ನನಗೆ ಅವರು ಒಂದು ಪತ್ರಿಕೆ ನೋಟೀಸನ್ನು ಕೊಡಬೇಕಾಗಿ ಬಂತು. ಸಂದರ್ಭಗಳ ಪಿತೂರಿ ಹಾಗೂ ಒತ್ತಾಯಕ್ಕೆ ಮಣಿಯಬೇಕಾಗಿಬಂದುದಕ್ಕೆ ತುಂಬಾ ನೊಂದುಕೊಂಡರು.

ನೋಟೀಸಿದ್ದ ಕವರನ್ನು ನನಗೇನೋ ಕೊಟ್ಟರು. ಆದರೆ ಹಿಂದೆಯೇ ಆಗ ಸುದ್ದಿ ಸಂಪಾದಕರಾಗಿದ್ದ ಇ. ಆರ್. ಸೇತೂರಾಂ ಅವರ ಮೂಲಕ, "ಕೊಡಬೇಕಾಗಿ ಬಂತು. ಏನೂ ತಿಳಿದುಕೊಳ್ಳಬೇಡ ಅಂತ ಜಂಬುಶೀಲನಿಗೆ ಹೇಳಿ," ಅಂತ ಹೇಳಿಸಿದರು.

ಎಪ್ರಿಲ್ ೧೧ರಂದು ನಮ್ಮನ್ನಗಲಿದ 'ಪ್ರಜಾವಾಣಿ'ಯ ಸಂಪಾದಕ ಟಿ. ಎಸ್. ರಾಮಚಂದ್ರರಾವ್, ಸುಮಾರು ೩೦ ವರ್ಷಗಳ ಕಾಲ, ಕನವರಿಸಿ, ಕಚ್ಚಿ, ಕಾಡಿ, ಕಂಗೊಳಿಸಿದ ಪತ್ರಕರ್ತರು. ಇದು ನಿಜವಾದರೂ ಅವರು ಮೊದಲು ಮಾನವ, ಅನಂತರ ಪತ್ರಕರ್ತ.

೧೯೪೮ ರಿಂದ ಅವರೊಡನೆ ವರದಿಗಾರನಾಗಿ, ಅನಂತರ ಪ್ರಧಾನ ವರದಿಗಾರನಾಗಿ ೧೯೭೪ರ ವರೆಗೆ ಕೆಲಸ ಮಾಡುವ ಅವಕಾಶ ನನಗೆ ಲಭ್ಯವಾಗಿತ್ತು.

೧೯೭೫ ರ ನವೆಂಬರ್ ತಿಂಗಳಿನಲ್ಲಿ ಬೆಂಗಳೂರಿನಿಂದ ಧಾರವಾಡಕ್ಕೆ ಪ್ರವಾಸ ಮಾಡಿದರು. "ಅಗೆದಷ್ಟೂ ಖನಿಜ ಸಂಪತ್ತು ಬರುವದೆಂಬ ಹುರುಪಿನ ಅಗೆತ"ಗಳ ಹೈವೇ ಅನುಭವ ಕುರಿತು ಬರೆದರು :

ಮಾನವನಾಗಿ ಹುಟ್ಟದವನ್ಯಾಕೇನ
ಕಂಡೀ
ಬೆಳಗಿನಿಂದ ಸಂಜೀವರ್ಗೆ ಗುಂಡಾಗುಂಡಿ
ಸಾಯೋದ್ರೊಳ್ಗೆ ಹೋಗಿ ನೋಡು
ಹೈವೇ ಗುಂಡಿ.



ತಮಗಾದ ಹೈವೇ ಅನುಭವವನ್ನು ಬರೆಯಲು ಅವರು ಜ್ಞಾಪಿಸಿಕೊಂಡ ವ್ಯಕ್ತಿ, ಜೋಗ ಜಲಪಾತವನ್ನು ಕಂಡು, "ದರ್ಶಿಸಿ"ದ ಪ್ರಾಥಮಿಕ ಶಾಲಾ ಅಧ್ಯಾಪಕ ಮೂಗೂರು ಮಲ್ಲಪ್ಪನವರು. ಎಲ್ಲಿಂದ ಎಲ್ಲಿಗೆ ಈ ವಿಹಂಗಮ ದೃಷ್ಟಿ!

ಎರಡನೆಯ ಸಾಲು ಜೀವನವನ್ನೂ ಹೇಳುತ್ತದೆ, ಪ್ರವಾಸದಲ್ಲಾದ ಅನುಭವವನ್ನೂ ಆಡುತ್ತದೆ. ಮೂರನೆಯ ಸಾಲು ತಿದಿಯಂತೆ ಒತ್ತಿ ತಿವಿಯುತ್ತದೆ. ಇದು ಸ್ಮರಿಸಬಹುದಾದ ನೂರಾರು ನಿದರ್ಶನಗಳಲ್ಲಿ ಒಂದು ಮಾತ್ರ.

ಇವರು ಧನುರ್ವಿದ್ಯೆಯಲ್ಲಿ ಮಹಾ ಚತುರ. ತಾನೇ ಸೃಷ್ಟಿಸಿ, ತಾನೇ ತಿದ್ದಿ, ತಾನೇ ರೂಪಿಸಿ ಸಿದ್ಧಿಸಿಕೊಂಡಿದ್ದ ಬಾಣ ಕಲೆ. ಕನ್ನಡ ಪತ್ರಿಕಾ ಪ್ರಪಂಚದಲ್ಲಿ ಹುಟ್ಟಿ ನಲಿದು ನಂದಿಹೋದ ಒಂದು ಚೈತನ್ಯ. 'ಪ್ರಜಾವಾಣಿ' ಪತ್ರಿಕಾ ಸಂಪಾದಕರು ಬರೆಯುತ್ತಿದ್ದ 'ಛೂ ಬಾಣ' ಕನ್ನಡ ಪತ್ರಿಕೋದ್ಯಮಕ್ಕೆ ಒಂದು ಕೊಡುಗೆ; ಓದುಗರಿಗೆ ಪತ್ರಿಕೋದ್ಯಮದ ಕೊಡುಗೆ.

ಕರ್ನಾಟಕದಲ್ಲಿ ಅನೇಕ ವರ್ಷಗಳ ಕಾಲ ಕೇಕೇ ಹಾಕಿ ಕಡೆಗೊಮ್ಮೆ ಕಾಡಿಗೆ ಹೋದ 'ಕೊರವಂಜಿ'ಯ ಮೂಲಕ 'ಟೀಯೆಸ್ಸಾರ್' ನಾಮಾಂಕಿತದಲ್ಲಿ ನಗೆಬರಹಗಾರರಾಗಿ ರಾಮಚಂದ್ರರಾಯರ ಪರಿಚಯ ಓದುಗರಿಗೆ ಆರಂಭವಾಯಿತು. ೧೯೪೮ರಲ್ಲಿ 'ಪ್ರಜಾವಾಣಿ'ಯನ್ನು ಸೇರಿದರು. ೧೯೫೦ರಲ್ಲಿ ಆ ಪತ್ರಿಕೆಯ ಸಂಪಾದಕರಾದರು. ಸಂಪಾದಕರಾಗುವ ಮುನ್ನವೇ 'ಛೂ ಬಾಣ' ಕಾಲಮ್ಮನ್ನು ಬರೆಯಲು ಆರಂಭಿಸಿದರು. ಸುಮಾರು ೨೮ ವರ್ಷಗಳ ಕಾಲ ವಾರದಲ್ಲಿ ಐದು ದಿನ ಇದರ ದರ್ಶನವಾಗುತ್ತಿತ್ತು.

'ಪ್ರಜಾವಾಣಿ' ಮೂಲಕ 'ಛೂ ಬಾಣ' ಜನಪ್ರಿಯವಾಯಿತು; 'ಛೂ ಬಾಣ'ದ ಮೂಲಕ 'ಪ್ರಜಾವಾಣಿ' ಜನಪ್ರಿಯವಾಯಿತು. ದೊಡ್ಡ ಪ್ಯಾಡಿನಲ್ಲಿ ಚಿಕ್ಕ ಅಕ್ಷರಗಳಲ್ಲಿ, ಬಿರುಸಾಗಿ ಬರುತ್ತಿತ್ತು ಇವರು ಬಾರಿಸಿ ಬರೆಯುತ್ತಿದ್ದ ಬರಹ. ಸಂದರ್ಭಗಳನ್ನ ವ್ಯಕ್ತಿಗಳನ್ನ ವಿಡಂಬನೆ ಮಾಡಿ ಜನತೆಯ ಮುಂದೆ ನಿಲ್ಲಿಸುತ್ತಿದ್ದರು. ಇದು ಅನೇಕ ವೇಳೆ ಸ್ವಾರಸ್ಯಪೂರ್ಣ ಬೊಂಬೆಯಾಟದ ಪ್ರದರ್ಶನದಂತೆ ಇರುತ್ತಿತ್ತು.

ಶರವೇಗದಷ್ಟೇ ಓಟವಿರುತ್ತಿದ್ದ ಸರಳ ಶೈಲಿ ಇವರದು. ಸೃಷ್ಟಿಸಿದ ಪದಗಳು, ಸಂದರ್ಭೋಚಿತವಾಗಿ ನಾನಾ ಅರ್ಥಗಳನ್ನು ಮೈಗೂಡಿಸಿಕೊಂಡು ಮನರಂಜಿಸಿದವು. ಇವು ಶಬ್ದಾರ್ಥಕೋಶಕ್ಕೆ ಸೇರುವಂಥವು.

ಯಾರೂ ದೊಡ್ಡವರಲ್ಲ, ಯಾರೂ ಚಿಕ್ಕವರಲ್ಲ. ಎಲ್ಲರಿಗೂ ಅದೇ ಹಾರ, ಅದೇ ಪ್ರಹಾರ. ಈ ನಿರ್ದಾಕ್ಷಿಣ್ಯ ನಿರ್ಭೀತ ದೃಷ್ಟಿ ಇವರದಾಗಿತ್ತು.

ತಿಳಿಹಾಸ್ಯ, ವ್ಯಂಗ್ಯದ ನೂಲಿನಲ್ಲಿ ಇವರು ಕಟ್ಟಿ ಹೆಣೆಯುತ್ತಿದ್ದ 'ಛೂ ಬಾಣ'ಕ್ಕಾಗಿ ಓದುಗರು ಕಾಯುತ್ತಿದ್ದರು. ಇದರ ಸಾರ್ಥಕತೆಗೆ, ಇದಕ್ಕಿದ್ದ ಮೆಚ್ಚುಗೆಗೆ ಇದೇ ಸಾಕ್ಷಿ. ಅದರ ಕರ್ತೃವಿನ ಪ್ರತಿಭೆಗೂ ಸಾಕ್ಷಿ. "ತೊಟ್ಟ ಬಾಣವನ್ನು ತೊಡುತ್ತಿಲ್ಲ"ದಿದ್ದುದೇ 'ಛೂ ಬಾಣ'ದ ನಿತ್ಯನಾವೀನ್ಯ ಹಾಗೂ ನವಿರಿಗೆ ಕಾರಣ.

ಹಳೆಯ ಮೈಸೂರು ಪ್ರದೇಶದಲ್ಲಿ ಕನ್ನಡ ಪತ್ರಿಕೋದ್ಯಮ ಬೆಳೆದು, ಇತರರಿಗೆ ಸರಿಸಮನಾಗಿ ನಿಂತಿದ್ದು ೫೦ ಹಾಗೂ ೬೦ ರ ದಶಕಗಳಲ್ಲಿ. ಈ ಕಾಲದಲ್ಲಿ ಯಾಂತ್ರಿಕ ಹಾಗೂ ತಾಂತ್ರಿಕ ಸೌಲಭ್ಯಗಳ ಉಪಯೋಗದಿಂದ, ಪ್ರಸಾರ ಸಂಖ್ಯೆ ಹೆಚ್ಚುತ್ತಾಹೋಯಿತು. ಈ ಪ್ರಗತಿಯ ಹಾದಿಯಲ್ಲಿ 'ಪ್ರಜಾವಾಣಿ'ಯದು ಎಂದೂ ಮುನ್ನೋಟ ಹಾಗೂ ಮುಂದೋಟ. ಇವೆಲ್ಲವೂ ರಾಮಚಂದ್ರರಾಯರ ಸಂಪಾದಕತ್ವದಲ್ಲಿ ಇಟ್ಟ ಹೆಜ್ಜೆಗಳು.

ತಮ್ಮ ಸಹೋದ್ಯೋಗಿಗಳ ಸ್ಥಿತಿಗತಿಯನ್ನು ಉತ್ತಮಪಡಿಸುವುದರಲ್ಲಿ ರಾಮಚಂದ್ರರಾಯರಿಗೆ ನಿರಂತರ ಆಸಕ್ತಿ. ಒದಗಿಬಂದ್ದಯಾವ ಒಂದು

ಸಂದರ್ಭವನ್ನೂ ಕೈಯಿಂದ ಜಾರಿಹೋಗಲು ಅವಕಾಶ ಕೊಟ್ಟವರಲ್ಲ.

ವರದಿಗಾರರಿಗೆ ವಾಹನ ಭತ್ಯೆ, ಅಸೆಂಬ್ಲಿ ಕಾಫಿ ಭತ್ಯೆ, ವಾಹನ ಸೌಕರ್ಯ, ಸಹೋದ್ಯೋಗಿಗಳು ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲೂ ತೋರಿಸಿಕೊಳ್ಳಲೂ ಅವರಿಗೆ ಅವಕಾಶ, ಹೊಗಳಿ, ಭುಜ ತಟ್ಟಿ, ಪತ್ರಿಕೆಯಲ್ಲಿ ಹೆಸರು ಕೊಟ್ಟು ಪ್ರೋತ್ಸಾಹ— ಇದಕ್ಕೆಲ್ಲಾ ಕಾರಣರಾದ ಇವರು ಕನ್ನಡ ಪತ್ರಿಕೋದ್ಯಮದ ಬೆಳವಣಿಗೆಯ ಶಿಲ್ಪಿಗಳಲ್ಲಿ ಒಬ್ಬರು ಇವರು ಕಾರಣರಾದ ಪತ್ರಿಕಾಲಯದಲ್ಲಿನ ಅನೇಕ ಸಂಪ್ರದಾಯಗಳು ಇತರರಿಗೆ ಅನಂತರ ಮಾದರಿಯಾದವು ಎಂಬುದು ಇವರಿಗೆ ಸಲ್ಲುವ ಮತ್ತೊಂದು ಮನ್ನಣೆ ಹಾಗೂ ಕೃತಜ್ಞತೆ.

ಇತರರ ಕಷ್ಟ ಕಂಡರೆ ಇವರ ಹೃದಯದಲ್ಲಿ ಕಂಪನ ಆರಂಭವಾಗುತ್ತಿತ್ತು. ಇಲ್ಲ, ಆಗೋದಿಲ್ಲ ಎಂದು ಹೇಳಲು ಇವರಿಗೆ ಮನಸ್ಸೇ ಬರುತ್ತಿರಲಿಲ್ಲ. ತಮ್ಮಿಂದ ಕೈಲಾದ ಸಹಾಯ, ಇದಾದ ನಂತರ ಬಲ್ಲವರಿಗೆ ಹೇಳಿ ಅವರಿಂದ ಸಹಾಯ ದೊರೆಯುವಂತೆ ಪ್ರಯತ್ನ. ಮನೆಗೆ ಬಂದ ಅಡಿಗೆಯವ ಮೂರೇ ದಿನದಲ್ಲಿ ರಾಯರ ತಮ್ಮನಾಗಿ ಬಿಡುತ್ತಿದ್ದ.

ಸ್ನೇಹಕ್ಕೆ, ಆತಿಥ್ಯಕ್ಕೆ ಹೆಸರಾದ ವ್ಯಕ್ತಿ. ಅತ್ಯಂತ ನಿಂದಕರನ್ನೂ, "ಹೋಗಲಿ ಬಿಡೋ, ಅವನ ಸ್ವಭಾವ," ಎಂದು ಕ್ಷಮಿಸಿ ಮರೆತು ಬಿಡುವ ಹೃದಯವೈಶಾಲ್ಯ ಅವರಿಗಿತ್ತು.

ಎಲ್ಲರೊಡನೆ, ಎಲ್ಲರಂತೆ ಇದ್ದರೂ, ಬೆಳಗಿನಿಂದ ಸಂಜೆಯವರೆಗೆ ಕಾಲಂಗೆ ಬೇಕಾದ ವಿಷಯವನ್ನು ಗಮನಿಸುವ ಕಣ್ಣು, ಕೇಳುವ ಕಿವಿ ಹಾಗೂ ಗ್ರಹಿಸುವ ಮೆದುಳು ಬೇರೊಂದಿತ್ತು. ಪತ್ರಿಕೋದ್ಯಮದ ಮೂಲಕ ತಮ್ಮ ಕಾಲಂ ಮೂಲಕ, ನಗಿಸಿದವರು, ಚುಚ್ಚಿದವರು, ತರಾಟೆಗೆ ತೆಗೆದುಕೊಂಡವರು, ತಾರೀಫ್ ಮಾಡಿದವರು, ರಾಮಚಂದ್ರರಾಯರು.

ರಾಯರು ಮಡಿವಂತರಾಗಿರಲಿಲ್ಲ; ಎಂದೂ ಮುಂದಿನವರಾಗಿದ್ದರು, ಮಾಡಿದವರಾದರು; ಆದರೆ ಬೇಗನೆ ಮಡಿದುಹೋದರು. ✡



ಈಟ್ ಇಟ್

ನಮ್ಮ ರಸಾಯನ ಶಾಸ್ತ್ರದ ಉಪನ್ಯಾಸಕರು ಎಂ. ಎಸ್ಸಿ. ಮಾಡಿದ್ದರೂ, ನಾಲಿಗೆ ಮಾತ್ರ ಸರಿಯಾಗಿ ಹೊರಳುತ್ತಿರಲಿಲ್ಲ. ಹೀಗಾಗಿ ಹಾಲು, ಹಣ್ಣು, ಹತ್ತಿ ಇವೆಲ್ಲ ಅವರ ಬಾಯಲ್ಲಿ ಆಲು, ಹಣ್ಣು, ಅತ್ತಿ ಆಗಿ ರೂಪಾಂತರವಾಗಿದ್ದವು.

ಒಂದು ದಿನ ನಮಗೆ ಅವರು ಪ್ರಾಯೋಗಿಕ ತರಗತಿಯಲ್ಲಿ ಪಾಠ ಮಾಡುತ್ತಿದ್ದಾಗ ಎಲ್ಲರ ಕೈಗೂ ಸ್ವಲ್ಪ ಸಕ್ಕರೆ ಕೊಟ್ಟು, "ಈಟ್ ಇಟ್" ಎಂದರು. (ಹೀಟ್ ಇಟ್ ಎಂದರೆ "ಕಾಯಿಸಿರಿ" ಎಂದು ಹೇಳುವ ಬದಲು ಈಟ್ ಇಟ್ ಅರ್ಥಾತ್ "ತಿನ್ನಿರಿ" ಎಂದು ಹೇಳಿದ್ದರು.)

ಸರಿ ಎಲ್ಲ ವಿದ್ಯಾರ್ಥಿಗಳು ಉಪನ್ಯಾಸಕರ ಮಾತನ್ನು ಅಕ್ಷರಶಃ ಪರಿಪಾಲಿಸಿಯೇ ಬಿಟ್ಟರು. ಉಪನ್ಯಾಸಕರ ಮುಖ ನೋಡಬೇಕಿತ್ತಾಗ!

-ಎಂ. ಆರ್. ಅನಂತಕುಮಾರ್

ಅಜಿತ ಭಟ್ಟಾಚಾರ್ಜಿ

ಇದು ಹೊಸ ಲೋಕಸಭೆ

ನೀನು ಈಗ ಈ ಕ್ಷಣದಲ್ಲಿ ಇಲ್ಲಿಯೇ ಸರಕಾರದ ಬಗ್ಗೆ ಏನು ಬೇಕಾದ್ದನ್ನೂ ಮಾತಾಡಬಲ್ಲೆ," ಲೋಕಸಭೆಯ ಪ್ರೆಸ್ ಗ್ಯಾಲರಿ ಸಮೀಪಿಸುತ್ತಿದ್ದಂತೆ ನನ್ನ ಸಹೋದ್ಯೋಗಿಯೊಬ್ಬ ನನ್ನನ್ನು ಸ್ವಾಗತಿಸಿದ ರೀತಿ ಇದು. ಅವನು ತುಂಬ ಉತ್ಸಾಹದಿಂದಿದ್ದ. ಅವನ ಈ ಮಾತನ್ನು ಕೇಳಿ ಭದ್ರತಾ ಕಾವಲುಗಾರ ಮುಗುಳ್ನಗೆ ನಕ್ಕ. ನಿರಂಕುಶಾಧಿಕಾರದಿಂದ ಇದೀಗ ದೇಶದ ವಿಮೋಚನೆಯಾದುದನ್ನು ಅವನ ಈ ಒಂದು ಮಾತಿನಲ್ಲೇ ಕಂಡರಿಯಬಹುದಿತ್ತು.

ಅಪತ್ಕಾಲೀನ ಪರಿಸ್ಥಿತಿಯ ಘೋಷಣೆಯನ್ನು ಸಾರಿದಾಗಿನಿಂದಲೂ ನಾನು ಸಂಸತ್ ಭವನದ ಸಮೀಪವೂ ಸುಳಿದಿರಲಿಲ್ಲ. ಸೆನ್ಸಾರ್ ಕತ್ತರಿಯ ಬಾಯಲ್ಲೇ ಇದ್ದ ಪತ್ರಿಕೆಯಲ್ಲಿ ಕೆಲಸ ಮಾಡುವದೆಂದರೇನೆ ಉಸಿರು ಕಟ್ಟಿದಂತಾಗುತ್ತಿತ್ತು. ಇನ್ನು ಪ್ರಾತಿನಿಧಿಕ ಪ್ರಜಾಸತ್ತೆಯ, ನಮ್ಮ ಆಶೋತ್ತರಗಳ ಸಂಕೇತವೂ ಪ್ರತೀಕವೂ ಆಗಿದ್ದ ಸಂಸತ್ತಿನ ಬಾಯಿಗೆ ಬೀಗ ಹಾಕಿ ಅತಿ ಬಲಾಢ್ಯ ಕಾರ್ಯಾಂಗವು ಅದರ ತೇಜೋವಧೆ ಮಾಡಿದುದನ್ನು ನೋಡುವುದಂತೂ ದುಸ್ಸಹನೀಯವಾಗಿತ್ತು.

ಆ ಕಾಲದಲ್ಲಿ ಬಾಯಿ ಮುಚ್ಚಿಕೊಂಡು ತೆಪ್ಪಗಿರುವದಾದರೆ, ಸರಕಾರ ಮಾಡುವದೆಲ್ಲದಕ್ಕೂ ಬೆಂಬಲ ಸೂಚಿಸುವ ಹಾಗಿದ್ದರೆ ಮಾತ್ರ ಪತ್ರಿಕೋದ್ಯಮಿಗಳಿಗೆ ಸಂಸತ್ತಿನಲ್ಲಿ ಪ್ರವೇಶ ನೀಡಲಾಗುತ್ತಿತ್ತೆಂಬುದಂತೂ ಸುಸ್ಪಷ್ಟವಾಗಿತ್ತು. ಒಂದೊಮ್ಮೆ ನಾವು ಸಂಸತ್ ಸದಸ್ಯರೊಂದಿಗೆ ಹರಟೆ ಕೊಚ್ಚುತ್ತಿದ್ದ ಕೇಂದ್ರ ಸಭಾಭವನಕ್ಕೆ ಪ್ರವೇಶವನ್ನಂತೂ ನಿರ್ಬಂಧಿಸಲಾಗಿತ್ತು. ನಾವು ಒಂದು ವೇಳೆ ಅಲ್ಲಿಗೆ ಹೋಗಿದ್ದರೂ ಸದಸ್ಯರು ಬಾಯಿ ಬಿಚ್ಚಿ ಮಾತಾಡುವ ಸ್ಥಿತಿಯಲ್ಲಿರಲಿಲ್ಲ. ಆಡಳಿತದಲ್ಲಿರುವವರು ವಿಪರೀತ ಕಲ್ಪಿಸಬಹುದಾದಂಥ ಏನನ್ನೂ ಮಾತಾಡಲು ಯಾರೂ ಸಿದ್ಧರಿರಲಿಲ್ಲ. ಸಾರ್ವಜನಿಕರಿಗೂ ಇದೇ ಸ್ಥಿತಿ ಬಂದಿತ್ತು. ಸಂಸತ್ತನ್ನು ಪ್ರವೇಶಿಸುವ ಮುನ್ನ ಅವರನ್ನು ಚೆನ್ನಾಗಿ ತಪಾಸಿಸಲಾಗುತ್ತಿತ್ತು. ಅವರಲ್ಲಿ ಅಪಾಯಕಾರಿ ಅಸ್ತ್ರಗಳಿವೆಯೊ ಹೇಗೆ ಎಂಬುದನ್ನು ತಿಳಿದುಕೊಳ್ಳಲು ಶೋಧ-

ಕೃಪೆ: ಇಂಡಿಯನ್ ಎಕ್ಸ್‌ಪ್ರೆಸ್

[illegible] ಯಂತ್ರದೊಳಗೆ ಪ್ರತಿಯೊಬ್ಬರೂ ಹಾಯ್ದುಹೋಗಬೇಕಿತ್ತು. ಪ್ರೇಕ್ಷಕರ ಗ್ಯಾಲರಿಯ ಮುಂದಿನ ಎರಡು ಸಾಲುಗಳಲ್ಲಿ ಅವರು ಕುಳಿತುಕೊಳ್ಳುವುದಕ್ಕೂ ಪ್ರತಿಬಂಧವಿತ್ತು.

ನಾವೀಗ ಅಲ್ಲಿ ಪುನಃ ಸ್ವಾಗತಾರ್ಹರು. ಮತ್ತೆ ಮೊದಲಿನಂತೆ ನಾವಲ್ಲಿ ಹೋಗಬಹುದು. ಆದರೆ ಒಳಗೆ ಹೋದಾಗ ಅಲ್ಲಿ ಬದಲಾವಣೆಯೇನೂ ನನಗೆ ಗೋಚರಿಸಲಿಲ್ಲ. ಅಲ್ಲಿ ಎಲ್ಲವೂ ಆಪತ್ಕಾಲೀನ ಪರಿಸ್ಥಿತಿಯ ಮುನ್ನ ಇದ್ದಂತೆಯೇ ಇತ್ತು. ಮೊಟ್ಟಮೊದಲ ಬಾರಿ ಬದಲಾವಣೆಯು ಅಷ್ಟು ಮೂಡಿತೋರದಿದ್ದು ಸದಸ್ಯರನ್ನು ಗುರುತಿಸಲಿಕ್ಕಾಗ. ಬಹುಪಾಲು ಸದಸ್ಯರು ಹೊಸಬರು. ಶ್ರೀ ವೈ. ಬಿ. ಚವ್ಹಾಣ ಮತ್ತು

ಕೇಂದ್ರ ಸಭಾಭವನದಲ್ಲಿ ಈಗ ಪತ್ರಿಕೋದ್ಯಮಿಗಳು ಪ್ರವೇಶಿಸಬಹುದು. ಹಿಂದಿನ ಸಂಸತ್ ಸದಸ್ಯರೂ ಅಲ್ಲಿಗೆ ಬರಬಹುದಾಗಿದೆ. ಸೋತವರು, ಗೆದ್ದವರು ಅಲ್ಲಿ ನಿರ್ವಿಕಾರ ಭಾವನೆಯಿಂದ ನಡೆದುಹೋದ ಘಟನೆಗಳ ಬಗ್ಗೆ ಚರ್ಚಿಸುತ್ತಿದ್ದರು. ಶ್ರೀ ಜಗಜೀವನರಾಮ ಹೊಸ ಸದಸ್ಯರ ಒಂದು ಗುಂಪಿನೊಂದಿಗೆ ಕುಳಿತಿದ್ದರು. ತಮ್ಮ ಹಸಿರು ಶಿರಸ್ತ್ರಾಣದಿಂದ ದೂರದಿಂದಲೇ ಗುರುತಿಸಬಹುದಾದ ರಾಜನಾರಾಯಣ ಅತ್ತಿಂದಿತ್ತ ಕುಣಿದು ಕುಪ್ಪಳಿಸುತ್ತಿದ್ದರು.

ಸಂಸತ್ತು ಅಖಂಡವಾಗಿ ಹಾಗು ಸಾಮಾನ್ಯ ವಾತಾವರಣದಲ್ಲೇ [illegible] ಮುಂದುವರಿಯುತ್ತಿದೆ-

ದೇಶದಲ್ಲಿ ಆಪತ್ಕಾಲೀನ ಪರಿಸ್ಥಿತಿಯನ್ನು ಇಪ್ಪತ್ತು ತಿಂಗಳ ಕಾಲ ನಮ್ಮ ಲೋಕಸಭೆ [illegible]ವಾಗಿತ್ತು. ಚುನಾವಣೆಯ ನಂತರ ಹೊಸ ಪಕ್ಷ ಅಧಿಕಾರ ಸ್ಥಾನದಲ್ಲಿ ಬಂದು ಕುಳಿತಿತು. ಸಭೆಯ ಪ್ರಾರಂಭದ ದಿನ ಸಭಾಭವನವನ್ನು ಪ್ರವೇಶಿಸಿದಾಗ ಅಲ್ಲಿ ಬದಲಾವಣೆಯೇನಾದರೂ ಕಂಡಿತೆ? ಹಿರಿಯ ಪತ್ರಿಕೋದ್ಯಮಿಯೊಬ್ಬರ ಅನುಭವ ಇಲ್ಲಿದೆ. ಇಂಗ್ಲಿಷ್ ಮೂಲ ಲೇಖನವನ್ನು ಕನ್ನಡಿಸಿದವರು ಶ್ರೀ. ವೈ. ಎನ್. ಜೋಶಿ.

ಶ್ರೀ ಕರಣಸಿಂಗರನ್ನು ಗುರುತಿಸಬಹುದಾಗಿತ್ತು. ಆದರೆ ಅವರೀಗ ಸಭಾಧ್ಯಕ್ಷರ ಎಡಕ್ಕೆ ವಿರೋಧ ಪಕ್ಷದ ಮುಂದಿನ ಸಾಲಿನಲ್ಲಿ ಕುಳಿತಿದ್ದಾರೆ. ಅವರ [illegible] ಅವರ [illegible] ಅರ್ಧ ವರ್ತುಲಾಕಾರದ ಬೆಂಚುಗಳಲ್ಲಿ ಸರಕಾರಿ ಪಕ್ಷದ ಶ್ರೀ ಬಿಜು ಪಟ್ನಾಯಕ ಮತ್ತು ಶ್ರೀ ಶಾಂತಿಭೂಷಣ ಆಸೀನರಾಗಿದ್ದರು. ಅವರ ಹಿಂದೆ ಶ್ರೀ ಎಚ್. ಎಮ್. ಪಟೇಲ ಮತ್ತು ಶ್ರೀ ಪ್ರಕಾಶಸಿಂಗ ಬಾದಲ ಕುಳಿತಿದ್ದರು. ನೀಲಿ ಬಣ್ಣದ ರುಮಾಲುಗಳನ್ನು ಸುತ್ತಿಕೊಂಡಿದ್ದ ಅಕಾಲಿ ಸದಸ್ಯರು [illegible] ಪಕ್ಷದ ಸದಸ್ಯರಲ್ಲಿ ಎದ್ದು ಕಾಣುತ್ತಿದ್ದರು.


ಯೆಂಬಂಥ ಪರಿಸರವನ್ನು ಪುನರುಜ್ಜೀವಿಸಲು ಹೊಸ ಅಧಿಕಾರಾರೂಢ ಪಕ್ಷ, ವಿರೋಧ ಪಕ್ಷಗಳೆರಡೂ ಯತ್ನಿಸುತ್ತಿರುವಂತೆ ಅನಿಸುತ್ತಿತ್ತು. ಧುರೀಣರು ಪರಸ್ಪರರನ್ನು ಅಭಿನಂದಿಸುವ ಸಂಪ್ರದಾಯವನ್ನು ಮಾತ್ರ ಚಾಚೂ ತಪ್ಪದೆ ಪಾಲಿಸಿಕೊಂಡುಬಂದರು. ಶ್ರೀ ಸಂಜೀವ ರೆಡ್ಡಿ ಸರ್ವಾನುಮತದಿಂದ — ಎರಡೂ ಪಕ್ಷಗಳೂ ಮೊದಲೇ ಚರ್ಚಿಸಿ ಒಪ್ಪಿಕೊಂಡಿದ್ದರಿಂದ— ಸಭಾಪತಿಯಾಗಿ ಆಯ್ಕೆಯಾಗಿದ್ದರು. ವಾತಾವರಣದಲ್ಲಿಯ ಮಾರ್ಪಾಟು ಅದೆಷ್ಟು ಸಹಜವಾಗಿತ್ತೆಂದರೆ ಈಗ ವಿರೋಧ ಪಕ್ಷದಲ್ಲಿ ಕುಳಿತ ಸದಸ್ಯರ [illegible] ಅನೇಕರು ಸರಕಾರಿ ಪಕ್ಷದವಾಗಿ ಕುಳಿತಿದ್ದವರಲ್ಲಿ ಅನೇಕರನ್ನು

ಎರಡು ತಿಂಗಳ ಹಿಂದಿನವರೆಗೂ ಸೆರೆಯಲ್ಲಿಡಲಾಗಿತ್ತು ಎಂದು ವಿದೇಶಿ ಸುದ್ದಿಗಾರರು ತರ್ಕಿಸಲು ಕೂಡ ಶಕ್ಯವಿಲ್ಲದಂತೆ ಕಾಣುತ್ತಿತ್ತು.

ಸಂಸದೀಯ ಪ್ರಜಾಪ್ರಭುತ್ವದ ರೀತಿ ನೀತಿಗಳು, ಸಂಪ್ರದಾಯಗಳು ಆಪತ್ಕಾಲೀನ ಪರಿಸ್ಥಿತಿಯ ನೋವು ಉದ್ವೇಗಗಳ ಮೇಲೆ ಜಯ ಸಂಪಾದಿಸಿದ್ದುವು.

ಇದೆಲ್ಲ ಭವಿಷತ್ತಿನ ಬಗ್ಗೆ ಭರವಸೆ ಮೂಡಿಸುವಂತಿತ್ತು. ಕಾಂಗ್ರೆಸ್ ಪಕ್ಷ, ಅದರಲ್ಲೂ ವಿಶೇಷತಃ ಶ್ರೀಮತಿ ಇಂದಿರಾ ಗಾಂಧಿಯವರು ಅಧಿಕಾರಪೀಠದಿಂದ ಕೆಳಕ್ಕಿಳಿಯಬೇಕಾಗಿ ಬಂದರೆ ದೇಶದಲ್ಲಿ ಅಭದ್ರತೆ ಮತ್ತು ಒಂದು ಬಗೆಯ ರಾಜಕೀಯ ಶೂನ್ಯವೇ ಉದ್ಭವಿಸುವದೆಂದು ಅನೇಕ ವಿದೇಶಿ ನಿರೀಕ್ಷಕರು ಭಯ ವ್ಯಕ್ತಪಡಿಸಿದ್ದರು. ಆದರೆ ಅದಾವುದರ ಲಕ್ಷಣವೂ ಈಗ ಸಂಸತ್ತಿನಲ್ಲಿ ಕಾಣಬರಲಿಲ್ಲ. ನಿಶ್ಚಲ ಸಮಾಜದಲ್ಲಿ ಬರಿ ಭದ್ರತೆಯೇ ಸಲ್ಲಕ್ಷಣವೇನಲ್ಲ. ಹಾಗೆ ನೋಡಿದರೆ ಸ್ವಲ್ಪವೂ ಬದಲಾವಣೆಯಿಲ್ಲದೆ ಎಲ್ಲವೂ ಎಂದಿನಂತೆಯೇ ನಡೆದುಕೊಂಡು ಬಂದಿತ್ತು. ಹಿಂದಿನ ಸದನದ ಉಭಯ ಪಕ್ಷಗಳ ಹಿರಿಯ ಧುರೀಣರೇ ಇಂದಿಗೂ ಕಾರ್ಯಕಲಾಪಗಳಲ್ಲಿ ಪ್ರಭಾವ ಬೀರುತ್ತಿದ್ದರು. ಆದರೆ ಹೊಸದಾಗಿ ಆಯ್ಕೆಯಾಗಿರುವ ತರುಣ ಸದಸ್ಯರು ಆಪತ್ಕಾಲೀನ ಪರಿಸ್ಥಿತಿಯ ಮುಂಚಿನ ಸ್ಥಿತಿಗೆ ಹೋಗುವದಕ್ಕಾಗಿ ಮಾತ್ರ ಹೋರಾಡಲಿಲ್ಲ, ಕಷ್ಟಪಡಲಿಲ್ಲ. ಅವರ ಉದ್ದೇಶ ಅದಕ್ಕಿಂತಲೂ ಘನವಾದುದಾಗಿತ್ತು. ಇಷ್ಟರಲ್ಲೇ ಜನತಾ ಪಕ್ಷದ ಸರಕಾರ ತನ್ನ ಪ್ರಥಮ ಮುಂಗಡ ಪತ್ರವನ್ನು ಮಂಡಿಸಿದಾಗ ಈ ಹೊಸ ಸದಸ್ಯರ ಅಸ್ತಿತ್ವ ಗಮನಾರ್ಹ ಪರಿಣಾಮ ಬೀರಬಹುದಾಗಿದೆ.

ಈ ಕ್ಷಣಕ್ಕೆ ನೋಡಿದರೆ ಬದಲಾವಣೆಯ ಬಯಕೆಗಿಂತ ಸಂತೃಪ್ತ ಮನೋಭಾವವೇ ಎದ್ದು ಕಾಣುತ್ತಿದೆ. ಇದರಿಂದಾಗಿ ಆಪತ್ಕಾಲೀನ ಪರಿಸ್ಥಿತಿ ಕಲಿಸಿದ ಪಾಠಗಳು ಮರೆತು ಮಾಸಿ ಹೋಗುವ ಗಂಡಾಂತರವೂ ಇದೆ. ಇವರೊಟ್ಟಿಗೆಯೇ ಸಂಸತ್ತಿನ ಪ್ರಾತಿನಿಧಿಕ ಸ್ವರೂಪದಲ್ಲಿಯ ಮತ್ತು ಅದರ ಕಾರ್ಯಾಚರಣೆಯ ರೀತಿಯಲ್ಲಿಯ ಲೋಪ ದೋಷಗಳಿಂದಲೇ ಆಪತ್ಕಾಲೀನ ಪರಿಸ್ಥಿತಿ ಘೋಷಿಸಲು ಅಂದು ಸಾಧ್ಯವಾಯಿತೆಂಬುದೂ ಮರೆತುಹೋಗುವ ಭಯವೂ ಇದೆ. ಈ ಯೋಚನೆಯ ಹಿಂದೆಯೇ, ಆರು ವರ್ಷಗಳ ಹಿಂದೆ ಲೋಕಸಭೆಯಲ್ಲಿ ತಲೆದೋರಿದ ಅರಾಜಕತೆಯು ನೆರೆಹೊರೆಯಲ್ಲಿದ್ದಂಥ ಪರಿಸ್ಥಿತಿ ನನ್ನ ಕಣ್ಣೆದುರು ಸುಳಿಯಿತು. ತಾವು ದಿನನಿತ್ಯ ಅನೇಕ ಆಸ್ಪಿರಿನ್ ಗುಳಿಗೆಗಳನ್ನು ನುಂಗಬೇಕಾಗುತ್ತದೆ ಎಂದು ಆಗಿನ ಸಭಾಪತಿ ಶ್ರೀ ಜಿ. ಎಸ್. ಧಿಲನ್ ಸಭೆಗೆ ಹೇಳಬೇಕಾಗಿ ಬಂದಂಥ ಪರಿಸ್ಥಿತಿ ಆಗ ನಿರ್ಮಾಣವಾಗಿತ್ತು. ನನ್ನ ಪರಿಚಿತರೊಬ್ಬರು ಆಗ ಲೋಕಸಭೆಯ ಕಾರ್ಯಕಲಾಪಗಳನ್ನು



"ಕ್ಷಮಿಸಬೇಕು ಸಾರ್, ಇದು ಸಣ್ಣ ಪತ್ರಿಕಾ ಸಂಪಾದಕರ ಸಮ್ಮೇಳನ".

ಈಕ್ಷಿಸಲು ತಮ್ಮ ಮಗನೊಂದಿಗೆ ಹೋಗಿದ್ದರು. "ನನ್ನ ಮಗ ಈಗ ಬಹುಶಃ ನಕ್ಸಲೀಯನಾಗುತ್ತಾನೆ!" ಎಂಬುದು ನಂತರ ಅಲ್ಲಿನ ತಮ್ಮ ಅನುಭವಗಳನ್ನು ಹೇಳುವಾಗಿನ ಅವರ ಉದ್ಗಾರ. ಈಗ ನಾವು ಅದೇ ಸ್ಥಿತಿಗೆ ಮರಳಿದರೆ ಪುನಃ ಆಪತ್ಕಾಲೀನ ಪರಿಸ್ಥಿತಿಯನ್ನು ಸಾರಲು ಇನ್ನೊಬ್ಬರು ಯತ್ನಿಸಬಹುದು. ಆದರೆ ಈ ಸಲ ಪ್ರಜಾಸತ್ತೆಯ ರಕ್ಷಣಾಸ್ತ್ರವಾದ ಚುನಾವಣೆಗಳೇ ಮಾಯವಾಗಲೂಬಹುದು.

ಹಿಂದೆ ಅನೇಕ ಪಕ್ಷಗಳ ನಡುವೆ ಮತಗಳು ಹಂಚಿ ಹೋಗುತ್ತಿದ್ದವು. ಈ ಸಲ ಹಾಗಾಗಲಿಲ್ಲ. ಅಂತೆಯೇ ಸದ್ಯದ ಲೋಕಸಭೆ ಹಿಂದಿನ ಲೋಕಸಭೆಗಳಿಗಿಂತ ಹೆಚ್ಚು ಪ್ರಾತಿನಿಧಿಕ ಸ್ವರೂಪದ್ದಾಗಿದೆಂಬುದು ನಿಜ. ಇದಕ್ಕೆ ಆಪತ್ಕಾಲೀನ ಪರಿಸ್ಥಿತಿಯೇ ಕಾರಣ. ಅದರಿಂದಾಗಿ ಪಕ್ಷಗಳು ಒಂದುಗೂಡಲು ಸಾಧ್ಯವಾಯಿತು. ಈ ಸಲ ಚುನಾವಣೆಯಲ್ಲಿ ಸಂಕುಚಿತ ಹಾಗೂ ಸ್ಥಳೀಯ ಸಮಸ್ಯೆಗಳನ್ನು ಮೀರಿ ಆಪತ್ಕಾಲೀನ ಪರಿಸ್ಥಿತಿಯ ಹೆಸರಿನಲ್ಲಿ ನಡೆದ ದೌರ್ಜನ್ಯಗಳು ಚುನಾವಣೆಯಲ್ಲಿ ಪ್ರಾಮುಖ್ಯ ಪಡೆದುವು. ದಕ್ಷಿಣ ಭಾರತದಲ್ಲಿ ಆಪತ್ಕಾಲೀನ ಪರಿಸ್ಥಿತಿಯು ಅಷ್ಟೊಂದು ಕ್ರೂರ ರೂಪ ತಳೆಯದಿಲ್ಲವಾದ್ದರಿಂದ ಅಲ್ಲಿ ಹಾಗಾಗಲಿಲ್ಲವೆಂಬ ಮಾತು ಬೇರೆ. ಆದರೆ ಒಂದು ಅಂಶವನ್ನು ಮಾತ್ರ ಮರೆಯುವಂತಿಲ್ಲ, ಇಷ್ಟು ವರ್ಷಗಳ ವರೆಗೆ ಪ್ರಬಲವೆನಿಸಿದ್ದ ಈ ಪ್ರತ್ಯೇಕತಾವಾದಿ ಶಕ್ತಿಗಳು ಅಡಗಿಕೊಂಡಿವೆಯೇ ಹೊರತು ನಾಶವಾಗಿಲ್ಲ ಎಂಬುದು.

ಆಪತ್ಕಾಲೀನ ಪರಿಸ್ಥಿತಿಯ ಕಾಲಕ್ಕೆ ಅತಿರೇಕ, ಅತ್ಯಾಚಾರಗಳಿಂದಾಗಿ ಜನ ಕ್ರೋಧತಪ್ತರಾಗಿದ್ದರು. ಇದರಿಂದ ಈ ಸಲದ ಚುನಾವಣೆಯಲ್ಲಿ ಹಣದ ಪ್ರಭಾವ ಕೂಡ ಕೈಯೂರಿತು. ರಾಜಕೀಯ ಪಕ್ಷಗಳು ತಮ್ಮ ಹಣಕಾಸಿನ ಲೆಕ್ಕಗಳನ್ನು ಬಹಿರಂಗಪಡಿಸಬೇಕೆಂಬಂಥ ಕೆಲವಾದರೂ ಪರಿಣಾಮಕಾರಿ ಕ್ರಮಗಳನ್ನು ಹೊಸ ಸುಧಾರಣೆಯ ಹುಮ್ಮಸ್ಸು ಕರಗುವ ಮುನ್ನವೇ ತೆಗೆದುಕೊಳ್ಳದಿದ್ದರೆ ಮುಂದೆ ಪುನಃ ಇವು ತಲೆಯೆತ್ತುವುದು, ಹೆಡೆಯಾಡಿಸುವುದು ಖಂಡಿತ.


ಇದೆಲ್ಲಕ್ಕಿಂತ ಪಕ್ಷಾಂತರ ತಡೆಗಟ್ಟುವುದು ಹೆಚ್ಚು ಅಗತ್ಯದ್ದಾಗಿದೆ. ಜನತಾ ಪಕ್ಷಕ್ಕೆ ಇಷ್ಟೊಂದು ಭಾರಿ ಬಹುಮತ ದೊರೆಯುತ್ತಿದೆ ಎಂದು ಪಕ್ಷದ ಧುರೀಣರೇ ನಿರೀಕ್ಷಿಸಿರಲಿಲ್ಲ. ಆದಾಗ್ಯೂ ಚುನಾವಣೆಯ ಪೂರ್ವದಲ್ಲಿಯೇ ಆ ಪಕ್ಷದ ಧುರೀಣರಾದ ಶ್ರೀ ಮುರಾರಜಿ ದೇಸಾಯಿ ಮತ್ತು ಶ್ರೀ ಅಶೋಕ ಮೆಹತಾ ಅವರು ಪಕ್ಷಾಂತರಿಗಳನ್ನು ಚುನಾವಣೆಯ ನಂತರ ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳುವದಿಲ್ಲವೆಂದು ಹೇಳಿದುದು ಅವರ ರಾಜಕೀಯ ಧೈರ್ಯವನ್ನು ತೋರಿಸುತ್ತದೆ. ಆದರೆ ಜನತಾ ಪಕ್ಷದ ಜೊತೆ ಕೈಗೂಡಿಸಿರುವ ಜನತಂತ್ರ ಕಾಂಗ್ರೆಸ್ ಪಕ್ಷಾಂತರಿಗಳಿಗೆ ತನ್ನ ಬಾಗಿಲು ತೆರೆದಿಟ್ಟಿದೆ. ಕಾಂಗ್ರೆಸ್ಸಿಗರನ್ನು ಸೆಳೆದುಕೊಳ್ಳುವುದೆ ಅದರ ಉದ್ದೇಶ. ಇದು ಚಾಣಾಕ್ಷ ರಾಜಕೀಯ ಗತ್ತುಗಾರಿಕೆ ಎನಿಸಬಹುದು. ಆದರೆ ಇದು ಚುನಾವಣೆಯ ನಂತರ ತಲೆಯೆತ್ತಿದ ದ್ವಿಪಕ್ಷೀಯ ರಾಜಕೀಯ ಪದ್ಧತಿಗೆ ಗಂಡಾಂತರಕಾರಿಯಾಗಿದೆ. ದ್ವಿಪಕ್ಷೀಯ ರಾಜಕೀಯ ಪದ್ಧತಿಯು ರೂಪುಗೊಂಡಿದ್ದು ಕಾಂಗ್ರೆಸ್ ಪಕ್ಷವನ್ನು ಸೋಲಿಸಿದುದಕ್ಕಿಂತ ಹೆಚ್ಚಿನ ಸಾಧನೆಯಾಗಿದೆ. ಪಕ್ಷಾಂತರ ತಡೆಗಟ್ಟುವ ವಿಧೇಯಕವನ್ನು ತಂದು ಈಗಲೂ ಈ ಗುರಿಯನ್ನು ಸಾಧಿಸಬಹುದಾಗಿದೆ. ನಾಲ್ಕು ವರ್ಷಗಳ ಹಿಂದೆಯೆ ಇಂಥದೊಂದು ವಿಧೇಯಕವನ್ನು ತರಲಾಗಿತ್ತು. ಆದರೆ ಪಕ್ಷಾಂತರದಿಂದ ಕಾಂಗ್ರೆಸ್ ಪಕ್ಷಕ್ಕೆ ಲಾಭವಿದ್ದುದ್ದರಿಂದ ಅದನ್ನು ಪಾಸು ಮಾಡಲು ಅದು ಉತ್ಸುಕವಾಗಿರಲಿಲ್ಲ. ಸುಧಾರಣೆ ಮಾಡಬೇಕೆಂಬ ಹುಮ್ಮಸ್ಸು ಕಡಿಮೆಯಾಗುವ ಮುನ್ನವೆ ಜನತಾ ಪಕ್ಷದ ಸರಕಾರ ಇಂಥ ಅಗತ್ಯದ ಕಾನೂನುಗಳನ್ನು ರಚಿಸಬೇಕು. ✡

ಜಾರ್ಜ್ ಓರ್ವೆಲ್

ಮೂಲ : ಡಾ. ಎಸ್. ಎನ್. ಅರೋರಾ
ಕನ್ನಡಕ್ಕೆ: ಕೆ. ಆರ್. ಅನಂತ ಪದ್ಮನಾಭ ಉಡುಪ

ಕೆಲವೊಂದು ಧ್ಯೇಯ ಅಥವಾ ತತ್ತ್ವಗಳಿಗೆ ಬದ್ಧರಾಗಿರುವ ಮತ್ತು ಈ ಧ್ಯೇಯ ಮತ್ತು ತತ್ತ್ವಗಳ ಕಡೆಗಿನ ಒಲವಿನಿಂದ ಪ್ರಭಾವಿತವಾದ ಲೇಖನಗಳನ್ನು ಬರೆಯುವ ಬರಹಗಾರರನ್ನು ಹುಡುಕುವುದು ಕಷ್ಟವೇನಲ್ಲ. ಏನಾದರೂ, ತನ್ನ ಮಾತಿನಿಂದ ಮಾತ್ರವಲ್ಲ ಕೃತಿಯಿಂದಲೂ ತಾನು ಬದ್ಧವಾಗಿರುವ ಧ್ಯೇಯಕ್ಕಾಗಿ ಚಟುವಟಿಕೆಯಿಂದ ಹೋರಾಡುವ ಅಥವಾ ತಾನು ದ್ವೇಷಿಸುವ ದುರಾಚಾರಗಳ ವಿರುದ್ಧ ತೀವ್ರವಾದ ಚಳುವಳಿಯನ್ನು ಸಾರುವ ಲೇಖಕನನ್ನು ಹುಡುಕುವುದು ಮಾತ್ರ ಕಷ್ಟವೇ.

ಜಾರ್ಜ್ ಓರ್ವೆಲ್ (ಎರಿಕ್ ಆರ್ಥರ್ ಬ್ಲೇರ್ ಎಂಬುದು ಅವನ ನಿಜ ಹೆಸರು) ಎಂಬ ಕಾವ್ಯನಾಮದಿಂದ ಇಂಗ್ಲಿಷ್ ಸಾರಸ್ವತ ಲೋಕದಲ್ಲಿ ಖ್ಯಾತನಾದ ಕ್ರಿಯಾಶೀಲ ಲೇಖಕನನ್ನು ಇಂಥ ಅಪರೂಪ ಉದಾಹರಣೆಯಾಗಿ ಎತ್ತಿ ಹೇಳಬಹುದು. ಅಂದರೆ ತನ್ನ ಗ್ರಂಥಗಳಲ್ಲಿ ತಾನು ಏನನ್ನು ಪ್ರತಿಪಾದಿಸಬೇಕು ಅಥವಾ ವಿರೋಧಿಸಬೇಕು ಎಂದು ಉದ್ದೇಶಿಸುತ್ತಾನೋ ಅದನ್ನು



ಮೊತ್ತಮೊದಲಾಗಿ ಪ್ರತ್ಯಕ್ಷ ಜೀವನದಲ್ಲಿ ಬಹು ಹತ್ತಿರದಿಂದ ನೋಡುವ ಹಾಗೂ ಅನುಭವಿಸುವಂತಹ ಲೇಖಕ ಓರ್ವೆಲ್.

ಬಡತನ, ನಿರುದ್ಯೋಗ, ಗುಲಾಮಗಿರಿಗಳಂತಹ ಹಲವಾರು ಸಾಮಾಜಿಕ ದುರಾಚಾರಗಳನ್ನು ಚಿತ್ರಿಸಲು ತವಕವುಳ್ಳ ಆತ, ಅವುಗಳ ಬಗ್ಗೆ ಬರೆಯುವ ಮೊದಲು ಅವುಗಳ ಅನುಭವಗಳಿಗೆ ಒಳಗಾಗುತ್ತಾನೆ. ಅಥವಾ ಒಂದು ಪಕ್ಷ ಅವನು ಕಮ್ಯುನಿಸಂನ ಧ್ಯೇಯವನ್ನು ಬೆಂಬಲಿಸುವುದಾಗಿದ್ದರೆ, ಆತ ಅದನ್ನು ಬರೀ ತಾತ್ತ್ವಿಕವಾಗಿ ಪ್ರತಿಪಾದಿಸುವುದಿಲ್ಲ; ಬದಲು ಆತ ಸ್ಪೇನ್ ಯಾದವೀ ಯುದ್ಧದಂತಹ ಹೋರಾಟಗಳಲ್ಲಿ ಉತ್ಸಾಹಪೂರ್ಣವಾಗಿ ಅದರ ಪರವಾಗಿ ಭಾಗವಹಿಸುತ್ತಾನೆ.

ಆತನ ರಾಷ್ಟ್ರಪ್ರೇಮ ಅದರ ಬಗ್ಗೆ ಬರೆಯುವುದಕ್ಕಾಗಲಿ ಅಥವಾ ಘೋಷಣೆ ಕೂಗುವುದಕ್ಕಾಗಲಿ ನಿರ್ಬಂಧಿತವಾಗಿಲ್ಲ; ಅದು, ಆತನು ವೈದ್ಯಕೀಯ ಕಾರಣಗಳಿಗಾಗಿ 'ದ್ವಿತೀಯ' ಮಹಾಯುದ್ಧದಲ್ಲಿ ಸೈನಿಕ ಸೇವೆಗೆ ತಿರಸ್ಕೃತನಾದ ಮೇಲೂ ಆತನನ್ನು ಹೋಮ್–ಗಾರ್ಡ್

ನಲ್ಲಿ ಕೆಲಸ ಮಾಡಲು ಪ್ರೇರೇಪಿಸಿತು. ಈ ರೀತಿ, ತಾವು ಇಟ್ಟುಕೊಂಡಿರುವ ದೃಢಾಭಿಪ್ರಾಯ [illegible] ಅನ್ಯಾಯದ ಹೋರಾಡಿದ ಕೆಲವೇ ಮಂದಿ ಲೇಖಕರಲ್ಲಿ ಓರ್ವೆಲ್ ಒಬ್ಬ.

ಸಾಮ್ಯುಯೆಲ್ ಬಟ್ಲರ್‌ನಂತೆ, ಆತನನ್ನು ಅನೇಕ ಸಾಮಾಜಿಕ ರಾಜಕೀಯ ದುರಾಚಾರಗಳ ವಿರುದ್ಧ ಕೊನೆಯಿಲ್ಲದ ಯುದ್ಧ ಹೂಡಿದ ಮತ್ತು ಹಲವಾರು ಜನಪ್ರಿಯವಲ್ಲದ ಧ್ಯೇಯಗಳನ್ನು ಬೆಂಬಲಿಸಿದ ಆಧುನಿಕ ಡಾನ್ ಕ್ವಿಹೋ ಎಂದು ಹೆಸರಿಸಬಹುದು.

ಬಹುಮುಖಿ ಜೀವನ

ಬರಹಗಾರನಾಗಿ ಜಾರ್ಜ್ ಓರ್ವೆಲ್ ಪ್ರಬಂಧಕಾರ, ಪತ್ರಿಕೋದ್ಯಮಿ, ವಾದಚತುರ, ಕಾದಂಬರಿಕಾರ ಮತ್ತು ವಿಡಂಬನಕಾರರ ಲಕ್ಷಣಗಳನ್ನು ತನ್ನಲ್ಲಿ ಏಕೀಭವಿಸಿಕೊಂಡಿದ್ದಾನೆ ಮತ್ತು ಕೆಲವು ಸಾರಿ ಲೇಖಕನ ಈ ಬಗೆಗಳಲ್ಲಿ ಯಾವುದು ಆತನ ವೈಶಿಷ್ಟ್ಯವಾಗುತ್ತದೆ ಎಂದು ನಿರ್ಧರಿಸುವುದು ಕಷ್ಟವೆಂದು ಕಾಣುತ್ತದೆ. ಇಪ್ಪತ್ತನೆಯ ಶತಮಾನದ ಶ್ರೇಷ್ಠ ಗದ್ಯ ಬರಹಗಾರರಲ್ಲಿ ಒಬ್ಬನಾದ ಆತ ತನ್ನ ಸರಳ, ಜೀವಂತ, ಅಕೃತ್ರಿಮ ಶೈಲಿಯಿಂದಾಗಿ ತನ್ನ ಬರವಣಿಗೆಗೆ ಹೊಸ ಸತ್ತ್ವವನ್ನು ನೀಡಿದ್ದಾನೆ.

ಆತನ ಕೃತಿಗಳಲ್ಲಿ ಬರಹಗಳನ್ನು ಆತನ ಗುಣ ಮತ್ತು ವ್ಯಕ್ತಿತ್ವಗಳ ಅಭಿವ್ಯಕ್ತ ಭಾಗವೆಂದು ಹೇಳಬಹುದು. ವ್ಯಕ್ತಿಯಾಗಿ ಆತ, ತನ್ನ ಸುತ್ತಮುತ್ತಲಿನ ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರಚಲಿತವಾಗಿದ್ದ ದಬ್ಬಾಳಿಕೆ, ಕ್ರೌರ್ಯ ಮತ್ತು ಅನ್ಯಾಯಗಳಿಂದೊದಗುವ ಕೇಡುಗಳ ವಿರುದ್ಧ ಹೋರಾಡಿದ. ಪ್ರಬಂಧಕಾರನಾಗಿ ಸಾಮಾಜಿಕ, ರಾಜಕೀಯ ಮತ್ತು ಸಾಹಿತ್ಯಕ ಕ್ಷೇತ್ರಗಳಲ್ಲಿ ವಿಶಾಲ ವ್ಯಾಪ್ತಿಯನ್ನೊಳಗೊಂಡ ವಿಷಯಗಳನ್ನು ಎತ್ತಿಕೊಂಡ.

ಆತ ಪತ್ರಿಕೋದ್ಯಮಿಯಾಗಿ, ಬಡವರ, ಶೋಷಿತರ ಪರವಾಗಿ ಪ್ರತಿಪಾದಿಸಿದ, ಮತ್ತು ವ್ಯಕ್ತಿಯ ವಿರುದ್ಧ ಸಮಾಜದ ಕ್ರೌರ್ಯ ದಬ್ಬಾಳಿಕೆ ಮತ್ತು ಅನ್ಯಾಯಗಳ ವಿರುದ್ಧ ಯುದ್ಧ ಸಾರಿದ. ವಾದಚತುರನಾಗಿ, ರಾಜಕೀಯ ಮತ್ತು ಸಾಹಿತ್ಯಕ ಕ್ಷೇತ್ರಗಳಲ್ಲಿ ಬಂಡವಾಳಶಾಹಿಯ ವಿರುದ್ಧ ಕಮ್ಯೂನಿಸಂ, ರಾಷ್ಟ್ರಕ್ಕೆದುರಾಗಿ ವ್ಯಕ್ತಿ, ಲೇಖಕನ ವಿರುದ್ಧ ಸಮಾಜ, ರಾಜಕೀಯ ಪ್ರಚಾರಕ್ಕೆ ಪ್ರತಿಯಾಗಿ ಕಲೆಯ ಸಮಗ್ರತೆ ಮುಂತಾದ ಹಲವಾರು ವಿವಾದಾತ್ಮಕ ಅಂಶಗಳನ್ನು ಎತ್ತಿಕೊಂಡಿದ್ದಾನೆ.

ಕಾದಂಬರಿಕಾರನಾಗಿ ಓರ್ವೆಲ್ ಸಮಕಾಲೀನ ವಾಸ್ತವಿಕತೆಯ ಬಗ್ಗೆ ನಿಕಟವಾದ ಆಸಕ್ತಿಯನ್ನು ತೋರಿಸಿದ ಮತ್ತು ಅದರ ಮಂಕಾದ ಹಾಗೂ ಕುತ್ಸಿತ ಮುಖಗಳ ಕಡೆಗೆ ಗಮನವನ್ನು ಸೆಳೆದ. ವಿಡಂಬನಕಾರನಾಗಿ ಆತ ಇಂಗ್ಲೆಂಡಿನಲ್ಲಿದ್ದ ಬಡತನ, ವರ್ಗವ್ಯವಸ್ಥೆ ಮತ್ತು ಖಾಸಗಿ ಶಾಲಾ ವ್ಯವಸ್ಥೆಯಲ್ಲಿನ ಸಾಮಾಜಿಕ ದುರಾಚಾರಗಳನ್ನು; ನಿರಂಕುಶ ಪ್ರಭುತ್ವ, ಏಕಾಧಿಪತ್ಯ, ಕಮ್ಯೂನಿಸಂ, ಸ್ಟಾಲಿನಿಸಂ ಮತ್ತು ಪ್ರಜಾಪೀಡನೆಗಳಂತಹ ರಾಜಕೀಯ ಕೇಡುಗಳನ್ನೂ ಬಂಡವಾಳಶಾಹಿ, ಹಣದ ಪೂಜೆ ಮುಂತಾದ ಆರ್ಥಿಕ ಅರಿಷ್ಟಗಳನ್ನೂ ತೀವ್ರವಾಗಿ ಪರಿಹಾಸ್ಯ ಮಾಡಿದ, ಖಂಡಿಸಿದ. ಈ ರೀತಿ, ಲೇಖಕನಾಗಿ ಓರ್ವೆಲ್ ಈ ಎಲ್ಲ ಬಗೆಗಳಲ್ಲಿ, ಆತನ ಕಾದಂಬರಿಗಳಲ್ಲಿನ ನಾಯಕರಲ್ಲಿ ಹಲವರಂತೆ, ತನ್ನ ಸುತ್ತಮುತ್ತಲಿನ ಸಾಮಾಜಿಕ ವ್ಯವಸ್ಥೆಯೊಂದಿಗೆ ಹೊಂದಿಕೊಳ್ಳಲಾಗದೆ ಮತ್ತು ದಬ್ಬಾಳಿಕೆ, ಕ್ರೌರ್ಯ, ಅನ್ಯಾಯ ಹಾಗೂ ವಂಚನೆ ಕೆಡುಕುಗಳ ನಡುವೆ ಸಭ್ಯತೆ, ಋಜುತ್ವ ಮತ್ತು ವೈಯಕ್ತಿಕ ಸ್ವಾತಂತ್ರ್ಯಗಳ ಅವಶ್ಯಕತೆಯನ್ನು ಒತ್ತಿ ಹೇಳಲು ಪ್ರಯತ್ನಿಸುತ್ತ ಸ್ಫುಟವಾಗಿ, ಪ್ರತ್ಯೇಕವಾಗಿ ನಿಲ್ಲುತ್ತಾನೆ.

ಸಾಹಸಮಯ ಜೀವನ

ಜಾರ್ಜ್ ಓರ್ವೆಲ್ ಬ್ರಿಟಿಷ್ ಅಂಕೆಯಲ್ಲಿದ್ದ ಭಾರತದ ಮೋತೀಹಾರಿ (ಬಂಗಾಳ) ಎಂಬಲ್ಲಿ ೧೯೦೧ರಲ್ಲಿ ಹುಟ್ಟಿದ. ಭಾರತೀಯ ಅಬ್ಕಾರಿ ಮತ್ತು ಸುಂಕದ ಇಲಾಖೆಯಲ್ಲಿ ಅಧಿಕಾರಿಯಾಗಿದ್ದ ಆತನ ತಂದೆ ರಿಚರ್ಡ್ ವಾಲ್ಮೆಸ್ಲಿ ಬ್ಲೇರ್ ೧೯೧೨ರಲ್ಲಿ ನಿವೃತ್ತನಾದ ನಂತರ

ಇಂಗ್ಲೆಂಡಿನ ಪಶ್ಚಿಮದಲ್ಲಿ ನೆಲಸಿದ. ೧೯೧೧ರಲ್ಲಿ ಓರ್ವೆಲ್ ತನ್ನ ಎಂಟನೆಯ ವರ್ಷದಲ್ಲಿ ಸೌತ್ ಕೋಸ್ಟ್‌ನ ಸಸೆಕ್ಸ್‌ನಲ್ಲಿನ ಕ್ರಾಸ್ ಗೇಟ್ಸ್ ಎಂಬ ಖಾಸಗಿ ಶಾಲೆಗೆ ಕಳುಹಿಸಲ್ಪಟ್ಟ. ಆತ ಅಲ್ಲಿ ನಾಲ್ಕು ವರ್ಷಗಳಿದ್ದ.

ವಿದ್ಯಾರ್ಥಿ ವೇತನ ಪಡೆದುಕೊಂಡು ಸಾಹಿತ್ಯಾಭ್ಯಾಸಕ್ಕಾಗಿ ಆತ ಈಟನ್ ಗೆಹೋದ. ಅಲ್ಲಿ ಆತನ ಸ್ನೇಹಿತರಲ್ಲಿ ಜಾನ್ ಸ್ಟ್ರಾಚೆ ಮತ್ತು ರಿಚರ್ಡ್ ರೀಸ್ ಪ್ರಮುಖರು. ಈಟನ್‌ನಲ್ಲಿ ಆತನ ಮೊದಲ ಓದು ಸಾಮ್ಯುವಲ್ ಬಟ್ಲರ್, ಎಚ್. ಜಿ. ವೆಲ್ಸ್, ಜಾನ್ ಗಾಲ್ಸ್‌ವರ್ದಿ, ಮತ್ತು ಜಾರ್ಜ್ ಬರ್ನಾರ್ಡ್ ಶಾ ಇವರುಗಳ ಗ್ರಂಥಗಳನ್ನು ಒಳಗೊಂಡಿತ್ತು.

ಆತನಿಗೆ ಇನ್ನೂ ಇಪ್ಪತ್ತು ವರ್ಷ ತುಂಬುವಷ್ಟರಲ್ಲಿ ಆತನ ಈಟನ್ ಅಭ್ಯಾಸ ಮುಗಿಯಿತು. ಆಮೇಲೆ ಓರ್ವೆಲ್ ಇಂಡಿಯನ್ ಇಂಪೀರಿಯಲ್ ಪೋಲಿಸ್ ಸರ್ವೀಸನ್ನು ಸೇರಿ ೧೯೨೨ ರಿಂದ ೧೯೨೭ರ ವರೆಗೆ ಪೋಲಿಸ್ ಅಧಿಕಾರಿಯಾಗಿ ಬ್ರಹ್ಮದೇಶದಲ್ಲಿ ಕೆಲಸ ಮಾಡಿದ. ಸಾಮ್ರಾಜ್ಯದ ಸೇವೆಯಲ್ಲಿದ್ದರೂ ಕೂಡ ಭಾರತದಲ್ಲಿ ಬ್ರಿಟಿಶ್ ರಾಜ್ಯದಿಂದ ಭಾರತೀಯರ ಮೇಲೆ ನಡೆಯುತ್ತಿದ್ದ ದಬ್ಬಾಳಿಕೆ ಮತ್ತು ಅನ್ಯಾಯಗಳ ಬಗ್ಗೆ ತೀವ್ರವಾದ ಭಾವನೆ ಆತನಲ್ಲಿ ಬೆಳೆಯಿತು. ಬ್ರಹ್ಮದೇಶದಲ್ಲಿನ ಆತನ ವಾಸ್ತವ್ಯದ ಪ್ರಭಾವ ಮತ್ತು ಅನುಭವಗಳು ಆತನ ಮೊದಲ ಕಾದಂಬರಿಯಾದ 'ಬರ್ಮೀಸ್ ಡೇಸ್'ನಲ್ಲಿ ಮೂಡಿ ಬಂದಿವೆ.

ಓರ್ವೆಲ್ ಬ್ರಹ್ಮದೇಶದಲ್ಲಿನ ಕೆಲಸಕ್ಕೆ ರಾಜೀನಾಮೆಯಿತ್ತು ೧೯೨೭ ರಲ್ಲಿ ಇಂಗ್ಲೆಂಡಿಗೆ ವಾಪಸಾದ. ನಾಟಿಂಗ್‌ಹಿಲ್‌ನಲ್ಲಿ ಕೆಲ ದಿನ ಕಳೆದ ಬಳಿಕ ಆತ ಇಂಗ್ಲೆಂಡನ್ನು ಬಿಟ್ಟು ಪ್ಯಾರಿಸ್‌ಗೆ ಹೋದನು. ಅಲ್ಲಿ ಆತ ಹದಿನೆಂಟು ತಿಂಗಳುಗಳಿದ್ದ. ಅಲ್ಲಿ ಜೀವನನಿರ್ವಹಣೆಗಾಗಿ ಆತ ತಟ್ಟೆ ತೊಳೆಯುವ ಮತ್ತು ಅಡಿಗೆ ಮನೆಯಾಳಿನಂತಹ ಕೆಲಸ ಮಾಡಿ ಸಮಾಜ ಜೀವನದಲ್ಲಿ ಕೆಳ ದರ್ಜೆಯ ಕೆಲಸಗಳಲ್ಲಿರುವವರಿಗೆ ಬರುವ ಕಟು ಅನುಭವಗಳನ್ನು ಪ್ರತ್ಯಕ್ಷ ಕಂಡು ೧೯೨೯ ರಲ್ಲಿ ಇಂಗ್ಲೆಂಡಿಗೆ ವಾಪಸಾದ. ಆತನ ಪ್ಯಾರಿಸ್ ವಾಸ್ತವ್ಯದಲ್ಲಿ ಈಗ ಕಳೆದು ಹೋಗಿರುವ ಎರಡು ಕಾದಂಬರಿಗಳನ್ನು ಮತ್ತು ಕೆಲವು ಲೇಖನಗಳನ್ನು ಫ್ರೆಂಚ್ ಮತ್ತು ಇಂಗ್ಲಿಷ್‌ನಲ್ಲಿ ಬರೆದ.

ಇಂಗ್ಲೆಂಡಿನಲ್ಲಿ ಆತ ಮುಖ್ಯವಾಗಿ ಬಡತನದ ರುಚಿಯನ್ನು ಪಡೆಯಲು ಮತ್ತು ಬಡವರು ಹಾಗೂ ಪೀಡಿಸಲ್ಪಟ್ಟ ಜನರೊಂದಿಗೆ ತನ್ನನ್ನು ತಾದಾತ್ಮ್ಯನನ್ನಾಗಿಸಿಕೊಳ್ಳಲು ಉದ್ದೇಶಪೂರ್ವಕವಾಗಿ ತಿರುಕನ ಜೀವನವನ್ನು ತಬ್ಬಿಕೊಂಡ. ಗೌರವಾನ್ವಿತ ಮಧ್ಯಮ ವರ್ಗದ ಜೀವನದಿಂದ ದಟ್ಟ ದರಿದ್ರಾವಸ್ಥೆಯ ಜೀವನಕ್ಕೆ ಆತನ ಅವರೋಹಣವಾದ ಮೇಲೆ ಆತ ಕಂಡುಂಡ ಅನುಭವಗಳನ್ನು ೧೯೩೩ರಲ್ಲಿ ಪ್ರಕಟಗೊಂಡ ಆತನ ಆತ್ಮಚರಿತ್ರಾತ್ಮಕ ಗ್ರಂಥವಾದ 'ಡೌನ್ ಎಂಡ್ ಔಟ್ ಇನ್ ಪ್ಯಾರಿಸ್ ಎಂಡ್ ಲಂಡನ್'ನಲ್ಲಿ ಹಿಡಿದಿಟ್ಟಿದ್ದಾನೆ.

ಮುಂದಿನ ಕೆಲ ವರ್ಷಗಳನ್ನು ಆತ ಖಾಸಗಿ ಶಿಕ್ಷಕನಾಗಿ, ನಿಗದಿತ ಸಂಬಳಕ್ಕಿಂತ ಕಡಿಮೆ ಸಂಬಳ ದೊರೆಯುತ್ತಿದ್ದ ಶಾಲಾ ಮಾಸ್ತರನಾಗಿ, ಒಂದು ಪುಸ್ತಕದಂಗಡಿಯಲ್ಲಿ ಸಹಾಯಕನಾಗಿ, ಮತ್ತು ಹಲವಾರು ನಿಯತಕಾಲಿಕಗಳಿಗೆ ವಿಮರ್ಶಕನಾಗಿ ಮತ್ತು ಲೇಖಕನಾಗಿ ಕೆಲಸ ಮಾಡುತಿದ್ದುದನ್ನು ಕಾಣುತ್ತೇವೆ. ಆತನ ಮೊದಲ ಕಾದಂಬರಿ 'ಬರ್ಮೀಸ್ ಡೇಸ್' ೧೯೩೪ ರಲ್ಲಿ ಪ್ರಕಟವಾಯಿತು. 'ಎ ಕ್ಲರ್ಜಿಮ್ಯಾನ್ಸ್ ಡಾಟರ್' (೧೯೩೫) ಮತ್ತು 'ಕೀಪ್ ದಿ ಆ್ಯಸ್ಪಿಡಿಸ್ಟ್ರ ಫ್ಲೈಯಿಂಗ್' (೧೯೩೬) ಎಂಬ ಎರಡು ಕಾದಂಬರಿಗಳು ಅದನ್ನು ಅನುಸರಿಸಿದವು.

ಓರ್ವೆಲ್ ೧೯೩೬ ರಲ್ಲಿ ಮದುವೆಯಾದ. ಅದೇ ವರ್ಷದಲ್ಲಿ ವಿಕ್ಟರ್ ಗೋಲ್ಯಾನ್ಜ ಎಂಬವನು ಇಂಗ್ಲೆಂಡಿನಲ್ಲಿನ ಕಡೆಗಣಿಸಲ್ಪಟ್ಟ ಪ್ರದೇಶಗಳಲ್ಲಿ ಒಂದರಲ್ಲಿ ಇರುವ ನಿರುದ್ಯೋಗಿ ಹಾಗೂ ಬಡವರ ಜೀವನದ ಒಳನೋಟ ನೀಡುವಂಥ ಗ್ರಂಥವೊಂದನ್ನು 'ಲೆಫ್ಟ್ ಬುಕ್ ಕ್ಲಬ್'ಗಾಗಿ ಬರೆಯಲು ಓರ್ವೆಲ್‌ನನ್ನು ಕೇಳಿಕೊಂಡ. ಓರ್ವೆಲ್ ಲ್ಯಾಂಕಾಶೈರ್‌ನಲ್ಲಿನ ಮಲಿನ ಪರಿಸ್ಥಿತಿಯ ಅಭ್ಯಾಸವನ್ನು ಮಾಡಿದ. ಅದರ

ಪರಿಣಾಮವಾಗಿ 'ದಿ ರೋಡ್ ಟು ವಿಗಾನ್ ಪಿಯರ್' (೧೯೩೭) ಎಂಬ ಒಂದು ಗ್ರಂಥ ಹೊರಬಂತು. ಅದರಲ್ಲಿ ಅವನು ಸಮಾಜವಾದಿ ನಾಯಕರ ಕಾರ್ಯಕ್ಷಮತೆ, ಪ್ರಾಮಾಣಿಕತೆಯ ಅಭಾವ ಮತ್ತು ಅವರ ಮೌಢ್ಯವನ್ನು ಟೀಕಿಸಿದ್ದರಿಂದ ಇಂಗ್ಲೆಂಡಿನ ವಾಮಪಂಥೀಯರು ಸಿಡಿಮಿಡಿಗೊಂಡರು.

ಸ್ಪೇನಿನ ಯಾದವೀ ಯುದ್ಧದ ಪ್ರಾರಂಭದ ಹೊತ್ತಿಗೆ ಲೇಖನಗಳಿಗಾಗಿ ವಸ್ತುವನ್ನು ಸಂಗ್ರಹಿಸಲು ಓರ್ವೆಲ್ ಸ್ಪೇನಿಗೆ ಹೋದ. ಆದರೆ ಅಲ್ಲಿ ಆತ ಕಮ್ಯೂನಿಸ್ಟರ ಟ್ರಾಟ್‌ಸ್ಕಿ ಗುಂಪಿನ ಪ್ರಜಾಸೈನ್ಯವನ್ನು ಸೇರುವುದರ ಮೂಲಕ ಯುದ್ಧದಲ್ಲಿ ಸಕ್ರಿಯ ಪಾತ್ರ ವಹಿಸಿದ.


೧೯೩೭ ರ ಮೇ ತಿಂಗಳಲ್ಲಿ ಗಾಯಗೊಂಡ ಆತ ತುಂಬ ಪ್ರಯಾಸಕರ ರೀತಿಯಲ್ಲಿ ಅಲ್ಲಿಂದ ಹೆಂಡತಿಯೊಂದಿಗೆ ಹೊರಬಿದ್ದು ಬರಬೇಕಾಯಿತು. ಹೆಂಡತಿಯೊಂದಿಗೆ ಸ್ಪೇನ್‌ನಲ್ಲಿನ ಆತನ ಅನುಭವಗಳು ಆತನ ಅದ್ಭುತ ಗ್ರಂಥವಾದ 'ಹೋಮೇಜ್ ಟು ಕೆಟಲೋನಿಯ' (೧೯೩೮) ವಾಗಿ ಫಲಿತಗೊಂಡಿವೆ. ಇದರಲ್ಲಿ ರಷ್ಯನ್ ಮಾದರಿ ಕಮ್ಯೂನಿಸಂ ಅನ್ನು ಆತ ಖಂಡಿಸಿದ್ದಾನೆ. ಈ ಗ್ರಂಥ ಸಂಪ್ರದಾಯಬದ್ಧ ವಾಮಪಂಥೀಯರೊಂದಿಗಿನ ಆತನ ಸಂಪೂರ್ಣ ವಿಚ್ಛೇದವನ್ನು ಸಂಕೇತಿಸುತ್ತದೆ.

ಸ್ಪೇನ್‌ನಿಂದ ಹಿಂತಿರುಗಿದ ಮೇಲೆ, ಓರ್ವೆಲ್ ಎರಡು ವರ್ಷಗಳ ವರೆಗೆ ಹರ್ಟ್‌ಫೋರ್ಡ್‌ಶೈರ್‌ನಲ್ಲಿ ವಾಸ ಮಾಡಿದ. ಕ್ಷಯದಿಂದ ನರಳುತ್ತಿದ್ದ ಆತ ಕೆಲವು ಕಾಲ ಆರೋಗ್ಯ ಧಾಮದಲ್ಲಿದ್ದ. ೧೯೩೮ರ ಚಳಿಗಾಲದಲ್ಲಿ ಆತ ಮೊರೊಕ್ಕೊಕ್ಕೆ ಭೇಟಿ ಕೊಟ್ಟು ಬೇಸಿಗೆಯಲ್ಲಿ ಇಂಗ್ಲೆಂಡಿಗೆ ವಾಪಸಾದ. ಮೊರೊಕ್ಕೊದಲ್ಲಿದ್ದಾಗ ಆತನ ನಾಲ್ಕನೆಯ ಕಾದಂಬರಿಯಾದ 'ಕಮಿಂಗ್ ಅಪ್ ಫಾರ್ ಏರ್' ಅನ್ನು ಬರೆದ.

ಎರಡನೆಯ ಮಹಾಯುದ್ಧ ಪ್ರಾರಂಭವಾದಾಗ, ಸೈನಿಕ ಸೇವೆಗಾಗಿ ಆತ ತನ್ನನ್ನು ನಿವೇದಿಸಿಕೊಂಡರೂ ದೈಹಿಕ ಅನರ್ಹತೆಯಿಂದಾಗಿ ತಿರಸ್ಕರಿಸಲ್ಪಟ್ಟಾಗ ಆತ ಹೋಮ್ ಗಾರ್ಡ್‌ನ್ನು ಸೇರಿ ಅಗ್ನಿಪ್ರಹರಿಯಾಗಿ ಸೇವೆ ಸಲ್ಲಿಸಿದ. ಯುದ್ಧಕಾಲಾವಧಿಯ ಹೆಚ್ಚಿನ ಭಾಗದಲ್ಲಿ ಆತ ಬಿ. ಬಿ. ಸಿ. ಯ ಭಾರತೀಯ ವಿಭಾಗದಲ್ಲಿ ಕೆಲಸಮಾಡಿದ.

೧೯೪೩ರಲ್ಲಿ ಓರ್ವೆಲ್ ಬಿ. ಬಿ. ಸಿ.ಯನ್ನು ಬಿಟ್ಟು 'ಟ್ರಿಬ್ಯೂನ್' ಪತ್ರಿಕೆಯ ಸಾಹಿತ್ಯಕ ಸಂಪಾದಕನಾದ. ೧೯೪೪ರಲ್ಲಿ ಒಂದು ಗಂಡು ಮಗುವನ್ನು ಆತ ದತ್ತು ತೆಗೆದುಕೊಂಡ. ೧೯೪೫ ರಲ್ಲಿ ಸಣ್ಣ ಶಸ್ತ್ರಚಿಕಿತ್ಸೆಯಿಂದಾಗಿ ಆತನ ಹೆಂಡತಿ ತೀರಿಹೋದಳು. ಅವನು ೧೯೪೪ ಫೆಬ್ರುವರಿಯಲ್ಲೇ ಬರೆದು ಮುಗಿಸಿದ್ದ ನೀಳ್ಗತೆ 'ಅ್ಯನಿಮಲ್ ಫಾರ್ಮ್' ಅದರ ರಷ್ಯ-ವಿರೋಧಿ ನಿಲುವಿನ ಕಾರಣದಿಂದಾಗಿ ಬಹಳಮಂದಿ ಪ್ರಕಾಶಕರಿಂದ ತಿರಸ್ಕರಿಸಲ್ಪಟ್ಟ ಮೇಲೆ ೧೯೪೫ನೇ ಅಗಸ್ಟ್‌ನಲ್ಲಿ ಹೊರಬಂತು.

ಈ ಕಾದಂಬರಿ ಆತನಿಗೆ ಎಷ್ಟು ಕೀರ್ತಿಯನ್ನು ತಂದಿತೋ ಅಷ್ಟೇ ಹಣವನ್ನೂ ತಂದಿತು. ಯುದ್ಧೋತ್ತರದ ಎರಡು ವರ್ಷಗಳವರೆಗೆ ಆತ ಲಂಡನ್‌ನಲ್ಲಿ ಪತ್ರಿಕೋದ್ಯಮ ಕೆಲಸದಲ್ಲಿ



ನಿಮ್ಮ ಈ ಬೊಜ್ಜು ಮಹಾರೋಗ. ಅದನ್ನು ಮೊದಲು ಕರಗಿಸಿಕೊಳ್ಳಿ.

ನಿರತನಾದ. 'ಅಬ್ಸರ್ವರ್' ಪತ್ರಿಕೆಯ ವರದಿಗಾರನಾಗಿ ಜರ್ಮನಿ, ಫ್ರಾನ್ಸ್, ಆಸ್ಟ್ರಿಯಾಗಳಲ್ಲಿ ಸಂಚಾರಿಸಬೇಕಾಯಿತು.

೧೯೪೬ರಲ್ಲಿ ಓರ್ವೆಲ್ ತನ್ನ ದತ್ತು ಮಗನೊಂದಿಗೆ ಸ್ಕಾಟಿಷ್ ಕೋಸ್ಟ್‌ನಿಂದ ಸ್ವಲ್ಪ ದೂರದಲ್ಲಿನ ಒಂದು ಏಕಾಂತ ದ್ವೀಪವಾದ ಜುರಾದಲ್ಲಿ ನೆಲಸಿದ. ಮೊದಲೇ ಕ್ಷೀಣಗೊಂಡ ಆತನ ಆರೋಗ್ಯಕ್ಕೆ ಅಲ್ಲಿನ ತೇವ ಹವೆ ಮಾರಕವಾಗಿ ಪರಿಣಮಿಸಿತು. ೧೯೪೭ರಲ್ಲಿ ಆತ ಕ್ಷಯದ ಮತ್ತೊಂದು ದಾಳಿಗೆ ಒಳಗಾದ. ಅನಾರೋಗ್ಯದ ಮೊದಲ ತಿಂಗಳುಗಳಲ್ಲಿ ಆತ ತನ್ನ ಕೊನೆಯ ಕಾದಂಬರಿ 'ನೈನ್‌ಟೀನ್ ಎಯ್ಟಿಫೋರ್'ನ ಮೊದಲ ಕರಡು ಪ್ರತಿಯನ್ನು ಬರೆದು ಮುಗಿಸಿದ ಮತ್ತು ಎರಡನೆಯ ಕರಡು ಪ್ರತಿಯನ್ನು ೧೯೪೮ರಲ್ಲಿ ಬರೆದ.

೧೯೪೯ರ ಸಪ್ಟೆಂಬರ್‌ನಲ್ಲಿ ಲಂಡನ್ನಿನ ಆಸ್ಪತ್ರೆಯೊಂದಕ್ಕೆ ಆತನನ್ನು ಸ್ಥಳಾಂತರಿಸಲಾಯಿತು. ಒಂದು ತಿಂಗಳ ಅನಂತರ, ಆತ ಆಗಾಗ್ಗೆ ಲೇಖನ ಕೊಡುತ್ತಿದ್ದ 'ಹೊರೈಸನ್' ಪತ್ರಿಕೆಯ ಸಂಪಾದಕ ಮಂಡಳದಲ್ಲಿದ್ದ ಸೋನಿಯ ಬ್ರೌನೆಲ್‌ಳನ್ನು ಮದುವೆಯಾದ. ಆದರೆ ಓರ್ವೆಲ್‌ನ ಅನಾರೋಗ್ಯ ಆತನ ದೇಹವನ್ನು ಕ್ಷಯಿಸುತ್ತಲೇ ನಡೆಯಿತು. ಚಿಕಿತ್ಸೆಗಾಗಿ ಆತನನ್ನು ಸ್ವಿಟ್ಜರ್‌ಲೆಂಡ್‌ಗೆ ಒಯ್ಯಲು ವ್ಯವಸ್ಥೆ ಮಾಡುತ್ತಿರುವಾಗಲೇ ೧೯೫೦ ಜನವರಿ ೨೧ನೇ ದಿನಾಂಕ ಆತ ರಕ್ತಸ್ರಾವದಿಂದ ತೀರಿಕೊಂಡ.

ಅವನ ಸಾಹಿತ್ಯ


ಓರ್ವೆಲ್ ತನ್ನ ಜೀವಿತಾವಧಿಯಲ್ಲಿ ಸೃಷ್ಟಿಸಿದ ಸಾಹಿತ್ಯ ಗಮನಾರ್ಹ. ನವ್ಯಾವಿಷ್ಕಾರದ ಗೋಜಿಗೆ ಹೋಗದೆಯೇ ಚಾರ್ಲಸ್ ಡಿಕೆನ್ಸ್ ಬಳಸಿದಂಥ ಶೈಲಿಗೆಯೇ ಅಂಟಿಕೊಂಡೂ ಅವನು 'ಆ್ಯನಿಮಲ್ ಫಾರ್ಮ್', 'ನೈನ್‌ಟೀನ್ ಎಯ್ಟೀಫೋರ್'ಗಳಂತಹ ಕೃತಿಗಳನ್ನು ರಚಿಸಿದನು. ಅವನ ಕಾದಂಬರಿಗಳು ಮತ್ತು ಇತರ ಲೇಖನಗಳು ಆಧುನಿಕ ಜಗತ್ತಿನ ಮೇಲೆ ಬೀರಿದ ಪ್ರಭಾವವನ್ನು ಕುರಿತು ಬರೆಯುವುದೆಂದರೆ ಅದಕ್ಕಾಗಿ ಹಲವು ಉದ್ಗ್ರಂಥಗಳೇ ಬೇಕಾದೀತು.

ಮಾನವನಾಗಿ ಓರ್ವೆಲ್

ಓರ್ವೆಲ್ ಪ್ರಬಂಧಕಾರನಾಗಿ, ತರ್ಕವಾದಜ್ಞನಾಗಿ, ಪತ್ರಿಕಾ-ಬರಹಗಾರನಾಗಿ. ಮತ್ತು ಕಾದಂಬರಿಕಾರನಾಗಿ ಪ್ರಸಿದ್ಧನಾಗಿದ್ದಾನೆ ಆದರೆ ಆತನನ್ನು ಬಹುಪಾಗಿ ಮೆಚ್ಚಿಕೊಳ್ಳಬೇಕಾದದ್ದು ಅವನಲ್ಲಿಯ ಮಾನವೀಯ ಗುಣಗಳಿಗಾಗಿ. ಪ್ರಶಂಸಿಸಬೇಕು. ಹಲವಾರು ಸಾಮಾಜಿಕ ಮತ್ತು ರಾಜಕೀಯ ಅನಾಚಾರಗಳ ವಿರುದ್ಧ ಜನ್ಮತಃ ಬಂಡಾಯಗಾರನಾದ ಆತ ತನ್ನ ಕೃತಿಗಳ ಮೂಲಕ ಸಭ್ಯತೆ, ಸಮಾನತೆ, ಸ್ವಾತಂತ್ರ್ಯ, ನ್ಯಾಯ ಮುಂತಾದವುಗಳ ಆದರ್ಶಗಳನ್ನು ಹರಡಿದ.

ವಾಸ್ತವಿಕ ಸಮಾಜವಾದಿಯಾದ ಓರ್ವೆಲ್ ಬರಿ ಸಮಾಜವಾದದ ಘೋಷಣೆಗಳಿಗೆ ಮರುಳಾಗಿ ತಾನು ಕುರುಡು ಆದರ್ಶದ, ಭಾವನಾಮಯತೆಯ ಬಿಸಿಲ್ಗುದುರೆಗಳನ್ನು ಬೆನ್ನಟ್ಟಿದವನಲ್ಲ. ಅಂತೆಯೇ, ಜಗತ್ತಿನಲ್ಲಿ ಅನ್ಯಾಯ, ದಬ್ಬಾಳಿಕೆಗಳನ್ನು ಎಲ್ಲಿ ಕಂಡರೂ ಅದನ್ನು ಅವನು ಪ್ರತಿಭಟಿಸಿದ; ಅವುಗಳ ವಿರುದ್ಧ ಹೋರಾಡಿದ; ತನ್ನ ಲೇಖನಿಯ ಮೊನಚಿಗೆ ಸಿಲುಕಿಸಿ ಗೇಲಿ ಮಾಡಿದ. ಈ ಜಗತ್ತು ಮನುಷ್ಯ ವಾಸಕ್ಕೆ ಹೆಚ್ಚು ಯೋಗ್ಯವಾದ, ನಾಗರಿಕ ಸ್ಥಾನವಾಗಬೇಕೆಂಬ ದೃಢ ನಂಬಿಕೆಯಿಂದ, ಅದಕ್ಕಾಗಿ ತನ್ನ ಜೀವನವನ್ನೇ ತೇಯ್ದು ಗಾಳಿಗೆ ಗಂಧವನ್ನೇ ಬೀರಿದ ಮಹಾನುಭಾವನವ. ✡

(ಕೃಪೆ: ಮಿರರ್)



ವರಣ

ಎಸ್. ವಿ. ಶ್ರೀನಿವಾಸರಾವ್

ಮದುವೆ ನಿಶ್ಚಯವಾಗುವುದು ಸ್ವರ್ಗದಲ್ಲಿ ಎಂಬುದು ಪೂರ್ವಿಕರು ಹೇಳುತ್ತಿದ್ದ ಮಾತು. ಇಂದಿನವರೂ ಇದನ್ನೇ ಹೇಳಹತ್ತಿದ್ದಾರೆ. ನಾನೂ ಇಂದು ಇದನ್ನೇ ಅನುಮೋದಿಸಬೇಕಾಗಿದೆ.

ನನ್ನ ಮತ್ತು ಸತ್ಯಮೂರ್ತಿಯ ಮದುವೆಯ ಬಗ್ಗೆ ತಾಯಿ ನಿರ್ಣಯಿಸಿದ್ದಳು. ತಂದೆ ವ್ಯವಹಾರ ಮುಂದುವರಿಸಿದ್ದರು. ಆತನ ರೂಪದಲ್ಲಾಗಲಿ ಗುಣದಲ್ಲಾಗಲಿ ಮನೆತನದ ಬಗ್ಗೆಯಾಗಲೀ ಕೊರತೆಯೇನೂ ನನಗೆ ಕಾಣಿಸಿರಲಿಲ್ಲ. ಹುಡುಗ ಹೆಚ್ಚಿಗೆ ಓದಿದವನಲ್ಲ. ದೊಡ್ಡ ಹೋಟೆಲಿನ ಮಾಲೀಕನ ಮಗ, ನಿಜ. ಐಶ್ವರ್ಯ ಮನೆಯಲ್ಲಿ ಮೆರೆಯುತ್ತಿದೆ. ಸುಖಕ್ಕೇನೂ ಕೊರತೆ ಇಲ್ಲ. ಆದರೆ ಆತ ಹೆಚ್ಚಿಗೆ ಓದಿಲ್ಲವೆಂಬ ಒಂದೇ ಕಾರಣದಿಂದ ಆತನನ್ನು ನಾನು ಮೆಚ್ಚಿರಲಿಲ್ಲ. ನನ್ನ ಮನಸ್ಸಿನ ಇಂಗಿತವನ್ನು ಅಮ್ಮನ ಮುಂದೆ, ಅಪ್ಪನ ಮುಂದೆ ಎಷ್ಟೇ ಮಾರ್ಮಿಕವಾಗಿ ತೋಡಿಕೊಂಡರೂ ಯಾರೂ ಬೆಲೆ ಕೊಟ್ಟಿರಲಿಲ್ಲ.

"ಓದಿ ತಾನೇ ಮಾಡೋದೇನೆ? ಕೆಲಸಕ್ಕೆ ಸೇರಿ ಹಣ ಸಂಪಾದ್ನೋದು ತಾನೆ? ಅದಕ್ಕೆ ಯಾವ ಕೆಲಸದಲ್ಲಿ ತಾನೆ ಇಷ್ಟೊಂದು ಹಣ ಗಳಿಸೋಕ್ಕೆ ಸಾಧ್ಯ ಹೇಳು? ಲಕ್ಷ್ಮಿ ಬಂದಾಗ ಕಣ್ಣು ಮುಚ್ಕೊಂಡ್ರು ಅಂತ ಒಳ್ಳೇ ವರ ಸಿಕ್ಕಿರೋವಾಗ ಬೇಡ ಅಂತ ಏನೊ ಕೊಂಕು ತೆಗೀಬ್ಯಾಡ ಸುಮ್ನಿರು. ನಾವು ಹಿಂದು ಮುಂದು ಎಲ್ಲಾ ನೋಡೇ ನಿಶ್ಚಯಿಸೋದು...ಚಿನ್ನದಂಥ ಹುಡ್ಗ, ದೇವ್ರಂಥ ಅತ್ತೆ-ಮಾವ... ಸ್ವರ್ಗದಲ್ಲಿರೋ ಹಾಗೆ ಸುಖವಾಗಿ ಇರ್ಬ್ಹೋದು. ತಾರಾಬಲ ಎಲ್ಲಾ ಚೆನ್ನಾಗಿ ಕೂಡ್ಬಂದಿದೆ..." ಇನ್ನೂ ಏನೇನೋ ಉಪದೇಶಿಸಿದ್ದಳು ನನ್ನ ತಾಯಿ.

ಒಳ್ಳೆ ಓದಿದ ವರ! ಒಳ್ಳೆ ಹುದ್ದೆ!

ಆಫೀಸರನ ಹೆಂಡತಿಯ ಅಧಿಕಾರ! ಪಾರ್ಟಿಗಳಲ್ಲಿ ಓಡಾಟ.

ದೇಶ ವಿದೇಶಗಳ ಪ್ರವಾಸ...! ಓಹ್! ಪ್ರತಿಯೊಂದು ಪ್ರವಾಸವೂ ಹನೀಮೂನ್ ಆಗಿರುವುದಿಲ್ಲವೆ?

ಗಿರಿಜಾ ಅಸಿಸ್ಟೆಂಟ್ ಕಮೀಶನರ್ ಹೆಂಡತಿ. ಎಷ್ಟೊಂದು ಠೀವಿ ಬಂದಿದೆ! ಹೇಗೆ ಯಾವಾಗ್ಲೂ ರಾಣಿ ರಾಣಿ ಹಾಗೆ ಇರ್ತಾಳೆ. ಹೋದಲ್ಲಿ, ಬಂದಲ್ಲಿ ಎಷ್ಟೊಂದು ಗೌರವ!

ಹೆಣ್ಣು ಅಂತಹ ಸ್ಥಾನಮಾನ ಬಯಸುವುದು ತಪ್ಪೆ? ನನಗೆ ಬಯಸುವ ಅಧಿಕಾರವಿಲ್ಲವೆ? ನಾನು ಬಿ. ಎ. ಓದಿದ್ದೇನೆ. ಗೌರವಸ್ಥ ಮನೆತನದಲ್ಲಿ ಹುಟ್ಟಿದ್ದೇನೆ. ನನ್ನ ಯಾವೊಂದು ಇಚ್ಛೆಯನ್ನೂ ಹಿಂದೆ ಮುಂದೆ ನೋಡದೆ ನಡೆಸಿಕೊಡುವ ತಂದೆ ತಾಯಿಗಳನ್ನು ಪಡೆದಿದ್ದೇನೆ. ದೊಡ್ಡ ಸಾಹುಕಾರನ ಮಗಳಾಗ-

ಲಿಲ್ಲ ಎಂದ ಮಾತ್ರಕ್ಕೆ ದೊಡ್ಡ ಅಧಿಕಾರಿಯ ಹೆಂಡತಿಯಾಗಬಯಸಿದುದು ತಪ್ಪೆ?

ನನಗೆ ತಪ್ಪಾಗಿ ಕಾಣಿಸಿರಲಿಲ್ಲ. ತಂದೆ ತಾಯಿ ಸಹ ತಪ್ಪೆಂದು ಎಂದೂ ಹೇಳಿರಲಿಲ್ಲ. ಆದರೆ 'ದೈವ ಬಗೆದಂತೆ ಆಗುತ್ತದೆ' ಎಂದು ನಂಬಿದ್ದರವರು. ಅದರಂತೆಯೇ ಕರ್ತವ್ಯ ನೆರವೇರಿಸಿದ್ದರು.

ಮದುವೆ ನಿಶ್ಚಯವಾಗಿಬಿಟ್ಟಿತ್ತು.

ಆದರೆ...! ಸದ್ಯ ನನ್ನ ಮದುವೆ ಸ್ವರ್ಗದಲ್ಲಿ ನಿಶ್ಚಯವಾಗಿರಲಿಲ್ಲ. ಕೊನೆ ಗಳಿಗೆಯಲ್ಲಿ ಹುಡುಗನ ತಂದೆ ಶಕುನ ಸರಿ ಬರಲಿಲ್ಲವೆಂದು ಟೆಲಿಗ್ರಾಂ ಕಳುಹಿಸಿ ನನ್ನ ಮನಸ್ಸಿನ ದುಗುಡವನ್ನು ಕಳೆದಿದ್ದರು.

ತಂದೆ ಸಿಟ್ಟಾಗಿದ್ದರು. ತಾಯಿ ನಾಲ್ಕು ದಿನ ಕೊರಗಿದ್ದಳು. ಆಗ ನಲಿದಿದ್ದುದು ನಾನೊಬ್ಬಳೇ. ರೂಮಿನಲ್ಲಿ ಕನ್ನಡಿಯ ಮುಂದೆ ನಿಂತು ಮುಖ ಅರಳಿಸಿ ಮನಸಾರೆ ನಕ್ಕಿದ್ದೆ. ದೇವರಿಗೂ ಹಾರ್ದಿಕವಾಗಿ ಕೃತಜ್ಞತೆ ಸಲ್ಲಿಸಿದ್ದೆ.

ಅರವಿಂದಕುಮಾರ...!

ಬಹಳ ಉದ್ದವಾಯಿತು ಹೆಸರು.

ಅರವಿಂದ...!?

ಈ ಹೆಸರೆ ಹೆಚ್ಚು ಚೆನ್ನ. ಮದುವೆ ಆದೊಡನೆ 'ಕುಮಾರ' ತೆಗೆಸಿ ಹಾಕುತ್ತೇನೆ. ಆವರೇನೊ ಇನ್ನೂ 'ಕುಮಾರ' ಸರಿ. ಮುದ್ದು ಅಗಲ ಮುಖದಲ್ಲಿ ಅರಳಿರುವ ಕಣ್ಣು, ಕುಡಿ ಮೀಸೆ, ಗುಂಗುರು ಕೂದಲು, ಯಾವಾಗಲೂ ತಿಳಿ ನಗೆ, ಹೊರ ಸೂಸುತ್ತಿರುವ ತುಟಿ...!

'ಮೋಹನ ಮುರಲಿ ಕರೆಯಿತು ದೂರ ತೀರಕೆ ನಿನ್ನನು...' ಅಡಿಗರ ಗೀತ ನೆನಪಿಗೆ ಬರುತ್ತಿದೆ. ಈ ಅರವಿಂದಕುಮಾರನ ಮೋಹನ ಕುಡಿನಗೆಯೇ ನನ್ನನ್ನು ಆಕರ್ಷಿಸಿದ್ದು. ಇದೇ ಸೆಳತವೇ ನನ್ನನ್ನು ಕೆನಡಾ ತನಕ ಎಳೆಯುತ್ತಿರುವುದು.

ಅರವಿಂದಕುಮಾರ...?

ನನ್ನವನಾಗುತ್ತಿರುವ ಅರವಿಂದ.

ಮಾಸ್ಟರ್ ಡಿಗ್ರಿ ಪಡೆದಿರುವ ಫಸ್ಟ್ ರ್‍ಯಾಂಕ್ ವಿಜೇತ ಇಂಜೀನಿಯರ್, ಕೆನಡಾದ ಪವರ್ ಇಂಜನಿಯರಿಂಗ್‌ನಲ್ಲಿ ಡಾಕ್ಟರೇಟ್ ಗಳಿಸಿರುವ ಭಾರತದ ಪ್ರತಿಭಾವಂತ ಯುವಕ ನನ್ನ ಗಂಡನಾಗಲಿರುವುದು ಯಾರೂ ಹೆಮ್ಮೆಪಡುವ ವಿಷಯವೆ.

ಗುಣ...? ಅಪರಂಜಿ. ಜೋಯಿಸರ ಮಾತು ಅತಿಶಯೋಕ್ತಿಯೇನಲ್ಲ. 'ನಿಮ್ಮ ಮಗಳು ಬಹಳ ಅದೃಷ್ಟವಂತೆ!' ಇಂತಹ ಗಂಡನ ಕೈ ಹಿಡಿಯಲಿರುವುದು ಅದೃಷ್ಟವಲ್ಲದೆ ಮತ್ತೇನು?

ನನ್ನ ತಂದೆ ತಾಯಿಯರೂ ಈಗ ಈ ಮದುವೆಯನ್ನೆ ಅನುಮೋದಿಸಿದ್ದಾರೆ.

ನನ್ನ ಫೋಟೋ ನೋಡಿಯೇ ಒಪ್ಪಿಗೆಯನ್ನಿತ್ತಿದ್ದಾರೆ ನನ್ನ ಅರವಿಂದ.

'ನಿಮಗೆ ಸೊಸೆ ಒಪ್ಪಿಗೆಯಾದರೆ ನನಗೆ ಹೆಂಡತಿ ಮೆಚ್ಚಿಗೆ ಆದಂತೆಯೇ' ಎಂದು ತಂದೆಗೆ ಕಾಗದ ಬರೆದಿದ್ದಾರಂತೆ! ಎಷ್ಟು ದೊಡ್ಡ ಮಾತು!

ಅಂತಹ ಮಗನನ್ನು ಪಡೆದ ಅರವಿಂದನ ತಂದೆ ನಿಜವಾಗಿ ಅದೃಷ್ಟಶಾಲಿ. ಅವರು ನನ್ನನ್ನು ಎಷ್ಟು ಅಭಿಮಾನದಿಂದ ಕಂಡರು! ತಮ್ಮ ಮಗನ ನೂರಾರು ವರ್ಣಚಿತ್ರಗಳನ್ನು ತೋರಿಸಿದ್ದಲ್ಲದೆ ಪ್ರೊಜೆಕ್ಟರ್‌ನಲ್ಲಿ ಎಷ್ಟೆಷ್ಟು ಮೂವಿ ಚಿತ್ರ ತೋರಿಸಿದರು.

ಸುಂದರ ಮನೆ! ಮುಂದೆ ಕೈದೋಟ! ಮನೆಯ ಬದಿಯಲ್ಲಿ ಮಿನಿ ಲ್ಯಾಬೊರೇಟರಿ! ಕೆಲಸದಲ್ಲಿ ಎಷ್ಟೊಂದು ತನ್ಮಯತೆ! ಹಗಲು ರಾತ್ರಿ ಹೀಗೆ ಏಕಾಗ್ರತೆಯಿಂದ ದುಡಿದುದರಿಂದಲೇ ಅವರಿಗೆ ಡಾಕ್ಟರೇಟ್ ಸಿಕ್ಕಿರುವುದು. ಇಷ್ಟರಲ್ಲೆ ಇವರಿಗೆ ಫೆಲೋಶಿಪ್ ಬೇರೆ ಸಿಗಲಿದೆಯಂತೆ!

ಅವರು ಅಡಿಗೆ ಮನೆಯಲ್ಲಿ ಅಡಿಗೆ ಮಾಡುವ ದೃಶ್ಯ ನನಗಂತೂ ನಗು ತರಿಸಿತ್ತು. ಆದರೆ ಆ ಅಡುಗೆಮನೆಯೇ ದೊಡ್ಡ ಲ್ಯಾಬೊರೇಟರಿಯಂತಿದೆ. ಎಲ್ಲಕ್ಕೂ ವಿದ್ಯುತ್‌ಚಾಲಿತ ಯಂತ್ರಗಳು! ವಾಷಿಂಗ್‌ಮೆಷಿನ್, ಫ್ರಿಜ್, ಹಾಟ್ ಓವನ್, ವ್ಯಾಕ್ಯೂಮ್ ಕ್ಲೀನರ್, ಕಾಫಿ ಪರ್ಕೊಲೇಟರ್, ಗ್ರೈಂಡಿಂಗ್ ಮೆಷೀನ್, ಕುಕಿಂಗ್ ರೇಂಜ್...! ಬಣ್ಣ ಬಣ್ಣದ ವಿವಿಧ ಆಕಾರದ ಪಿಂಗಾಣಿ ಸಾಮಾನುಗಳು! ನಾನು ಕಲ್ಪನೆಯಲ್ಲಿ ಕಂಡಿದ್ದ ಅಡಿಗೆಮನೆ! ಅಲ್ಲಿ ನಾನ್ನು

ಲಾಣೆ !!

ಆ ವಿಶಾಲ ಬೆಡ್ ರೂಂ...! ರತ್ನಗಂಬಳಿ, ಸೋಫಾ ಸೆಟ್‌ಗಳು, ಡ್ರೆಸಿಂಗ್ ಟೇಬಲ್, ವಾರ್ಡ್‌ರೋಬ್, ಟೆಲಿವಿಷನ್ ಸೆಟ್, ರೇಡಿಯೋಗ್ರಾಂ...! ಪಕ್ಕದಲ್ಲಿ ಬಿಳಿಯ ಹೆಂಚು ಹೊತ್ತಿರುವ ಬಾತ್ ರೂಂ...!!

ಓಹ್! ಆ ಮಂಚದ ಮೇಲೆ ನಾನು...!

ನೆನೆದರೆ ಮೈ ಜುಂ ಎನ್ನುತ್ತದೆ.

ನನ್ನ ತಾಯಿ ಈಗ ಹೇಳುವಂತೆ ನಾನು ಹಿಂದಿನ ಎಂಟು ಜನ್ಮದಲ್ಲಿ ಬರೀ ಪುಣ್ಯವನ್ನೇ ಮಾಡಿರಬೇಕು. ಸ್ವಲ್ಪ ಪಾಪ ಮಾಡಿದ್ದರೂ ಈ ಸೌಭಾಗ್ಯ ಕಲ್ಪಿಸಲಿಕ್ಕೂ ಸಾಧ್ಯವಿರುತ್ತಿರಲಿಲ್ಲ.

ಮಗನ ಮನೆ, ಕಾರು, ಆತನ ಕಾರ್ಯಕ್ರಮವನ್ನೆಲ್ಲ ಚಿತ್ರಿಸಿಕೊಂಡು ಬಂದಿರುವ ತಂದೆಗೆ ಮಗನ ಮೇಲೆ ಎಷ್ಟು ಅಭಿಮಾನ! ಹೆಮ್ಮೆ!!

ಹೆಮ್ಮೆಪಡಬೇಕಾದ್ದೆ. ನಾಳೆ ಆತನನ್ನು ಗಂಡನಾಗಿ ಪಡೆದ ಮೇಲೆ ನಾನೂ ಹೆಮ್ಮೆಪಡುತ್ತೇನೆ. ನನ್ನ ಗೆಳತಿಯರೆಲ್ಲ ಆಗ ಕರುಬುತ್ತಾರೆ. ಆ ದೃಶ್ಯ ನೋಡಲು ಎಷ್ಟು ಚೆನ್ನ!

ಮದುಗೆ ಇನ್ನೂ ೧೫ ದಿನಗಳಿವೆ. ದಿನ ಒಂದು ಕ್ಷಣವಾಗಬಾರದೇ?

ಮದುವೆಯ ಮಾರನೇ ದಿನವೇ ಕೆನಡಾ ಪ್ರವಾಸ. ಹೊಸ ವೈವಾಹಿಕ ಜೀವನ ಪ್ರಾರಂಭ ಅಲ್ಲೇ.

ನಿಷೇಕ...! ನೆನೆದರೆ ಮೈ ಜುಂ ಎನ್ನುತ್ತದೆ. ಗೆಳತಿ ಮಾಲತಿಯ ಮೊದಲ ದಿನದ ಅನುಭವ ನೆನೆದರೆ ಮೈ ಪುಳಕಿತಗೊಳ್ಳುತ್ತದೆ, ಬೆಚ್ಚಗಾಗುತ್ತದೆ.


ಆ ಸವಿ...! ನನಗೆ ಕೆನಡಾದಲ್ಲಿ.

ಓಹ್! ಎಷ್ಟು ಸೊಗಸು! ನಾನು ಎಷ್ಟು ಭಾಗ್ಯವಂತೆ!

ಮನುಷ್ಯ ನಿಶ್ಚಯಿಸಿದ ಮದುವೆ ನಿಲ್ಲಬಹುದು. ದಂಪತಿಗಳು ಏನೋ ಕಾರಣದಿಂದ ಅಸುಖಿಗಳಾಗಬಹುದು. ಆದರೆ ದೈವ ಸ್ವರ್ಗದಲ್ಲಿ ನಿಶ್ಚಯಿಸಿದ ಮದುವೆ ಸುಖಾಂತ, ಸಂತೃಪ್ತಿಯ ಆಗರ, ಸ್ವರ್ಗಸಮಾನ.

"ಶೀಲಾ..." ಹೊರಗೆ ತಾಯಿ ಕರೆದರು.

ಶೀಲಾಳ ನಾಚಿದ್ದ ಮುಖವನ್ನು ಮೇಲೆತ್ತಿ ಪಕ್ಕಕ್ಕೆ ತಿರುಗಿದಾಗ ಕನ್ನಡಿಯಲ್ಲಿ ತನ್ನ ಮುಖ ರಕ್ತರಂಜಿತವಾಗಿರುವುದನ್ನು ಕಂಡು ಮತ್ತಷ್ಟು



ನಾಚಿದಳು. ದಿಂಬಿನ ಕೆಳಗಿಂದ ಆತನ ಫೋಟೋ ತೆಗೆದು ತುಟಿಯನ್ನು ಫೋಟೋದ ಬಳಿಗೆ ತಂದು ಮುಗುಳ್ನಕ್ಕು ಎದೆಗವಚಿಕೊಂಡಳು.

*

'ಮದುವೆ ಸ್ವರ್ಗದಲ್ಲಿ ನಿಶ್ಚಯವಾಗುತ್ತೆ' ಎಂಬ ಉಕ್ತಿ ಸುಳ್ಳಲ್ಲ. ನಾವು ನೆನೆಸಿದ್ದುದೇನು? ಈಗ ಆಗುತ್ತಿರುವುದೇನು?

ನನಗೆ ಶೀಲಾ ಮಂಜುನಾಥನ ಸೊಸೆಯಾಗಲಿ ಎಂಬ ಆಸೆ ಇತ್ತು. ಆದರೆ ವಿಧಿನಿಯಮ?

ಮಂಜುನಾಥ ನಮ್ಮ ಮಗಳನ್ನು ನೋಡಿಕೊಂಡು ಮದುವೆಗೆ ಒಪ್ಪಿಗೆಯಿತ್ತು ಮಂಗಳೂರಿಗೆ ಹಿಂತಿರುಗಿದೊಡನೆ ಆತನ ಪತ್ನಿ ಹೊರಗಾದಳಂತೆ! ಇದು ಅಪಶಕುನವಂತೆ!

ಈ ಕಲಿಗಾಲದಲ್ಲಿ ಈ ಗೊಡ್ಡು ಆಚಾರ ವಿಚಾರ, ಶಕುನ ನೋಡುವ ಜನರುಂಟೆ?!

ಹೋಗಲಿ. ಈಗ ಆದದ್ದೇ ಒಳಿತಾಯಿತು. ಹೋಟೆಲ್ ಮಾಲೀಕನ ಹೆಂಡತಿಯಾಗುವುದಕ್ಕಿಂತ ಫಸ್ಟ್‌ಕ್ಲಾಸ್ ಇಂಜನಿಯರ್ ಹೆಂಡ್ತಿ ಆಗ್ತಿದ್ದಾಳೆ.

ಅರವಿಂದನೊಡನೆ ಮದುವೆ ನಿಶ್ಚಯವಾದದ್ದು ತಾನೆ ಎಷ್ಟು ಅನಿರೀಕ್ಷಿತ!

ಟೂರಿಗೆ ಹೋಗಿದ್ದ ನಾನು ಬೊಂಬಾಯಲ್ಲಿ ಇಳಿದುಕೊಂಡಿದ್ದ ಹೊಟೇಲಿನಲ್ಲೇ ನನ್ನ ರೂಮಿನ ಎದುರಿನ ರೂಮಿನಲ್ಲೇ ಅರವಿಂದ, ಅವನ ತಂದೆ ರಾಮರಾಯರೂ ಇಳಿದುಕೊಂಡಿರಬೇಕೆ?

ಕನ್ನಡದಲ್ಲಿ ಯಾರೊ ಮಾತನಾಡುತ್ತಿರುವುದನ್ನು ಕೇಳಿ ನಾನು ಹೊರಗೆ ಬಂದಿದ್ದೆ.

"ಓಹೋ! ನೀವೂ ಕನ್ನಡದೋರ...!" ನನಗೆ ಆಶ್ಚರ್ಯಕ್ಕಿಂತ ಮಿಗಿಲಾಗಿ ಸಂತೋಷವಾಗಿತ್ತು.

"ಹೌದು. ನಿಮ್ಮನ್ನು ಭೇಟಿಯಾಗಿ ಬಹಳ ಸಂತೋಷ ಆಯ್ತು," ಇಬ್ಬರೂ ಹಾರ್ದಿಕವಾಗಿ ಕೈ ಕುಲುಕಿದ್ದರು.

"ನನ್ಹೆಸ್ರು ರಾಮರಾಯ. ಇವನು ನನ್ಮಗ ಅರವಿಂದ...ಕೆನಡಾದಲ್ಲಿ ರೀಸರ್ಚ್ ಮಾಡ್ತಾ ಇದ್ದಾನೆ. ಇವತ್ತು ರಾತ್ರಿ ಹೋಗ್ತಾ ಇದ್ದಾನೆ. ಸ್ವಲ್ಪ ಹೊರ್ಗೆ ಹೋಗಿ ಬರ್ತೀವಿ..."

ತಂದೆ ಮಗ ಮತ್ತೆ ಕೈ ಕುಲುಕಿ ಹೊರಗೆ ಹೋಗಿದ್ದರು.

ರಾತ್ರಿ ಹೊತ್ತಿಗೆ ಅರವಿಂದ ನನ್ನ ಅಳಿಯನಾಗಲು ನಿಶ್ಚಯವಾಗಿಹೋಯ್ತು. ಅಂದರೆ ಇದು ದೈವೇಚ್ಛೆ ಅಲ್ಲದೆ ಇನ್ನೇನು?

ಅರವಿಂದ ಹುಡುಗಿಯ ಫೋಟೋ ನೋಡೇ ಒಪ್ಪಿಗೆಯನ್ನಿತ್ತುಬಿಟ್ಟ.

"ಹೆಚ್ಗೆ ಅದ್ದೂರಿ ಗಿದ್ದೂರಿ ಮಾಡೋಕೆ ಹೋಗ್ಬೇಡಿ. ಹೆಣ್ಣು ಹೆತ್ತೋರ ಕಷ್ಟ ನಂಗೂ ಗೊತ್ತಿದೆ. ನಂಗೂ ಇನ್ನೂ ಮದ್ವೆಗಿರೋ ಒಬ್ಳು ತಂಗಿ ಇದ್ದಾಳೆ. ಸಿಂಪಲ್ಲಾಗಿ ಮನೆ ಫಂಕ್ಷನ್ ಅಂತ ಮದ್ವೆ ಮಾಡ್ಕೊಟ್ಬಿಡಿ..." ನನ್ನ ಕಾಲು ಮುಟ್ಟಿ ನಮಸ್ಕರಿಸಿ ಬೈ...ಬೈ ಹೇಳಿದ್ದ ಏರ್‌ಪೋರ್ಟ್‌ನಲ್ಲಿ.

ಆತನ ವಿನಯಶೀಲತೆಗೆ ನಾನು ಮರುಳಾದೆ. ಆತ ಹಿರಿಯರಲ್ಲಿರಿಸಿದ್ದ ಗೌರವ–ಭಕ್ತಿ ಕಂಡು ನನ್ನ ಮನಸ್ಸು ಪ್ರಫುಲ್ಲಗೊಂಡಿತು.

"ಇದು ಸುಸಂಸ್ಕೃತಿಯ ಲಕ್ಷಣ," ಎಂದು ಮನಸಾರೆ ಹೊಗಳಿದೆ ಭಾವಿ ಅಳಿಯನನ್ನು.

ಬೆಂಗಳೂರಿಗೆ ಬಂದೊಡನೆ ರಾಮರಾಯರು ೨೫ ಸಾವಿರ ವರದಕ್ಷಿಣೆ ಕೇಳಿದಾಗ ನನಗೆ ಭಯವಾಗಿತ್ತು. ಆದರೂ ಅವರೂ ಮಗನ ಮಾತನ್ನೇ ಅನುಮೋದಿಸಿ ಸಿಂಪಲ್ ಆಗಿ ಮದುವೆ ಶಾಸ್ತ್ರ ನಡೆಸಲು ಅನುಮತಿ ನೀಡಿದಾಗ ಸ್ವಲ್ಪ ಸಮಾಧಾನ ಆಯಿತು. ಇದಕ್ಕೂ ಕಡಿಮೆ ವರದಕ್ಷಿಣೆಗೆ ಅರವಿಂದನಂತಹ ಇಂಜಿನಿಯರ್, ಕೆನಡಾದಲ್ಲಿ ರೀಸರ್ಚ್ ಮಾಡುತ್ತಿರುವ ಮೇಧಾವಿ, ಸಿಕ್ಕುವ ಸಂಭವವಿದೆಯೇ?!

ಎಷ್ಟಾದರೂ ಖರ್ಚಾಗಲಿ. ಸದ್ಯ ನನ್ನ ಮಗಳು ಸುಖದಿಂದಿದ್ದರೆ ಸಾಕು.

*

ವಿಲಾಯತಿಯ ಹುಚ್ಚು ಇವರಿಗೆ ಏಕೆ ಹತ್ತಿದೆಯೋ ನಾನು ಬೇರೆ ಕಾಣೆ. ಅವಳೇನೋ ಹುಡುಗಿ ಪರದೇಶಕ್ಕೆ ಹೋಗ್ತೀನಲ್ಲ ಅನ್ನೋ ಸಂತೋಷ. ಅದಕ್ಕೆ ಕೂಡ್ಲೆ ಒಪ್ಗೆ ಕೊಟ್ಬಿಟ್ಳು.

ಇವರು ತಮ್ಮ ಸರ್ವೀಸು ಮುಗೀತಾ ಬಂದ್ರೂ ಇನ್ನೂ ಹೊರದೇಶಕ್ಕೆ ಹೋಗೋಕ್ಕಾಗಿಲ್ಲ.

ಏನೇ ಏನೇನಾದ್ರೂ ಅಲ್ಲಿದ್ರೆ ಹೋಗ್ಬಹುದು ಅಷ್ಟೇ! ಆದ್ರೆ ನನ್ನ ಯೋಚ್ನೇನೆ ಇಲ್ಲ ಯಾರ್ಗೂ. ನಾನು ನನ್ಮಗಳ ಮನೆಗೆ ಹೋದ್ರೆ ಎಲ್ಲಿ ತುಳಸಿ ಪೂಜೆ ಮಾಡೋದು? ಇದ್ವಲು, ಸೌದೆ ಉಪಯೋಗಾನೇ ಇಲ್ವಂತೆ! ಕರೆಂಟ್‌ನಲ್ಲಿ ನಾನು ಅಡ್ಗೆ ಮಾಡೋಕೆ ಸಾಧ್ಯಾನಾ? ಮೊಮ್ಮಗು ಕಾಣೋಕ್ಕೆ ಮುಂಚೆ ನನ್ಮಗಳ ಕೈ ಅಡ್ಗೆ ತಿಂತಾರ? ಅದೂ ಋಷಿಪಂಚಮಿ ಹಿಡಿದ್ಮೇಲೆ!

ಮದ್ವೆ ಆದ್ಮೇಲೆ ಬಸುರಿ ಆಗ್ದೆ ಇರ್ತಾಳೆಯೆ? ಬಾಣಂತನಕ್ಕೆ ನಾನು ಹೋಗ್ದೆ ಇರೋಕ್ಕಾಗ-ತ್ತೆಯೆ? ಹೋಗ್ಬೇಕಾದ್ರೂ ಹೆಚ್ಗೆ ಲಗೇಜು ತಗೊಂಡ್ಹೋಗ್ಬಾರ್ದಂತೆ. ಲೇಹ್ಯ, ಶುಂಠಿ, ವೀಳ್ಯದೆಲೆ, ಅಡಿಕೆ ಇವೆಲ್ಲಾ ಅಲ್ಲಿ ಎಲ್ಲಿ ಸಿಕ್ಕುತ್ತೆ? ಇವಿಲ್ದೆ ಬಾಣಂತನ ತಾನೆ ಹೇಗೆ ಚೆನ್ನಾಗಿ ಆಗಕ್ಕೆ ಸಾಧ್ಯ? ಬಾಣಂತನ ಕೆಟ್ರೆ ಕಷ್ಟಪಡ್ಬೇಕಾದೋಳು ಶೀಲಾ ತಾನೆ? ಇದೆಲ್ಲಾ ಈ ಹಾಳು ಗಂಡಸ್ರು ಯೋಚ್ನೇನೆ ಮಾಡಲ್ಲ. ನಾನ್ಹೇಳಿದ ಮಾತು ಕೇಳಲ್ಲ.

೨೫ ಸಾವಿರ ವರದಕ್ಷಿಣೇನೆ ಕೊಡ್ತಾ ಇದ್ದಾ-ರಂತೆ ಈ ಫಾಷಿ ಅಳಿಯನಿಗೆ! ಮಂಜುನಾಥನ ಮಗನಾಗಿದ್ರೆ ಒಂದ್ಕಾಸು ವರದಕ್ಷಿಣೆ ಇಲ್ದೆ ಮದ್ವೆ ಮಾಡ್ಕೊಂತಿದ್ದ. ಶಕುನ ಸರಿ ಬರ್ಲಿಲ್ಲ ಅಂತ ಅವ್ರು ಬರಿದ್ರೆ ಇವ್ರು ಸುಮ್ನಾಗೋದೆ? ನಮ್ಮ ಆಚಾರ್ರನ್ನ ಕರ್ಕೊಂಡ್ಹೋಗಿದ್ರೆ ಏನಾದ್ರೂ ಶಾಂತಿ ಗೀಂತಿ ಮಾಡ್ತಾ ಇರ್ಲಿಲ್ವೆ? ಎಂಥದ್ದಕ್ಕೂ ಶಾಂತಿ ಇದೆಯಂತೆ. ಅಂಥಾದ್ರಲ್ಲಿ ಈ ಅಪಶಕುನಕ್ಕೆ ಶಾಂತಿ ಇರಲಿಲ್ವೆ? ಎಲ್ಲಾದಕ್ಕೂ ಅವಾಂತ್ರಾ ನಮ್ಮೋರ್ದು.

ಸುಖವಾಗಿ ಗಿಳಿ ಸಾಕ್ದಾಂಗೆ ಸಾಕಿ ಈ ಹೊರ-ದೇಶಕ್ಕೆ ಕಳ್ಸಿದ್ರೆ ಹೇಗೆ ಇರ್ತಾಳೆ ಅಲ್ಲಿ! ಕೆಲ್ಸ-ದೋರು ಬೇರೆ ಸಿಕ್ಕೋದಿಲ್ವಂತೆ, ಎಲ್ಲಾದಕ್ಕು ತಾನೇ ಕೈ ಬಾಯಿ ಸುಟ್ಕೋಬೇಕು. ಇಲ್ಲೇ ಇದ್ರೆ ಕೈಗೊಬ್ರು-ಕಾಲ್ಗೊಬ್ರು ಆಳುಕಾಳು-ಗಳು ಇರ್ತಾ ಇದ್ರು. ಮಂಜುನಾಥನ ಮನೆ ಅಲ್ಲೆ ಏನಾದ್ರೂ, ಇನ್ಯಾರ್ದಾದ್ರೂ ಇಂಥದೇ ಮನೆ ಅಥವ ಇನ್ನೂ ಚೆನ್ನಾಗ ಮನೇನೇ ಸಿಕ್ತಾ ಇತ್ತು. ಬೇಕಾದಾಗ ನಾಲ್ಕು ದಿನ ಮಗಳ

ಮನೆಯಲ್ಲಿ ಹಾಯಾಗಿ ಇದ್ದು ಬರ್ಬೋದ್ದಾಗಿತ್ತು.

ಹೂಂ...ನಾವು ಹೊಡ್ಕೊಂಡ್ರೆ ಏನಾಗುತ್ತೆ? ಎಲ್ಲಾ ವಿಧಿನಿಯಮ. ಮದ್ವೆ ನಿಶ್ಚಯ ಆಗೋದು ಸ್ವರ್ಗದಲ್ಲಿ. ಇಲ್ಲಿ ನಾವು ಎಷ್ಟು ಒದ್ದಾಡಿದ್ರೂ ಅಷ್ಟೇ! ಆಗೋದು ಆಗೇ-ತೀರುತ್ತೆ. ಇನ್ನೂ ೫ ದಿನ ಇದೆ ಮದ್ವೆಗೆ, ಮಾಡೋ ಕೆಲ್ಸ ಬೇಕಾದಷ್ಟು ಬಿದ್ದಿದೆ.

ಒಳ ನಡೆದರು ಶೀಲಾಳ ತಾಯಿ ಶಾಂತಮ್ಮ.

*

ತಂಗಿಯ ಮದುವೆಗಾಗಿ ನಾಲ್ಕು ದಿನ ಮುಂಚೆ ನಾನು ಮದರಾಸಿನಿಂದ ಬಂದಿದ್ದೆ.

ನಾಳೆ ವರಪೂಜೆ ಆಗಬೇಕು. ಆದರೆ ಇನ್ನೂ ಬೀಗರು ಬರುವ ಬಗ್ಗೆ ಏನೂ ತಿಳಿದು ಬಂದಿಲ್ಲ. ಹುಡುಗ ಕೆನಡಾದಿಂದ ಬಂದಿದ್ದಾನೆಯೆ? ಎಷ್ಟು ಜನ ಬೀಗರು ಬರುತ್ತಾರೆ?

ಯೋಚಿಸುತ್ತಿದ್ದಾಗಲೇ ಮನೆಯ ಮುಂದೆ ಟ್ಯಾಕ್ಸಿ ಬಂದು ನಿಂತಿತು. ಯಾರು ಬಂದರು ಎಂದು ಹೊರಗೋಡಿದೆ. ರಾಮರಾಯರನ್ನು ಕಂಡು ನಮ್ಮ ತಂದೆ ಹೌಹಾರಿದರು. ಓಡಿಬಂದರು.

ರಾಮರಾಯರು ಟೆಲಿಗ್ರಾಂ ಒಂದನ್ನು ನಮ್ಮ ತಂದೆಯ ಕೈಗಿತ್ತರು. ಅವರು ಬಿಡಿಸುತ್ತಿ-ದ್ದಂತೆಯೇ ನಾನು ಓದಿ ಗಾಬರಿಯಾದೆ.

"Met with accident. Admitted in a nursing home at Bandra. Send five thousand immediately.

—Aravind"

"ಎಂಥಾ ದುರದೃಷ್ಟ ನೋಡಿ. ಮದ್ವೆಗೆ ಬಂದ ಮಗ ಆಸ್ಪತ್ರೆಗೆ...! ಟ್ಯಾಕ್ಸಿಗೆ ಯಾರ್ದಾರೂ ವೆಹಿಕಲ್ ಡ್ಯಾಶ್ ಹೊಡ್ದಿರ-ಬೇಕು. ಮದ್ವೆ ಲಗ್ನ ಸರಿಯಾಗಿ ತೋರ್ಸಿ ಕಟ್ಸಿದ್ರಿ ತಾನೆ?" ರಾಮರಾಯರ ನುಡಿ ನಡುಗುತ್ತಿತ್ತು.

"ಸಧ್ಯ...ನಮ್ಹುಡಗ ಬೇಗ ಗುಣವಾದ್ರೆ ಸಾಕು...ಟೆಲಿಗ್ರಾಂ ಬಂದಾರಭ್ಯ ನಂಗೆ ಕಾಲೇ ಆಡ್ತಾ ಇಲ್ಲ..." ಮುಂದುವರಿಸಿದರು.

"ಅಂದ್ರೆ...ಮ್ಯಾರೇಜ್ ಪೋಸ್ಟ್‌ಪೋನ್

ಮಾಡ್ಬೇಕಾಗುತ್ತೆ..." ನನ್ನ ಮಾತು ಮುಗಿಯುವ ಮುನ್ನವೇ ತಂದೆ ನುಡಿದರು.

"ನೋಡಿ ರಾಮರಾಯ್ರೆ, ನೀವು ತಕ್ಷಣ ಹೊರ್ಟ್ಬಿಡಿ. ಯಾರಾದ್ರೂ ಹತ್ರ ಇದ್ರೆ ಒಳ್ಳೇದು. ದುಡ್ಗೆ ಹಿಂದೂ ಮುಂದೂ ನೋಡೋ ಕಾಲ ಇದಲ್ಲ. ಮೊದ್ಲು ಹುಡ್ಗ ಸರಿಹೋಗ್ಬೇಕು..."

"ಹೌದು...ಅಲ್ವೆ...? ದುಡ್ನ ಮುಖ ನೋಡೊ ಕಾಲ್ವೆ ಇದು...? ಅಳಿಯ ಬೇಗ ಸರಿಹೋಗ್ಬೇಕು...ಬೇಗ ಮದ್ವೆ ಕೆಲ್ಸ ಮುಗಿಸ್ಬೇಕು ಅನ್ನು ಆಸೆ ನೀಮ್ಗೂ ಇಲ್ದೆ ಇರುತ್ತಾ?...ಹೂಂ... ನಿಮಗೆ ಹೇಳಿ ಹೋಗೋಣ ಅಂತಾನೆ ನಾನು ಬಂದಿದ್ದು. ಪಾಪ...ಎಲ್ಲಾ ಸಿದ್ಧತೆ ಮಾಡಿಕೊಂಡಿದ್ದ ನಿಮಗೆ ತುಂಬಾ ತೊಂದ್ರೆ ಆಯ್ತು. ಆದ್ರೆ... ಮುಖ್ಯ ಜೀವಕ್ಕೆ ಭಯ ಇಲ್ಲ ಅಂತ ಕಾಣ್ಸುತ್ತೆ. ಅವನೇ ಟೆಲಿಗ್ರಾಂ ಕೊಟ್ಟಿರೋದ್ರಿಂದ ನಾಲ್ಕು ದಿನ ಶುಭದ ಕೆಲ್ಸ ಮುಂದೂಡ್ಬೇಕಾಗುತ್ತೆ...ನನ್ಹೆಂಡ್ತಿ ಬದುಕಿದ್ದಿದ್ರೆ ಈ ವಿಷ್ಯ ತಿಳ್ದು ನಿಜವಾಗಿ ಎದೆ ಒಡ್ದು ಸಾಯ್ತಾ ಇದ್ಲು. ಮಗನ್ನ ಕಂಡ್ರಂತೂ ಅವಳ್ಗೆ ಪ್ರಾಣ..."

"ಸುಮ್ನಿರಿ... ಏನೇನೋ ನೆನಸ್ಕೊಂಡು ದುಃಖಿಸ್ಬೇಡಿ... ಎಲ್ಲಾ ಸರಿಹೋಗುತ್ತೆ... ಹುಡ್ಗ ಬೇಗ ಸರಿಹೋಗ್ತಾನೆ..."

"ಏಕೋ ಲಗ್ನದ ಬಲ ಅಷ್ಟು ಸರಿ ಇರ್ಲಿಲ್ಲ ಅಂತ ಕಾಣ್ಸುತ್ತೆ. ಇನ್ನೊಂದು ಲಗ್ನ ಸರಿಯಾಗಿ ನೋಡ್ಸಿ ಇಡಿಸ್ಬಿಡಿ...ನಾನು ಹೋಗಿ ಆದಷ್ಟು ಜಾಗ್ರತೆ ಹುಡ್ಗನ್ನ ವಾಸಿಮಾಡಿಸ್ಕೊಂಡು ಕರ್ಕೊಂಡು ಬಂದ್ಬಿಡ್ತೀನಿ..."

"ಒಳ್ಳೇದು ಹೋಗ್ಬನ್ನಿ... ದೇವ್ರಿದ್ದಾನೆ.



ಎಲ್ಲಾ ಒಳ್ಳೇದೇ ಆಗುತ್ತೆ. ನಾನೂ ಬರ್ತೀನಿ. ಇಲ್ದೆ ಇದ್ರೆ ನಮ್ಹುಡಗನ್ನ ಕಳಿಸ್ತೀನಿ ಇನ್ನು ೨-೩ ದಿನಕ್ಕೆ," ನಮ್ಮ ತಂದೆ ನುಡಿದಾಗ ನಾನು ಟ್ಯಾಕ್ಸಿಯ ಬಾಗಿಲನ್ನು ತೆಗೆದೆ.

"ಹೂಂ... ಹೋಗ್ಬರ್ತೀನಿ... ನರ್ಸಿಂಗ್ ಹೋಮ್ ಎಂದ್ರೆ ಎದೆ ನಡ್ಗುತ್ತೆ...ಕಿತ್ತು ತಿಂತಾರೆ... ದುಡ್ಡ ಬೆಲೇನೆ ಇಲ್ಲ...ಅದೂ ಬೊಂಬಾಯಿ ಅಂದ್ರಂತೂ ಕೇಳ್ಬೇಕಾಗೇ ಇಲ್ಲ... ನನ್ಹತ್ರಾನೂ ಸ್ವಲ್ಪ ಇದೆ. ಒಂದಾರು ಸಾವಿರ ಕೊಟ್ಬಿರಿ. ಬಂದ್ಮೇಲೆ ಎಲ್ಲಾ ಲೆಖ್ಖಾಚಾರ ಮಾಡ್ಕೋಳ್ಳೋಣ."

"೨೫ ಸಾವಿರ ಆಗ್ಲೆ ಕೊಟ್ಟಿದ್ದಾರಲ್ಲ ನಮ್ಮ ತಂದೆ..." ನಾನು ನುಡಿದೆ.

"ಹೌದು... ಹೌದು... ಇಸ್ಕೊಂಡಿರೋ-ದನ್ನ ಇಲ್ಲ ಅಂದ್ರಾಗತ್ತಾ? ನಾನು ಮುಂಚೇನೆ ಹೇಳಿರಲಿಲ್ವೆ... ಹುಡ್ಗನ ಓದಿಗೆ ಮಾಡಿರೋ ಸಾಲಕ್ಕೆ ಅದನ್ನೇ ಕಟ್ಬೇಕು ಅಂತ. ದುಡ್ಡು ಬಂದ ತಕ್ಷಣ ಅದನ್ನು ಕಟ್ಟಿ ನಿಮ್ಮ ದಯ-ದಿಂದ ಋಣಮುಕ್ತನಾದೆ, ಅಹ್ಹಹಾ... ನಿಮ್ಮಳಿಯ ಋಣಮುಕ್ತನಾದ ಅನ್ನಿ..."

"ನಾವು ಮದ್ವೆಗೋಸ್ಕರ ಬೇಕಾದಷ್ಟು ಖರ್ಚು ಮಾಡ್ಬಿಟ್ಟಿದ್ದೀವಿ..."

ನನ್ನ ಮಾತು ಮುಗಿಯುವ ಮುನ್ನವೇ ರಾಮುರಾಯರು, ಸಿಟ್ಟಿನಿಂದ ನುಡಿದರು. "ನಾನು, ನಿಮ್ಗೇನೂ ಭಿಕ್ಷೆ ಬೇಡಕ್ಕೆ ಬಂದಿಲ್ಲ. ಇರೋ ಪರಿಸ್ಥಿತಿ ತಿಳಿಸ್ದೆ ಅಷ್ಟೆ. ಭಾವಿ ಅಳಿಯನ ಮೇಲೆ ನಿಂಮ್ಗೆ ಅಷ್ಟು ಪ್ರೀತಿ ಇಲ್ದೆ ಹೋದ್ರೆ ನನ್ಮಗ ಅನ್ನೊ ಪ್ರೀತಿ ನಂಗಿರಲ್ಲ ಅನ್ಕೊಂಡ್ರಾ..." ಅವರ ಸಿಟ್ಟು ಮುಗಿಲಿಗೇರಿತ್ತು. ಕಣ್ಣು ಕೆಂಪಾಗಿತ್ತು.

ನನ್ನ ತಂದೆ ತಡೆದು ನುಡಿದರು: "ಸಿಟ್ಟಾ-ಗ್ಬೇಡಿ ರಾಯ್ರು... ನಿಮ್ಮ ಮಗ ಈಗ ನಮ್ಮಳಿಯ ತಾನೆ ? ನಮ್ಮಿಬ್ರಿಗೆ ಸೇರಿದ್ದೋನು ಈಗ ನಮ್ಗೂ ಸೇರೇ ಸೇರ್ತಾನಲ್ಲ. ಹೂಂ... ಪಾಪು... ಒಳ್ಗೆ ಹೋಗಿ ಚೆಕ್‌ಪುಸ್ತಕ .ತಗೊಂಡ್ಬಾ ಹೋಗೋ..."

"ಕ್ಯಾಷೇ ಇದ್ರೆ ಚೆನ್ನಾಗಿತ್ತು.... ಚೆಕ್ ನಾನು ಬ್ಯಾಂಕಿಗೆ ಕಟ್ಟಿ ಕ್ರೆಡಿಟ್ ಆಗಿ ಕ್ಯಾಷ್ ಮಾಡಿಸ್ಕೊಂಡು ಹೋಗೋ ಹೊತ್ಗೆ ಭಾಳ ಲೇಟಾಗುತ್ತೆ... ಟೈಂ ಇಸ್ ವೆರಿ ಪ್ರೆಶಸ್ ನೌ."

"ಹೌದು... ಹೌದು... ನಂಗೊತ್ತಿಲ್ವೆ... ನಿಮ್ಗೇನೂ ತೊಂದ್ರೆ ಆಗಲ್ಲ.... ಸೆಲ್ಫ್ ಚೆಕ್ ಕೊಡ್ತೀನಿ. ಹಾಗೇ ರೇಲ್ವೆ ಸ್ಟೇಷನ್‌ಗೆ ಹೋಗೋ ದಾರೀಲೆ ಇದೆ ಬ್ಯಾಂಕ್. ಕ್ಯಾಷ್ ತಗೊಂಡ್ಹೋಗಿ..."

ನಾನು ನೀಳ ಉಸಿರನ್ನ ಬಿಟ್ಟೆ.

*

ಅಂದಿನ ರಾತ್ರಿ ನಮ್ಮನೆಯಲ್ಲಿ ದೊಡ್ಡ ರಾದ್ಧಾಂತವೇ ಆಗಿ ಮಾರನೇ ದಿನ ನಮ್ಮ ತಂದೆಯೂ ಭಾವಿ ಅಳಿಯನನ್ನು ನೋಡಿಕೊಂಡು ಬರಲು ಬೊಂಬಾಯಿಗೆ ಹೋಗುವುದೇ ಸರಿಯೆಂದು ನಿರ್ಧಾರವಾಯಿತು.

ನಾನು ಮತ್ತು ನನ್ನ ತಂದೆ ಏರ್‌ಲೈನ್ಸ್ ಆಫೀಸಿಗೆ ಪ್ಲೇನ್ ಬಗ್ಗೆ ವಿಚಾರಿಸಿ ಬುಕ್ ಮಾಡಲು ಬಂದಾಗಲೇ ನಾನು ನನ್ನ ಗೆಳೆಯ ಮುಕುಂದನನ್ನು ಭೇಟಿಯಾದುದು. ಮುಕುಂದ ಅಮೇರಿಕದಲ್ಲಿ ಡಾಕ್ಟರಾಗಿದ್ದಾನೆ. ಹೆಣ್ಣು ನೋಡಲು ಬಂದಿದ್ದನಂತೆ. ಹೆಣ್ಣು ಒಪ್ಪಿಗೆ ಯಾಗಲಿಲ್ಲವಂತೆ. "ಇಂದು ಇನ್ನೊಂದು ಇಂಟರ್‌ವ್ಯೂ ಏರ್ಪಡಿಸಿದ್ದಾರೆ... ನಂಗೆ ಒಪ್ಗೆ ಆಗ್ಲಿ, ಆಗ್ದೆ ಇರ್ಲಿ... ನಾನು ನಾಡಿದ್ದು ಹೊರಡ್ತಾ ಇದ್ದೀನಿ. ನ್ಯೂಯಾರ್ಕ್‌ನಲ್ಲಿ ಡಾಕ್ಟರ್ಸ್ ಕಾನ್ಫರನ್ಸ್ ಇದೆ. ನಾನೊಂದು ಪೇಪರ್ ಓದ್ಬೇಕು..." ಅಂದ.

ನಾನು ನನ್ನ ತಂದೆಯ ಪರಿಚಯ ಅವನಿಗೆ ಮಾಡಿಸಿ ತಂಗಿಯ ಮದುವೆಯ ವಿಷಯವನ್ನೂ ಹೇಳಿದೆ.

ನನ್ನ ತಂದೆ ಕೆಲ ನಿಮಿಷ ಕುಶಲ ಸಂಭಾಷಣೆ ನಡೆಸಿ ಪ್ಲೇನ್ ಬಗ್ಗೆ ವಿಚಾರಿಸಲು ಕೌಂಟರಿನತ್ತ ನಡೆದ. ಆತ ಎಲ್ಲವನ್ನೂ ಕೇಳಿ ನನ್ನನ್ನು ಪಕ್ಕಕ್ಕೆ ಕರೆದುಕೊಂಡು ಹೋದ.

ಕೆನಡಾಕ್ಕೆ ಟ್ರಂಕ್‌ಕಾಲ್ ಬುಕ್ ಮಾಡಿದ.

ನಾನೂ ಅವನೂ ಇಬ್ಬರೂ ಹಲವು ಕಾರಣ ನೀಡಿ, ನಮ್ಮ ತಂದೆಯ ಪ್ರಯಾಣವನ್ನು ಮುಂದಿನ ದಿನಕ್ಕೆ ಬದಲಾಯಿಸಬೇಕಾದರೆ ಸಾಕು ಸಾಕಾಯಿತು.

ಸುಮಾರು ೭-೩೦ ಗಂಟೆ ಹೊತ್ತಿಗೆ ನಮಗೆ ಕೆನಡಾದೊಡನೆ ಟ್ರಂಕ್‌ಕಾಲ್ ಸಂಪರ್ಕ ಸಕ್ಕತು. ಮುಕುಂದ ಮೊದಲು ಫೋನ್ ತೆಗೆದುಕೊಂಡು ಆ ಕಡೆ ಮಾತನಾಡುತ್ತಿದ್ದ ವ್ಯಕ್ತಿಯನ್ನು ಗುರುತಿಸಿ ನನ್ನ ತಂದೆಯ ಕೈಗಿತ್ತ.

"ಹೀಗೆ...ಹಲೋ..." ನನ್ನ ತಂದೆ ಕಿರುಚಿದರು.

"......"

"ಅರವಿಂದನ ಮನೇನಾ...? ಯಾರು ಮಾತಾಡ್ತಾ ಇರೋದು..."

"........."

"ಹಾಂ...!!"

"ಅರವಿಂದ ಇಲ್ವೆ?"

"........."

"ಹೌದಾ...! ಓಹೋ!... ಒಳ್ಳೇದು. ನರಸಿಂಗರಾವ್... ಹೂಂ... ನರಸಿಂಗರಾವ್... ಫೋನ್ ಮಾಡಿದ್ರು ಅಂತ ದಯವಿಟ್ಟು ತಿಳ್ಸಿಬಿಡಿ..." ರಿಸೀವರ್ ಕುಕ್ಕಿ ಹಿಂದಿದ್ದ ಸೋಫಾದ ಮೇಲೆ ಕುಸಿದು ಕುಳಿತರು.

"ಯಾರು ಮಾ ತಾ ಡಿ ದ್ದು...ಏನ್ಸಮಾಚಾರ...?" ಕಾತರದಿಂದ ಪ್ರಶ್ನಿಸಿದೆ.

"ನಾನು ಮಾತ್ನಾಡಿದ್ದು ಅರವಿಂದನ ಹೆಂಡ್ತಿಯೊಡನೆ... ಕೆನಡಾದೊಳೇ ಇರ್ಬೇಕು... ಅರವಿಂದನಿಗೆ ಇಬ್ರು ಮಕ್ಕಳಿದ್ದಾರಂತೆ. ದೊಡ್ಡ ಹುಡುಗನ್ನೇ ಕರ್ಕೊಂಡು ಈಗ್ತಾನೆ ಸ್ಕೂಲಿಗೆ ಬಿಡ್ಲು ಹೋಗಿದ್ದಾನಂತೆ... ಇನ್ನೊಂದು ಚಿಕ್ಕ ಮಗು ಅಂತ ಕಾಣ್ಸುತ್ತೆ...ಅಳ್ತಾ ಇದ್ದದ್ದು ಕೇಳಿಸ್ತಾ ಇತ್ತು...ಅರವಿಂದ ಸ್ಕೂಲ್ಗೆ ಮಗನ್ನ ಬಿಟ್ಟು ಹಾಗೇ ಫ್ಯಾಕ್ಟರಿಗೆ ಹೋಗ್ತಾನಂತೆ ಬಸ್ನಲ್ಲಿ," ನುಡಿದ ತಂದೆ ತಲೆಯ ಮೇಲೆ ಕೈ ಹೊತ್ತು ಕುಳಿತರು.

ದುಗುಡ ಕರಾಳವಾಗಿ ನರ್ತಿಸಿತ್ತು, ಅವರ ಮುಖದ ಮೇಲೆ.

"ಹೀಗೆ ಈ ತಂದೆ ಮಗ ಮಾಡ್ತಾ ಇರೋದು ಇದು ಎರಡ್ನೇ ಸಾರಿ...ನಂಗೆ ತಿಳ್ದಿರೋ ಹಾಗೆ. ದೆಹಲೀಲಿ ಒಂದ್ಸಾರೆ ಹೀಗೆ ಮಾಡಿದ್ರು, ಹೇಗೋ ಬಚಾವಾದ್ರು...." ಮುಕುಂದ ನುಡಿದಾಗ ನನ್ನ ಸಿಟ್ಟು ನೆತ್ತಿಗೇರಿತ್ತು.

"ಮದ್ವೆ ನಿಲ್ಸಿದ ದೋಷ ನಂಗೇನೂ ಬರ್ಬಾರ್ದು ಅನ್ಕೊಂಡಿದ್ದೇನೆ..." ನನ್ನ ಸ್ನೇಹಿತ ನುಡಿದೊಡನೆ ನನ್ನ ತಂದೆ ಹೇಳಿದರು: "ಒಂದು ಜೀವ ಉಳಿಸ್ದ ಪುಣ್ಯ ಬಂತು."

ಮುಖ ಗಂಭೀರವಾಗಿತ್ತು. ✡

ಸ್ವರ್ಗ ಮತ್ತು ನರಕ

ಜಪಾನಿನ ಋಷಿ ಹಾಕುಮಿನ್ನನ ಬಳಿ ಯೋಧನೊಬ್ಬ ಆಗಮಿಸಿ 'ಸ್ವರ್ಗ ಮತ್ತು ನರಕದ ಅಸ್ತಿತ್ವವಿದೆಯೇ' ಎಂದು ಕೇಳಿದ. ಋಷಿ ಅದಕ್ಕೆ ಪ್ರತಿಯಾಗಿ, 'ನಿನ್ನ ವೃತ್ತಿಯೇನು?' ಎಂದು ಕೇಳಿದ. ಅದಕ್ಕೆ ಆತ ನುಡಿದ, 'ಸೈನಿಕ ವೃತ್ತಿ.' ಋಷಿ ನುಡಿದ, "ನಿನ್ನ ಮುಖ ಭಿಕಾರಿಯ ಮುಖದಂತಿದೆ ಯಾವ ಮೂರ್ಖರಾಜ ನಿನ್ನನ್ನು ಸೈನಿಕನನ್ನಾಗಿ ಇಟ್ಟುಕೊಳ್ಳುವನು?"

ಯೋಧ ಕುಪಿತನಾಗಿ ತನ್ನ ಕೈಯನ್ನು ಕತ್ತಿಯ ಮೇಲಿಟ್ಟ. ಋಷಿ ಇದನ್ನು ನೋಡಿ ಹೇಳಿದ– "ನಿನ್ನ ಬಳಿ ಕತ್ತಿಯೇನೋ ಇದೆ. ಆದರೆ ಅದು ನನ್ನ ತಲೆಯನ್ನು ಕತ್ತರಿಸುವ ಮಟ್ಟದಲ್ಲಿಲ್ಲ."

ಯೋಧ ಕೈಗೆ ಕತ್ತಿಯನ್ನು ಋಷಿಯ ತಲೆಯ ಮೇಲಿಟ್ಟ. ಇದರಿಂದ ಸ್ವಲ್ಪವೂ ವಿಚಲಿಸನಾಗದೆ ಋಷಿ ನುಡಿದ, "ನೋಡು. ನರಕದ ದ್ವಾರ ತೆರೆದಿದೆ."

ಋಷಿಯ ಆತ್ಮ ಸಂಯಮವನ್ನು ಕಂಡು ಚಕಿತನಾದ ಯೋಧ ಕತ್ತಿಯನ್ನು ಕೆಳಗಿಳಿಸಿದ, ಆಗ ಋಷಿ ನುಡಿದ, "ನೋಡು, ಸ್ವರ್ಗದ ದ್ವಾರ ತೆರೆದಿದೆ." –ಎಸ್. ಕೆ. ನರಸಿಂಹಮೂರ್ತಿ

ಮುಖಗಳು

ಮುಖಗಳು.
ಏನು ವೈಶಿಷ್ಟ್ಯ?
ಎಲ್ಲಾ ಒಂದೇ ರೀತಿ-
ಕಣ್ಣು, ಗಲ್ಲ, ಮೂಗು, ತುಟಿ.
ಆದರೂ
ಏಕೆಂದು ಗೊತ್ತಿಲ್ಲ
ಕೆಲವೊಂದು ಮುಖಗಳು
ವಿಪರೀತ ಕಾಣುತ್ತವೆ-
ಕಣ್ಮುಚ್ಚಿಕೊಂಡರೂ
ಮನದಲ್ಲಿ ಮೂಡುತ್ತವೆ.


ಏನೇನೋ ಉಪಮೆಗಳು-
ಚಿಗರೆಗಂಗಳು,
ಕುಸುಮ ಕೋಮಲ ಅಂಗಾಂಗಳು-
ಸೇಬುಗಲ್ಲ, ಕೆಂದುಟಿ
ಸಿಂಹಕಟಿ
ಘನ ಜಘನ- ನಿತಂಬಗಳು
ಇತ್ಯಾದಿ— ಇತ್ಯಾದಿ.
ಇತಿಮಿತಿಯಿಲ್ಲದ
ತೃಪ್ತಿ ನೀಡದ
ಶುಷ್ಕ ಶಬ್ದಜಾಲಗಳು
ಹಾದು ಹೋಗುತ್ತವೆ
ಕಲ್ಪನೆಯ ದೋಣಿಯಲ್ಲಿ

ಕೆರಳುತ್ತವೆ
ಸಹಜ ಪ್ರವೃತ್ತಿಗಳು—
ಏಳುತ್ತವೆ
ಸುಳಿ ಸುಳಿಯಾಗಿ
ಮೂಗರಳಿಸುವ ವಾಸನೆಗಳು,
ಕೇದಿಗೆ ಹೂವು, ಹಾವುಗಳು
ನೆನಪಾಗಿ
ಕಸಿವಿಸಿಯಾಗುತ್ತದೆ
ಎದೆ ಬಡಿಯುತ್ತದೆ ಜೋರಾಗಿ
ಮಾಡಬೇಕೆಂದು ತಿಳಿಯದೇ
ಕುಳಿತುಬಿಡುತ್ತೇನೆ
ಕೈ ಕಟ್ಟಿ ತುಟಿ ಕಚ್ಚಿ—
ಅದುಮಿಟ್ಟ ಅತೃಪ್ತಿ—
ಹೊತ್ತು ಕೊಳ್ಳುತ್ತೇನೆ
ಹೊಸತೊಂದು ಜ್ವಾಲಾಮುಖಿ.

ಏಕಾಂತದಲ್ಲಿ ಕೆಲವೊಮ್ಮೆ
ಈ ಅತೃಪ್ತಿಯನ್ನೇ ಕೆಣಕಿ—
ಕೆಣಕುವುದರಲ್ಲಿರುವ
ಮೋಹಕ ರಮ್ಯತೆಯಲ್ಲೇ
ವಿಲಕ್ಷಣ ತೃಪ್ತಿಗಾಣುತ್ತೇನೆ.
ಆದರೂ
ಜಗದ ಕಣ್ಣಿಗೆ
ಮಣ್ಣೆರಚುತ್ತೇನೆ—
ಸಭ್ಯನಾಗುತ್ತೇನೆ—
ಜಿತೇಂದ್ರಿಯನೆನ್ನಿಸಿಕೊಳ್ಳುತ್ತೇನೆ.

ಅಂತರಂಗದಲ್ಲಿ
ಕೋಶಾವಸ್ಥೆಯಲ್ಲಿರುವ
ಹುಳ ಚಿಟ್ಟೆಯಾಗದಂತೆ
ಎಚ್ಚರ ವಹಿಸುತ್ತಾ, ಕಾಯುತ್ತಾ,
ತಡೆಯುತ್ತಾ,
ಕ್ಷಣ ಕ್ಷಣವೂ
ಭಯದ ಅಲಗಿನ ಮೇಲೆ
ಚಿತ್ರಹಿಂಸೆ ಪಡುತ್ತಿದ್ದೇನೆ.
ಸೋತು ಹೋಗುತ್ತಿದ್ದೇನೆ.

—ರಮೇಶ ಚಿಪಳೂಣಕರ್


ಮೂರನೇ ತಿಂಗಳಲ್ಲಿ ಮಗುವಿಗೆ
ಕೊಡುವ ಘನ ಆಹಾರ - ಮಗುವಿನ
ಪೂರ್ತಿ ಜೀವಮಾನಕ್ಕೆ ಆಧಾರ
ಡಾಕ್ಟರರು ಹೇಳುತ್ತಾರೆ: ಹಾಲು ಒಂದೇ ಸಾಕಾಗದು.
ಡಾಕ್ಟರರು ಶಿಫಾರಸು ಮಾಡುತ್ತಾರೆ
ಫೆರೆಕ್ಸ್
ಸಂತುಲಿತ ಘನ ಆಹಾರ
ಶೀಘ್ರ,ಸರ್ವಾಂಗೀಣ ಬೆಳವಣಿಗೆಗಾಗಿ
FAREX

ಮಾತೆಯೆನಿಸುವುದು ಸಾಮಾನ್ಯವಾಗಿ ಜನರು ಭಾವಿಸಿರುವಷ್ಟು ಸುಲಭವಲ್ಲವೆ? ಹೌದು. ಆದರೂ ಕೆಲ ವೇಳೆ ಅನಿರೀಕ್ಷಿತವಾಗಿ ಹೆರಿಗೆ ತುಂಬ ಕಷ್ಟದಾಯಕವೂ ಆಗುವುದುಂಟು. ಕೆಲವೊಮ್ಮೆ ಬಂದ ಎಡರು ತೊಡರುಗಳು ನಿಷ್ಣಾತ ವೈದ್ಯರ ಸಹಾಯವಿದ್ದರೂ ಸಹ ತಾಯಿಗೆ ಇಲ್ಲವೆ ಮಗುವಿಗೆ ಒಮ್ಮೊಮ್ಮೆ ಇಬ್ಬರಿಗೂ ಮಾರಕವಾಗಿ ಪರಿಣಮಿಸಿದ ಉದಾಹರಣೆಗಳೂ ಸಿಕ್ಕುತ್ತವೆ. ಜನಿಸಿದ ಶಿಶುವು ಆರೋಗ್ಯವಾಗಿ ಬದುಕಬೇಕಾದರೆ, ತಾಯಿಗೆ ತಾಯ್ತನ ಒಂದು ಹೊರೆ ಎನಿಸದಂತಿರಬೇಕಾದರೆ, ಪ್ರತಿಯೊಬ್ಬ ಸ್ತ್ರೀಯೂ ತಿಳಿಯಲೇಬೇಕಾದ ವಿಷಯಗಳು ಹಲವಿವೆ.

ತಾಯಿಯ ಜವಾಬ್ದಾರಿ ಆರಂಭವಾಗುವುದು ಮಗುವಿನ ಜನನದ ನಂತರ ಎಂಬ ಕಲ್ಪನೆ

ಕುರುಡು ನಂಬಿಕೆ
ಕಷ್ಟ ತಂದೀತು

ತಾಯಿಯಾಗುವ ಮುನ್ನ....

ಡಾ. ಎಚ್. ಜಿ. ಭಾರತಿ

ನಡುರಾತ್ರಿಯಲ್ಲಿ ಆಸ್ಪತ್ರೆಗೆ ಬಂದ ಸುಮಿತ್ರ ಆರು ಗಂಟೆಗಳ ಕಾಲ ಬದುಕು ಸಾವುಗಳೊಡನೆ ಹೋರಾಟ ನಡೆಸಿ ಗೆದ್ದು ಸೋತಳು. ವೈದ್ಯರ ಪಾಲಿಗೆ ಅರ್ಧ ಗೆಲವು, ಅರ್ಧ ಸೋಲು. ತಾಯಿ ಬದುಕಿದರೂ ಮಾತೆಯ ಮಡಿಲು ಬರಿದಾಗಿತ್ತು. ಒಂಭತ್ತು ತಿಂಗಳ ಶ್ರಮ, ಕಾತರ, ನೋವು, ಸಂತಸದ ಕನಸು ನುಚ್ಚುನೂರಾಗಿತ್ತು. ಹಳ್ಳಿಯಲ್ಲಿನ ಅವಳ ತಂದೆ–ತಾಯಿಯಂತೆ ಹೆರಿಗೆಗೆ ಆಸ್ಪತ್ರೆಗೇಕೆ ಹೋಗಬೇಕೆಂಬ ಭಾವನೆ. ಹೆರಿಗೆಯ ವೇಳೆಯಲ್ಲಿ ಮಗು ಅಡ್ಡಡ್ಡವಾಗಿ ಬಂದು ನೋವು ಬಂದು ಎರಡು ದಿನಗಳಾದರೂ ಮಗುವಿನ ಜನನದ ಚಿಹ್ನೆ ಕಾಣದಾದಾಗ ಅವರು ಆಸ್ಪತ್ರೆಯನ್ನು ನೆನೆದು ಬಂದಿದ್ದರು. ಆದರೆ ಆ ವೇಳೆಗಾಗಲೇ ಮಗು ಕೊನೆಯುಸಿರೆಳೆದಿತ್ತು. ಇಂತಹ ಉದಾಹರಣೆಗಳು ಇನ್ನೂ ಅನೇಕ.

ಖಂಡಿತ ತಪ್ಪು. ಸ್ತ್ರೀಗೆ ತಾನು ಗರ್ಭಿಣಿಯೆಂಬ ಅಂಶ ಮನವರಿಕೆಯಾದ ಕ್ಷಣದಿಂದ ಅವಳ ಜವಾಬ್ದಾರಿ ಆರಂಭವಾಗುತ್ತದೆ. ಗರ್ಭ ಧರಿಸಿದ ಮೊದಲ ಏಳು ತಿಂಗಳವರೆಗೆ ತಿಂಗಳಿಗೊಂದಾವರ್ತಿ, ನಂತರದ ಎರಡು ತಿಂಗಳು ಹದಿನೈದು ದಿವಸಗಳಿಗೊಮ್ಮೆ, ಆನಂತರ ವಾರಕ್ಕೊಮ್ಮೆ ವೈದ್ಯರ ಸಲಹೆ ಪಡೆಯಬೇಕು. ಮಧ್ಯೆ ಯಾವುದೇ ರೀತಿಯ ತೊಂದರೆ ಕಾಣಿಸಿದಲ್ಲಿ ನಿಸ್ಸಂಕೋಚವಾಗಿ ತನ್ನ ಸಮಸ್ಯೆಯನ್ನು ವೈದ್ಯರಿಗೆ ನಿವೇದಿಸುವುದು ಅಗತ್ಯ. ಗರ್ಭಿಣಿಯು ಪ್ರಥಮ ಸಲ ಡಾಕ್ಟರರ ಬಳಿ ಬಂದಾಗ ಅವರು ಪ್ರಾಥಮಿಕ ಪರೀಕ್ಷೆಯೊಂದನ್ನು ನಡೆಸುತ್ತಾರೆ. ಈ ಪರೀಕ್ಷೆಯ ಉದ್ದೇಶ ಮುಖ್ಯವಾಗಿ ಮೂರು.

(೧) ತಾಯಿಯ ಆರೋಗ್ಯವನ್ನು ಸಂರಕ್ಷಿಸುವುದು.

(೨) ಗರ್ಭಿಣಿಯರಲ್ಲಿ ಕಾಣುವ ಹಲವು ಕಾಯಿಲೆಗಳ ಬಗ್ಗೆ ಎಚ್ಚರ ವಹಿಸುವುದು.

(೩) ಕಾಯಿಲೆಗಳ ಲಕ್ಷಣವನ್ನು ರೋಗ ಬಲಿಯುವ ಮೊದಲೇ ಗುರುತಿಸಿ ಸೂಕ್ತ ಚಿಕಿತ್ಸೆ ನೀಡುವುದು.

ಮಾತೆಯಾಗುವ ಮುನ್ನ ಅಗತ್ಯವಿರುವ ಪರೀಕ್ಷೆಯನ್ನು ಏಕೆ ಮಾಡಿಸಿಕೊಳ್ಳಬೇಕು ಎಂಬುದನ್ನು ತಿಳಿದ ನಂತರ ಆ ಪರೀಕ್ಷೆಯನ್ನು ಹೇಗೆ ಮಾಡುತ್ತಾರೆಂಬುದರ ಬಗ್ಗೆಯೂ ನೀವು ತಿಳಿದಿರಬೇಕು.

ಮೊಟ್ಟಮೊದಲ ಬಾರಿ ನೀವು ಪರೀಕ್ಷೆಗಾಗಿ ವೈದ್ಯರಲ್ಲಿಗೆ ಹೋದಾಗ ಅವರು ಕೇಳುವ ಪಲವಾರು ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡಬೇಕು. ಇದು ವೈದ್ಯರು ನಿಮ್ಮನ್ನು ಸುಖ ಪ್ರಸವಕ್ಕಾಗಿ ತಯಾರು ಮಾಡುವುದಕ್ಕೇ ಆದರೂ ಮತ್ತೊಂದು ದಿಸೆಯಿಂದ ನೋಡಿದಾಗ



ಜವಾಬ್ದಾರಿಯುತ ಮಾತೆಯಾಗಲೂ ಇದರಿಂದ ಸಹಾಯವಾಗುತ್ತದೆ.

ಭಾವೀಮಾತೆಯಿಂದ ವೈದ್ಯರು ಪಡೆಯುವ ವಿವರಗಳು ಇವು: ನಿಮ್ಮ ಹೆಸರು, ಪತಿಯ ಹೆಸರು, ವಿಳಾಸ, ವಯಸ್ಸು ಎಷ್ಟು ಮಕ್ಕಳು, ಮದುವೆಯಾಗಿ ಎಷ್ಟು ಕಾಲವಾಯಿತು, ಎಷ್ಟನೆಯ ಬಾರಿ ಗರ್ಭ ಧರಿಸಿರುವುದು, ಮಧ್ಯೆ ಗರ್ಭಪಾತವಾಗಿದೆಯೇ? ಋತುಚಕ್ರ ಕ್ರಮವಾಗಿದೆಯೇ ? ಕಡೆಯ ಬಾರಿ ಅಂದರೆ ಗರ್ಭ ಧರಿಸುವ ಮುನ್ನ ಮುಟ್ಟಾದ ದಿನಾಂಕ ಇತ್ಯಾದಿ. ಹಿಂದಿನ ಹೆರಿಗೆಯ ಬಗ್ಗೆ ತುಸು ವಿವರವಾದ ಮಾಹಿತಿಯೂ ಕೆಲವೇಳೆ ಬೇಕಾಗುತ್ತದೆ. ಮೊದಲ ಮಕ್ಕಳ ಹೆರಿಗೆ ಎಲ್ಲಾಯಿತು? ಸಹಜ ಪ್ರಸವವೇ? ಅಥವಾ ಶಸ್ತ್ರಚಿಕಿತ್ಸೆಯಾಗಿತ್ತೆ? ಗರ್ಭಿಣಿಯಾಗಿದ್ದಾಗ ತೊಂದರೆಯಿತ್ತೆ? ತಾಯಿಯ ಮತ್ತು ಮಗುವಿನ ವಯಸ್ಸು, ಮಗು ಅಕಾಲ ಮರಣಕ್ಕೆ ತುತ್ತಾಗಿದ್ದಲ್ಲಿ ಅದಕ್ಕೆ ಕಾರಣ–ಈ ಎಲ್ಲ ವಿವರಗಳನ್ನು ಡಾಕ್ಟರರು ಕೇಳಿದಾಗ ಎಷ್ಟೊಂದು ಪ್ರಶ್ನೆಗಳಪ್ಪಾ ಎನಿಸಿದರೂ ನೀವು ಹೇಳುವ ಪ್ರತಿಯೊಂದು ಉತ್ತರವೂ ಚಿಕಿತ್ಸಾಕ್ರಮವನ್ನು ನಿರ್ಧರಿಸಿ ತನ್ಮೂಲಕ ಸುಖಪ್ರಸವ ಹೆಚ್ಚು ಮಟ್ಟಿಗೆ ಸಾಧ್ಯವಾಗಲು ಸಹಾಯವಾಗುತ್ತವೆ.

ಋತುಚಕ್ರದ ಬಗೆಗಿನ ವಿವರಗಳು ಹಾಗೂ ಗರ್ಭ ಧರಿಸುವ ಮುನ್ನ ಮುಟ್ಟಾದ ದಿನಾಂಕ ಈಗಿನ ಮಗುವಿನ ಜನನದ ದಿನವನ್ನು ಕಂಡು ಹಿಡಿಯಲು ಸಹಾಯಕ. ಮಗು ತಾಯಿ ಗರ್ಭದಲ್ಲಿ ಸುಮಾರು ಇನ್ನೂರ ಎಂಭತ್ತು ದಿನಗಳ ಕಾಲ ಇರುತ್ತದೆ. ಮಾಸಿಕ ಚಕ್ರದ ದಿನದಿಂದ ಒಂಬತ್ತು ತಿಂಗಳು ಏಳು ದಿನಗಳ ಕಾಲವನ್ನು ನಿರೀಕ್ಷಣೆಯ ದಿನವನ್ನಾಗಿ ಕಂಡು ಹಿಡಿಯಲಾಗುತ್ತದೆ. ಇದರಲ್ಲಿ ಕೆಲವು ವೇಳೆ ಒಂದೆರಡು ದಿನಗಳಿಂದ-ಏಳೆಂಟು ದಿನಗಳವರೆಗೆ ಹೆಚ್ಚು ಕಡಿಮೆಯಾಗಲೂ ಬಹುದು. ನಿರೀಕ್ಷಿತ ದಿನಾಂಕವನ್ನು ಮೀರಿ ಎರಡು ವಾರಗಳಾದರೂ ಮಗು ತಾಯಿ ಗರ್ಭದಿಂದ ಹೊರಬರುವ ಸೂಚನೆಗಳು ಕಂಡುಬಾರದಿದ್ದಲ್ಲಿ ವೈದ್ಯರು ಮಗುವಿಗೆ ಮುನ್ನೆಚ್ಚರಿಕೆ ನೀಡುವ ಹಲವು ಉಪಾಯಗಳನ್ನು ಅನುಸರಿಸುತ್ತಾರೆ. ಇದು ಮಗು ಹಾಗೂ ತಾಯಿ

[illegible].

[illegible]. ಇನ್ನು ತಾಯಿಯ ಹಾಗೂ ಗರ್ಭಸ್ಥ ಶಿಶುವಿನ ಪರೀಕ್ಷೆ.

ಭಾರತೀಯ ಸ್ತ್ರೀಯರಲ್ಲಿ ೧೦.೫ ಗ್ರಾಂ% ನಿಂದ ೧೧.೫ ಗ್ರಾಂ% ಅಷ್ಟು ಹೀಮೋಗ್ಲೋಬಿನ್ ಇದ್ದರೆ ಅದು ಮಹಿಳೆಯು ಆರೋಗ್ಯವತಿಯಾಗಿದ್ದನ್ನು ಸೂಚಿಸುತ್ತದೆ. ೧೦% ಗ್ರಾಂ. ಗಿಂತ ಕಡಿಮೆಯಿದ್ದ ತಾಯಿಯು ರಕ್ತಹೀನತೆಗೆ ಸಿಲುಕುತ್ತಾಳೆ. ಇದು ವಿವಿಧ ರೀತಿಗಳಲ್ಲಿ ತಾಯಿಯ ಮೇಲೆ ತನ್ನ ಪರಿಣಾಮವನ್ನು ಬೀರುತ್ತದೆ. ರಕ್ತ ಪರೀಕ್ಷೆಯಿಂದ ಇದನ್ನು ಗುರುತಿಸಿ ಅವಶ್ಯವಿರುವ ಕಬ್ಬಿಣದ ಮಾತ್ರೆ, ಟಾನಿಕ್ಕುಗಳನ್ನು ಸಲಹೆಮಾಡಬಹುದು.

ರಕ್ತ ಪರೀಕ್ಷೆಯ ಮತ್ತೊಂದು ಬಹು ಮುಖ್ಯ ಅಂಗ ರಕ್ತದ ಗುಂಪಿನ ಪರೀಕ್ಷೆ. ತಾಯ ರಕ್ತ ಯಾವ ಗುಂಪಿಗೆ ಸೇರಿದ್ದು. A, B, AB ಅಥವಾ O ಮತ್ತು Rh ಋಣ ಅಥವಾ Rh ಧನ ಗುಂಪಿಗೆ ಸೇರಿದ್ದೋ ಎಂಬುದನ್ನು ಕಂಡುಹಿಡಿಯುವುದು. ಇದು ಪ್ರಸವದ ಸಮಯದಲ್ಲಿ ರಕ್ತದಾನ ಅವಶ್ಯವಾದರೆ ಸಹಾಯಕ.

ಈ ಪರೀಕ್ಷೆಯಿಂದ ಇದಕ್ಕಿಂತ ಮಹತ್ವದ್ದಾದ ಪ್ರಯೋಜನವೂ ಉಂಟು. ಭಾರತೀಯರಲ್ಲಿ ನೂರಕ್ಕೆ ೯೩ ಮಂದಿ Rh ಧನ ಗುಂಪಿಗೆ ಸೇರಿದವರು ಇರುತ್ತಾರೆ. Rh ಧನ ಇದ್ದ ವ್ಯಕ್ತಿಯೊಬ್ಬ Rh ಋಣ ಇದ್ದ ಹುಡುಗಿಯನ್ನು ವಿವಾಹವಾಗಿದ್ದು ಇವರಿಬ್ಬರಿಂದ ಜನಿಸಿದ ಶಿಶುವು Rh ಧನ ಆಗಿದ್ದಾಗ ಅನೇಕ ತೊಂದರೆಗಳಾಗಬಹುದು. ಈ ಎಲ್ಲ ತೊಂದರೆಗಳಿಂದ ಮೊದಲು ಮಗು [illegible] ತಪ್ಪಿಸಿಕೊಳ್ಳುತ್ತದೆ. ಎರಡನೆಯ ಹಾಗೂ ನಂತರದ ಮಗು ತೊಂದರೆಗೆ ಸಿಲುಕಿ ಸೋಲನ್ನಪ್ಪಬೇಕಾಗುತ್ತದೆ. ಮಗು Rh ಧನ ಆಗಿದ್ದರೆ ಮಗುವಿನ ರಕ್ತಕಣಗಳು ಕರುಳುಬಳ್ಳಿಯ ಮೂಲಕ ತಾಯ ರಕ್ತವನ್ನು ಪ್ರವೇಶಿಸುತ್ತವೆ. ಆಗ ಮಗುವಿನ ರಕ್ತಕ್ಕೆ ವಿರೋಧವಾದ ಪ್ರತಿರೋಧಕ ವಸ್ತುಗಳನ್ನು ತಾಯಿಯು ರಕ್ತ ಉತ್ಪತ್ತಿ ಮಾಡುತ್ತದೆ. ಇದರ ಪರಿಣಾಮ ಎರಡು ರೀತಿಯಲ್ಲಾಗುತ್ತದೆ. ೧) ನೀರು ತುಂಬಿಕೊಂಡ ವಿಕಾರ ರೂಪದ ಮಗು ಸತ್ತು ಹುಟ್ಟಬಹುದು ಅಥವಾ ಹುಟ್ಟಿದ ಒಂದೆರಡು ಗಂಟೆಗಳಲ್ಲಿ ಸಾವನ್ನಪ್ಪಬಹುದು. ೨) ಮಗುವಿನ ರಕ್ತಕಣಗಳು ಒಡೆಯುವುದರ ಫಲವಾಗಿ ನವಜಾತ ಶಿಶುವಿನ ಕಾಮಾಲೆ ತಲೆದೋರಬಹದು. ಹುಟ್ಟಿದೊಡನೆ ಅಥವಾ ಮೊದಲ ಇಪ್ಪತ್ನಾಲ್ಕು ಘಂಟೆಗಳೊಳಗೆ ಮಗುವಿನ ಮೈಬಣ್ಣದಲ್ಲಿ ಗುರುತರವಾದ ಬದಲಾವಣೆಯೂ ಕಂಡುಬರಬಹುದು. ಇದಕ್ಕೆ ಅತ್ಯುತ್ತಮ ಉಪಾಯವೆಂದರೆ ಮಗುವಿನ Rh ಧನ ರಕ್ತವನ್ನು ಸ್ವಲ್ಪ ಸ್ವಲ್ಪವಾಗಿ ಹೊರ ತೆಗೆದು, ಹೊಂದುವ Rh ಋಣ ರಕ್ತವನ್ನು ಮಗುವಿಗೆ ನೀಡುವುದು.

Rh ಋಣ ಗುಂಪಿನ ಜನರೆಲ್ಲರಲ್ಲಿ ಈ ತೊಂದರೆ ಕಾಣುವುದೇ? ಖಂಡಿತ ಇಲ್ಲ. ಭಾರತೀಯರಲ್ಲಿ ನಾಲ್ಕುನೂರು ಐದನೂರು ಮಕ್ಕಳಲ್ಲಿ ಒಂದು ಮಾತ್ರ ಈ ಎಲ್ಲ ತೊಂದರೆಗಳಿಗೆ ಬಲಿಯಾಗುತ್ತದೆ. ಮೊದಲ ಮಗು ಈ ತೊಂದರೆಯಿಂದ ತಪ್ಪಿಸಿಕೊಳ್ಳಲು ಕಾರಣವೇನು? ತಾಯ ರಕ್ತದಲ್ಲಿ ಇನ್ನೂ ಪ್ರತಿರೋಧಕ ವಸ್ತುವಿನ ಉತ್ಪಾದನೆಯಿರುವುದಿಲ್ಲ. ಮೊದಲ ಮಗು ಹುಟ್ಟುವ ಮುನ್ನ ಯಾವುದೇ ಕಾರಣಕ್ಕಾಗಿ ತಾಯ ರಕ್ತದಲ್ಲಿ ಇನ್ನೂ ಪ್ರತಿರೋಧಕ ವಸ್ತುವಿನ ಉತ್ಪಾದನೆಯಿರುವುದಿಲ್ಲ. ಮೊದಲ ಮಗು ಹುಟ್ಟುವ ಮುನ್ನ ಯಾವುದೇ ಕಾರಣಕ್ಕಾಗಿ ತಾಯಿಗೆ Rh ಧನ ರಕ್ತ ನೀಡಿದ್ದರೆ ಆಗ ಆಕೆ ಮೊದಲ ಮಗುವನ್ನೂ ಕಳೆದುಕೊಳ್ಳಬಹುದು. ತದನಂತರದ ಗರ್ಭಧಾರಣೆಗಳಲ್ಲಿ ತಾಯ ರಕ್ತ ಮಗುವಿನ ರಕ್ತವನ್ನು ವಿರೋಧಿಸುವ ಶಕ್ತಿಯನ್ನು ಪಡೆದಿರುತ್ತದೆ. ತಾಯಿ-ಮಗುವಿನ ಸಂಬಂಧ ಯಾವಾಗಲೂ ಆರೋಗ್ಯಕರವೇ ಇದರೂ ಇಂತಹ ಪರಿಸ್ಥಿತಿಯಲ್ಲಿ ತಾಯಿ ಹಾಗೂ ಮಗುವಿನಲ್ಲಿ ನಡೆಯುವುದು ಒಂದು ರೀತಿಯ ಅಸಹಕಾರ ಚಳುವಳಿ. ಇದರಿಂದ ಇಬ್ಬರಿಗೂ ಸೋಲು. ಮಗು ತನ್ನ ಸೋಲನ್ನು ಒಪ್ಪಿಕೊಂಡು ಸಾಯುತ್ತದೆ. ತಾಯಿ [illegible]

ತುಂಬಿದರೂ ಮಡಿಲು ಬರಿದಾಗಿಸಿಕೊಂಡು ಕಣ್ಣೀರಿಡುತ್ತಾಳೆ. ಈ ಕಾರಣಕ್ಕಾಗಿಯೇ Rh ಋಣ ಇದ್ದ ಮಹಿಳೆ ೧೫ ರಿಂದ ೪೫ ವಯಸ್ಸಿನವರೆಗೆ ರಕ್ತ ಸಂಯೋಜನೆಯಿಂದ ದೂರವಿರುವುದು ಒಳ್ಳೆಯದು. Rh ಅಸಹಕಾರ ಚಳುವಳಿಗೆ ಮದ್ದು ಇದೆ. ಮೊದಲ ಮಗು ಜನಿಸಿದ ೭೨ ಗಂಟೆಗಳ ಒಳಗಾಗಿ ತಾಯಿಗೆ ಆ್ಯಂಟಿ ಆರ್. ಎಚ್. ಇಮ್ಯುನೋಗ್ಲೊಬ್ಯುಲಿನ್ ಚುಚ್ಚುಮದ್ದನ್ನು ನೀಡಿ ಮುಂದೆ ಸುಖಪ್ರಸವಾಗುವ ಸಿದ್ಧತೆ ನಡೆಸಬಹುದು.

ರಕ್ತ ಪರೀಕ್ಷೆಯ ಮೂರನೆಯ ಹಂತ: ಗುಹ್ಯರೋಗದ ಪರೀಕ್ಷೆ. ತಂದೆಯ ಭೋಗ ಜೀವನದಿಂದ ತಾಯಿ ಪಡೆದ ಕಾಯಿಲೆಯನ್ನು ಏನೂ ಅರಿಯದ ಮುಗ್ಧ ಶಿಶು ತಾಯಿಯ ಗರ್ಭದಲ್ಲಿರುವಾಗಲೇ ಪಡೆಯುವ ಸಂಭವವಿದೆ. ತಾಯಿಯ ರಕ್ತ ಹಾಗೂ ತಂದೆಯ ರಕ್ತ ಪರೀಕ್ಷಿಸಿ, ಗುಹ್ಯ ರೋಗಗಳ ಸೂಚನೆ ಕಂಡು ಬಂದಲ್ಲಿ ಅದಕ್ಕೆ ಚಿಕಿತ್ಸೆ ನೀಡಬಹುದು. ಆಗ ಮಗು ಎಲ್ಲ ಮಕ್ಕಳಂತೆ ಜನಿಸಿ ಬೆಳೆದೀತು !

ರಕ್ತ ಪರೀಕ್ಷೆಯಷ್ಟೇ ಮುಖ್ಯವಾದ್ದು ಮೂತ್ರ ಪರೀಕ್ಷೆ. ಮೂತ್ರದಲ್ಲಿನ ಸಕ್ಕರೆ ಹಾಗೂ ಆಲ್ಬುಮಿನ್ ಪರೀಕ್ಷೆ ಗರ್ಭಿಣಿಯರಲ್ಲಿಯೇ ವಿಶೇಷವಾಗಿ ಕಂಡುಬರುವ ಪ್ರಿ ಎಕ್ಲಾಮ್ಪ್‌ಟಿಕ್ ಟಾಕ್ಸೀಮಿಯಾ ಕಾಯಿಲೆಯನ್ನು ಗುರುತಿಸಲು ನೆರವಾಗುತ್ತದೆ. ಸಕ್ಕರೆಯಿಂದ ಗರ್ಭಿಣಿಯರಲ್ಲಿ ಸಿಹಿ ಮೂತ್ರ ರೋಗವನ್ನು ಕಂಡುಹಿಡಿದು ಅದರಿಂದ ಉಂಟಾಗುವ ತೊಡಕುಗಳನ್ನು ನಿವಾರಿಸಲು ಮುನ್ನೆಚ್ಚರಿಕೆ ತೆಗೆದುಕೊಳ್ಳಬಹುದು.

ಗರ್ಭಿಣಿಯ ರಕ್ತದ ಒತ್ತಡ ಹೆಚ್ಚಾಗಿದ್ದು, ಮೂತ್ರದಲ್ಲಿ ಆಲ್ಬುಮಿನ್ ಕಂಡು, ಕಾಲು ಹೆಚ್ಚು ಹೆಚ್ಚಾಗಿ ಊದಿಕೊಳ್ಳುತ್ತಿದ್ದರೆ ಮೇಲೆ ಹೇಳಿದ ಅಪಾಯಕಾರಿ ಕಾಯಿಲೆಯನ್ನು ತಡೆಗಟ್ಟುವ ಔಷಧವನ್ನು ನೀಡಲಾಗುವುದು. ಚೊಚ್ಚಲು ಗರ್ಭಿಣಿಯರಲ್ಲಿಯೇ ಹೆಚ್ಚಾಗಿ ಕಂಡುಬರುವ ಈ ಮೂರ್ಛೆ ರೋಗ ತಾಯಿ ಮಗು ಇಬ್ಬರಿಗೂ ಪ್ರಾಣಾಪಾಯಕಾರಿ. ಈ ಕಾಯಿಲೆ ಬಾರದಿರುವಂತೆ ಇವನ್ನು ತಡೆಗಟ್ಟಲಾಗದಿದ್ದರೂ ಇದನ್ನು ಹತೋಟಿಯಲ್ಲಿಟ್ಟು ಮುಂಬರುವ ತೊಂದರೆಗಳನ್ನು ನಿವಾರಿಸಬಹುದು.

ತಾಯಿಯು ನವಮಾಸಗಳ ಅವಧಿಯಲ್ಲಿ ೫ ರಿಂದ ೮ ಕೆಜಿ. ತೂಕ ಗಳಿಸುತ್ತಾಳೆ. ಇದು ವಿವಿಧ ಅಂಗಗಳ ಬೆಳವಣಿಗೆಯಿಂದ. ನಾಲ್ಕನೆಯ ತಿಂಗಳಿನ ನಂತರ ಅವಳ ತೂಕ ವಾರಕ್ಕೆ ಅರ್ಧ ಕೆ. ಜಿ. ಯಷ್ಟು ಬೆಳೆಯುತ್ತದೆ.

ಎಷ್ಟೋ ಜನ ಭಾವಿಸಿದ ಹಾಗೆ ಆಸ್ಪತ್ರೆಯಲ್ಲಿಯೇ ಹೆರಿಗೆ ಆಗಬೇಕೆಂದು ವೈದ್ಯರು ಹೇಳುವುದಿಲ್ಲ./ ಆರೋಗ್ಯ ಸರಿಯಾಗಿದ್ದು ಯಾವುದೇ ಸಮಸ್ಯೆಯಿಲ್ಲದಿದ್ದರೆ ಹಾಗೂ ಹಿಂದಿನ ಹೆರಿಗೆ ಸ್ವಾಭಾವಿಕವಾಗಿ ಆಗಿದ್ದರೆ ಆಕೆಯ ಹೆರಿಗೆ ಮನೆಯಲ್ಲಿಯೆ ಆಗುವುದಕ್ಕೆ ವೈದ್ಯರ ವಿರೋಧವೇನಿಲ್ಲ.

ಗರ್ಭಿಣಿಯರ ತೂಕ ಹೆಚ್ಚಾಗಬೇಕಾದುದು ಅವಶ್ಯವಾದರೂ ತೂಕ ಅತಿಯಾಗಿ ಹೆಚ್ಚುವುದು ಒಳ್ಳೇ ಲಕ್ಷಣವಲ್ಲ. ಮುಖವಾಗಲಿ ಕೈಕಾಲುಗಳಾಗಲಿ ಊದಿಕೊಳ್ಳುವುದು ಮುಂದೊದಗಬಹುದಾದ ಅಪಾಯದ ಸಂಕೇತಗಳು. ಹೆರಿಗೆಯ ಮುನ್ನ ಅಥವಾ ನಂತರ ತಾಯಿ ಮೂರ್ಛೆ ರೋಗಕ್ಕೆ ಬಲಿಯಾಗುವ ಸಾಧ್ಯತೆಯಿದೆ. ಸಕಾಲದಲ್ಲಿ ಇದನ್ನು ಗುರುತಿಸಿ ಮುನ್ನೆಚ್ಚರಿಕೆ ನೀಡುವುದು ಈ ಪರೀಕ್ಷೆಯಿಂದ ಸಾಧ್ಯ. ಈ ಪರೀಕ್ಷೆಯ ನಂತರ ತಾಯಿಗೆ ಹಲವಾರು ಸಲಹೆಗಳನ್ನು ನೀಡಲಾಗುತ್ತದೆ.*

ಇನ್ನು ತಾಯಿಯ ಗರ್ಭದ ಪರೀಕ್ಷೆ. ಗರ್ಭಕೋಶದ ಬೆಳವಣಿಗೆ ಮಗುವಿನ ಬೆಳವಣಿಗೆಗೆ ತಕ್ಕುದಾಗಿದೆಯೋ ಇಲ್ಲವೋ ? ಮಗುವು ಗರ್ಭಕೋಶದಲ್ಲಿ ಯಾವ ರೀತಿ ಇದೆ? ತಲೆ ಕೈಕಾಲು ಯಾವ ರೀತಿಯಿದೆ ? ಗರ್ಭಕೋಶದ ತೊಂದರೆಯಿದೆಯೋ? ಮಗು ಒಂದೋ ಅಥವಾ ಅವಳಿಯೋ ? ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಇಲ್ಲಿ ಸಿಗುತ್ತದೆ. ಮಗುವಿನ ಹೃದಯದ ಬಡಿತವನ್ನು

---

* ಹೆಚ್ಚಿನ ವಿವರಗಳಿಗಾಗಿ ‹ಕಸ್ತೂರಿ›ಯ ೧೯೭೩ ಡಿಸೆಂಬರ್ ಸಂಚಿಕೆಯಲ್ಲಿ ಪ್ರಕಟವಾದ 'ಸೆಟೆರೋಗ : ಗರ್ಭಿಣಿಯರಿಗೊಂದು ಅಪಾಯದ ಸಂಕೇತ' ಲೇಖನ ನೋಡಿರಿ. ಪುಟ: ೫೭

ತಾಯಿಯ ಗರ್ಭದ ಮೂಲಕ ತಿಳಿಯಬಹುದು.

ಹಿಂದಿನ ಹೆರಿಗೆಗಳು ಕಷ್ಟಕರವಾಗಿದ್ದರೆ ಅವುಗಳ ಕಾರಣವನ್ನೂ ಗುರುತಿಸಬಹುದು. ಈ ಪರೀಕ್ಷೆಯ ಅಂಗವಾಗಿ ಗರ್ಭಿಣಿ ಡಾಕ್ಟರರು ಕೇಳುವ ಮತ್ತಷ್ಟು ಪ್ರಶ್ನೆಗಳಿಗೆ ಉತ್ತರಿಸಬೇಕಾಗುತ್ತದೆ. ಈಗಿನ ಬಸಿರಿನ ಬಗ್ಗೆ ಮಾಹಿತಿ, ಮೊದಲ ತಿಂಗಳುಗಳಲ್ಲಿ ವಾಂತಿ, ತಲೆಸುತ್ತು, ಆಯಾಸ ಇತ್ತೆ ? ಗರ್ಭದಲ್ಲಿ ಮಗುವಿನ ಚಲನವಲನ ಅವಳ ಗಮನಕ್ಕೆ ಬಂದುದು ಯಾವಾಗ? ಈಗ ತಾಯಿಗೆ ಇನ್ನಾವುದೇ ತೊಂದರೆಯಿದೆಯೇ ? ಆನುವಂಶಿಕವಾಗಿ ಬಂದ ರೋಗಗಳಿಂದ ಮನೆಯಲ್ಲಿ ಯಾರಾದರೂ ನರಳುತ್ತಿರುವರೆ ? ಇತ್ಯಾದಿ. ಮುಂಜಾಗರೂಕತೆಯ ಕ್ರಮವಾಗಿ ಧನುರ್ವಾಯು ರೋಗ ನಿರೋಧಕ ಚುಚ್ಚು-ಮದ್ದನ್ನು ನೀಡುವುದು ಈ ಕಾಲದಲ್ಲಿ.

ಆಹಾರ ಸೇವನೆಯ ಬಗ್ಗೆ, ದೇಹಕ್ಕೆ ಈ ವೇಳೆಯಲ್ಲಿ ಅಗತ್ಯವಿರುವ ಕೆಲವು ಜೀವಸತ್ವಗಳು ಹಾಗೂ ಕ್ಯಾಲ್ಶಿಯಮ್ಮಿನ ಬಗ್ಗೆ ಸಲಹೆ, ಶಾರೀ-ರಿಕ ವ್ಯಾಯಾಮ, ವಿಶ್ರಾಂತಿ, ಮಧ್ಯಾಹ್ನದ ನಿದ್ರೆ, ಮಾನಸಿಕ ಚಟುವಟಿಕೆ, ಶುಚಿತ್ವದ ಬಗೆ ಹಾಗೂ ಸಾಂಸಾರಿಕ ಜೀವನದ ಬಗ್ಗೆ ಡಾಕ್ಟರರು ತಿಳುವಳಿಕೆ ನೀಡುತ್ತಾರೆ.

ತಾಯಿಗೆ ಈ ವೇಳೆಯಲ್ಲಿ ಉಳಿದ ವೇಳೆಗಿಂತ ಹೆಚ್ಚು ಆಹಾರ ಬೇಕೆಂಬುದು ನಿಜ. ಹಾಗೆಂದೂ ಗರ್ಭಿಣಿಗೆ ವಿಪರೀತ ಆಹಾರ ನೀಡು-ವುದೂ ಮಗುವಿನ ಬೆಳವಣಿಗೆಯು ಜನನಕ್ಕೆ ತೊಂದರೆಯಾದೀತೆಂದು ಗರ್ಭಿಣಿಗೆ ಕಡಿಮೆ ಆಹಾರ ಕೊಡುವುದೂ ತಪ್ಪು. ಇದೇ ವೇಳೆಯಲ್ಲಿ ಮಗುವಿಗೆ ಜನನದ ನಂತರ ಬರುವ ಕಾಯಿಲೆಗಳ ಬಗ್ಗೆ ರೋಗ ನಿರೋಧಕ ಮದ್ದು-ಗಳನ್ನು ನೀಡಬಹುದು. ತಂದೆ– ತಾಯಿಗಳ ಪೈಕಿ ಯಾರಾದರೂ ಗುಪ್ತ ರೋಗದಿಂದ ನರಳುತ್ತಿದ್ದು ಮಗು ಶಿಶುವು ಆ ರೋಗಕ್ಕೆ ಬಲಿಯಾಗುವು-ದನ್ನು ತಪ್ಪಿಸಲು ಈ ಪರೀಕ್ಷೆ ಅಗತ್ಯ.

ಈ ಲಕ್ಷಣಗಳು ಕಂಡುಬಂದ ಕೂಡಲೆ ವಿಳಂಬ ಮಾಡದೆ ನಿಮ್ಮ ವೈದ್ಯರನ್ನು ಭೇಟಿಯಾಗಿರಿ:

೧) ಹೊಟ್ಟೆಯಲ್ಲಿ ಮಗುವಿನ ಓಡಾಟ ಇದ್ದಕ್ಕಿದ್ದಂತೆ ನಿಂತರೆ,

೨) ಮಧ್ಯೆ ರಕ್ತಸ್ರಾವವಾಗತೊಡಗಿದರೆ.

೩) ಮಗುವು ನಿರೀಕ್ಷೆ ಮೀರಿ ಬೆಳೆದಂತೆನಿ-ಸಿದರೆ,

೪) ಅವಧಿ ಕಳೆದ ನಂತರದ ಒಂದು ವಾರ-ದಲ್ಲಿಯೂ ನೋವು ಕಾಣದಿದ್ದರೆ,

೫) ಮೂತ್ರದ ಪ್ರಮಾಣದಲ್ಲಿ ಗಮನಾರ್ಹ ಬದಲಾವಣೆ ಕಂಡರೆ,

೬) ಕಾಲುಗಳು ಊದಿಕೊಂಡರೆ,

೭) ತಲೆನೋವು ಒಂದೇ ಸವನೆ ಬರ-ತೊಡಗಿದರೆ ಇಲ್ಲವೆ ಹೊಟ್ಟೆಯುರಿ, ದೃಷ್ಟಿ-ಮಾಂದ್ಯ ಉಂಟಾದರೆ.

ಈ ಕೆಳಕಂಡ ಸಂದರ್ಭಗಳಲ್ಲಿ ಡಾಕ್ಟರರ ಪರೀಕ್ಷೆ ಅತ್ಯಗತ್ಯ. ಈ ಬಗ್ಗೆ ಸ್ವಲ್ಪವೂ ಅಲಕ್ಷ್ಯ ಮಾಡಲಾಗದು:

೧) ಐದಕ್ಕಿಂತ ಹೆಚ್ಚು ಮಕ್ಕಳುಳ್ಳ ತಾಯಿ ಮತ್ತೆ ಗರ್ಭ ಧರಿಸಿದಾಗ.

೨) ಹಿಂದೆ ಮೂರು ನಾಲ್ಕು ಬಾರಿ ಗರ್ಭಸ್ರಾವವಾಗಿದ್ದರೆ ಅಥವಾ ನಿರ್ಜೀವ ಶಿಶುಗಳನ್ನು ಹಡೆದು ಪುನಃ ಗರ್ಭಧರಿಸಿದಾಗ.

೩) ಅವಧಿಗೆ ಮೀರಿದ ಬೆಳವಣಿಗೆ ಹಾಗೂ ಶಿಶುವಿನ ಇರವು ಸಂಶಯಾತ್ಮಕವಾಗಿದ್ದು, ಅವರ ಇರವು ಸ್ವಾಭಾವಿಕವಿರದಿದ್ದರೆ (Malpositions and Malpresentations).

೪) ಅವಳಿ ಮಕ್ಕಳಿದ್ದರೆ.

೫) ಯಾವುದೇ ರೀತಿಯ ಶ್ವಾಸಕೋಶ, ಹೃದಯ ಸಂಬಂಧವಾದ ಕಾಯಿಲೆಯಿಂದ ತಾಯಿ ನರಳುತ್ತಿದ್ದರೆ.

೬) ಅವಳಿಗೆ ರಕ್ತದ ಒತ್ತಡ, ಸಿಹಿ ಮೂತ್ರ ರೋಗ ಇದ್ದರೆ.

ಈ ಬಗ್ಗೆ ಇನ್ನೂ ಸಾಕಷ್ಟು ಜ್ಞಾನವಿಲ್ಲದ ಜನತೆಗೆ ಬಾನುಲಿ, ಪತ್ರಿಕೆಗಳ ಮೂಲಕ ಪ್ರಚಾರವನ್ನು ಕೈಕೊಂಡರೆ ಉಪಯೋಗವಾಗಬಹುದು. ಸರಕಾರ ಇದಕ್ಕಾಗಿ ಹೆಚ್ಚು ಹೆಚ್ಚು ವೈದ್ಯರನ್ನು ನೇಮಿಸುತ್ತಿದೆ. ಉಚಿತ ಚಿಕಿತ್ಸೆ, ಸಲಹೆ, ಪರೀಕ್ಷೆಗಳ ಪ್ರಯೋ-ಜನವನ್ನು ಗರ್ಭಿಣಿಯರು ಪಡೆಯುವುದು ಅತ್ಯಗತ್ಯ. ✡

ನಿಮ್ಮ ಹಣವನ್ನು ದ್ವಿಗುಣಗೊಳಿಸಿರಿ

ರಾಷ್ಟ್ರೀಯ
ಉಳಿತಾಯ
ಸರ್ಟಿಫಿಕೇಟುಗಳ
ಮೂಲಕ
(V ಇಷ್ಯೂ)

ರೂ. ೧೦೦
೭ ವರ್ಷಗಳಲ್ಲಿ
ರೂ. ೨೦೦
ಆಗುತ್ತದೆ

ಇತರ ಸೌಲಭ್ಯಗಳು

★ ತೆರಿಗೆ ರಹಿತ ಬಡ್ಡಿ
(ವರ್ಷಕ್ಕೆ ೩.೦೦೦ ರೂ.ಗಳ ವರೆಗೆ)

★ ಸಂಪತ್ತು ತೆರಿಗೆಯಿಂದ ರಿಯಾಯಿತಿ
(೧·೫ ಲಕ್ಷ ರೂ.ಗಳ ವರೆಗೆ)

ಹೆಚ್ಚಿನ ವಿವರಗಳಿಗಾಗಿ
ಅಧಿಕೃತ ಎಜೆಂಟ್ ಅಥವಾ
ಪೋಸ್ಟ್ ಆಫೀಸಿನಲ್ಲಿ ವಿಚಾರಿಸಿ

ರಾಷ್ಟ್ರೀಯ
ಉಳಿತಾಯ ಸಂಸ್ಥೆ

davp 76/927

ಕನ್ನಡದಲ್ಲಿ ಜನಪ್ರಿಯ ವೈಜ್ಞಾನಿಕ ಲೇಖನ ಬರೆಯುವವರಲ್ಲಿ ಶ್ರೀ ಲಕ್ಷ್ಮಣರಾಯರದು ಬಹು ದೊಡ್ಡ ಹೆಸರು. ವಿಷಯ ಎಷ್ಟು ಗಹನವಾಗಿದ್ದರೂ ಸಾಮಾನ್ಯ ಓದುಗರಿಗೂ ಮನವರಿಕೆಯಾಗುವಂತೆ ಹೇಳುವ ಶೈಲಿ ಅವರದು. ಇಲ್ಲಿ ಆನುವಂಶಿಕತೆಯ ರಹಸ್ಯ ಭಾಷೆಯನ್ನು ಕುರಿತು ಅವರು ಹೇಳುತ್ತಾರೆ. ಅವರ ದೀರ್ಘ ಲೇಖನದ ಪ್ರಥಮ ಭಾಗವಿದು. ಎರಡನೆಯ ಭಾಗ ಮುಂದಿನ ಸಂಚಿಕೆಯಲ್ಲಿ ಬರುತ್ತದೆ.

ಆನುವಂಶಿಕ ಸಂಕೇತ ಭಾಷೆ

ಜೆ. ಆರ್. ಲಕ್ಷ್ಮಣರಾವ್

ಸಂದೇಶಗಳನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಕಳಿಸುವಾಗ ಕೆಲವು ವೇಳೆ ಸಂಕೇತಗಳನ್ನು ಬಳಸುವುದುಂಟು. ಸಂದೇಶದಲ್ಲಿ ಬಳಸಬೇಕಾಗಿ ಬರುವ ಒಂದೊಂದು ಅಕ್ಷರಕ್ಕೂ ಒಂದೊಂದು ಪ್ರತೀಕವನ್ನಿಟ್ಟುಕೊಂಡಿರಬಹುದು ಅಥವಾ ಒಂದೊಂದು ಪದಕ್ಕೂ ಒಂದೊಂದು ಪ್ರತೀಕವನ್ನಿಟ್ಟುಕೊಂಡಿರಬಹುದು. ಪದೇ ಪದೇ ಬಳಸಬೇಕಾಗಿ ಬರುವ ಪದಗುಚ್ಛಗಳೂ ವಾಕ್ಯಗಳೂ ಇದ್ದರೆ, ಕೆಲವೊಮ್ಮೆ ಅವುಗಳನ್ನೂ ಒಂದೊಂದೇ ಪ್ರತೀಕದಿಂದ ಸೂಚಿಸುವುದುಂಟು. ಈ ಪ್ರತೀಕಗಳು ಲಿಖಿತ ಅಕ್ಷರ, ಅಂಕಿ ಅಥವಾ ಆಕೃತಿಗಳಾಗಿರಬಹುದು, ಶಬ್ದಗಳಾಗಿರಬಹುದು ಇಲ್ಲವೇ ಇನ್ನಾವುದೇ ಬಗೆಯ ಸಂಜ್ಞೆಗಳಾಗಿರಬಹುದು. ಅಂಥ ಪ್ರತೀಕಗಳ ಒಟ್ಟು ವ್ಯವಸ್ಥೆಯನ್ನು ಸ್ಥೂಲವಾಗಿ ಸಂಕೇತ ಭಾಷೆ ಎಂದು ಕರೆಯಬಹುದು.

ಅನೇಕ ವೇಳೆ ಸಂಕೇತ ಭಾಷೆಯ ಉದ್ದೇಶ, ವಿಷಯವನ್ನು ರಹಸ್ಯವಾಗಿಡುವುದು. ಉದಾಹರಣೆಗೆ, ಯುದ್ಧಕಾಲದಲ್ಲಿ ವಿಷಯಗಳನ್ನು ಶತ್ರುಗಳಿಂದ ಗೋಪ್ಯವಾಗಿಡುವುದಕ್ಕಾಗಿ ಸಂಕೇತ ಭಾಷೆಯ ಮೂಲಕ ಸಂದೇಶಗಳನ್ನು ಕಳುಹಿಸುವುದು ರೂಢಿ. ಕೇವಲ ಅನುಕೂಲಕ್ಕಾಗಿಯೂ ಸಂಕೇತ ಭಾಷೆಯನ್ನು ಬಳಸುವುದುಂಟು. ಟೆಲಿಗ್ರಾಫ್ ತಂತಿಯ ಮೂಲಕ ಕಳಿಸಲು ಸಾಧ್ಯವಾಗುವ "ಟಕ್ಕ, ಟಕ" ಶಬ್ದಗಳ ನೆರವಿನಿಂದಲೇ ಸಂದೇಶಗಳನ್ನು ಕಳಿಸುವುದು ಸಾಧ್ಯವಾಗುವಂತೆ ಕೇವಲ ಚುಕ್ಕೆ ಮತ್ತು ಗೆರೆಗಳನ್ನೇ ಉಪಯೋಗಿಸಿಕೊಂಡು ಅಕ್ಷರಮಾಲೆಯ ಎಲ್ಲ ಅಕ್ಷರಗಳಿಗೂ ಸಂಕೇತಗಳನ್ನು ಕಲ್ಪಿಸಿರುವ ಮೋರ್ಸ್ ಸಂಕೇತ ಭಾಷೆ (Morse Code) ಈ ಬಗೆಯದು. ಗೋಪ್ಯತೆಗೇ ಆಗಲೀ, ಅನುಕೂಲಕ್ಕೇ ಆಗಲಿ, ಯಾವ ಉದ್ದೇಶದಿಂದಾದರೂ ಸರಿಯೇ, ಸಂಕೇತ ಭಾಷೆ-

ಯೊಂದರ ನೆರವಿನಿಂದ ಸಂದೇಶಗಳನ್ನು ಯಶಸ್ವಿಯಾಗಿ ಕಳಿಸಬೇಕಾದರೆ ಯಾವ ಅಕ್ಷರಕ್ಕೆ ಅಥವಾ ಯಾವ ಪದಕ್ಕೆ ಯಾವ ಸಂಕೇತ ಎಂಬುದು ಕಳಿಸುವವನಿಗೂ ಚೆನ್ನಾಗಿ ತಿಳಿದಿರಬೇಕು, ಸಂದೇಶ ಗ್ರಾಹಕನಿಗೂ ಚೆನ್ನಾಗಿ ತಿಳಿದಿರಬೇಕು. ಈ ಗುಟ್ಟು ಭಾಷೆ – ರಟ್ಟು ಭಾಷೆಗಳಿರುವ ಪರಸ್ಪರ ಸಂಬಂಧಕ್ಕೆ ಯಾವ ನಿಯಮವೂ ಇಲ್ಲ. ಅದು ಕೇವಲ ಮಾನವ ಕಲ್ಪಿತ. ಮೋರ್ಸ್ ಸಂಕೇತ ಭಾಷೆಯಲ್ಲಿ E ಎಂಬ ಅಕ್ಷರಕ್ಕೆ ಸಂಕೇತ ಒಂದು ಚುಕ್ಕೆ, ಈ ಸಂಕೇತ ಭಾಷೆಯನ್ನು ಬದಲಾಯಿಸಿ, P ಎಂಬ ಅಕ್ಷರಕ್ಕೆ ಒಂದು ಚುಕ್ಕೆ ಸಂಕೇತವಾಗಿರುವಂತಹ ಬೇರೊಂದು ಸಂಕೇತ ವ್ಯವಸ್ಥೆಯನ್ನು ನಿರ್ಮಿಸುವುದಾದರೆ, ಅದಕ್ಕೆ ಯಾವ ಅಡ್ಡಿಯೂ ಇಲ್ಲ. ಅದನ್ನು ಬಳಸುವವರೆಲ್ಲರಿಗೂ ಬದಲಾವಣೆ ಮಾಡಿರುವ ವಿಷಯವನ್ನು ತಿಳಿಸಿದ್ದೇ ಆದರೆ, ಈ ಸುಧಾರಿತ ಭಾಷೆಯೂ ಅಷ್ಟೇ ಯಶಸ್ವಿಯಾಗುವುದು.

ಆನುವಂಶಿಕ ಸಂಕೇತ ಭಾಷೆ ಈ ರೀತಿ ಮಾನವ ಕಲ್ಪಿತವಾದುದಲ್ಲ. ಅದು ನಿಸರ್ಗ ಕಲ್ಪಿತ. ಆದುದರಿಂದ- ಅದನ್ನು ಬದಲಾಯಿಸುವಂತಿಲ್ಲ. ಈ ಭೂಮಿಯ ಮೇಲೆ ಜೀವ ಎಂದು ಕಾಣಿಸಿಕೊಂಡಿತೋ, ಸರಿಸುಮಾರು ಅದೇ ಸಮಯದಲ್ಲಿ ಅಸ್ತಿತ್ವಕ್ಕೆ ಬಂದ ಈ ಸಂಕೇತ ಭಾಷೆ ಜೀವಪ್ರಪಂಚದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತಿದೆ. ತಂದೆ-ತಾಯಿಯರ ಗುಣಲಕ್ಷಣಗಳು ಆನುವಂಶಿಕವಾಗಿ ಮುಂದಿನ ಪೀಳಿಗೆಗೆ ಸಾಗಿಹೋಗುವಾಗ ಆ ಗುಣಲಕ್ಷಣಗಳ ವಿವರಗಳು ಈ ಸಂಕೇತ ಭಾಷೆಯ ಮೂಲಕ ಸಾಗುತ್ತವೆ.

ಹುಣಸೆ ಬೀಜವನ್ನು ನೆಟ್ಟರೆ ಅದರಿಂದ ಹುಣಸೆ ಮರ ಹುಟ್ಟುವುದೇ ವಿನಾ ಮಾವಿನ ಮರ ಹುಟ್ಟವುದಿಲ್ಲ. ಅಂತೆಯೇ ನಾಯಿಯ ಗರ್ಭದಿಂದ ನಾಯಿಯ ಮರಿ ಹುಟ್ಟುವುದೇ ವಿನಾ ಆಸೆಯ ಮರಿ ಹುಟ್ಟುವುದಿಲ್ಲ. ನಮ್ಮೆಲ್ಲರ ಅನುಭವಕ್ಕೆ ಬಂದಿರುವ ಈ ವಾಸ್ತವಾಂಶಗಳನ್ನು ನಾವು ಸಾಮಾನ್ಯವಾಗಿ 'ಸ್ವಾಭಾವಿಕ'ವೆಂದು ಅಂಗೀಕರಿಸಿ ಸುಮ್ಮನಾಗುತ್ತೇವೆ. ಸಾವಧಾನವಾಗಿ ಯೋಚಿಸಿ ನೋಡಿದಾಗ ಇದು ನಿಸರ್ಗದ ಅಚ್ಚರಿಗಳಲ್ಲೊಂದು ಎಂಬುದು ನಮ್ಮ ಅರಿವಿಗೆ ಬರುತ್ತದೆ. ಉದಾಹರಣೆಗೆ, ಆಲದ ಮರ ನೂರಡಿ ಎತ್ತರಕ್ಕೆ ಬೆಳೆಯಬಲ್ಲದು. ಅದರ ಕಾಂಡದ ಸುತ್ತಳತೆ ನಲವತ್ತು ಅಡಿಗಳವರೆಗೂ ಇರಬಹುದು. ಸುತ್ತಲೂ ಬಿಳಲು ಬಿಡುತ್ತಾ ಅದು ವಿಸ್ತಾರವಾಗಿ ಹರಡಿಕೊಳ್ಳುತ್ತದೆ. ಇಂಥ ಹೆಮ್ಮರದ ಬೀಜವಾದರೋ ಒಂದು ಸಾಸಿವೆಯಷ್ಟಿರುತ್ತದೆ. ಬೀಜವನ್ನು ನೀಡಿದ ಮರಕ್ಕೂ ಆ ಬೀಜದಿಂದ ಹುಟ್ಟುವ ಮರಕ್ಕೂ ನಡುವೆ ಇರುವ ಕೊಂಡಿ ಆ ಚಿಕ್ಕ ಬೀಜವಷ್ಟೇ? ಅಂದ ಮೇಲೆ, ಮುಂದೆ ಮರ ಇಷ್ಟು ಗಾತ್ರಕ್ಕೆ ಬೆಳೆಯಬೇಕು; ಎಲೆ, ಹೂ, ಹಣ್ಣುಗಳ ಗಾತ್ರ, ಬಣ್ಣ, ಆಕಾರಗಳು ಹೀಗೆಯೇ ಇರಬೇಕು; ಅದರ ಕಾಂಡದಲ್ಲಿ ಕಚ್ಚು ಮಾಡಿದರೆ ಗಟ್ಟಿಯಾದ ಹಾಲು ಬರಬೇಕು: ನಾರಿನ ಲಕ್ಷಣಗಳು ಹೀಗೆಯೇ ಇರಬೇಕು ಎಂಬೆಲ್ಲ ಮಾಹಿತಿಯನ್ನೊಳಗೊಂಡ ಸಂದೇಶವನ್ನು ತಾಯಿಮರ ಆ ಚಿಕ್ಕ ಬೀಜದಲ್ಲಿ ಅಡಕವಾಗಿ ತುಂಬಿ ಮುಂದಿನ ಸಂತತಿಗೆ ಸಾಗಿಸುವುದು ಅಚ್ಚರಿಯಲ್ಲವೆ ?

ಮನುಷ್ಯ ಜಾತಿಯನ್ನೇ ತೆಗೆದುಕೊಳ್ಳೋಣ. ಮಗು, ತಂದೆ–ತಾಯಿಯರಂತೆ ಮನುಷ್ಯಜೀವಿಯಾಗಿರುವುದು ಮಾತ್ರವಲ್ಲದೆ, ಮೈಬಣ್ಣ, ಮುಖಭಾವ, ಕೂದಲ ಸ್ವಭಾವ ಮುಂತಾದ ವಿವರಗಳಲ್ಲೂ ತಂದೆತಾಯಿಯರನ್ನು ಹೋಲುತ್ತದೆ. ಮಗು ಹೀಗೆಯೇ ರೂಪುಗೊಳ್ಳಬೇಕೆಂಬ ಮಾಹಿತಿ ತಂದೆ–ತಾಯಿಯರಿಂದ ಮಗುವಿಗೆ ಒದಗುವುದು ಏತರ ಮೂಲಕ ? ತಂದೆಯಿಂದ ಬರುವ ರೇತ್ರಾಣು (sperm) ಎಂಬ ಒಂದು ಜೀವಕೋಶ (cell) ತಾಯಿಯ ಗರ್ಭದಲ್ಲಿ ಸಿದ್ಧವಾಗಿರುವ ಅಂಡಾಣು (ovum ಅಥವಾ egg) ಎಂಬ ಇನ್ನೊಂದು ಜೀವಕೋಶವನ್ನು ಸಂಧಿಸುತ್ತದೆ. ಈ ಅಂಡಾಣು ರೇತ್ರಾಣುಗಳು ನಿಜಕ್ಕೂ ಪೂರ್ಣಕೋಶಗಳು ಅಲ್ಲ; ಕೇವಲ ಅರ್ಧಕೋಶಗಳು. ಅವೆರಡೂ ಸೇರಿಕೊಂಡು ಒಂದು ಪೂರ್ಣ ಜೀವಕೋಶವಾಗುತ್ತದೆ. ಈ ಮಿಳಿತ ಕೋಶವೇ ಮಗುವಿನ ಭ್ರೂಣದ ಆದಿ. ಅಲ್ಲಿಂದ ಮುಂದೆ ಅದು ಬೆಳೆದು

ಎರಡಾಗಿ ಎರಡು ಜೀವಕೋಶಗಳಾಗುತ್ತವೆ. ಅನಂತರ ಎರಡು ನಾಲ್ಕಾಗುತ್ತವೆ, ನಾಲ್ಕು ಎಂಟಾಗುತ್ತವೆ. ಹೀಗೆ ತಾಯಿಯ ಗರ್ಭದಲ್ಲಿ ರೂಪುಗೊಳ್ಳುವ ಬಹುಕೋಶ ಜೀವಿಯೇ ಭ್ರೂಣ. ಅದು ಕ್ರಮೇಣ ಮಗುವಿನ ರೂಪ ತಾಳುತ್ತದೆ. ಇದರಿಂದ ಆನುವಂಶಿಕ ಮಾಹಿತಿಯನ್ನು ಹೊತ್ತು ತರುವುದು ಈ ಅರ್ಧಕೋಶಗಳು ಎಂದಾಯಿತು. ಅವು ಸೂಕ್ಷ್ಮದರ್ಶಕದಲ್ಲಿ ಮಾತ್ರ ಕಾಣಬರುವಷ್ಟು ಚಿಕ್ಕವು. ಅವುಗಳಲ್ಲಿ ಮಗುವಿನ ಭವಿಷ್ಯರೂಪವನ್ನು ನಿರ್ಧರಿಸುವ ಮಾಹಿತಿಯೆಲ್ಲ ಅಡಗಿರುವುದು ಅತ್ಯಂತ ಸೋಜಿಗದ ವಿಷಯ.

ಒಂದು ಜೀವಕೋಶದಷ್ಟು ಸೂಕ್ಷ್ಮವಾದ ಕಣದಲ್ಲಿ ಅಷ್ಟು ಆನುವಂಶಿಕ ಮಾಹಿತಿಯೆಲ್ಲ ಹೇಗೆ ಅಡಕವಾಗಿ ಸಂಕೇತರೂಪದಲ್ಲಿದೆಯೆಂಬುದನ್ನು ತಿಳಿಯಲು ಜೀವಕೋಶದ ರಚನೆ ಮತ್ತು ಅದರ ಘಟಕಗಳ ಪರಿಚಯ ಆಗತ್ಯ. ಜೀವಕೋಶದಲ್ಲಿ ಮುಖ್ಯವಾಗಿ ಮೂರು ಭಾಗಗಳಿವೆ: ಕೋಶದ ಹೊರ ಆವರಣವಾಗಿರುವ ಪೊರೆ, ಒಳಗೆ ಹೆಚ್ಚು ಕಡಿಮೆ ದ್ರವಸ್ಥಿತಿಯಲ್ಲಿರುವ ಕೋಶದ್ರವ (cytoplasm) ಮತ್ತು ಕೋಶದ್ರವದಲ್ಲಿ ತೇಲಾಡುತ್ತ ಇರುವ ನ್ಯೂಕ್ಲಿಯಸ್ ಎಂಬ ಕಣ. ಕೋಶವು ಬೆಳೆದು ಎರಡಾಗಿ ಒಡೆಯುವಾಗ ಇಡೀ ಉಂಡೆಯಂತಿದ್ದ ನ್ಯೂಕ್ಲಿಯಸ್ ಎಳೆಎಳೆಯಾಗಿ ಬಿಚ್ಚಿಕೊಂಡು ದಾರದ ತುಂಡುಗಳಂಥ ರಚನೆಗಳು ರೂಪಗೊಳ್ಳುತ್ತವೆ. ಇವುಗಳನ್ನು ಜೀವವಿಜ್ಞಾನಿಗಳು ಕ್ರೋಮೋಸೋಮ್‌ಎಂದು ಕರೆಯುತ್ತಾರೆ. ಕೋಶ ವಿದಳನಗೊಳ್ಳುವ ಸಮಯದಲ್ಲಿ ಈ ಕ್ರೋಮೋಸೋಮುಗಳು ಉದ್ದುದ್ದವಾಗಿ ಸೀಳಿ ಹೊಂದಿದ್ದ ಸಂಖ್ಯೆಯ ಎರಡರಷ್ಟಾಗುತ್ತವೆ. ಅನಂತರ ಅವು ಎರಡು ಗುಂಪುಗಳಾಗಿ ಬೇರ್ಪಟ್ಟು ಒಂದೊಂದು ಭಾಗಕ್ಕೆ ಹೋಗುತ್ತವೆ. ಜನ್ಯಕೋಶಗಳೆರಡರಲ್ಲಿಯೂ ಅದರದರ ಪಾಲಿಗೆ ಬಂದ ಕ್ರೋಮೋಸೋಮುಗಳು ಪುನಃ ಉಂಡೆ ಕಟ್ಟಿಕೊಂಡು, ಎರಡು ಹೊಸ ನ್ಯೂಕ್ಲಿಯಸ್‌ಗಳಾಗುತ್ತವೆ.

ಯಾವುದೇ ಜೀವಜಾತಿಯೊಂದನ್ನು ಗಣನೆಗೆ ತೆಗೆದುಕೊಂಡರೆ ಅದರ ಜೀವಕೋಶದ ನ್ಯೂಕ್ಲಿಯಸ್‌ನಲ್ಲಿರುವ ಕ್ರೋಮೋಸೋಮುಗಳ ಸಂಖ್ಯೆ ನಿಯತ. ಉದಾಹರಣೆಗೆ, ಜೀವ ವಿಜ್ಞಾನಿಗಳು ಆನುವಂಶ ಶಾಸ್ತ್ರದ ಅಧ್ಯಯನಕ್ಕೆ ವಿಶೇಷವಾಗಿ ಬಳಸುವ ಡ್ರಾಸೊಫಿಲ ಎಂಬ ನೊಣದ ಜೀವಕೋಶದ ನ್ಯೂಕ್ಲಿಯಸ್‌ನಲ್ಲಿರುವ ಕ್ರೋಮೋಸೋಮ್‌ಗಳ ಸಂಖ್ಯೆ ೮. ಬಟಾಣಿ ಗಿಡದ ಜೀವಕೋಶದಲ್ಲಿ ಅವುಗಳ ಸಂಖ್ಯೆ ೧೪. ಮನುಷ್ಯನಲ್ಲಿ ೪೬, ಇತ್ಯಾದಿ. ಪ್ರತಿಯೊಂದು ಸಲ ಜೀವಕೋಶ ಎರಡಾಗುವಾಗಲೂ ಕ್ರೋಮೋಸೋಮುಗಳ ಸಂಖ್ಯೆ ದ್ವಿಗುಣಿತವಾಗಿ, ಅರ್ಧ ಒಂದು ಜನ್ಯಕೋಶಕ್ಕೂ ಇನ್ನರ್ಧ ಇನ್ನೊಂದು ಜನ್ಯಕೋಶಕ್ಕೂ ಹೋಗುವುದರಿಂದ ದೇಹದ ಯಾವುದೇ ಭಾಗದ ಒಂದು ಜೀವಕೋಶವನ್ನು ಆರಿಸಿಕೊಂಡು ಪರೀಕ್ಷಿಸಿದರೂ ಅದರಲ್ಲಿ ಅದೇ ಸಂಖ್ಯೆಯ ಕ್ರೋಮೋಸೋಮುಗಳಿರುತ್ತವೆ.

ಈ ಕ್ರೋಮೋಸೋಮುಗಳು ಯಾವುದೋ ವಿಧದಲ್ಲಿ ಜೀವಕೋಶದಲ್ಲಿ ನಡೆಯುವ ಎಲ್ಲ ಕ್ರಿಯೆಗಳನ್ನೂ, ಆ ಮೂಲಕ ಒಟ್ಟು ಜೀವಿಯ ಜೀವವ್ಯಾಪಾರಗಳೆಲ್ಲವನ್ನೂ ನಿಯಂತ್ರಿಸುವವೆಂಬ ಸಂದೇಹ ಕಳೆದ ಶತಮಾನದ ಕೊನೆಯ ವೇಳೆಗೇ ಜೀವಶಾಸ್ತ್ರಜ್ಞರಿಗೆ ಬಂತು. ಅಲ್ಲಿಂದ ಮುಂದಿನ ಎರಡು ಮೂರು ದಶಕಗಳಲ್ಲಿ ನಡೆದ ವ್ಯಾಪಕ ಸಂಶೋಧನೆಗಳ ಪರಿಣಾಮವಾಗಿ ಆ ಊಹೆ ನಿಜವೆಂದು ಸಿದ್ಧವಾದುದು ಮಾತ್ರವಲ್ಲದೆ, ಜೀವಿಯ ಆನುವಂಶಿಕ ಗುಣಗಳು ತಾಯಿತಂದೆಯರಿಂದ ಮುಂದಿನ ಸಂತತಿಗೆ ಸಾಗುವುದೇ ಈ ಕ್ರೋಮೋಸೋಮುಗಳ ಮೂಲಕ ಎಂಬ ತೀರ್ಮಾನಕ್ಕೆ ಬರಲು ಸಾಕಷ್ಟು ಸಾಕ್ಷ್ಯಾಧಾರಗಳು ದೊರೆತವು.

ಯಾವುದೇ ಜೀವಜಾತಿಯಲ್ಲಿ ಕಂಡುಬರುವ ಕ್ರೋಮೋಸೋಮುಗಳ ಸಂಖ್ಯೆ ನಿಯತ ಎಂದು ಈ ಮೊದಲೇ ಹೇಳಿದೆಯಷ್ಟೆ? ಉದಾಹರಣೆಗೆ, ಮನುಷ್ಯನಲ್ಲಿ ಅದು ನಲವತ್ತಾರು. ಇವು ನಲವತ್ತಾರು ಎನ್ನುವುದಕ್ಕಿಂತ ಇಪ್ಪತ್ತಮೂರು ಜೊತೆ ಎನ್ನುವುದು ಹೆಚ್ಚು ಉಚಿತ. ಏಕೆಂದರೆ, ಅವುಗಳಲ್ಲಿ ಇಪ್ಪತ್ತಮೂರು ತಂದೆಯಿಂದ ಬಂದವು, ಇಪ್ಪತ್ತಮೂರು ತಾಯಿಯಿಂದ

ಬಂದವು. ಜೀವಕೋಶ ಬೆಳೆದು ಎರಡಾಗುವಾಗ ನಲವತ್ತಾರು ಕ್ರೋಮೋಸೋಮುಗಳೂ ಉದ್ದುದ್ದಕ್ಕೆ ಸೀಳಿ ತೊಂಭತ್ತೆರಡಾಗಿ ಎರಡು ಜನ್ಯಕೋಶಗಳಿಗೂ ಸಮವಾಗಿ ಹಂಚಿಕೊಳ್ಳುವುದು ಸರಿಯಷ್ಟೇ? ಹೆಣ್ಣಿನ ಗರ್ಭಕೋಶದಲ್ಲಿ ಅಂಡಾಣುಗಳನ್ನೂ ಗಂಡಿನ ವೃಷಣದಲ್ಲಿ ರೇತ್ರಾಣುಗಳನ್ನೂ ಉತ್ಪತ್ತಿ ಮಾಡುವ ನಿರ್ದಿಷ್ಟ ಸಂದರ್ಭದಲ್ಲಿ ಆಗುವ ಕೋಶವಿದಳನದಲ್ಲಿ ಮಾತ್ರ ಹೀಗಾಗುವುದಿಲ್ಲ. ಜೊತೆಜೊತೆಯಾಗಿರುವ ಇಪ್ಪತ್ತಮೂರು ಜೊತೆ ಕ್ರೋಮೋಸೋಮುಗಳೂ ಜೊತೆ ಬಿಡಿಸಿಕೊಂಡು, ಒಂದೊಂದರಲ್ಲೂ ಇಪ್ಪತ್ತಮೂರು ಇಪ್ಪತ್ತಮೂರು ಒಂಟಿ ಕ್ರೋಮೋಸೋಮುಗಳಿರುವ ಎರಡು ತಂಡಗಳಾಗಿ ವಿಂಗಡಿಸಿಕೊಂಡು, ಎರಡು ಜನ್ಯಕೋಶಗಳಿಗೂ ಹಂಚಿಕೊಳ್ಳುವುವು. ಹೀಗಾಗಿ, ಈ ಅಂಡಾಣು ರೇತ್ರಾಣುಗಳಲ್ಲಿ ಒಂದೊಂದರಲ್ಲಿಯೂ ಇಪ್ಪತ್ತಮೂರು ಕ್ರೋಮೋಸೋಮುಗಳು ಮಾತ್ರ ಇರುವುದರಿಂದಲೇ ಅವುಗಳನ್ನು ಅರ್ಧಕೋಶಗಳೆಂದು ಕರೆದುದು. ರೇತ್ರಾಣು ಹೆಣ್ಣಿನ ಗರ್ಭಕೋಶದಲ್ಲಿರುವ ಅಂಡಾಣುವನ್ನು ಸಂಧಿಸಿ ಅದರೊಡನೆ ಒಂದುಗೂಡಿದಾಗ ಉತ್ಪತ್ತಿಯಾಗುವ ಪೂರ್ಣಕೋಶದಲ್ಲಿ ಪುನಃ ನಲವತ್ತಾರು ಕ್ರೋಮೋಸೋಮುಗಳನ್ನು ಕಾಣಬಹುದು. ಈ ಮಿಳಿತ ಕೋಶವು ಪುನಃ ಪುನಃ ವಿದಳನಗೊಂಡು, ಕೋಶಗಳ ಸಂಖ್ಯೆ ವೃದ್ಧಿಯಾಗುತ್ತ ನಡೆದು, ಕಾಲಕ್ರಮದಲ್ಲಿ ಶಿಶು ರೂಪುಗೊಳ್ಳುವುದರಿಂದ ಹಾಗೂ ಈ ವಿದಳನ ಕ್ರಿಯೆಗಳಲ್ಲಿ ಪ್ರತಿಯೊಂದು ಬಾರಿಯೂ ಕ್ರೋಮೋಸೋಮುಗಳ ಸಂಖ್ಯೆ ದ್ವಿಗುಣಿತವಾಗಿ ಜನ್ಯಕೋಶಗಳಿಗೆ ಸಮನಾಗಿ ಹಂಚಿಕೊಳ್ಳುತ್ತಾ ಹೋಗುವುದರಿಂದ, ಶಿಶುವಿನ ದೇಹದ ಯಾವ ಕೋಶದಲ್ಲಿ ನೋಡಿದರೂ ನಲವತ್ತಾರು ಅಥವಾ ಇಪ್ಪತ್ತಮೂರು ಜೊತೆ ಕ್ರೋಮೋಸೋಮುಗಳನ್ನು ಕಾಣಬಹುದು. ಮಗು ತಂದೆತಾಯಿಯರ ಆನುವಂಶಿಕ ಗುಣಗಳನ್ನು ಪಡೆದುಕೊಳ್ಳುವುದು ಹೀಗೆ – ಈ ಕ್ರೋಮೋಸೋಮುಗಳ ಮೂಲಕ.


ಈ ಕ್ರೋಮೋಸೋಮುಗಳೊಂದೊಂದರಲ್ಲಿಯೂ ಅವುಗಳ ಉದ್ದಕ್ಕೂ ಸಾಲಾಗಿ ಹೊಂದಿಕೊಂಡಂತಿರುವ ಜೀನ್‌ಗಳೆಂಬ ಕಾಯುಗಳಿರುವುವು ಮತ್ತು ಈ ಜೀನ್‌ಗಳಲ್ಲಿ ಒಂದೊಂದೂ ಯಾವುದೋ ಒಂದು ಆನುವಂಶಿಕ ಗುಣವನ್ನು ನಿರ್ಧರಿಸಿರುವುದು ಎಂಬ ಅಂಶಗಳು ಈ ಶತಮಾನದ ಮಧ್ಯದ ವೇಳೆಗೆ ಖಚಿತವಾದುವು. ನಿರ್ದಿಷ್ಟ ಜೀನ್ ಯಾವ ಕ್ರೋಮೋಸೋಮಿನ ಯಾವ ಸ್ಥಳದಲ್ಲಿದೆ ಎಂಬುದನ್ನು ನಿರ್ಧರಿಸುವುದೂ ಕೆಲವು ವೇಳೆ ಸಾಧ್ಯವಾಯಿತು. ಕೇವಲ ಸೂಕ್ಷ್ಮದರ್ಶಕದಲ್ಲಿ ಮಾತ್ರ ಕಾಣಿಸುವಷ್ಟು ಚಿಕ್ಕದಾದ ಅಂಡಾಣು–ರೇತ್ರಾಣುಗಳು ತಂದೆತಾಯಿಯರ ಆನುವಂಶಿಕ ಗುಣಗಳನ್ನು ಹೊತ್ತು ತರುವುದು ಸಾಧ್ಯವೇ ಎಂದು ಸೋಜಿಗಗೊಂಡಿದ್ದ ನಾವು, ಈ ಅರ್ಧಕೋಶಗಳ ಕೇವಲ ಒಂದು ಅಂಗವಾಗಿರುವ ಕ್ರೋಮೋಸೋಮುಗಳಲ್ಲಿರುವ ಜೀನ್‌ಗಳಲ್ಲಿ ಈ ಮಾಹಿತಿ ಎಲ್ಲಿ ಅಡಕವಾಗಿದೆ ಎಂಬ ಇನ್ನೂ ಸೋಜಿಗದ ವಿಷಯವನ್ನು ಕಂಡಂತಾಯಿತು. ಇಷ್ಟೆಲ್ಲ ಆದರೂ ಜೀನ್‌ಗಳಲ್ಲಿ ಆನುವಂಶಿಕ ಮಾಹಿತಿ ಇರುವುದು ಯಾವ ರೂಪದಲ್ಲಿ, ಅದು ಉಪಯೋಗವಾಗುವುದು ಹೇಗೆ, ಅದರ ಫಲವಾಗಿ ಆನುವಂಶಿಕ ಲಕ್ಷಣಗಳು ಹೇಗೆ ವ್ಯಕ್ತಗೊಳ್ಳುತ್ತವೆ–ಎಂಬೀ ಪ್ರಶ್ನೆಗಳು ಹಾಗೇ ಉಳಿದಿದ್ದುವು. ಅಲ್ಲಿಂದ ಒಂದೆರಡು ದಶಕಗಳಲ್ಲಿಯೇ ಅವುಗಳಿಗೂ ಉತ್ತರ ಕೊಡುವುದು ಸಾಧ್ಯವಾಯಿತು.

ಜೀವಕೋಶದಲ್ಲಿರುವ ಕೋಶದ್ರವ, ನ್ಯೂಕ್ಲಿಯಸ್, ನ್ಯೂಕ್ಲಿಯಸ್ಸನ್ನು ರೂಪಿಸುವ ಕ್ರೋಮೋಸೋಮುಗಳು, ಅವುಗಳಲ್ಲಿರುವ ಜೀನ್‌ಗಳು– ಇವುಗಳ ರಚನೆಯನ್ನು ಇನ್ನೂ ಸೂಕ್ಷ್ಮವಾಗಿ ಪರೀಕ್ಷಿಸತೊಡಗಿದಾಗ ನಾವು ಅವುಗಳ ರಾಸಾಯನಿಕ ಸ್ವರೂಪವನ್ನು ಗಣನೆಗೆ ತೆಗೆದುಕೊಳ್ಳಬೇಕಾಗುವುದು. ಆಗ ಅಣು ಪರಮಾಣುಗಳ ಪ್ರಪಂಚವನ್ನು ಪ್ರವೇಶಿಸುವುದು ಅನಿವಾರ್ಯ.

ಕೋಶದ್ರವಗಳ ರಾಸಾಯನಿಕ ಸ್ವರೂಪವೆಂತಹುದು? ಜೀವಕೋಶದ ಸೇಕಡ ೬೦–೭೦

ರಷ್ಟು ಭಾಗ ಬರಿಯ ನೀರು. ಈ ನೀರನ್ನೂ ಅಲ್ಪ ಪ್ರಮಾಣದಲ್ಲಿರುವ ಲವಣಾದಿ ಖನಿಜ ಪದಾರ್ಥಗಳನ್ನೂ ಬಿಟ್ಟರೆ ಉಳಿದುದೆಲ್ಲ ಕಾರ್ಬ-ನಿಕ ಸಂಯುಕ್ತಗಳು. ಸಜೀವಿಗಳಿಗೆ ವಿಶಿಷ್ಟ-ವಾಗಿರುವ ಈ ಕಾರ್ಬನಿಕ ಸಂಯುಕ್ತಗಳಲ್ಲಿ ಜೀವವ್ಯಾಪಾರಗಳ ದೃಷ್ಟಿಯಿಂದ ಅತ್ಯಂತ ಮುಖ್ಯವಾದವೆಂದರೆ, ಪ್ರೋಟೀನ್‌ಗಳು ಮತ್ತು ನ್ಯೂಕ್ಲಿಯಿಕ್ ಆಮ್ಲಗಳು. ಜೀವಿಗಳ ದೇಹ-ದಲ್ಲಿ, ಅದರಲ್ಲೂ ಮುಖ್ಯವಾಗಿ ಪ್ರಾಣಿಗಳ ದೇಹದಲ್ಲಿ, ಪ್ರೋಟೀನ್‌ಗಳು ಮತ್ತು ನ್ಯೂಕ್ಲಿ-ಯಿಕ್ ಆಮ್ಲಗಳು ಹೆಚ್ಚುಕಡಿಮೆ ಸರ್ವಾಂತ-ರ್ಯಾಮಿ. ಸ್ನಾಯುಗಳು, ಚರ್ಮ, ಕೂದಲು—ಇವೆಲ್ಲ ಬಹುಮಟ್ಟಿಗೆ ಪ್ರೋಟೀನುಗಳಿಂದ ಆದವು. ಕೋಶದ್ರವವೂ ಪ್ರಧಾನವಾಗಿ ಪ್ರೋಟೀನೇ. ನ್ಯೂಕ್ಲಿಯಸ್‌ನಲ್ಲಿ ಯೂ ಪ್ರೋಟೀನ್ ಅಂಶ ಗಣನೀಯ ಪ್ರಮಾಣದಲ್ಲಿ-ರುತ್ತದೆ. ನ್ಯೂಕ್ಲಿಯಿಕ್ ಆಮ್ಲವಾದರೋ, ಅದರ ಹೆಸರೇ ಸೂಚಿಸುವಂತೆ, ಮುಖ್ಯವಾಗಿ ನ್ಯೂಕ್ಲಿಯಸ್‌ನಲ್ಲಿರುತ್ತದೆ. ಅದನ್ನು ಮೊದಲು ಗುರುತಿಸಿದ್ದು ಅಲ್ಲಿಯೇ ಆದುದರಿಂದ ಅದಕ್ಕೆ ಆ ಹೆಸರು ಬಂತು. ಆದರೆ ಕೋಶದ್ರವದಲ್ಲಿಯೂ ಸ್ವಲ್ಪ ನ್ಯೂಕ್ಲಿಯಿಕ್ ಆಮ್ಲ ಇರುವುದೂ ಅಲ್ಲಿಯ ವ್ಯವಹಾರಗಳಲ್ಲಿ ಅದು ಗಮನಾರ್ಹ ಪಾತ್ರ ವಹಿಸುವುದೂ ಈಗ ಗೊತ್ತಾಗಿದೆ.

ಆನುವಂಶಿಕ ಮಾಹಿತಿಯನ್ನು ಹೊತ್ತಿರುವ ಕ್ರೋಮೋಸೋಮುಗಳನ್ನು ರೂಪಿಸಿರುವ ಪದಾರ್ಥವನ್ನು ರಾಸಾಯನಿಕರು ನ್ಯೂಕ್ಲಿಯೋ-ಪ್ರೋಟೀನ್ ಎಂದು ಕರೆಯುತ್ತಾರೆ. ಅಂದರೆ, ಅದು ನ್ಯೂಕ್ಲಿಯಿಕ್ ಆಮ್ಲ ಮತ್ತು ಪ್ರೋಟೀನ್‌ಗಳ ಸಂಯೋಗದಿಂದ ಆಗಿರುವುದು. ಇವೆರಡರಲ್ಲಿ ನ್ಯೂಕ್ಲಿಯಿಕ್ ಆಮ್ಲವೇ ಅನು-ವಂಶಿಕ ಮಾಹಿತಿಯನ್ನು ಹೊತ್ತಿರುವುದು ಎಂಬ ಅಂಶ, ಕಳೆದ ಎರಡು ಮೂರು ದಶಕಗಳಲ್ಲಿ ನಡೆದಿರುವ ಸಂಶೋಧನೆಗಳಿಂದ ಸಿದ್ಧವಾಗಿದೆ. ಅಮೇರಿಕದ ಒ. ಟಿ. ಅವೆರಿ ಮತ್ತು ಅವರ ಸಂಗಡಿಗರು ನಡೆಸಿದ ಒಂದು ಸುಪ್ರಸಿದ್ಧ ಪ್ರಯೋಗ ಈ ಅಂಶವನ್ನು ಖಚಿತ ಮಾಡಿ-ಕೊಟ್ಟಿತು. ನ್ಯುಮೋನಿಯ ವ್ಯಾಧಿಯನ್ನು ಹರಡುವುದು ನ್ಯುಮೊಕಾಕಸ್ ಎಂಬ ಸೂಕ್ಷ್ಮ ಜೀವಿ. ಈ ನ್ಯುಮೊಕಾಕಸ್‌ಗಳಲ್ಲಿ ಹಲವಾರು ಪ್ರಭೇದಗಳಿವೆ. ಅವುಗಳಲ್ಲಿ ಒಂದೊಂದಕ್ಕೂ ವಿಶಿಷ್ಟವಾದ ಗುಣಲಕ್ಷಣಗಳಿವೆ. ಅವೆರಿ ಮತ್ತು ಸಂಗಡಿಗರು ಒಂದು ನಿರ್ದಿಷ್ಟ ಪ್ರಭೇದದ ನ್ಯುಮೊಕಾಕಸ್ ಜೀವಕೋಶಗಳನ್ನು ಅರೆದು, ಅವುಗಳ ಭಗ್ನಾವಶೇಷಗಳಿಂದ ನ್ಯೂಕ್ಲಿಯಿಕ್ ಆಮ್ಲವನ್ನು ಬೇರ್ಪಡಿಸಿ, ಅದನ್ನು ಇನ್ನೊಂದು ಪ್ರಭೇದದ ನ್ಯುಮೊಕಾಕಸ್ ಜೀವಕೋಶದೊಳಕ್ಕೆ ಸೇರಿಸಿದರು. ಅದರ ಸಂತತಿಯಲ್ಲಿ ಮೊದಲ-ನೆಯ ಪ್ರಭೇದದ ಗುಣ ಲಕ್ಷಣಗಳು ಸ್ಪಷ್ಟವಾಗಿ ಮೈದೋರಿದುವು. ಭಗ್ನಾವಶೇಷದಲ್ಲಿನ ಇತರ ಯಾವ ರಾಸಾಯನಿಕ ಪದಾರ್ಥದ ನೆರವಿ-ನಿಂದಲೂ ಆ ಪ್ರಭೇದದ ಲಕ್ಷಣಗಳನ್ನು ಎರಡ-ನೆಯ ಪ್ರಭೇದದ ನ್ಯುಮೊಕಾಕಸ್‌ಗೆ ವರ್ಗಾ-ಯಿಸುವುದು ಸಾಧ್ಯವಾಗಲಿಲ್ಲ. ಆದುದರಿಂದ ಆನುವಂಶಿಕ ಮಾಹಿತಿಯನ್ನು ಹೊತ್ತಿರುವುದು ಕ್ರೋಮೋಸೋಮುಗಳಲ್ಲಿರುವ ನ್ಯೂಕ್ಲಿಯಿಕ್ ಆಮ್ಲವೇ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಬಹುಶಃ ಒಂದೊಂದು ಜೀನೂ



ಒಂದೊಂದು ನ್ಯೂಕ್ಲಿಯಿಕ್ ಆಮ್ಲ. ಅದು ಯಾವುದೋ ಒಂದು ನಿರ್ದಿಷ್ಟ ಆನುವಂಶಿಕ ಲಕ್ಷಣಕ್ಕೆ ಕಾರಣ. ಅಂದರೆ, ಆ ಲಕ್ಷಣಕ್ಕೆ ಸಂಬಂಧಿಸಿದ ಮಾಹಿತಿಯನ್ನು ಅದು ಹೊತ್ತಿರುತ್ತದೆ. ಹಾಗಾದರೆ, ಒಂದಕ್ಕೊಂದು ವ್ಯತ್ಯಾಸವಿರುವ ಕೋಟ್ಯಂತರ ಬಗೆಯ ನ್ಯೂಕ್ಲಿಯಿಕ್ ಆಮ್ಲಗಳಿರಬೇಕು. ಅವುಗಳಿಗಿರುವ ಪರಸ್ಪರ ವ್ಯತ್ಯಾಸವೇನಿದ್ದರೂ ಅವುಗಳ ಅಣುರಚನೆಯಲ್ಲಿರಬಹುದಾದ ವ್ಯತ್ಯಾಸವೇ ವಿನಾ ಬೇರೆ ಏನೂ ಸಾಧ್ಯವಿಲ್ಲವಾದುದರಿಂದ ಅವುಗಳ ಅಣುರಚನೆಯಲ್ಲಿಯೇ ಆನುವಂಶಿಕ ಮಾಹಿತಿ ಸಂಕೇತರೂಪದಲ್ಲಿ ಅಡಕವಾಗಿರಬೇಕು.

ಆನುವಂಶಿಕ ಮಾಹಿತಿಯನ್ನು ತಮ್ಮ ಅಣುರಚನೆಯ ರೂಪದಲ್ಲಿ ಹೊತ್ತು ತರುವುದು ನ್ಯೂಕ್ಲಿಯಿಕ್ ಆಮ್ಲಗಳಾದರೆ, ಆ ಮಾಹಿತಿಯನ್ನು ಉಪಯೋಗಿಸಿ ನಿರ್ದಿಷ್ಟ ಗುಣಲಕ್ಷಣವನ್ನು ಜೀವಿಯಲ್ಲಿ ಮೂಡಿಸುವ ಕಾರಕಗಳು ಪ್ರೋಟೀನುಗಳು. ಅದು ಹೇಗೆ ಎಂಬುದನ್ನು ನೋಡೋಣ.

ತಾಯಿಯ ಗರ್ಭದಲ್ಲಿ ಅಂಡಾಣು–ರೇತ್ರಾಣುಗಳು ಒಂದುಗೂಡಿ ಭ್ರೂಣದ ಪ್ರಪ್ರಥಮ ಹಂತ ಎನ್ನಬಹುದಾದ ಮಿಳಿತಕೋಶ ಅಸ್ತಿತ್ವಕ್ಕೆ ಬಂದ ಕ್ಷಣದಿಂದ ಪ್ರಾರಂಭವಾಗಿ, ಪುನಃ ಪುನಃ ಆಗುವ ಕೋಶವಿದಳನ, ಪರಸ್ಪರ ಭಿನ್ನವಾಗಿರುವ ವಿವಿಧ ಬಗೆಯ ಕೋಶಗಳ ಉತ್ಪತ್ತಿ, ಅವುಗಳ ಜೋಡಣೆಯಿಂದ ವಿವಿಧ ಅಂಗಾಂಗಗಳು ರಚಿತವಾಗಿರುವುದು, ವಿಶಿಷ್ಟ ಆಕಾರದ ದೇಹ ರೂಪುಗೊಳ್ಳುವುದು, ಅದರ ಬೆಳವಣಿಗೆ, ಆಹಾರ ಸೇವನೆ, ಅದರ ಪಚನಕ್ರಿಯೆ, ಉಸಿರಾಟ, ಲೈಂಗಿಕ ಚಟುವಟಿಕೆಗಳು ಇವೇ ಮುಂತಾದ ಎಲ್ಲ ಜೀವ ವ್ಯಾಪಾರಗಳಿಗೂ ದೇಹದಾದ್ಯಂತ ಸಂದರ್ಭಗಳಿಗೆ ಸರಿಯಾಗಿ ನಡೆಯುವ ಅಸಂಖ್ಯಾತ ಜೀವ ರಾಸಾಯನಿಕ ಕ್ರಿಯೆಗಳೇ ಆಧಾರ. ಈ ಜೀವರಾಸಾಯನಿಕ ಕ್ರಿಯೆಗಳೊಂದೊಂದನ್ನೂ ಆ ಕಾಲಕ್ಕೆ ಅಗಮಾಡಿಕೊಡುವ ಬೇರೆ ಬೇರೆ ಕ್ರಿಯಾವರ್ಧಕಗಳಿವೆ. ಎಂಜೈಮುಗಳೆಂದು ಕರೆಯುವ ಈ ಕ್ರಿಯಾವರ್ಧಕಗಳ ಸಂಖ್ಯೆ ಅಪಾರ. ದೇಹದಾದ್ಯಂತ ಜೀವಕೋಶಗಳಲ್ಲಿ ಉತ್ಪತ್ತಿಯಾಗುವ ಈ ಎಂಜೈಮುಗಳು ಒಂದೊಂದೂ ಒಂದೊಂದು ಜೀವರಾಸಾಯನಿಕ ಕ್ರಿಯೆಗೆ ನೆರವಾಗಬಲ್ಲದು. ರಾಸಾಯನಿಕ ದೃಷ್ಟಿಯಲ್ಲಿ ಈ ಎಂಜೈಮುಗಳು ಪ್ರೋಟೀನುಗಳು, ನ್ಯೂಕ್ಲಿಯಿಕ್ ಆಮ್ಲಗಳಲ್ಲಿ ಹೇಗೋ, ಹಾಗೆಯೇ ಪ್ರೋಟೀನುಗಳಲ್ಲೂ ಬೇರೆ ಬೇರೆ ಅಣುರಚನೆ ಇರುವ ಕೋಟ್ಯಂತರ ಪ್ರೋಟೀನುಗಳು. ಜೀವಕೋಶಗಳಲ್ಲಿ ಉತ್ಪತ್ತಿಯಾಗಿ ವಿವಿಧ ಜೀವರಾಸಾಯನಿಕ ಕ್ರಿಯೆಗಳನ್ನು ನಡೆಸಿಕೊಡುವುವು ಎಂದಾಯಿತು.

ಆನುವಂಶಿಕ ಮಾಹಿತಿ ಅಣುರಚನೆಯ ರೂಪದಲ್ಲಿ ಅಡಗಿರುವುದು ನ್ಯೂಕ್ಲಿಯಿಕ್ ಆಮ್ಲಗಳಲ್ಲಿ ಎಂಬುದನ್ನೂ, ಆ ಮಾಹಿತಿಯನ್ನು ಉಪಯೋಗಿಸಿಕೊಂಡು ಜೀವಿಯಲ್ಲಿ ನಿರ್ದಿಷ್ಟ ಲಕ್ಷಣವನ್ನು ಮೂಡಿಸುವ ಮಾಧ್ಯಮಗಳು ಎಂದರೆ ಎಂಜೈಮುಗಳೆಂಬ ಪ್ರೋಟೀನುಗಳು ಎಂಬುದನ್ನೂ ಒಪ್ಪಿಕೊಂಡರೆ ಒಂದು ತೀರ್ಮಾನ ಸಹಜವಾಗಿ ಹೊರಡುವುದು. ಪ್ರತಿಯೊಂದು ಜೀನೂ, ಅಂದರೆ ನ್ಯೂಕ್ಲಿಯಿಕ್ ಆಮ್ಲವೂ ತನ್ನ ವಿಶಿಷ್ಟರಚನೆಯನ್ನವಲಂಬಿಸಿದಂತೆ ಒಂದು ನಿರ್ದಿಷ್ಟ ರಚನೆಯುಳ್ಳ ಪ್ರೋಟೀನ್ ಎಂಜೈಮನ್ನು ಉತ್ಪತ್ತಿ ಮಾಡಿ, ಅದರ ಮೂಲಕ ಜೀವಿಯಮೇಲೆ ಒಂದು ನಿರ್ದಿಷ್ಟ ಆನುವಂಶಿಕ ಲಕ್ಷಣಕ್ಕೆ ಕಾರಣವಾಗುವುದು ಎಂಬುದು ಸ್ಪಷ್ಟ. ಅಂದ ಮೇಲೆ ಒಂದು ನಿರ್ದಿಷ್ಟ ಪ್ರೋಟೀನ್ ಎಂಜೈಮಿನ ರಚನೆಗೂ ಅದನ್ನು ಜೀವಕೋಶದಲ್ಲಿ ಉತ್ಪತ್ತಿ ಮಾಡಬಲ್ಲ ನೂಕ್ಲಿಯಿಕ್ ಆಮ್ಲದ ರಚನೆಗೂ ನಿಕಟ ಸಂಬಂಧವಿರಬೇಕು. ಆನುವಂಶಿಕ ಸಂಕೇತ ಭಾಷೆ ಎಂಬುದನ್ನು ನಾವು ಕಾಣುವುದು ಇಲ್ಲೇ. ನೂಕ್ಲಿಯಿಕ್ ಆಮ್ಲದ ರಚನೆಯು ಆನುವಂಶಿಕ ಮಾಹಿತಿ ಇರುವುದು ಸಂಕೇತ ಭಾಷೆಯಲ್ಲಿ. ಆ ರಚನೆಗೆ ಅನುಗುಣವಾದ ಪ್ರೋಟೀನನ್ನು ಅದು ಉತ್ಪಾದಿಸಿದಾಗ ಸಂಕೇತ ಭಾಷೆಯಲ್ಲಿದ್ದ ಮಾಹಿತಿ ಉಪಯುಕ್ತ ಭಾಷೆಗೆ ತರ್ಜುಮೆಯಾಯಿತು ಎನ್ನಬಹುದು.

(ಮುಂದುವರಿದಿದೆ)

ನಗೆಮಲ್ಲಿಗೆ

ಪತ್ರಿಕೆಯಲ್ಲಿ ಬಂದ ಒಂದು ಜಾಹಿರಾತು: "ಅನಕ್ಷರಸ್ಥರೇ? ಉಚಿತ ಮಾರ್ಗದರ್ಶನ-ಕ್ಕಾಗಿ ಕೂಡಲೇ ಬರೆದುಕೊಳ್ಳಿ."

*

ವಾಯುವಿಹಾರಕ್ಕೆಂದು ತಮ್ಮ ಮಿತ್ರರ ಜೊತೆ ಸಮುದ್ರ ತೀರಕ್ಕೆ ಹೋದ ಪ್ರೊಫೆಸರ ರೊಬ್ಬರು, ಸಮುದ್ರದ ಅಲೆಗಳನ್ನು ನೋಡುತ್ತಾ ನೋಡುತ್ತಾ ಅತಿ ಹತ್ತಿರಕ್ಕೆ ಹೋದರು. ಅಷ್ಟರಲ್ಲಿ ಬಲವಾದ ಅಲೆ-ಯೊಂದು ದಡಕ್ಕೆ ಬಂದು ಅಪ್ಪಳಿಸಿ, ಇನ್ನೇನು ಪ್ರೊಫೆಸರರನ್ನು ಎಳೆದುಕೊಂಡು ಹೋಗುವುದರಲ್ಲಿತ್ತು, ಅಷ್ಟರಲ್ಲಿ ಅವರ ಮಿತ್ರರು ಇವರನ್ನು ದಂಡೆಗೆ ಎಳೆದು ಕೊಂಡು ಪ್ರಾಣಾಪಾಯದಿಂದ ರಕ್ಷಿಸಿದರು. ಆಗ ಗಾಬರಿಗೊಂಡ ಪ್ರೊಫೆಸರ್ ಉದ್ಗರಿಸಿದರು: "ಆ ಕ್ಷಣಕ್ಕೆ ನನಗೆ ಈಜಲು ಬರುತ್ತದೆ ಎಂಬ ಸಂಗತಿಯನ್ನೇ ಮರೆತಿದ್ದೆ!"

—ಎಂ. ಡಿ. ಜಿ. ಹೆಗಡೆ

*

ಆಧುನಿಕ ಯುವಕನೊಬ್ಬನು ತನ್ನ ಸಮೃದ್ಧ ಕೇಶಗಳನ್ನು ತೆಗೆಸಲು ಕೇಶಕರ್ತನಾಲಯಕ್ಕೆ ಹೋದ. ಕ್ಷೌರಿಕನು ಸ್ವಲ್ಪ ಹೊತ್ತಿನ ನಂತರ, ಆ ಯುವಕನ ತಲೆಯ ಮೇಲೆ ಒಂದು ಲೋಹದ ಕುಂಬಳಕಾಯನ್ನು ಕುಟ್ಟತೊಡಗಿದ. ಯುವಕನು ಆಶ್ಚರ್ಯದಿಂದ ಅವನಿಗೆ, "ಇದೇನು ಮಾಡುತ್ತಿರುವೆ! ಕತ್ತರಿಯಿಲ್ಲವೆ?" ಎಂದಾಗ, "ಅದನ್ನೇ ಹುಡುಕುತ್ತಿದ್ದೇನೆ," ಎಂದ ಆ ನಾಪಿತ.

*

ಅದೊಂದು ಬಯಲು ಜೈಲು. ಕೈದಿ-ಗಳನ್ನು ಹಗಲಿನಲ್ಲಿ ಕೆಲಸಮಾಡಲು ಹೊರಗೆ ಕಳುಹಿಸುತ್ತಿದ್ದರು. ಅಲ್ಲಿ ಅವರಿಗೆ ಯಾವ ಬಂಧನಗಳೂ ಇರುತ್ತಿರಲಿಲ್ಲ.

ಒಂದು ದಿನ ಕೈದಿಯೊಬ್ಬನು ಅರ್ಧ-ರಾತ್ರಿ ಮೀರಿದ ಮೇಲೆ ಜೈಲಿಗೆ ತಿರುಗಿ ಬಂದನು. ಆಗ ಅಲ್ಲಿಯ ಜೇಲರ್ ಕಣ್ಣು ಒರೆಸಿಕೊಳ್ಳುತ್ತ ಬಾಗಿಲು ತೆರೆದು, ಸಿಟ್ಟಿನಿಂದ, "ನೀನು ಇನ್ನೊಂದು ಸಲ ಈ ರೀತಿ ತಡವಾಗಿ ಬಂದರೆ ಜೈಲಿನ ಬಾಗಿಲನ್ನೇ ತೆರೆಯುವದಿಲ್ಲ. ತಿಳಿಯಿತೆ?" ಎಂದ.

—ವಿನಾಯಕ ಕುಲಕರ್ಣಿ

*

ಹಾದಿಯಲ್ಲಿ ಹೋಗುತ್ತಿದ್ದ ಹೆಂಗಸೊಬ್ಬಳು ಭಿಕ್ಷೆ ಬೇಡುತ್ತಿದ್ದ ಕುರುಡನನ್ನು ನೋಡಿ ಕನಿಕರಪಟ್ಟು ನಾಲ್ಕಾಣೆಯೊಂದನ್ನು ಹಾಕಿದಳು. ತಕ್ಷಣ ಆತ ಹೇಳಿದ: "ಅಮ್ಮ ನಿಮ್ಮನ್ನು ನೋಡಿದ ಕೂಡಲೆ ಅಂದುಕೊಂಡೆ ತಾವು ಬಹಳ ದಯಾಳುಗಳು ಅಂತ."

*

ದೇಶದ ಆರ್ಥಿಕ ಪರಿಸ್ಥಿತಿ ಬಹಳ ಹದಗೆಟ್ಟಿತ್ತು. ಪ್ರಧಾನಮಂತ್ರಿಯಾದಿಯಾಗಿ ಎಲ್ಲರೂ ದೇವರೇ ಎಂದು ದಿನಗಳನ್ನೆಣಿಸುತ್ತಿದ್ದರು. ಪರಿಸ್ಥಿತಿ ಬಿಗಡಾಯಿಸಿ ಪ್ರಧಾನ ಮಂತ್ರಿ ಎಲ್ಲ ಪಾರ್ಟಿಯವರನ್ನೂ ಮೀಟಿಂಗಿಗೆ ಕರೆದರು. ದೇಶವನ್ನು ಈ ರೀತಿಯ ಆರ್ಥಿಕ ದುಃಸ್ಥಿತಿಯಿಂದ ಕಾಪಾಡಲು ಎಲ್ಲರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳುತ್ತಿದ್ದರು. ಕೊನೆಯಲ್ಲಿ ಒಬ್ಬರೆದ್ದು, "ಈಗ ನಮಗಿರೋದು ಒಂದೇ ದಾರಿ," ಎಂದರು.

ಎಲ್ಲರೂ: ಏನದು...ಏನದು?

ಆತ: ನಾವು ಅಮೇರಿಕದ ಮೇಲೆ ಯುದ್ಧ ಹೂಡೋಣ.

ಎಲ್ಲರೂ: ಹ್ಹ ಹ್ಹ...ಹುಚ್ಚುತನ. ಅರ್ಧ ಗಂಟೆಯಲ್ಲಿ ನಮ್ಮನ್ನು ನೆಲಸಮ ಮಾಡಿಯಾರು.

ಆತ: ಮಾಡ್ತಾರೆ. ಆದ್ರೆ ಮತ್ತೆ ಕಟ್ಟೋದಕ್ಕೆ, ಉತ್ತಮಪಡಿಸ್ಕೊಳ್ಳೋಕೆ, ಭದ್ರವಾಗಿ ಬೇರೂರೋದಕ್ಕೆ ಧಾರಾಳವಾಗಿ

ಧನಸಹಾಯ ಮಾಡ್ತಾರೆ. ಜಪಾನ್, ಜರ್ಮನಿಗಳನ್ನು ನೋಡಿ.

ಒಬ್ಬ: ಅದೇನೋ ಸರಿ! ಆದರೆ ದುರದೃಷ್ಟವಶಾತ್ ನಾವೇ ಗೆದ್ದುಬಿಟ್ರೆ?!

............???

—ಕೆ. ವಿ. ಶ್ರೀನಾಥ

*

ಪೋಸ್ಟ್‌ಮನ್ ಹುದ್ದೆಗೆ ಕರೆಯಲಾದ ಅರ್ಜಿದಾರರಿಗೆ ಏರ್ಪಡಿಸಿದ ಲಿಖಿತ ಪರೀಕ್ಷೆಯಲ್ಲಿ, ಭೂಮಿಗೂ ಚಂದ್ರನಿಗೂ ನಡುವೆ ಇರುವ ಅಂತರವೆಷ್ಟು? ಎಂಬ ಪ್ರಶ್ನೆ ಕೇಳಲಾಗಿತ್ತು.

ಒಬ್ಬ ಅರ್ಜಿದಾರನು, "ಪತ್ರಗಳನ್ನು ಹಂಚಲು ಇಲ್ಲಿಂದ ಚಂದ್ರನವರೆಗೂ ಹೋಗಬೇಕಾದರೆ ನನಗೆ ಇಂಥ ನೌಕರಿಯೇ ಬೇಡವೆಂದು ಉತ್ತರ ಪತ್ರಿಕೆಯಲ್ಲಿ ಬರೆದು ಕೊಟ್ಟು ಪರೀಕ್ಷಾ ಕೋಣೆಯಿಂದ ಹೊರಬಿದ್ದ.

*

ಇಬ್ಬರು ಗೆಳೆಯರು ಬಹಳ ದಿನಗಳ ನಂತರ ಭೇಟಿಯಾಗಿದ್ದರು. ಸಮಕ್ಷಮ ವಿಚಾರಿಸಿದ ನಂತರ ಒಬ್ಬನು, "ಅಲ್ಲೋ, ದಿಲೀಪನು ಮದುವೆಯಾಗಿದ್ದಾನೋ ಅಥವಾ ತಾನೇ ಅಡಿಗೆ ಮಾಡಿಕೊಳ್ಳುತ್ತಿದ್ದಾನೋ?" ಎಂದು ಕೇಳಿದ.

ಅದಕ್ಕೆ ಗೆಳೆಯನು ಉತ್ತರ: "ನೀನು ಒಂದೇ ಬಾರಿಗೆ ಎರಡು ಪ್ರಶ್ನೆ ಕೇಳಿದ್ದೀಯಾ. ಇವೆರಡಕ್ಕೂ ಒಂದೇ ಉತ್ತರ, ಹೌದು."

—ಕೋಟಿ ವರದೇಂದ್ರ

*

ಸಾರ್ವಜನಿಕ ಸಭೆಯನ್ನುದ್ದೇಶಿಸಿ ಪ್ರಧಾನಿಯೊಬ್ಬರಿಂದ ಕುಟುಂಬ ಯೋಜನೆಯ ಲಾಭಗಳ ವಿಷಯವಾಗಿ ಅಸ್ಖಲಿತ ಭಾಷಣ ಸಾಗಿತ್ತು. ನಡುವೆಯೇ ಹೆಣ್ಣು ದನಿಯೊಂದು ಸಭೆಯ ಮಧ್ಯದಿಂದ ತೂರಿ ಬಂತು:

"ರೀ! ನಿಲ್ಸ್ರಿ ನಿಮ್ ಭಾಷ್ಣಾನ! ನೀವು ನಿಮ್ಮ ತಂದೆಯ ಐದ್ನೆ ಮಗ ಆಗಿದ್ಕೊಂಡು ಅದೂ ಅಲ್ದೆ ಇನ್ ಕೆಲವೇ ದಿನಗಳಲ್ಲಿ ಆರನೇ ಮಗುವಿನ ತಂದೆಯಾಗಲಿರುವ ನಿಮ್ಗೆ ಹಿಂಗ್ ಮಾತಾಡೋಕೆ ನಾಚ್ಕೆ ಆಗೋಲ್ವೇನ್ರೀ?"

—'ವ. [illegible].'

*

ಸ್ಯಾಮ್ಯುಯಲ್ ಮೋರ್ಸ್, ಟೆಲಿಗ್ರಾಫಿಯನ್ನು ಕಂಡುಹಿಡಿಯುವುದಕ್ಕಿಂತ ಮೊದಲು ಚಿತ್ರಕಾರನಾಗಿದ್ದ. ಒಂದು ದಿನ ತನ್ನ ವೈದ್ಯ ಮಿತ್ರನಿಗೆ ತಾನು ಬರೆದ ರೋಗಿಯ ಚಿತ್ರವೊಂದನ್ನು ತೋರಿಸುತ್ತ, "ಹೇಗಿದೆ?" ಎಂದು ಕೇಳಿದ. ಮಿತ್ರ, "ಚೆನ್ನಾಗಿದೆ" ಎಂದ. "ಇದರ ಬಗ್ಗೆ ನಿನ್ನ ಅಭಿಪ್ರಾಯವೇನು?" ಎಂದು ಅವನು ಮತ್ತೆ ಕೇಳಿದಾಗ ಆ ವೈದ್ಯನು ಚಿತ್ರವನ್ನು ಸ್ವಲ್ಪ ಹೊತ್ತು ದಿಟ್ಟಿಸಿ ನೋಡಿ, ತನ್ನ ಅಭಿಪ್ರಾಯ ವ್ಯಕ್ತಪಡಿಸಿದ, "ಮಲೇರಿಯಾ," ಎಂದು.

*

ಇಂಗ್ಲೆಂಡಿನ ಬಕಿಂಗ್‌ಹ್ಯಾಮ್ ಅರಮನೆಯಿಂದ ಯಾವುದಾದರೂ ಆಜ್ಞೆ ಹೊರಡುವುದಿದ್ದರೆ ಅಥವಾ ಅಧಿಕಾರಿಗಳಿಗೆ ಸಲಹೆ ಸೂಚನೆ ನೀಡುವುದಿದ್ದರೆ, ಪತ್ರದ ಕೊನೆಗೆ "ದೇವರು ನಮ್ಮ ದೊರೆಯನ್ನು ರಕ್ಷಿಸಲಿ," ಎಂದು ಬರೆಯುವುದು ಸಂಪ್ರದಾಯ. ಒಂದು ಸಲ ರಾಜನ ಆಪ್ತ ವೈದ್ಯನನ್ನು ನೇಮಿಸಿದ್ದ ಆಜ್ಞೆ ಹೊರಡಿಸಲಾಯಿತು. ಎಂದಿನಂತೆ ಕೊನೆಗೆ ಬರೆಯಲಾಗಿತ್ತು: "ದೇವರು ನಮ್ಮ ದೊರೆಯನ್ನು ರಕ್ಷಿಸಲಿ."

ಸಂಗ್ರಹ: —'ಶ್ರೀ ಸುರೇಂದ್ರ'

*

ಬ್ರಿಟಿಶ್ ರಾಷ್ಟ್ರೀಯ ಆರೋಗ್ಯ ಇಲಾಖೆಯ ಕ್ಲೇಮ್ಸ್ ಫಾರ್ಮಿನ ಕೊನೆಗೆ ಇಂತು ಬರೆಯಲಾಗಿದೆ: "ವೃದ್ಧಾಪ್ಯ ವೇತನ ಪಡೆ ಪಡೆಯುತ್ತಿರುವಾಗಲೇ ಪ್ರಸೂತಿ ಧನಸಹಾಯವನ್ನು ಕೇಳಬಾರದು." ✡

ಮರಾಠಿ ಕಥೆ

ಮೂಲ : ದಿವಂಗತ ಅಣ್ಣಾ ಭಾವು ಸಾಠೆ
ಕನ್ನಡಕ್ಕೆ : ರಂಗರಾವ ತಲಚೇರಕರ

ಮೂರು ರೊಟ್ಟಿಗಳು

ನಾವು ಮಿಂಚೇಕರನ ಚಕ್ಕಡಿಯಲ್ಲಿ ಪಾಲಿಯ ಖಂಡೋಬನ ಜಾತ್ರೆಗೆ ಹೊರಟಿದ್ದೆವು. ನಾವು ಅಂದರೆ ಮಿಂಚೇಕರ, ಅವನ ಮಗಳು, ಅಳಿಯ ಮತ್ತು ನಾನು.

ಮಿಂಚೇಕರ ಮುದುಕ. ಚಕ್ಕಡಿಗೆ ಹೂಡಿದ ಎರಡೂ ಎತ್ತುಗಳು ಅವನಂತೆಯೇ ಇಳಿ ವಯಸ್ಸಿನವು. ರಸ್ತೆ ತೀರಾ ಕೆಟ್ಟಿತ್ತು. ಸಾಲದ್ದಕ್ಕೆ ತಮ್ಮ ಕಾರ್ಯವನ್ನು ಸಹಕಾರದಿಂದ ಮಾಡುವದನ್ನು ಬಿಟ್ಟು ಈ ಎತ್ತುಗಳು ಚಕ್ಕಡಿಯನ್ನು ತಮ್ಮ ಕಡೆಗೇನೇ ಎಳೆಯಲು ಯತ್ನಿಸುತ್ತಿದ್ದವು- ಎತ್ತು ಏರಿಗೆಳೆದರೆ ಕೋಣ ಕೆರೆಗೆಳೆಯಿತು ಎಂಬಂತೆ. ಹಾಗಾಗಿ, ಚಕ್ಕಡಿ ಒಮ್ಮೆ ಒಂದಕ್ಕೆ, ಮತ್ತೊಮ್ಮೆ ಪಕ್ಕಕ್ಕೆ ಹೊರಳುತ್ತಿತ್ತು. ಇವೆಲ್ಲದರ ಪರಿಣಾಮ— ಒಳಗೆ ಕೂತವರ ಅಂಗಾಂಗಗಳೆಲ್ಲ ಜಜ್ಜಿಹೋದಂತಾಗಿದ್ದು.

ಮಿಂಚೇಕರನು ಎತ್ತುಗಳನ್ನು "ಓ ಇಂಗ್ಲೀಷಾ, ಓ ಗಾಂಧಿ," ಎಂದು ಕರೆಯುತ್ತ ಅವುಗಳ ಹಗ್ಗವನ್ನು ಮೇಲಿಂದ ಮೇಲೆ ಜಗ್ಗುತ್ತ ಚಕ್ಕಡಿಯನ್ನು ದಾರಿಯಲ್ಲಿ ಎಳೆಯುವಂತೆ ಹೇಗೋ ಮಾಡುತ್ತಿದ್ದ.

ಎತ್ತುಗಳಿಗೆ ಅವನು ಇಟ್ಟ ಹೆಸರು ಕೇಳಿ ಮೋಜೆನಿಸಿತು. "ಎಂತಹ ಹೆಸರು ಇಟ್ಟಿದ್ದೀಯಪ್ಪಾ?" ಎಂದು ಕೇಳಿದೆ.

"ಏನು ತಪ್ಪಾಯಿತು? ಗಾಂಧಿ ಮುದುಕ; ಇಂಗ್ಲಿಷಿನವನೋ ಶಕ್ತಿಯನ್ನೇ ಕಳೆದುಕೊಂಡಿದ್ದಾನೆ- ಅವನೂ ಮುದುಕನೇ. ಗಾಂಧಿಯವರ, ಇಂಗ್ಲಿಷಿನವರ ನಡುವೆ ಹೋರಾಟ ನಡೆದೇಯಿದೆ. ಇಬ್ಬರೂ ನಮ್ಮ ನಾಡನ್ನು ಪರಸ್ಪರ ವಿರುದ್ಧ ದಿಶೆಗೆ ಒಯ್ಯಲು ಯತ್ನಿಸುತ್ತಿದ್ದಾರೆ. ಈ ನನ್ನ ಎತ್ತುಗಳೂ ಹಾಗೆಯೇ. ಒತ್ತಟ್ಟಿಗೇ ಬೆಳೆದರೂ ಒಂದರ ಮೇಲೊಂದು ಹರಿಹಾಯುತ್ತವೆ!"

"ಅದಿರಬಹುದು. ಆದರೆ ರಾಷ್ಟ್ರದ ನಾಯಕರ ಹೆಸರನ್ನು ಯಃಕಶ್ಚಿತ್ ಎತ್ತಿಗೆ ಇಡುವದು ಯೋಗ್ಯವಲ್ಲ," ನಾನೆಂದೆ.

"ಯಾಕೆ ರಾವಸಾಬರೇ, ನೀವು ಎತ್ತು ಅಂದರೆ ಏನೆಂದು ತಿಳಿದಿರಿ? ಎತ್ತು ನಮ್ಮ ಅನ್ನದಾತ. ಅದರ ಜೀವದ ಮೇಲೇ ನಾವು ಬದುಕುತ್ತೇವೆ. ಎತ್ತು ಇಲ್ಲದಿದ್ದರೆ ಬೆಳೆಯೂ ಇಲ್ಲ; ಜಗತ್ತಿಗೆ ಅನ್ನವೂ ಸಿಗಲಾರದು. ನಾವು ಹಳ್ಳಿಯಲ್ಲಿ ಎತ್ತಿಗೆ ಬಲಿರಾಜ ಅನ್ನುತ್ತೇವೆ. ಅಂದ ಬಳಿಕ ಗಾಂಧಿ ಎಂದು ಕರೆದರೆ ತಪ್ಪೇನು?"

ಈಗ ನಾನು ನಿರುತ್ತರನಾದೆ. ಅಷ್ಟರಲ್ಲಿ ಕತ್ತಲಾಗುತ್ತ ಬಂತು. ಈಗ ಎತ್ತುಗಳು ಪರಸ್ಪರ ಸಹಕರಿಸಿ ಚಕ್ಕಡಿಯನ್ನು ಸರಿಯಾಗಿ ಎಳೆಯಲಾರಂಭಿಸಿದವು.

"ನೋಡಿದಿರಾ, ಗಾಂಧಿಯವರಿಗೂ ಇಂಗ್ಲೀಷರಿಗೂ ಗಾಂಧಿ-ಐರ್ವಿನ್ ಒಪ್ಪಂದವಾದ ಹಾಗೆ ನನ್ನ ಗಾಂಧಿ ಹಾಗೂ ಇಂಗ್ಲೀಷರೊಳಗೆ ಒಪ್ಪಂದವಾಗಿದೆ. ನೋಡಿರಿ, ಈಗ ಹೇಗೆ ಎಳೆಯುತ್ತಿವೆ!" ಮಿಂಚೇಕರ ತನ್ನ ಈ ಜಾಣತನದ ಮಾತಿಗಾಗಿ ತನ್ನನ್ನೆ ತಾನು ಶ್ಲಾಘಿಸಿಕೊಳ್ಳುವ ಧ್ವನಿಯಲ್ಲಿ ಹೇಳಿದ.

ನಾವು ಜಕಣಿವಾಡಿಯನ್ನು ಸಮೀಪಿಸಿದ್ದೆವು. ಎತ್ತುಗಳು ಆಯಾಸದಿಂದ ಸೋತು ಸುಣ್ಣಾಗಿದ್ದವು. ರಸ್ತೆಯ ಬದಿಯಲ್ಲೆ ಒಂದು ದೇವರ ಗುಡಿ ಇತ್ತು. ಅಲ್ಲಿ ವಿಶ್ರಾಂತಿ ಪಡೆದು ಮರುದಿನ ಮುಂಜಾನೆ ಪಯಣ ಮುಂದುವರಿಸಬಹುದೆಂದು ನಾನು ಸೂಚಿಸಿದೆ. ಸೂಚನೆ ಸರ್ವಾನುಮತದಿಂದ ಒಪ್ಪಿತವಾಯಿತು. ಹಳ್ಳಿಯ ಬಡ ದೇವಸ್ಥಾನ. ದೇವರ ವಿಗ್ರಹವಲ್ಲದೆ ಒಳಗೆ ಬೇರೇನೂ ಇರಲಿಲ್ಲ. ಆದ್ದರಿಂದ ದ್ವಾರ ಮುಕ್ತವಾಗಿಯೇ ಇತ್ತು. ನಮ್ಮ ಮಟ್ಟಿಗದು ಈಗ ಪ್ರವಾಸಿ ಬಂಗಲೆಯಾಯಿತು. ಒಳಗೆ ಹೋದವರೇ ನಾವು ತಂದಿದ್ದ ಕಂಬಳಿಗಳನ್ನು ಹಾಸಿ ಮಿಂಚೇಕರನು ನೀಡಿದ ಜೋಳದ ರೊಟ್ಟಿ, ಬೆಳ್ಳುಳ್ಳಿ ಚಟ್ನಿಯ ಮೇಲೆ ಪ್ರಹಾರ ಮಾಡಿದೆವು. ಮಿಂಚೇಕರನ ಮಗಳು, ಅಳಿಯ ಊಟವನ್ನು ಬೇಗನೇ ಮುಗಿಸಿದರು. ನಮ್ಮ ಊಟವಿನ್ನೂ ಮುಗಿದಿರಲಿಲ್ಲ. ಮೂರು ಸಣ್ಣ ರೊಟ್ಟಿ ಉಳಿದಿದ್ದವು. ಅವುಗಳನ್ನು ಮಿಂಚೇಕರನ ಸೊಸೆ ಬಡಿಸಲು ಬಂದಾಗ ನಾನು, "ನನಗೆ ಒಂದೇ ಸಾಕು; ಅಪ್ಪನಿಗೆ ಬಡಿಸು," ಅಂದೆ. ಮಿಂಚೇಕರ, "ಈ ಮೂರೂ ರೊಟ್ಟಿಗಳನ್ನು ಉಳಿಸುವುದು ಬೇಡ; ಮುಗಿಸಿಬಿಡೋಣ. ನಾನು ಒಂದು ತಿಂತೇನೆ; ನೀನು ಎರಡು ತಿನ್ನು," ಅಂದು ಗಹಗಹಿಸಿ ನಕ್ಕನು. ಅವನು ಎಡಬಿಡದೆ ನಗುತ್ತಿದ್ದುದನ್ನು ನೋಡಿ ನಾವೆಲ್ಲ ಏಕೆಂದು ಕೇಳಿದೆವು. ನಗುವನ್ನು ನಿಲ್ಲಿಸದೆ ಅವನು, "ಎರಡು ವರ್ಷಗಳ ಕೆಳಗೆ ಇಲ್ಲೇ ನೆರೆಯ ಗ್ರಾಮದಲ್ಲಿ ನಡೆದ ಚಮತ್ಕಾರಿಕ ಘಟನೆಯೊಂದು ನೆನಪಾಯಿತು," ಎಂದು ಹೇಳಿ ಇನ್ನೂ ಜೋರಾಗಿ ನಕ್ಕನು. ಅದಾವ ಘಟನೆ ಎಂದು ನಾವು ಕೇಳಿದಾಗ ಅವನು ಹೇಳಿದ ವೃತ್ತಾಂತ ಇದು:

ಇಲ್ಲಿಗೆ ಸಮೀಪದ ಊರಿನ ಬದಿಯಲ್ಲೊಂದು ಬೇತಾಳನ ಗುಡಿ ಇದೆ. ಅದರ ಹತ್ತಿರ ಸಂತಾಜಿ ಎಂಬವನ ಮನೆ ಇತ್ತು. ಅವನು ತನ್ನ ಅದೃಷ್ಟ ಪರೀಕ್ಷಿಸುವದಕ್ಕಾಗಿ ಮುಂಬಯಿಗೆ ಹೋಗಿ ಅಲ್ಲಿ ಯಾವುದೋ ಉದ್ಯೋಗ ಮಾಡುತ್ತಿದ್ದ. ಮನೆಯಲ್ಲಿ ಅವನ ತಾಯಿ, ಹೆಂಡತಿ ಇಬ್ಬರೇ. ವಯಸ್ಸಿನಿಂದಾಗುವ ವ್ಯತ್ಯಾಸವನ್ನು ಬಿಟ್ಟರೆ ಅತ್ತೆ-ಸೊಸೆಯರು ಸಂಪೂರ್ಣ ಪರಸ್ಪರರು ಅನುರೂಪರಾಗಿಯೇ ಇದ್ದರು. ಇಬ್ಬರೂ ಜಗಳಗಂಟಿಯರೆಂದು ಪ್ರಸಿದ್ಧರಾಗಿದ್ದರು. ದಿನಾಲೂ ಅವರಿಬ್ಬರೊಳಗೆ ಬಡಿದಾಟ ಇದ್ದೇ ಇರುತ್ತಿತ್ತು. ಆದರೆ ನಡು ನಡುವೆ ಅವರು ಒಂದಾಗುವ ಸಂದರ್ಭಗಳೂ ಇರದಿರಲಿಲ್ಲ.

ಸಂತಾಜಿಯ ತಾಯಿ ಮಾಟಗಾತಿಯೆಂದು ಊರಲ್ಲಿ ಪ್ರತೀತಿಯಿತ್ತು. ತಾನು ವಶಪಡಿಸಿಕೊಂಡಿದ್ದ ಭೂತನ ಮುಖಾಂತರ ಇತರರ ಮನೆಯೊಳಗಿದ್ದ ಧಾನ್ಯವನ್ನು ಆಕೆ ತನ್ನಲ್ಲಿಗೆ ಸಾಗಿಸುತ್ತಾಳೆಂದು ಜನ ಆಡಿಕೊಳ್ಳುತ್ತಿದ್ದರು. ಎಮ್ಮೆ ಹಾಲು ಕೊಡದಿದ್ದರೆ, ಎಳೇ ಕೂಸು ಥಕ್ಕನೆ ಅಸ್ವಸ್ಥವಾದರೆ, ಅದು ಅವಳ ಕೆಟ್ಟ ಕಣ್ಣು ಬಿದ್ದುದರ ಪರಿಣಾಮವೆಂದು ಊರವರು ನಂಬುತ್ತಿದ್ದರು. ಅವರ ದೃಷ್ಟಿಯಲ್ಲಿ, ಊರಲ್ಲಿ ನಡೆಯುವ ಯಾವತ್ತೂ ಅನಿಷ್ಟ ಸಂಗತಿಗಳಿಗೆ ಅವಳೇ ಕಾರಣಳಾದರೂ ಅವಳ ನಾಲಿಗೆಗೆ ಹೆದರಿ

ಯಾರೂ ಅವರ ಪ್ರಸ್ತಾಪವನ್ನು ಮಾಡುತ್ತಿರಲಿಲ್ಲ. ಎಲ್ಲರೂ ಆಕೆಗೆ ಅಂಜುತ್ತಿದ್ದರು. ಅತ್ತೆ–ಸೊಸೆಯರು ದಿನಾಲೂ ಜಗಳಾಡುತ್ತಿದ್ದರೂ ಯಾರೊಬ್ಬರಿಗೂ ನಡುವೆ ಬಂದು ಬಿಡಿಸಲು ಧೈರ್ಯವಾಗುತ್ತಿರಲಿಲ್ಲ.

"ಒಂದು ದಿನ ರಾತ್ರಿಯಿಡೀ ಅವರಿಬ್ಬರೂ ಜಗಳಾಡಿದರು. ಅವರ ಬೊಬ್ಬೆಯ ಮಾತು ಊರಿಗೆಲ್ಲಾ ಮರುದಿನ ಮುಂಜಾನೆಯ ತನಕ ಕೇಳಿಸುತ್ತಿತ್ತು. ಸೂರ್ಯ ದಿಗಂತ ದಾಟಿ ಮೇಲಕ್ಕೆ ಬರುವ ವೇಳೆಯಲ್ಲಿ ಅವರ ಮಾತು ಒಮ್ಮೆಲೆ ನಿಂತದ್ದನ್ನು ಕಂಡು ಕುತೂಹಲದಿಂದ ಒಬ್ಬನು ಅವರ ಮನೆಯೊಳಗೆ ಹೋದನು. ಅಲ್ಲಿ ಕಂಡ ದೃಶ್ಯ ಅವನಿಗೆ ಆಶ್ಚರ್ಯವನ್ನುಂಟು ಮಾಡಿತು. ಅತ್ತೆ–ಸೊಸೆಯರಿಬ್ಬರೂ ಮನೆಯ ಜಗಲಿಯ ಮೇಲೆ ಸತ್ತುಬಿದ್ದಿದ್ದರು.

ಮಾಟಗಾತಿ ಮುದುಕಿಯೂ ಅವಳ ಸೊಸೆಯೂ ಸತ್ತುಬಿದ್ದಿದ್ದಾರೆಂಬ ಸುದ್ದಿ ಊರಲ್ಲೆಲ್ಲಾ ಹಬ್ಬಿತು. ಮಾಟಗಾತಿಯ ಸಾವಿನಿಂದಾಗಿ ಜನರು ಸಮಾಧಾನದ ನಿಟ್ಟುಸಿರು ಬಿಟ್ಟರು. ಊರ ಗೌಡರು ಬಂದು ಶವಗಳನ್ನು ನೋಡಿ ಕೂಡಲೇ ಅಂತ್ಯಸಂಸ್ಕಾರ ಮಾಡಬೇಕೆಂದು ಊರವರಿಗೆ ಹುಕುಂ ಮಾಡಿದರು. ಅಗ್ನಿಸಂಸ್ಕಾರದ ತಯಾರಿಯೂ ತಡವಿಲ್ಲದೆ ಆಯಿತು. ಎರಡು ಬಿದಿರು ತಂದು ಸಿದಿಗಿ ಕಟ್ಟಿ ಅದರ ಮೇಲೆ ಎರಡೂ ಹೆಣಗಳನ್ನು ಇಟ್ಟು ನಾಲ್ವರು ಸಶಕ್ತ ಯುವಕರು ಅವನ್ನು ಸ್ಮಶಾನಕ್ಕೆ ಸಾಗಿಸಿದರು. ಸತ್ತವರಿಗಾಗಿ ಮರುಗುವವರು ಯಾರೂ ಇರಲಿಲ್ಲ. ಸಿದಿಗೆಯನ್ನು ಹೊತ್ತ ನಾಲ್ವರಲ್ಲದೆ ಇತರರು ಯಾರೂ ಸ್ಮಶಾನಕ್ಕೆ ಹೋಗಲಿಲ್ಲ.

ಸ್ಮಶಾನದಲ್ಲಿ ಸಿದಿಗಿ ಇಳಿಸಿ ಶವಗಳಿಗೆ ಬೆಂಕಿ ಹಚ್ಚಬೇಕೆನ್ನುವಾಗ ನೋಡುತ್ತಾರೆ– ಯಾರೊಡನೆಯೂ ಕಡ್ಡಿ ಪೆಟ್ಟಿಗೆ ಇಲ್ಲ. ಸರಿ, ಒಬ್ಬ ಅದನ್ನು ತರಲು ಊರ ಕಡೆ ಹೋದ. ಅವನು ತಿರುಗಿ ಬರುವ ಹಾದಿ ನೋಡುತ್ತಾ ಕುಳಿತ ಮೂವರು ತಮ್ಮೊಳಗೆ ಮಾತಾಡಹತ್ತಿದರು.

"ಏಕಾ ಏಕೀ ಒಂದೇ ರಾತ್ರಿ ಇಬ್ಬರೂ ಹೇಗೆ ಸತ್ತರು?" ಒಬ್ಬ ಉದ್ಗರಿಸಿದ.

"ಆ ಮಾಟಗಾತಿ ವಶಪಡಿಸಿಕೊಂಡಿದ್ದ ಭೂತಗಳ ಪೈಕಿ ಒಂದು ಸಿಟ್ಟಿಗೆದ್ದು ಅವರ ಕತ್ತು ಹಿಸುಕಿರಬೇಕು," ಇನ್ನೊಬ್ಬ ತನ್ನ ಅಭಿಪ್ರಾಯ ವ್ಯಕ್ತ ಮಾಡಿದ.

"ಅಗ್ನಿ ಕೊಡುವ ತನಕ ಮಾತಾಡಬೇಡಿರೊ," ಎಂದ ಮೂರನೆಯವನು. ಇವರ ವಿಷಯ



ನಾಟಕವಾಡುತ್ತಾರೆಂದು ತಿಳಿದರೆ ಸತ್ತವರು ಎದ್ದು ಬರುವರೆಂಬ ಭಯವಿದ್ದು ಹಾಗೆ ಬಿಟ್ಟರೆಂದು ನಾನಾಗ ಹೇಳಿದ.

ಆ ಭೀತಿ ವಾಸ್ತವಿಕವೋ ಎಂಬಂತೆ ಮೂವರೂ ಮೌನ ತಳೆದರು.

ಒಂದೈದು ನಿಮಿಷಗಳಲ್ಲಿ ಚಟ್ಟದೊಳಗೆ ಸರಸರ ಶಬ್ದವಾಯಿತು: ಏನೆಂದು ಅದರ ಕಡೆಗೆ ದೃಷ್ಟಿ ಹಾಯಿಸುವಾಗ ಒಂದು ಶವದಿಂದ, "ಒಳ್ಳೆದು ಹೆಣ್ಣೇ, ನೀನು ಎರಡು ತಿನ್ನು; ನಾನು ಒಂದು ತಿನ್ನುವೆನು," ಎಂಬ ಮಾತು ಹೊರಬಿದ್ದಂತೆ ಕೇಳಿಸಿತು. ಈ ಮೂವರೂ ವಿಸ್ಮಯಗೊಂಡು ಇದೇನೆಂಬ ಪ್ರಶ್ನಾರ್ಥಕ ಮುಖಭಾವದಿಂದ ಒಬ್ಬರನ್ನೊಬ್ಬರು ನೋಡ-ಹತ್ತಿದರು. ಅಷ್ಟರಲ್ಲಿ ಸೊಸೆಯ ಶವದಿಂದ ಉತ್ತರ ಬಂತು: "ಇದನ್ನು ಮೊದಲೇ ಯಾಕೆ ಹೇಳಲಿಲ್ಲ ?"

ಇನ್ನು ಸಂಶಯಕ್ಕೆ ಎಡೆ ಇರಲಿಲ್ಲ. ಸತ್ತವರು ಇಷ್ಟರಲ್ಲೇ ಭೂತಗಳಾಗಿ ಮೂವರನ್ನೂ ತಿಂದು ಹಾಕುವ ಎತ್ತುಗಡೆಯಲ್ಲಿದ್ದಾರೆಂಬುದು ಸ್ಪಷ್ಟ-ವಾಗಿತ್ತು. ಭೀತಿಯಿಂದ ಅವರ ಕೈಕಾಲುಗಳು ತಣ್ಣಗಾದವು. ಬಾಯಿಂದ ಮಾತು ಹೊರಡಲಿಲ್ಲ. ಕೊನೆಗೆ ಇವರಲ್ಲೊಬ್ಬನು ಧೈರ್ಯ ತಂದು ಕೊಂಡು, "ದೇವಾ, ರಕ್ಷಿಸು," ಎಂದು ಬೊಬ್ಬಿಡುತ್ತಾ ಊರ ಕಡೆಗೆ ಓಡಿದನು. ಅವನು ಓಡಿದ್ದನ್ನು ನೋಡಿ ತುಸು ಧೈರ್ಯ ತಂದು ಕೊಂಡು ಉಳಿದಿಬ್ಬರೂ ಅವನನ್ನು ಹಿಂಬಾಲಿಸಿದರು. ದಾರಿಯಲ್ಲಿ ಅವರಿಗೆ ಕಡ್ಡಿ ಪೆಟ್ಟಿಗೆ ತರಲು ಹೋಗಿದ್ದ ಮನುಷ್ಯ ಎದುರಿಗೆ ಸಿಕ್ಕಿದ. ಅವನನ್ನು ನೋಡಿ, "ಒಳ್ಳೇ ಮನುಷ್ಯ ನೀನು. ನಮ್ಮನ್ನು ಭೂತಗಳ ಬಾಯಿಗೆ ಕೊಟ್ಟು ನೀನು ಪಾರಾಗುವ ಪ್ರಯತ್ನ ಮಾಡಿದೆ," ಎಂದು-ದ್ಗರಿಸಿದರು.

"ಹಾಂದರೆ ಆದದ್ದಾದರೂ ಏನು ?" ಅವನು ಪ್ರಶ್ನಿಸಿದ.

"ಆಗುವದೇನು ? ಸತ್ತ ಆ ಮಾಟಗಾತಿಯರು ಭೂತಗಳಾಗಿ ನಮ್ಮನ್ನು ತಿಂದುಹಾಕಲು ಹೊರ-ಟಿವೆ," ಎಂದು ಗಡಿಬಿಡಿಯಿಂದ ಹೇಳಿ ಅವರು ಪುನಃ ಓಡಹತ್ತಿದರು. ಅದನ್ನು ನೋಡಿ ಈ ನಾಲ್ಕನೆಯವನೂ ಅವರ ಹಿಂದಿನಿಂದಲೇ ಓಡ-ಹತ್ತಿದ. ಆ ನಾಲ್ವರೂ ಭೂತ–ಭೂತ ಎಂದು ಬೊಬ್ಬಿಡುತ್ತಾ ತಮ್ಮ ಮನೆಗಳಿಗೆ ಮುಟ್ಟಿದಾಗ, ಆಯಾಸ–ಭೀತಿಗಳಿಂದ ಬಳಲಿ ಬೆಂಡಾಗಿ ಧೊಪ್ಪನೆ ಬಿದ್ದುಬಿಟ್ಟರು. ತುಸು ಹೊತ್ತಿನ ಮೇಲೆ ಅವರು ಹೇಳಿದ ಸಂಗತಿ ಕೇಳಿದಾಗ ಇಡಿಯ ಊರಲ್ಲಿ ಭೀತಿಯ ಛಾಯೆ ಪಸರಿಸಿತು. "ಈ ಮಾಟಗಾತಿಯರು ಸತ್ತರೂ ನಮ್ಮ ಬೆನ್ನು ಬೆನ್ನು ಹತ್ತುವುದನ್ನು ಬಿಡಲಿಲ್ಲ. ಇನ್ನೇನು ಮಾಡುವುದು ?" ಎಂದು ಒಬ್ಬರು ಇನ್ನೊಬ್ಬ-ರನ್ನು ಕೇಳಹತ್ತಿದರು. ಊರಲ್ಲೆಲ್ಲ ಹಾಹಾ-ಕಾರವೆದ್ದಿತು. ಕೆಲವು ಉತ್ಸಾಹಿ ತರುಣರು ನಿಜಪರಿಸ್ಥಿತಿ ಏನೆಂಬುದನ್ನು ತಿಳಿದುಕೊಳ್ಳುವ ಕುತೂಹಲದಿಂದ ಸ್ಮಶಾನದೆಡೆಗೆ ಹೋದರು. ಅಲ್ಲಿ ನೋಡುತ್ತಾರೇನು? ಶವಗಳು ಮಾಯ-ವಾಗಿದ್ದವು. ಸಿದಿಗಿ ಅಸ್ತವ್ಯಸ್ತವಾಗಿತ್ತು. ಏನೋ ಚಮತ್ಕಾರ ನಡೆದಿದೆ ಎಂದು ಅವರಿಗೆ ಖಾತ್ರಿಯಾಯಿತು. ಆದರೆ ಶವಗಳು ಎಲ್ಲಿಗೆ ಹೋದವೆಂಬ ಸಮಸ್ಯೆ ಮಾತ್ರ ಬಗೆಹರಿಯ-ಲಿಲ್ಲ.

ಆ ದಿನ ಯಾವುದೇ ಅನಾಹುತ ಸಂಭವಿಸ-ದಿದ್ದುದರಿಂದ ಜನರು ತುಸು ಶಾಂತರಾದರು. ಮರುದಿನ ಊರ ಅಗಸ ಧೋಂಡು ಬಟ್ಟೆ ಗಂಟನ್ನು ಹೊತ್ತುಕೊಂಡು ನದಿಯ ಕಡೆಗೆ ಹೋದ. ಅವನು ಬಟ್ಟೆ ಒಗೆಯುವ ಜಾಗ ಸ್ಮಶಾನದ ಸಮೀಪವಿತ್ತು. ಸೂರ್ಯಾಸ್ತ-ದೊಳಗೇ ತನ್ನ ಕೆಲಸ ಮುಗಿಸಬೇಕೆಂದು ಅವನು ಬೇಗ ಬೇಗ ಒಗೆದ ಬಟ್ಟೆಗಳನ್ನು ಅಲ್ಲೇ ಒಣಗ-ಲಿಕ್ಕೆ ಹಾಕುತ್ತಿದ್ದ. ಕೆಲಸ ಮಾಡುತ್ತಿರು-ವಂತೆಯೇ ಅವನ ಮನಸ್ಸಿನಲ್ಲೂ ಭೂತಗಳ ವಿಚಾರವೇ ಸುತ್ತುತ್ತಿತ್ತು. 'ಆ ಭೂತಗಳು ಇಲ್ಲಿಗೆ ಬಂದರೆ ನಾನೇನು ಮಾಡಲಿ? ಜೀವ ಹಿಡಿದುಕೊಂಡು ಊರಿಗೆ ಓಡಿಹೋಗಲು ಸಾಧ್ಯವಾದೀತೆ? ಆ ಅತ್ತೆ–ಸೊಸೆ ಬಹಳ ಕೆಟ್ಟ ಜನ. ಅಂತೆಯೇ ಅವರು ಸತ್ತೊಡನೆ ದೇವರು ಅವರನ್ನು ಭೂತಗಳನ್ನಾಗಿಸಿಬಿಟ್ಟಿದ್ದಾನೆ. ಆ ಭೂತಗಳು ನಮ್ಮ ಊರಿಗೆ ಹಾನಿ ಮಾಡ-ಬಾರದು. ಅದಕ್ಕಾಗಿ ಮನೆಗೊಂದು ಕೋಳಿ

ಜೊತೆ ಊರವರೆಲ್ಲರೂ ಮಸೋಬನ ಗುಡಿಗೆ [illegible]

ಈ ರೀತಿ ಅವನ ವಿಚಾರಚಕ್ರ ತಿರುಗುತ್ತಿದ್ದಾಗ ಪತ್ತಿರದ ಆಲದ ಮರದ ಹಿಂದಿನಿಂದ [illegible] ಮಾಡಿ ಆಲಿಸಿದಾಗ, "ನೀವು ರಾತ್ರಿಯೇ ಯಾಕೆ ಹೇಳಲಿಲ್ಲ, ನಾನು ಒಂದು ತಿಂತೇನೆಂದು? ನೀವು ಒಂದು ತಿಂತೇನೆಂದಿದ್ದರೆ ಹೀಗೇಕಾಗುತ್ತಿತ್ತು?" ಈ ಶಬ್ದಗಳು ಅವನ ಕಿವಿಗೆ ಬಿದ್ದೊಡನೆ ಧೋಂಡು ಹೋ ಹೋ ಹೋ ಎಂದು ಬೊಬ್ಬಿಡುತ್ತಾ ಒಂದೇ ಸವನೆ ಊರ ಕಡೆಗೆ ಓಡಿದನು. ಊರಲ್ಲಿ ಪುನಃ ಗೋಂದಲ ಪ್ರಾರಂಭವಾಯಿತು. "ಏನಾಯಿತು? ಭೂ ತ ಗ ಳು ಯಾರನ್ನು ತಿಂದವು? ಯಾರು ಸತ್ತರು?" ಇಂತಹ ಪ್ರಶ್ನೆಗಳನ್ನು ಒಬ್ಬರಿಗೊಬ್ಬರು ಕೇಳಹತ್ತಿದರು. ಅಷ್ಟರಲ್ಲಿ ಒಬ್ಬನು ಫೌಜದಾರ ಸಾಹೇಬರು ಊರಿಗೆ ಬಂದಾರೆಂಬ ಸುದ್ದಿ ತಂದನು. ಜನರು ತುಸು ಧೈರ್ಯಗೊಂಡರು. ಅವರಲ್ಲಿ ಎಲ್ಲವನ್ನೂ ಅರಿಕೆ ಮಾಡೋಣ ಎಂದು ಗೌಡರು ಸೂಚಿಸಿದರು.

ಫೌಜದಾರ ಸಾಹೇಬರು ಒಂದು ಅಪರಾಧದ ತಪಾಸಣೆಗಾಗಿ ಆ ಊರಿಗೆ ಬಂದು ಗ್ರಾಮದ ಚಾವಡಿಯಲ್ಲಿ ಇಳಿದಿದ್ದರು. ಅವರ ಸಂಗಡ ನಾಲ್ವರು ಪೋಲಿಸರೂ ಇದ್ದರು. ಫೌಜದಾರ ಸಾಹೇಬರ ಕುದುರೆಯು ಹಿಂಗಾಲುಗಳಿಗೆ ಹಗ್ಗ [illegible] ಅಂಗಳದಲ್ಲಿ [illegible]ರು.

[illegible] ನಿಂತಿದ್ದವನ್ನು [illegible] ನಡೆಸಿದ್ದೀರೇನು?" ಎಂದು ಆ ಪೋಲೀಸ್ ಅಧಿಕಾರಿ ಸಹಜ ಧಿಮಾಕಿನಿಂದ ಬಂದವರನ್ನು ಕೇಳಿದರು.

"ನಿನ್ನೆ ಸರಕಾರ, ರಾತ್ರಿ ಇಬ್ಬರು ಹೆಂಗಸರು ಸತ್ತರು. ಮುಂಜಾನೆ ಅವರು ಭೂತವಾಗಿ ಊರನ್ನೇ ಸುಡಹತ್ತಿದ್ದಾರೆ," ಎಂದು ಗೌಡರು ಅರಿಕೆ ಮಾಡಿಕೊಂಡರು.

"ಏನೋ, ರಾತ್ರಿ ಸತ್ತ ಮನುಷ್ಯ [illegible] ನೋ? [illegible] ಕೆಟ್ಟಿದೆಯೋ ಹೇಗೆ?"

"ಅಗದಿ ಖರೇ ಅದೆ, ಸಾಹೇಬರೆ. ಎರಡೂ ಶವಗಳು ಸ್ಮಶಾನದ ಬಳಿಯಿಂದ ಮಾಯವಾದವು. ಈಗ ಮೂರು ಜನರ ಬಲಿ ಬೇಡುತ್ತವೆ."

"ಶವಗಳು ಎದ್ದು ನಡೆದವು! ಮೂವರ ಬಲಿ ಬೇಡುತ್ತವೆ! ಎಲ್ಲಾ ಚಮತ್ಕಾರಿಕ. ಈಗ ಶವಗಳು ಎಲ್ಲಿವೆ?" ಫೌಜದಾರ ಸಾಹೇಬರು ಎದ್ದು ನಿಂತು ತಮ್ಮ ಸಮವಸ್ತ್ರವನ್ನು ಸರಿಪಡಿಸಿಕೊಳ್ಳುತ್ತಾ ಕೇಳಿದರು.

ಗೌಡರು ಧೊಂಡೂನನ್ನು ಮುಂದೆ ಮಾಡಿ, "ನದಿ ತೀರದಲ್ಲಿ ಆಲದ ಮರದ ಕೆಳಗೆ ಇವೆ ಎಂದು ಇವನು ಹೇಳುತ್ತಾನೆ," ಎಂದು ಭಯದಿಂದ ನುಡಿದರು.

"ಹೌದೇನೋ?" ಎಂದು ಫೌಜದಾರರು ಗರ್ಜಿಸಿದರು. ಹೌದೆಂದು ಧೋಂಡು ತಲೆ ತಗ್ಗಿಸಿದ ಮೇಲೆ ಅವರು ಪೋಲೀಸರನ್ನು ಕರೆದು, "ನೋಡಿ ಬನ್ನಿರೋ, ಏನು ಸಮಾಚಾರ," ಎಂದು ಹುಕುಂ ಮಾಡಿ, ಕೂಡಿದ ಜನರನ್ನುದ್ದೇಶಿಸಿ, "ಈ ಪೋಲೀಸರಿಗೆ ನಿಮ್ಮ ಭೂತಗಳನ್ನು ತೋರಿಸಿರಿ. ಸುಳ್ಳಾದರೆ ನಿಮ್ಮ ಚರ್ಮ ಸುಲಿಸಿಬಿಟ್ಟೇನು," ಎಂದು ಗದರಿಸಿದರು.

ಪೋಲೀಸರು, ಊರವರು ಎಲ್ಲರೂ ಧೋಂಡೂನನ್ನು ಮುಂದೆ ಹಾಕಿಕೊಂಡು ನದಿಯ ಕಡೆಗೆ ಹೊರಟರು. ಆದರೆ ಅಲ್ಲಿ ಹೋಗಿ ನೋಡಿದರೆ ಏನೂ ಇಲ್ಲ. ಒಂದು ರೀತಿಯಿಂದ ಜನತೆಗೆಲ್ಲ ನಿರಾಶೆಯೇ ಆಯಿತು. ಪೋಲೀಸರು ಜನತೆಯ ಪರಿಹಾಸ್ಯ ಮಾಡಹತ್ತಿದರು.

ಅಷ್ಟರಲ್ಲಿ ಮುದುಕ ಪೀರಾಜಿ, "ಎಲಾ, ಅಲ್ಲಿ ನೋಡಿರಿ," ಅಂದ.


"ಅಲ್ಲಿ ಅಂದರೆ ಎಲ್ಲಿ?" ಎಲ್ಲರ ಪ್ರಶ್ನೆ.

"ನೋಡಿರಿ, ಆ ಕಲ್ಲುಗಳನ್ನು."

ಪಿರಾಜಿ ತೋರಿಸಿದ ಸ್ಥಳದಲ್ಲಿ ಎರಡು ಉದ್ದನ್ನ ಸಪಾಟ ಕಲ್ಲುಗಳಿದ್ದವು. ಅವುಗಳ ಮೇಲೆ ಒಣ ಹಾಕಿದ ಸೀರೆಗಳನ್ನು ಯಾರೊ ಎಳೆಯುತ್ತಿದ್ದರು. ಇದನ್ನು ನೋಡಿ ಧೊಂಡು "ಭೂತ!" ಎಂದು ಬೊಬ್ಬಿಟ್ಟ. ಅದನ್ನು ಕೇಳಿದೊಡನೆ ಹೋದ ಜನರೆಲ್ಲರೂ ಊರ ಕಡೆಗೆ ಓಡ

ಹತ್ತಿದರು. ಎಲ್ಲರ ಮುಂದೆ ಪೋಲೀಸರು ಓಡುತ್ತಿದ್ದರು. ಓಡುತ್ತಿದ್ದವರು, "ಬಂತು, ಬಂತು, ಭೂತ ಬಂತು!" ಎಂದು ರಕ್ತ ಮೀರಿ ಬೊಬ್ಬಿಡುತ್ತಿದ್ದರು. ಜನರು ಊರನ್ನು ತಲಪುವ ಮೊದಲೇ ಅವರ ಭಯಂಕರ ಬೊಬ್ಬೆ ಊರನ್ನು ಮುಟ್ಟಿತು. ಈ ರೀತಿ ಬೊಬ್ಬಿಡುತ್ತಾ ಪೋಲೀಸರೂ ಇತರರೂ ಒಂದೇ ಸಮನೆ ಓಡಿ ಬರುವುದನ್ನು ನೋಡಿ ಫೌಜದಾರರೂ ಏನೊ ಭಯಂಕರ ಘಟನೆ ನಡೆಯಲಿದೆ ಎಂದು ದಿಗಿಲುಗೊಂಡರು. ಅಲ್ಲದೆ ತಾವು ಸಹ ಪಲಾಯನ ಸೂತ್ರವನ್ನೇ ಕೈಕೊಳ್ಳುವುದು ಒಳಿತೆಂದು ಭಾವಿಸಿ ತಮ್ಮ ಕುದುರೆಯ ಮೇಲೆ ಹಾರಿ ಕುಳಿತು ಚಾಬೂಕಿನಿಂದ ಅದಕ್ಕೆ ಬಲವಾದ ಏಟು ಕೊಟ್ಟರು. ಭೀತಿಯುಂಟಾದ ಗೊಂದಲದಲ್ಲಿ ಕುದುರೆಯ ಹಿಂಗಾಲುಗಳನ್ನು ಹಗ್ಗದಿಂದ ನೆಲದಲ್ಲಿ ಹೂತ ಗೂಟಗಳಿಗೆ ಕಟ್ಟಿದ್ದು ಅವರ ನೆನಪಿಗೆ ಬರಲೇ ಇಲ್ಲ. ಚಾಟಿಯ ಏಟು ಬಿದ್ದೊಡನೆ ಕುದುರೆ ಓಡಲುದ್ಯುಕ್ತವಾಯಿತು. ಓಡುವ ರಭಸದಲ್ಲಿ ಆ ಗೂಟಗಳು ನೆಲದಿಂದ ಕಿತ್ತುಹೋದವು. ಕುದುರೆ ನಾಗಾಲೋಟದಿಂದ ಓಡುವಾಗ ಆ ಹಗ್ಗ ಕಟ್ಟಿದ ಗೂಟಗಳು ಫೌಜದಾರ ಸಾಹೇಬರ ಬೆನ್ನಿಗೆ ತಾಲಬದ್ಧವಾಗಿ ಬಡಿಯಹತ್ತಿದವು. ಫೌಜದಾರ ಸಾಹೇಬರಿಗೆ ಹಿಂತಿರುಗಿ ನೋಡುವ ಧೈರ್ಯ ಸಹ ಉಳಿಯಲಿಲ್ಲ. ಯಾರೋ ತನ್ನ ಬೆನ್ನಿಗೆ ಹೊಡೆಯುತ್ತಿದ್ದಾರೆ. ಅದು ಭೂತವೇ ಇರಬೇಕು ಎಂಬ ಭೀತಿಯಿಂದ ಫೌಜದಾರ ಸಾಹೇಬರ ಬುದ್ಧಿಯೇ ನಷ್ಟವಾಯಿತು. ಅವರು ಇನ್ನಷ್ಟು ಜೋರಿನಿಂದ ಕುದುರೆಯನ್ನು ಓಡಿಸಹತ್ತಿದರು. ಕೊನೆಗೆ ದಾರಿಯಲ್ಲಿದ್ದ ಒಂದು ದೊಡ್ಡ ಕಲ್ಲಿಗೆ ಕುದುರೆಯು ಎಡವಿ ಕುದುರೆ, ಸವಾರ ಇಬ್ಬರೂ ಧೊಪ್ಪನೆ ಬಿದ್ದುಬಿಟ್ಟರು.

ನದಿಯ ಕಡೆಯಿಂದ ಬರುವ ಜನರ ಈ ಬೊಬ್ಬೆ ಕೇಳಿ ಊರಲ್ಲಿದ್ದ ಜನರೂ ಗಾಬರಿ



ಗೋವರು. ಗಂಡಸರು ಮಾತ್ರವಲ್ಲದೆ ಹೆಂಗಸರು, ಮಕ್ಕಳು ಸಹ ಅವರೊಡನೆ ಪೋಲೀಸರ ಮುಂದಾಳುತನದಲ್ಲಿ ಫೌಜದಾರರು ಹೋದ ಕಡೆಗೇ ಓಡಿದರು. ಫೌಜದಾರರು ಬಿದ್ದೆಡೆಗೆ ಬರುವ ವರೆಗೆ ಯಾರೂ ಹಿಂದಿರುಗಿ ನೋಡಲಿಲ್ಲ. ಬಳಲಿ ಬೆಂಡಾಗಿದ್ದ ಅವರು ಫೌಜದಾರರನ್ನು ಎಬ್ಬಿಸಿದ ಬಳಿಕ ಅಲ್ಲೇ ತುಸು ಹೊತ್ತು ಮೂಗಾಣದಂತೆ ಶೆಪ್ಪಗೆ ನಿಂತಿದ್ದರು.

ಅಷ್ಟರಲ್ಲಿ, "ಓಡಬೇಡಿರಿ, ನಿಲ್ಲಿರಿ," ಎಂದು ಕೂಗುತ್ತಾ ಸಂತಾಜಿ ಅಲ್ಲಿಗೆ ಬಂದ. ಅವನನ್ನು ನೋಡಿ ಗೌಡರು, "ಯಾವಾಗ ಬಂದಿ ಸಂತಾಜಿ?" ಎಂದು ಕೇಳಿದರು. "ಇಂದೇ ಮುಂಜಾನೆ," ಎಂದವನು ಉತ್ತರಿಸಿದ.

"ನೀನು ಬಂದದ್ದು ಒಳಿತಾಯಿತು ನೋಡು. ಇದೆಲ್ಲ ನಿನ್ನ ತಾಯಿ—ಹೆಂಡತಿ ಮಾಡಿದ ಅವಾಂತರ!"

"ಅವರೇನು ಮಾಡ್ಯಾರ?"

"ಅವರೇನು ಮಾಡ್ಯಾರ! ಇನ್ನೇನು ಮಾಡಬೇಕು? ಸತ್ತು ಭೂತಗಳಾಗಿ ಊರನ್ನೇ ನುಂಗಲು ಹೊರಟಿದ್ದಾರೆ."

"ಇಲ್ಲ ಗೌಡರೆ, ಹಾಗೇನೂ ಆಗಿಲ್ಲ. ಸುಳ್ಳೇ ಗುಲ್ಲು ಎಬ್ಬಿಸಿದ್ದೀರಿ."

"ಹಾಂದರೆ, ಅವರಿಬ್ಬರು ಎಲ್ಲಿ ಇದ್ದಾರೆ ಈಗ?"

"ಮನೆಯಲ್ಲಿ."

"ಅವರು ಸಾಯಲಿಲ್ಲ, ಭೂತವಾಗಲಿಲ್ಲ ಅಂತೀಯೇನು?"

"ನಿಶ್ಚಯವಾಗಿ."

"ಆದರೆ, ಅವರ ಶವಗಳನ್ನು ಸಾಲ್ವರು ನೋಡಿದ್ದಾರಲ್ಲ? ಶವಗಳು ಅಲ್ಲಿಂದ ಮಾಯವಾದವು. ಇದೆಲ್ಲಾ ಹೇಗಾಯಿತು? ನೀನು ಒಂದು ತಿನ್ನು, ನಾನು ಎರಡು ತಿಂತೇನೆ ಎಂದು



ಸಂಕ್ರಾಂತಿ ಅಗರ್‌ಬತ್ತಿಗಳ ಸುಗಂಧ ಮನಶ್ಶಾಂತಿಯನ್ನು ತರುವ ವಿನೂತನ ಅನುಭವ

ಪ್ರಶಾಂತಿಯ ಕ್ಷಣಗಳಿಗಾಗಿ, ಸಮ್ಮೋಹಕ ಶಾಂತಿಯನ್ನು ಪಡೆಯಲು ಅಂತಹ ಕ್ರಿಯಾತ್ಮಕ ಸುಗಂಧ ಬೀರುವ ಅಗರಬತ್ತಿಗಳನ್ನು ಹಚ್ಚುವುದಕ್ಕಿಂತ ಸಾಟಿ ಬೇರೊಂದಿಲ್ಲ.

ಅದಕ್ಕಾಗಿ ಸಂಕ್ರಾಂತಿ ಅಗರಬತ್ತಿಗಳನ್ನೇ ಹಚ್ಚಿರಿ.

ಸಂಕ್ರಾಂತಿ
ಅಗರಬತ್ತಿ ಕಂಪೆನಿ
ನಂ. 33 ಪಿಳ್ಳಪ್ಪ ಲೇನ್,
ನಗರ್ತರಪೇಟೆ ಕ್ರಾಸ್
ಬೆಂಗಳೂರು-560 002

SAC 1 77 KAN

ಶವದಿಂದಲೇ ಶಬ್ದಗಳು ಹೊರಟವಲ್ಲಾ. ಸತ್ತವರು ಭೂತವಾಗಿರದಿದ್ದರೆ ಸತ್ತ ಶವದಿಂದ ಮಾತು ಹೊರಡುವುದು ಹೇಗೆ?"

"ಅದೆಲ್ಲ ಚಮತ್ಕಾರಿಕ ಕತೆ."

"ಏನದು ಬೇಗ ಹೇಳು."

"ಹೇಳುತ್ತೇನೆ. ಮೊದಲು ಊರಿಗೆ ಹಿಂತಿರುಗೋಣ."

ಎಲ್ಲರೂ ಮರಳಿದರು. ಫೌಜದಾರ ಸಾಹೇಬರನ್ನು ಪೋಲೀಸರೂ ಗೌಡರೂ ಕೈ ಹಿಡಿದು ಮೆಲ್ಲಗೆ ನಡೆಸಿ ತಂದು ಚಾವಡಿಯಲ್ಲಿ ಕೂಡಿಸಿದರು. ಅವರ ಬೆನ್ನು ಬಾತು ಹೋಗಿ ಕೆಲವು ಕಡೆ ರಕ್ತ ಸಹ ಬಂದಿತ್ತು. ಗೌಡರು ಬೆನ್ನಿಗೆ ಎಣ್ಣೆ ಮತ್ತು ಅರಿಷಿಣಪುಡಿ ಸವರಿದರು. ಊರವರೆಲ್ಲ ಚಾವಡಿಯ ಸುತ್ತ ಕೂಡಿದರು.

"ಈಗ ಹೇಳು, ಏನು ಅವಾಂತರ ನಡೆಯಿತು?" ಫೌಜದಾರರು ಕೇಳಿದರು.

"ಅವಾಂತರ ಏನೂ ಇಲ್ಲ," ಸಂತಾಜಿ ನಡೆದ ಸಂಗತಿ ಹೇಳಲು ಸುರು ಮಾಡಿದ:

"ಮನೆಯಲ್ಲಿ ಕಾಳೇ ಇರಲಿಲ್ಲ. ಇದ್ದ ಬೇರೆ ಬೇರೆ ಕಾಳು ಸೇರಿಸಿ ಹಿಟ್ಟು ಮಾಡಿ ಮೂರು ಸಣ್ಣ ರೊಟ್ಟಿ ಮಾಡಿದರು. ಆ ಮೂರೂ ರೊಟ್ಟಿಗಳಿಂದ ಇಷ್ಟೆಲ್ಲಾ ಅವಾಂತರವಾಯಿತು".

"ಅಂದರೆ ಹೇಗೆ?" ಪಾಟೀಲರು ಉತ್ಸುಕತೆಯಿಂದ ಕೇಳಿದರು.

"ಸಾಹೇಬರೆ, ಅತ್ತೆ–ಸೊಸೆ ಇಬ್ಬರೂ ಹಟಮಾರಿಗಳು. ಮೂರು ಭಕ್ಕರಿಗಳಲ್ಲಿ ಎರಡು ಯಾರು ತಿನ್ನಬೇಕು ? ಒಂದು ಯಾರು ತಿನ್ನಬೇಕು? ಎಂಬ ವಿಷಯದಲ್ಲಿ ಇಬ್ಬರ ಮನಸ್ಸಿನಲ್ಲಿ ವಿಚಾರ ಬೇರೆಯೇ ಬಂತು. ತಾನು ಅತ್ತೆಗೆ ಊಟ ಬಡಿಸಿದರೆ ಆಕೆಗೆ ಎರಡು ರೊಟ್ಟಿ ಹಾಕಿ ತಾನು ಒಂದನ್ನೇ ತಿನ್ನಬೇಕಾದೀತೆಂಬ ಭಯ ಸೊಸೆಗೆ–ಅರ್ಥಾತ್ ನನ್ನ ಹೆಂಡತಿಗೆ. ತಾನು ಮೊದಲು ಸೊಸೆಗೆ ಊಟ ಬಡಿಸಿದರೆ ಆಕೆಗೆ ಎರಡು ರೊಟ್ಟಿ ಹಾಕಿ ತಾನು ಒಂದರಲ್ಲೇ ತೃಪ್ತಳಾಗಬೇಕಾದೀತೆಂಬ ಭಯ ಆ ಕ್ಷಣಕ್ಕೇ ಅತ್ತೆಯನ್ನು, ಅಂದರೆ ನನ್ನ ತಾಯಿಯನ್ನು, ಕಾಡುತ್ತಿತ್ತು. ಆ ಬಗ್ಗೆ ಅವರಲ್ಲಿ ಹಾಗೇ ಮನಸ್ತಾಪವಾಗಿ ಭಾರೀ ಜಗಳವೇ ಆಯಿತು. ಇಬ್ಬರೂ ಹಸಿದ ಹೊಟ್ಟೆಯಲ್ಲೇ ಮಲಗಿದರು. ಹಟಮಾರಿತನದಲ್ಲಿ ಇಬ್ಬರಲ್ಲಿ ಯಾರನ್ನು ಯಾರು ಮೀರಿಸುತ್ತಾರೆಂದು ಹೇಳುವುದೇ ಅಸಾಧ್ಯ. ಸತ್ತರೂ ಚಿಂತೆಯಿಲ್ಲ, ತಾನು ಮೊದಲು ಕಣ್ಣು ತೆರೆಯುವುದಿಲ್ಲ, ಬಾಯಿ ಬಿಡುವುದಿಲ್ಲ ಎಂದಿಬ್ಬರೂ ತಮ್ಮ ತಮ್ಮ ಮನಸ್ಸಿನಲ್ಲೇ ನಿರ್ಧರಿಸಿ ಬಿಟ್ಟಿದ್ದರು. ಅಂತೆಯೆ ಸ್ಮಶಾನಕ್ಕೊಯ್ದರೂ ಇಬ್ಬರೂ ಬಾಯಿ ತೆರೆಯಲಿಲ್ಲ. ಆದರೆ ಕೊನೆಗೆ ಮುದುಕಿ ಅಂಜಿದಳು. ಈಗ ಬಾಯಿ ಬಿಡದಿದ್ದರೆ ಹೆಣಗಳೆಂದು ತಮ್ಮಿಬ್ಬರನ್ನೂ ಜನ ಸುಟ್ಟು ಬಿಡುವುದು ಖಂಡಿತ. ವಿನಾಕಾರಣ ಸಾಯಬೇಕಾದೀತಲ್ಲ ಎಂಬ ಅರಿವಾಗಿ ಅವಳೇ ಮೊದಲು ಮಾತಾಡಿದಳು."

"ಏನು ಹೇಳಿದಳು?" ಫೌಜದಾರ ಸಾಹೇಬರು ಕೇಳಿದರು.

"ನೀನು ಎರಡು ತಿನ್ನು, ನಾನು ಒಂದು ತಿಂತೇನೆ."

ಸ್ಮಶಾನಕ್ಕೆ ಚಟ್ಟ ಹೊತ್ತುಕೊಂಡ ಹೋದವರ ಪೈಕಿ ಒಬ್ಬ ಉದ್ಗರಿಸಿದ: "ಹೀಗೋ? ನಾವು ಅಲ್ಲಿ ಹೆದರಿದ್ದೆವು. ನೀನು ಇಬ್ಬರನ್ನು ತಿನ್ನು, ನಾನು ಒಬ್ಬನನ್ನು ತಿಂತೇನೆ ಅಂತ ಹೇಳುತ್ತಾಳೆಂದು ನಾವು ಅರ್ಥ ಮಾಡಿದೆವಲ್ಲ!"

ಕೂಡಿದ ಜನರು ಸಮಾಧಾನದ ದೀರ್ಘಶ್ವಾಸ ಬಿಟ್ಟು ತಮ್ಮ ತಮ್ಮ ಮನೆಗಳಿಗೆ ಮರಳಿ ಹೋದರು. ಫೌಜದಾರ ಸಾಹೇಬರು ಸುಸ್ತಾಗಿ ಬಿಟ್ಟಿದ್ದರು. ಅವರಲ್ಲಿಗೆ ಬಂದದ್ದು ಇನ್ನಾವುದೋ ಒಂದು ಅಪರಾಧ ಚೌಕಶಿಗೆಂದು. ಅದನ್ನು ಬಿಟ್ಟು ಮರುದಿನ ತಮ್ಮ ಠಾಣೆಗೆ ಹಿಂದಿರುಗಿದರು.

ಇದು ಮಿಂಚೇಕರ ಹೇಳಿದ ಮೂರು ರೊಟ್ಟಿಗಳ ಕಥೆ.

ಕಾಣದ ಲೋಕದ ಕೇಳಿದ ಸುದ್ದಿ

ಜಿ ಟಿ ನಾರಾಯಣ ರಾವ್

ಈ ವರ್ಷದ ಮಾರ್ಚ್ ೧೮ರ ದೈನಿಕಗಳಲ್ಲಿ ಪ್ರಕಟವಾದ ಮತ್ತು ಅದೇ ಸುಮಾರಿಗೆ ಆಕಾಶವಾಣಿಯಲ್ಲಿ ಪ್ರಸಾರವಾದ ಹೊಸ ಸುದ್ದಿ ಹೆಚ್ಚಿನ ಜನರ ಲಕ್ಷ್ಯ ಸೆಳೆಯದೆ 'ಅಪತ್ರಿಕಾ ವಾರ್ತೆ'ಯಾಗಿ ಮಾಸಿಹೋಯಿತು. ಮಾರ್ಚ್ ೧೯ರ ನಿರ್ಣಾಯಕ 'ಯುದ್ಧ' ಸಿದ್ಧತೆಗಳ ಕಣ್ಣು ಕೋರೈಸುವ ಮತ್ತು ಕಿವಿ ಗಡಚಿಕ್ಕುವ ಗಲಭೆಗಳ ಹಿನ್ನೆಲೆಯಲ್ಲಿ ಕಾಣದ ಲೋಕದ ಈ ಸುದ್ದಿ ಕಾಣುವ ಲೋಕದ ಗುದ್ದಾಟದ ಎದುರು ಸೋತದ್ದು ನಿರೀಕ್ಷಿತವೇ.

ಸುದ್ದಿಯ ಸಾರವಿಷ್ಟು: "ಬೆಂಗಳೂರಿನಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆ್ಯಸ್ಟ್ರೊಫಿಸಿಕ್ಸಿನ ಖಗೋಳವಿಜ್ಞಾನಿಗಳಾದ ಡಾ. ಜೆ. ಸಿ. ಭಟ್ಟಾಚಾರ್ಯ ಮತ್ತು ಶ್ರೀ ಕುಪ್ಪುಸ್ವಾಮಿಯವರು ಕಾವಲೂರಿನ ದೂರದರ್ಶಕದಿಂದ ವೀಕ್ಷಿಸುತ್ತ ಮಾರ್ಚ್ ೧೦ರ ರಾತ್ರಿ ಯುರೇನಸ್ ಗ್ರಹದ ನೂತನ ಉಪಗ್ರಹವೊಂದನ್ನು ಆವಿಷ್ಕರಿಸಿದರು."

ಖಗೋಳವಿಜ್ಞಾನದಲ್ಲಿ ಇದೊಂದು ಮಹತ್ತ್ವದ ಘಟನೆ. ಭಾರತಕ್ಕೆ ಹೆಮ್ಮೆ ತರುವ ಸಾಧನೆ.

ಯುರೇನಸ್ ಎಲ್ಲಿದೆ?

ಕಾಣುವ ಸೌರವ್ಯೂಹಕ್ಕೂ ಕಾಣದ ಸೌರವ್ಯೂಹಕ್ಕೂ ನಡುವಿನ ಗಡಿಯಲ್ಲಿರುವ ಚಿರನಿದ್ರಾಭರಿತ ಗ್ರಹವೇ ಯುರೇನಸ್.

ಬುಧ, ಶುಕ್ರ, ಭೂಮಿ, ಮಂಗಳ, ಗುರು, ಶನಿ ಈ ಆರು ಗ್ರಹಗಳನ್ನು ಬರಿಗಣ್ಣುಗಳಿಂದ ನೋಡಿ ಗುರುತಿಸಬಲ್ಲೆವು. ಏಕೆಂದರೆ ಇವು ಸೂರ್ಯನಿಗೆ ಸಾಕಷ್ಟು ಹತ್ತಿರವಿದ್ದು ಅಧಿಕ ಸೂರ್ಯಪ್ರಕಾಶವನ್ನು ಪಡೆಯುತ್ತವೆ ಹಾಗೂ ಪ್ರತಿಫಲಿಸುತ್ತವೆ. ಅಲ್ಲದೇ ಭೂಮಿ ಉಳಿದ ಐದನ್ನು ಕುರಿತಂತೆ ಅನುಕೂಲ ಅವಲೋಕನ ಸ್ಥಾನದಲ್ಲಿದೆ. ಹಾಗಿದ್ದರೂ ಶನಿಯ ಮಸಕು ಬೆಳಕಿನ ಚುಕ್ಕಿಯನ್ನು ಪತ್ತೆ ಮಾಡುವುದು, ಉದಾಹರಣೆಗೆ ಶುಕ್ರ ಅಥವಾ ಗುರುವಿನ ಉಜ್ವಲ ಬಿಳಿ ಗುಂಡುಗಳನ್ನು ಗುರುತಿಸಿದ್ದಕ್ಕಿಂತ, ಹೆಚ್ಚು ಕಷ್ಟ. ಗಾತ್ರದಲ್ಲಿ ಶನಿ ಭೂಮಿಗಿಂತ ೭೫೫ ಪಟ್ಟು ದೊಡ್ಡದಾಗಿದ್ದರೂ ಸೂರ್ಯ—ಶನಿ ಸರಾಸರಿ ದೂರ ಸೂರ್ಯ—ಭೂಮಿ ಸರಾಸರಿ ದೂರಕ್ಕಿಂತ (=೧೪,೯೬, ೦೦,೦೦೦ ಕಿ.ಮೀ.) ೯.೫೪ ಪಟ್ಟು ಹಿರಿದಾಗಿದೆ.

ಶನಿಯ ಹೊರ ನೆರೆ ಗ್ರಹ ಯುರೇನಸ್. ಇದರ ಗಾತ್ರ ಭೂಗಾತ್ರದ ೬೭ ಮಡಿ ದೊಡ್ಡದು ಮಾತ್ರ. ಇನ್ನು ಸೂರ್ಯ–ಯುರೇನಸ್ ಸರಾಸರಿ ದೂರ ಸೂರ್ಯ–ಭೂಮಿ ಸರಾಸರಿ ದೂರದ ೧೯.೧೮ ಮಡಿ ಹಿರಿದಾಗಿದೆ. ಆದ್ದರಿಂದ ಭೂಮಿ–ಯುರೇನಸ್ ಸಂಬಂಧವನ್ನು ಭೂಮಿ—ಶನಿ ಸಂಬಂಧಗಳೊಡನೆ ಹೋಲಿಸಿದಾಗ ಯುರೇನಸ್ ದ್ವಿವಿಧ ಅಸೌಕರ್ಯಗಳಿಂದ ನರಳುವುದನ್ನು ಕಾಣುತ್ತೇವೆ: ಅಲ್ಪ ಗಾತ್ರ, ಅಧಿಕ ದೂರ. ಭೂಮಿ ಸೂರ್ಯನಿಂದ ಗಳಿಸುವ ಉಷ್ಣ ೧೦೦೦ ಏಕಮಾನಗಳೆಂದು

ಘಾಪಿಸಿದರೆ ಯುರೇನಸ್ ಪಡೆಯುವ ಉಷ್ಣ ವಿಷ್ಟು ಗೊತ್ತೇ? ಕೇವಲ ೨.೭ ಏಕಮಾನಗಳು (ಚಿತ್ರ ೧೧). ಶನಿದರ್ಶನವೇ ನಮಗೆ ಕಷ್ಟ ಸಾಧ್ಯವಾದರೆ ಯುರೇನಸ್ ದರ್ಶನ ಇನ್ನು ಹೇಗಿದ್ದೀತು ?

ಇಷ್ಟೇ ಅಲ್ಲ. ಆಕಾಶದಲ್ಲಿರುವ ಯಾವುದೇ ವಸ್ತು ನಮ್ಮ ಗಮನವನ್ನು ಸೆಳೆಯು-ಬೇಕಾದರೆ ಅದರಲ್ಲಿ ಎರಡು ಮುಖ್ಯ ಲಕ್ಷಣ-ಗಳಿರಬೇಕು: ನಮಗೆ ತಲುಪುವಷ್ಟು ಪ್ರಕಾಶ-ತೀವ್ರತೆ, ಅನತಿ ಅವಧಿಯಲ್ಲಿ ನಾವು ಗಮನಿಸ-ಬಹುದಾದ ಚಲನೆ. ನಕ್ಷತ್ರಗಳು ಗೋಚರವಾಗು ವುದು ಮೊದಲನೆಯ ಕಾರಣದಿಂದ ಮಾತ್ರ. ಗ್ರಹ, ಧೂಮಕೇತು, ಉಲ್ಕೆಗಳು ಕಾಣುವುದು ಉಭಯ ಕಾರಣಗಳ ಮಿಲನದಿಂದ. ನಮಗೆ ಸಾಪೇಕ್ಷವಾಗಿ ಸಮೀಪವಿರುವ ಗುರುವಿನ ಪ್ರಕಾಶಕ್ಕಿಂತ ದೂರವಿರುವ ಶನಿಯ ಪ್ರಕಾಶ ಕಡಿಮೆ. ಇನ್ನು ಚಲನ ದರವೋ ? ಗುರು ಸೂರ್ಯನಿಗೆ ಒಂದು ಪರಿಭ್ರಮಣೆ ಮುಗಿಸಲು ೧೧.೮೬ ವರ್ಷಗಳನ್ನು ತೆಗೆದುಕೊಂಡರೆ ಶನಿ ೨೯.೪೬ ವರ್ಷಗಳನ್ನು ತೆಗೆದುಕೊಳ್ಳುವುದು. ಹಾಗಿದ್ದರೂ ಹಲವಾರು ವರ್ಷಗಳ ಅವಧಿಯಲ್ಲಿ ಶನಿಯ ಗ್ರಹತ್ವವನ್ನು, ಅಂದರೆ ಸೂರ್ಯನ ಸುತ್ತ ಕಕ್ಷೆಯಲ್ಲಿ ಸಾಗುವ ಗುಣವನ್ನು, ತಿಳಿ-ಯುವುದು ಸಾಧ್ಯವಾಗುತ್ತದೆ. ಶನಿಯಿಂದ ಆಚೆಗಿನ ಯುರೇನಸಿಗೆ ಹೋದಾಗ ಸನ್ನಿವೇಶ ತೀರ ಬಿಗಡಾಯಿಸುವುದು: ಅದರ ಅಲ್ಪಗಾತ್ರ ಹಾಗೂ ಅಗಾಧ ದೂರಗಳಿಂದಾಗಿ ಅದರಿಂದ ನಮಗೆ ಬರುವ ಬೆಳಕು ತೀರ ಮಸುಕು, ಇಲ್ಲ-ವೇದರೂ ಸಾದೀತು. ಇನ್ನು ಸರಿತವೇ? ಸೂರ್ಯನ ಸುತ್ತ ಒಂದು ಪರಿಭ್ರಮಣೆ ಮುಗಿಸಲು ಯುರೇನಸಿಗೆ ೮೪.೦೧ ವರ್ಷಗಳೇ ಬೇಕು. ಸಾಧಾರಣ ಮನುಷ್ಯನೊಬ್ಬ ತನ್ನ ಕ್ರಿಯಾಶೀಲ ಜೀವಿತಾವಧಿಯಲ್ಲಿ ಯುರೇನಸಿನ ಪೂರ್ತಿ ಪರಿಭ್ರಮಣೆಯನ್ನು ಗುರುತಿಸುವುದು ಕಷ್ಟ.

ಸಾರಾಂಶ ಇಷ್ಟು. ಯುರೇನಸ್ ಅತಿ ಮಂದ ಪ್ರಕಾಶ ಬೀರುತ್ತ ಬಲು ಪಾಲು ನಿಶ್ಚಲ ವಾಗಿಯೇ ಇದ್ದು ಎಣಿಕೆಗೆ ಸಿಕ್ಕದ ಮಸಕು ಬೆಳಕಿನ ಹೆಸರಿಲ್ಲದ ಅರಿಲುಗಳ ಪೈಕಿ ಒಂದೆಂದು ತಿಳಿಯಲ್ಪಡುವ ಪ್ರಾಯಿಕತೆಯೇ ಜಾಸ್ತಿ. ವಾಸ್ತವವಾಗಿ ನಡೆದದ್ದಾದರೂ ಇದೇ.

ಯುರೇನಸಿನ ಇತಿಹಾಸ

ತೀಕ್ಷ್ಣದೃಷ್ಟಿಯ ಒಬ್ಬ ವೀಕ್ಷಕ ಸ್ವಚ್ಛ ರಾತ್ರಿಯ ಅನುಕೂಲ ಸನ್ನಿವೇಶದಲ್ಲಿ ಯುರೇನ-ಸನ್ನು ಬರಿಗಣ್ಣುಗಳಿಂದ ನೋಡುವುದು ಸಾಧ್ಯ ವಿದೆ. ಪ್ರಾಚೀನ ಖಗೋಳವಿಜ್ಞಾನಿಗಳು ಇದನ್ನು ಕಂಡಿದ್ದರಾದರೂ ಇದೊಂದು ಕ್ಷುದ್ರ ಅಗಣ್ಯ ನಕ್ಷತ್ರವೆಂದು ಕಡೆಗಣಿಸಿದ್ದರು. ಕ್ರಿ. ಶ. ೧೬೯೦ರಿಂದ ಈಚೆಗೆ ತಯಾರಿಸಿದ ಹಲವಾರು ನಕ್ಷತ್ರಪಟಗಳಲ್ಲಿ ಯುರೇನಸನ್ನು ಒಂದು ನಕ್ಷತ್ರವೆಂದೇ ಚಿತ್ರಿಸಿರುವುದಕ್ಕೆ ದಾಖಲೆಗಳಿವೆ.

ದೂರದರ್ಶಕದ ಉಪಜ್ಞೆ (ಇನ್‌ವೆನ್ಷನ್) ೧೬ನೆಯ ಶತಮಾನದಲ್ಲಿ ಆಯಿತು. ಮುಂದೆ ೧೭ನೆಯ ಶತಮಾನದಲ್ಲಿ ವಿಶ್ವದ ಭೌತ ಅರ್ಥ

ಯುರೇನಸ್ ಆವಿಷ್ಕಾರದ ಬಗ್ಗೆ ಹರ್ಷೆಲನ ಹೇಳಿಕೆ

“ಈ ನವಪ್ರಪಂಚ (ಯುರೇನಸ್) ನನ್ನ ದೃಷ್ಟಿಕ್ಷೇತ್ರದೊಳಕ್ಕೆ ಬಂದದ್ದು ಅದೃಷ್ಟದ ಆಕಸ್ಮಿಕ ಘಾತ ಎಂದು ಸಾಧಾರಣವಾಗಿ ಜನ ಭಾವಿಸುವುದುಂಟು. ಸ್ಪಷ್ಟವಾಗಿ ಇದು ತಪ್ಪು. ಕ್ರಮಬದ್ಧ ವಿಧಾನದಿಂದ ನಾನು ಆಕಾಶದ ಪ್ರತಿಯೊಂದು ನಕ್ಷತ್ರವನ್ನೂ ಪರೀಕ್ಷಿಸಿದೆ. ಆ ರಾತ್ರಿ ಇದರ (ಯುರೇನಸ್) ಸರದಿ ಬಂತು, ಇದು ಆವಿಷ್ಕೃತವಾಯಿತು ಅಷ್ಟೆ... ಇದನ್ನು ನೋಡಿದಾಗಲೇ ಇದರ ದೃಶ್ಯಗ್ರಹಬಿಂಬವನ್ನು ನಾನು ಗುರುತಿಸಿದ್ದೆ.”

(ಅಂದರೆ ಸೌರವ್ಯೂಹದಲ್ಲಿ ಚಲನ ನಿಯಮಗಳು, ನಕ್ಷತ್ರಗಳ ಪರಸ್ಪರ ಆಕರ್ಷಣೆಗಳು ಇತ್ಯಾದಿ) ಸ್ಪಷ್ಟವಾಯಿತು. ಇವುಗಳಿಂದ ಕುಮ್ಮಕ್ಕು ಪಡೆದ ಖಗೋಳವಿಜ್ಞಾನಿಗಳು ಆಕಾಶದ ಆಳಗಳನ್ನು ಅಗೆದು ನೋಡಿ ಅಳೆದು ವಿವರಿಸುವ [illegible]. ಇಂಥವರ ಪೈಕಿ ಇಂಗ್ಲೆಂಡಿನ ಸರ್ ವಿಲಿಯಮ್ ಹರ್ಷೆಲ್ (೧೭೩೮–೧೮೨೨) ಒಬ್ಬ.

೧೭೮೧ ಮಾರ್ಚ್ ೧೩ ರ ರಾತ್ರಿ. ಎಂದಿನಂತೆ ಹರ್ಷೆಲ್ ತನ್ನ ದೂರದರ್ಶಕದ 'ತುಪಾಕಿ ನಳಿಗೆ'ಯನ್ನು ಗಗನಾಭಿಮುಖವಾಗಿ ಗುರಿ ಇಟ್ಟು ಕ್ರಮವೀಕ್ಷಣೆ (ಸ್ಕ್ಯಾನಿಂಗ್) ಮಾಡುತ್ತ ಮುಂದುವರಿದ. ಮಿಥುನ ರಾಶಿ ವಲಯ (ಜೆಮಿನಿ) ಆಗ ಅವನ ದೃಷ್ಟಿಕ್ಷೇತ್ರದ ಒಳಗಿತ್ತು. ಅಲ್ಲೊಂದು ಬೆಳಕಿನ ಕಿರಿ ಬಿಲ್ಲೆಯನ್ನು ಕಂಡು ಅವನು ಚಕಿತನಾದ. ಯಾವ ನಕ್ಷತ್ರವೂ ಇಂದಿನ ಪ್ರಬಲತಮ ದೂರದರ್ಶಕದಿಂದ ವೀಕ್ಷಿಸಿದಾಗ ಕೂಡ ಲಂಬನಗೊಂಡು ಬಿಲ್ಲೆ ರೂಪವನ್ನು ತಳೆಯಲಾರದು.* ಅದರಿಂದ ಒದಗುವ ಪ್ರಕಾಶ ತೀವ್ರತರವಾದೀತು ಅಷ್ಟೆ. ಗ್ರಹಗಳು ಹೀಗಲ್ಲ; ಕೇವಲ ಸಾಧಾರಣ ದರ್ಜೆಯ ಗ್ರಹ ದೂರದರ್ಶಕದಿಂದ ಕೂಡ ಶನಿಯಂಥ ದೂರಗ್ರಹದ ಬಿಂಬವನ್ನೂ (ಬಿಲ್ಲೆ) ನೋಡುವುದು ಸಾಧ್ಯ. ಹೀಗಾಗಿ ಹರ್ಷೆಲ್ ತನ್ನ 'ಗುಂಡು ತಾಗಿದ ಚೆಂಡ'ನ್ನು ಅಧಿಕ ಲಕ್ಷ್ಯ ಹರಿಸಿ ಪರಿಶೀಲಿಸಿದ. ಪ್ರಾಯಶಃ ಅದೊಂದು ಹೊಸ ಧೂಮಕೇತು ಆಗಿರಬಹುದೆಂದು ಅವನ ಭಾವನೆ. ಧೂಮಕೇತುವಿನ ಬಿಂಬ ಸ್ಪಷ್ಟವಾಗಿ ಕತ್ತರಿಸಿದ ಅಂಚನ್ನು ಎಂದೂ ಪ್ರದರ್ಶಿಸುವುದಿಲ್ಲ. ಹಿಮ ಮುಸುಕಿದ ನಟ್ಟಿರುಳಿನಲ್ಲಿ ಮುಸುಕು ಬೆಳಕಿನ ಸೆಲೆ ಹೊಗೆಗುಂಡಿನಂತೆ ಕಾಣುವುದಿಲ್ಲವೇ? ಅಗೋ, ಹಾಗಿರುವುದು ಧೂಮಕೇತುವಿನ ಗೊಂಡೆ ತಲೆ. ಹರ್ಷೆಲನ ಹೆಗ್ಗ (ನಿಧಿ) ಹೀಗಿರಲಿಲ್ಲ. ಅದರ ಬಿಂಬದ ಅಂಚು ಕಡಿದಾಗಿತ್ತು, ಸ್ಪಷ್ಟವಾಗಿತ್ತು. ಸಹಜವಾಗಿ ಆತ ಅದರ ಗತಿಯನ್ನು ಹಲವಾರು ವಾರಗಳ ತನಕ ಅನುಸರಿಸಿದ. ಆಗ ಕಲೆ ಹಾಕಿದ ದತ್ತಾಂಶಗಳ ಆಧಾರದಿಂದ ಆಗಂತುಕ ಕಾಯದ ಕಕ್ಷೆಯನ್ನು ನಿರ್ಧರಿಸಲಾಯಿತು. (ಗಣಕ ಮೊದಲಾದ ಸುಲಭ, ಕ್ಷಿಪ್ರ ಮತ್ತು ನಿಖರ ಗಣನ ಸಾಧನಗಳು ಇರದಿದ್ದ ಆ ದಿನಗಳಂದು ತಿಂಗಳುಗಟ್ಟಲೆ ಮತ್ತೆ ಮತ್ತೆ ಈ ಗಣನೆಗಳನ್ನು ಮಾಡಬೇಕಾಗಿತ್ತು.) ಕಾಯದ ಕಕ್ಷೆ ಸರಿ ಸುಮಾರು ವೃತ್ತಾಕಾರದಲ್ಲಿತ್ತು. (ಧೂಮಕೇತು ಕಕ್ಷೆ ಹೀಗಿರುವುದಿಲ್ಲ.) ಅಷ್ಟೇ ಅಲ್ಲ. ಅದು ಶನಿಕಕ್ಷೆಯ ಆಚೆಗೆ, ಅಂದರೆ ಹೊರಗೆ ಇತ್ತು. ಇದೇ ಯುರೇನಸ್ ಗ್ರಹ, ಸೌರವ್ಯೂಹದ ನೂತನಾವಾಹಿತ ಸದಸ್ಯ. ಸೂರ್ಯನ ರಾಜ್ಯದಲ್ಲಿ ಹೊಸತಾಗಿ ಅರಸುವಂಥ ಮಹಾ ಕಾಯಗಳು ಏನೂ ಇಲ್ಲ ಎನ್ನುವ ಕುರುಡು ಕೊನೆಯನ್ನೂ ಬರಡು ಮನೆಯನ್ನೂ ಖಗೋಳ ವಿಜ್ಞಾನ ತಲುಪಿದ್ದ ಆ ದಿನಗಳಂದು ಈ ಆ-ವಿಷ್ಕಾರ (ನ್ಯೂ ಡಿಸ್ಕವರಿ) ಸೌರವ್ಯೂಹದ ಜ್ಞಾತ ವ್ಯಾಪ್ತಿಯನ್ನು ಒಮ್ಮೆಗೇ ದ್ವಿಗುಣಗೊಳಿಸಿ (ಸೂರ್ಯ–ಶನಿ ಅಂತರ ೯.೫೩೯ ಆದರೆ ಸೂರ್ಯ–ಯುರೇನಸ್ ಅಂತರ ೧೯.೧೮) ಖಗೋಲವಿಜ್ಞಾನಕ್ಕೆ ಹೊಸ ಆಯಾಮವನ್ನು ನೀಡಿತು. "ಕಡವರವನೆಡಹಿ ಸಂಧಿಸಿದ ಕಡು ಬಡವನಂತೆ" ಹರ್ಷೆಲ್ ಹರ್ಷಾತಿರೇಕದಿಂದ ಕುಣಿದಾಡಿದ್ದು ನಿರೀಕ್ಷಿತವೇ.

ಹರ್ಷೆಲನ ಆವಿಷ್ಕಾರದ (೧೭೮೧) ಬಳಿಕ ಯುರೇನಸ್ ಎಷ್ಟು ಸಲ ಸೂರ್ಯನಿಗೆ ಸುತ್ತು ಹಾಕಿದೆ ಗೊತ್ತೆ? ಪೂರ್ತಿ ಎರಡಾವರ್ತಿ, ಮೂರಾಗಲು ೨೦೩೩ರ ತನಕ ಕಾಯಬೇಕು.

ಯುರೇನಸಿನ ಉಪಗ್ರಹಗಳು

ಗ್ರಹವನ್ನು ಪರಿಭ್ರಮಿಸುವ ಕಾಯಕ

---

* ವಿಶಿಷ್ಟವಾದ ನವ ಛಾಯಾಚಿತ್ರೀಕರಣ ತಂತ್ರವನ್ನು ಬಳಸಿಕೊಂಡು ಕಿಟ್ ಪೀಕ್ ನ್ಯಾಶನಲ್ ಅಬ್ಸರ್ವೇಟರಿಯ ಖಗೋಳ ವಿಜ್ಞಾನಿಗಳು ಆರ್ದ್ರಾ ನಕ್ಷತ್ರದ ಬಿಂಬವನ್ನು ಛಾಯಾಚಿತ್ರೀಕರಿಸಿದ್ದಾರೆ (೧೯೭೫). ಈ ನಕ್ಷತ್ರದ ದೂರ ೩೦೦ ಬೆಳಕಿನ ವರ್ಷಗಳು. [illegible] ೮೦೦ ರಷ್ಟು ಇದೆ.

ಉಪಗ್ರಹ ಅಥವಾ ಚಂದ್ರ ಎಂದು ಹೆಸರು. ಚಂದ್ರ ಭೂಮಿಯ ಉಪಗ್ರಹವೆಂದು ನಮಗೆ ಗೊತ್ತಿದೆ. ಗ್ರಹದಂತೆ ಉಪಗ್ರಹವಾದರೂ ಕಾವು ಬೆಳಕುಗಳನ್ನು ಪಡೆಯುವುದು ಸೂರ್ಯನಿಂದಲೇ. ಇದರೊಂದಿಗೆ ಅದು ಮಾತೃಗ್ರಹದಿಂದ ಕೂಡ ಅವನ್ನು ಗಳಿಸುತ್ತದೆ. ಶುಕ್ಲ ಪಕ್ಷದ ಮೊದಲ ರಾತ್ರಿಗಳಲ್ಲಿ ಚಂದ್ರ ಬಿಂಬದ ಮಸಕು ಭಾಗ ನಮಗೆ ಕಾಣುವುದು ಭೂಕಾಂತಿ [illegible].

ಗ್ರಹವನ್ನು ಗುರುತಿಸಲು ಎರಡು ಅಂಶಗಳು (ಬೆಳಕು ಮತ್ತು ಚಲನೆ ಅತ್ಯವಶ್ಯವೆಂದು ಹಿಂದೆ [illegible]ನ್ನು ಕುರಿತು ಕೂಡ ಈ [illegible] ನಿಜ. ಈಗ, ಯುರೇನಸ್ ಭೂಮಿಯಿಂದ ೨೭೨ ಕೋಟಿ ಕಿಲೋಮೀಟರುಗಳಿಗಿಂತಲೂ ಹೆಚ್ಚು ದೂರದಲ್ಲಿರುವ ಗ್ರಹ, ಇದರ ವ್ಯಾಸ ೫೧,೮೦೦ ಕಿ. ಮೀ. ಭೂವ್ಯಾಸ ೧೨,೭೫೬ ಕಿ. ಮೀ.) ಇದೇ ನಮಗೊಂದು ಮಸಕು ಬಿಳಿ ಮಚ್ಚೆಯಂತೆ ಕಾಣುವುದು. ಇನ್ನು ಇದರ ಸುತ್ತ, ಗಜರಾಜನ ಭಾರೀ ದೇಹದ ಸುತ್ತ ಸುಳಿದಾಡುವ ನುಸಿಗಳಂತೆ, ತೆವಳುತ್ತಿರುವ ಉಪಗ್ರಹಗಳು ಹೇಗೆ ತಾನೆ ಕಂಡಾವು? ಆದರೂ ಖಗೋಳವಿಜ್ಞಾನಿಗಳು ಯುರೇನಸಿನ ಐದು ಉಪ ಗ್ರಹಗಳನ್ನು ಈ ಮೊದಲೇ ಗುರುತಿಸಿ ಹೆಸರಿಸಿದ್ದಾರೆ. ಅವು ಬೀರುವ ಬೆಳಕನ್ನು ಗಮನಿಸಿ ಅವುಗಳ ಅಂದಾಜು ವ್ಯಾಸಗಳನ್ನು ಗಣಿಸಿದ್ದಾರೆ.

ಅತ್ಯಂತ ಕಿರಿದಾದದ್ದು ಮಿರಾಂಡ. ಇದು ಮಾತೃಗ್ರಹಕ್ಕೆ ಅತಿ ಸಮೀಪವಾಗಿಯೂ ಇದೆ. ಇದರ ಪರಿಭ್ರಮಣಾವಧಿ ಕನಿಷ್ಠ. ಮಿರಾಂಡದ ಆವಿಷ್ಕಾರವಾದದ್ದು ತೀರ ಈಚೆಗೆ. ಉಪಗ್ರಹ ಕಿರಿದಾಗಿದ್ದು ಮಾತೃಗ್ರಹಕ್ಕೆ ಹತ್ತಿರವಾದಷ್ಟೂ ಅದನ್ನು ಪತ್ತೆ ಹಚ್ಚುವುದು ಹೆಚ್ಚು ಕಷ್ಟವಾಗುತ್ತದೆ.

ಇದು ಹಾಗಿರಲಿ. ಈಗ ಸೌರವ್ಯೂಹದಲ್ಲಿ ಆವಿಷ್ಕೃತವಾಗಿರುವ ಉಪಗ್ರಹಗಳ ಸಂಖ್ಯೆ ಎಷ್ಟು ಎಂಬ ಪ್ರಶ್ನೆ ಮೊಳೆಯುತ್ತದೆ: ೧೯೭೭ರ ಕೊನೆಯಲ್ಲಿ ತಿಳಿದಿದ್ದಂತೆ ಭೂಮಿಗೆ ೧, ಮಂಗಳಕ್ಕೆ ೨, ಗುರುವಿಗೆ ೧೩ (೧೯೭೪ ರಲ್ಲಿ ಆವಿಷ್ಕೃತವಾದದ್ದೂ ಸೇರಿ), ಶನಿಗೆ ೧೦, ಯುರೇನಸಿಗೆ ೫, ನೆಪ್ಚೂನಿಗೆ ೨, ಒಟ್ಟು ೩೩ ಇದ್ದುವು.

ಹೊಸ ಉಪಗ್ರಹಗಳನ್ನು ಶೋಧಿಸುವುದು ಸಾಧ್ಯವಿಲ್ಲವೇ? ಆಧುನಿಕ ಸೈದ್ಧಾಂತಿಕ ಖಗೋಳವಿಜ್ಞಾನಿಗಳ ನಿಜಾಸಕ್ತಿ ಇರುವುದು ನಕ್ಷತ್ರಲೋಕದ ಬೃಹದ್ವಿಶ್ವದಲ್ಲಿ, ಸೌರವ್ಯೂಹದ ಸಂಕುಚಿತ ಕ್ಷೇತ್ರದಲ್ಲಿ ಅಲ್ಲ. ಇದರ ಕಾರಣ ಮುಖ್ಯವಾಗಿ ಎರಡು : ಒಂದು, ಅವರ ದೃಷ್ಟಿಯಲ್ಲಿ ಸೌರವ್ಯೂಹ ಹೆಚ್ಚು ಕಡಿಮೆ ಮುಗಿದ ಅಧ್ಯಾಯ. ಎರಡು, ವಿಶ್ವಾನ್ವೇಷಣೆಯ ಫಲಗಳೊಡನೆ ಹೋಲಿಸುವಾಗ ಸೌರವ್ಯೂಹದ ಮೇಲೆ ಕೇಂದ್ರೀಕರಿಸುವ ಪ್ರಯತ್ನಗಳು ಎರಡು [illegible]ಸುತ್ತವೆ. ಹೀಗಾಗಿ ಈ ಬಗೆಯಲ್ಲಿ ಅವರು ತಮ್ಮ ದೂರದರ್ಶಕವನ್ನಾಗಲಿ ಚಿಂತನೆಯನ್ನಾಗಲಿ 'ಅಪವ್ಯಯ-

ಉಪಗ್ರಹದ ಹೆಸರು	ಆವಿಷ್ಕಾರದ ಅನುಕ್ರಮ ಮತ್ತು ಇಸವಿ	ಆವಿಷ್ಕರ್ತನ ಹೆಸರು	ಯುರೇನಸಿನಿಂದ ಸರಾಸರಿ ದೂರ (ಕಿ. ಮೀ.)	ಅಂದಾಜು ವ್ಯಾಸ (ಕಿ. ಮೀ.)	ಪರಿಭ್ರಮಣಾವಧಿ (ದಿವಸಗಳು)
ಮಿರಾಂಡ	V, ೧೯೪೮	ಕುಯ್ಪರ್	೧೨೩೦೦೦	ತಿಳಿಯದು	೧.೪೧೪
ಏರಿಯೆಲ್	IV, ೧೮೫೧	ಲ್ಯಾಸೆಲ್	೧೯೧೭೦೦	೬೦೦	೨.೫೨೦
ಅಂಬ್ರಿಯೆಲ್	III, ೧೮೫೧	ಲ್ಯಾಸೆಲ್	೨೬೭೦೦೦	೪೦೦	೪.೧೪೪
ಟೈಟಾನಿಯ	II, ೧೭೮೭	ಹರ್ಷೆಲ್	೪೩೮೦೦೦	೧೦೦೦	೮.೭೦೬
ಓಬೆರಾನ್	I, ೧೭೮೭	ಹರ್ಷೆಲ್	೫೮೫೯೬೦	೯೦೦	೧೩.೪೬೩

ಗೊಳಿಸಲು ಇಷ್ಟಪಡುವುದಿಲ್ಲ. ಹರ್ಷೆಲ್ ಆಗಮಿಸುವ ಮುನ್ನ ತಲೆದೋರಿದ್ದ 'ಕುರುಡು ಜೊಸೆ' ಮನೋಭಾವ ಮರುಕಳಿಸಿದ್ದ ಈ ವರ್ತಮಾನ ಯುಗದಲ್ಲಿ ಹರ್ಷೆಲನಂತೆಯೇ ಡಾ. ಭಟ್ಟಾಚಾರ್ಯ ಮತ್ತು ಶ್ರೀ ಕುಪ್ಪುಸ್ವಾಮಿಯವರು ಈ ನೆಲಕ್ಕೆ ತಂದ ಹೊಸ ಬಿಸಿ, ಹಸಿರು, ಗಾಳಿ ಅಸಾಧಾರಣವಾದವು. ಸೌರವ್ಯೂಹ ಇನ್ನೂ 'ಲಾತು' ಲಗಾಯಿಸುತ್ತಿರುವ ಜೀವಂತ ಕಮ್ಮಟ ಎಂದು ಈ ಸಾಧನೆ ರುಜುವಾತಿಸಿದೆ.

ಗ್ರಹಸಂಕ್ರಮ ಎಂದರೇನು?

ನಮಗೂ ಸೂರ್ಯನಿಗೂ ನಡುವೆ ಗ್ರಹ ಸರಿವ ಘಟನೆ ಇದು. ನಮ್ಮ ಉಪಗ್ರಹವಾದ ಚಂದ್ರ ಈ ರೀತಿ ಸರಿದಾಗ, ಅದು ನಮಗೆ ತೀರ ಹತ್ತಿರವಿರುವುದರಿಂದ, ಚಂದ್ರಬಿಂಬ ಸೂರ್ಯಬಿಂಬವನ್ನು ಮರೆಮಾಡುವುದು ಸ್ಪಷ್ಟವಾಗಿ ಕಾಣುತ್ತದೆ. ಇದು ಚಂದ್ರನಿಂದ ಸೂರ್ಯಗ್ರಹಣ ಅಥವಾ ಚಂದ್ರಸಂಕ್ರಮ. ಭೂಮಿ–ಸೂರ್ಯ [illegible] ಅಡೆಗಿರುವ ಬು[illegible] ಗಳಲ್ಲಿ ಚಂದ್ರನಿಗಿಂತ ದೊಡ್ಡವು [illegible] ಸರಿದಾಗ ಅಂದರೆ ಶುಕ್ರಸಂಕ್ರಮ ಅಥವಾ ಬುಧಸಂಕ್ರಮ ಸಂಭವಿಸಿದಾಗ, ಎಚ್ಚರಿಕೆಯಿಂದ ಗಮನಿಸಿದರೆ ಮಾತ್ರ, ಕರಿ ಚುಕ್ಕಿಯೊಂದು ರವಿ ಬಿಂಬದ ಮೇಲೆ ಹರಿಯುವುದು ಕಂಡೀತು ಅಷ್ಟೆ. (ಇತರ ಯಾವುದೇ ಗ್ರಹದಿಂದ ಸಂಕ್ರಮ ಸಂಭವಿಸುವುದಿಲ್ಲ! ಅವೆಲ್ಲವೂ ಭೂಕಕ್ಷೆಯ ಹೊರಗಿರುವುದೇ ಇವರ ಕಾರಣ.)

ವಿಶ್ವದ ವಿಶಾಲವ್ಯಾಪ್ತಿಯೊಡನೆ ಹೋಲಿಸುವಾಗ ಪ್ರತ್ಯೇಕ ಅಸ್ತಿತ್ವಗಳು ಇಲ್ಲದೆ ಒಂದಕ್ಕೊಂದು ಸೇರಿ ಒಂದು ಧೂಳಿನ ಕಣದಂತಿರುವ ಭೂಮಿ, ಚಂದ್ರ, ಶುಕ್ರ, ಬುಧ, ಸೂರ್ಯ

ಉಪಗ್ರಹಗಳ ಆವಿಷ್ಕಾರ

ಭೂಮಿಯ ಉಪಗ್ರಹವಾದ ಚಂದ್ರ [illegible] ಕಾಲದಿಂದಲೂ ತಿಳಿದಿದೆ. ಮೊತ್ತ ಮೊದಲು [illegible] ಗೆಲಿಲಿಯೋ ಗೆಲಿಲಿ (ಕ್ರಿ. ಶ. ೧೫೬೪–೧೬೪೨). ಇವರು ೧೬೧೦ ರಲ್ಲಿ ಗುರುವಿನ ನಾಲ್ಕು ಉಪಗ್ರಹಗಳನ್ನು [illegible]. ಗುರುವಿನ ೧೩ ನೆಯ [illegible] ೧೯೭೪ ರಲ್ಲಿ ಗುರುತಿಸಿದವರು ಕ್ಯಾಲಿಫೋರ್ನಿಯಾದ [illegible] ಚಾರ್ಲ್ಸ್ ಟಿ. ಕೊವಾಲ್ ಎಂಬುವರು. ಯುರೇನಸಿನ ಆರನೆಯ ಉಪಗ್ರಹವನ್ನೂ (ಇದನ್ನು ಹನುಮಾನ್ ಎಂದು ಹೆಸರಿಸಬಹುದೇ?) [illegible] ಉಪಗ್ರಹಗಳು [illegible]. ಶತಮಾನವಾರು ಇವುಗಳ ಆವಿಷ್ಕಾರ ನಡೆದಿರುವ ವಿವರ ಹೀಗಿದೆ :

[illegible] ಕಾಲದಿಂದ ಭೂಮಿಯ ಚಂದ್ರ ...೧
೧೭ ನೆಯ ಶತಮಾನದಲ್ಲಿ ಗುರುವಿನ ೪, ಶನಿಯ ೫ ...೯
೧೮ ನೆಯ ಶತಮಾನದಲ್ಲಿ ಶನಿಯ ೨, ಯುರೇನಸಿನ ೨ ...೪
೧೯ ನೆಯ ಶತಮಾನದಲ್ಲಿ ಮಂಗಳನ ೨, ಗುರುವಿನ ೧,
ಶನಿಯ ೨, ಯುರೇನಸಿನ ೨, ನೆಪ್ಚೂನಿನ ೧ ...೮
೨೦ ನೆಯ ಶತಮಾನದಲ್ಲಿ ಗುರುವಿನ ೮, ಶನಿಯ ೧,
ಯುರೇನಸಿನ ೨, ನೆಪ್ಚೂನಿನ ೧ ...೧೨

ಒಕ್ಕೂಟದಲ್ಲಿಯೂ ಸಂಕ್ರಮಗಳು ವಿರಳ ವಿದ್ಯಮಾನಗಳು. ಒಂದು ವರ್ಷದಲ್ಲಿ ಇದಕ್ಕಿಂತ ಹೆಚ್ಚು ಚಂದ್ರಸಂಕ್ರಮಗಳು (= ಸೂರ್ಯಗ್ರಹಣಗಳು) ಸಂಭವಿಸುವುದಿಲ್ಲ. ಸುಮಾರು ೧೩ ಬುಧಸಂಕ್ರಮಗಳು ಒಂದು ಶತಮಾನದಲ್ಲಿ ನಡೆಯಬಹುದು. ಶುಕ್ರಸಂಕ್ರಮಗಳು ಇನ್ನೂ ವಿರಳತರ.

ಇಷ್ಟೇ ಅಲ್ಲ. ಯಾವುದೇ ಗ್ರಹಸಂಕ್ರಮ ಸಂಭವಿಸಿದಾಗಲೂ ಅದು ಭೂಮಿಯ ಮೇಲಿನ ಸಮಸ್ತರಿಗೂ ಕಾಣಲೇಬೇಕೆಂದೇನೂ ಇಲ್ಲ. ಉದಾಹರಣೆಗೆ, ಭೂಮಿಯ ಕತ್ತಲ ಪಾರ್ಶ್ವದಲ್ಲಿರುವವರಿಗೆ ಸೂರ್ಯನನ್ನು ಕುರಿತು ಗ್ರಹಸಂಕ್ರಮ ತೋರಲಾರದು. ಇನ್ನು ಬೆಳಕಿನ ಪಾರ್ಶ್ವದಲ್ಲಿರುವ ಎಲ್ಲರಿಗೂ ಅದು ಕಂಡೀತೇ? ಅದೂ ಇಲ್ಲ. ಕೇವಲ ಸೀಮಿತ ಅನುಕೂಲ ವಲಯದಲ್ಲಿ ಇರುವವರಿಗೆ ಮಾತ್ರ ಈ ಭಾಗ್ಯ ಪ್ರಾಪ್ತಿ ಆದೀತು. ಆಗಲೂ ಏನಾದರೂ ವಾಯುಮಂಡಲ ಮುನಿದರೆ ಕೈಗೆ ಬಂದದ್ದು ಬಾಯಿಗೆ ಬರದಂತಾಗುವುದು.

ಗ್ರಹಸಂಕ್ರಮ ಮುಖ್ಯವಾಗಿ ಆ ಗ್ರಹದ ಬಗ್ಗೆ ಅನೇಕ ಹೊಸ ಮಾಹಿತಿಗಳನ್ನು ಕೊಡಬಲ್ಲುದು: ದೂರ, ಚಲನ ದರ, ಗ್ರಹವಾಯುಮಂಡಲದ ಸಂಯೋಜನೆ ಇತ್ಯಾದಿ. ಆನುಷಂಗಿಕವಾಗಿ, ಸೌರವ್ಯೂಹವನ್ನು ಕುರಿತು ಆ ತನಕ ಮಂಡಿಸಿದ ಹಲವಾರು ಊಹೆಗಳನ್ನೂ ಫಲಿತಾಂಶಗಳನ್ನೂ ತಪಾಸಿಸಿ ಅವುಗಳ ಸತ್ಯಾಸತ್ಯತೆಗಳನ್ನು ನಿರ್ಣಯಿಸಲು ಎಡೆ ಮಾಡಿಕೊಡುತ್ತದೆ. ಎಂದೇ ಗ್ರಹಸಂಕ್ರಮಕ್ಕೆ ಅಷ್ಟೊಂದು ಪ್ರಾಮುಖ್ಯ.

ಸೂರ್ಯನನ್ನು ಕುರಿತೇ ಗ್ರಹಸಂಕ್ರಮ ಅಪೂರ್ವ ಘಟನೆ. ಇನ್ನು ನಕ್ಷತ್ರಗಳನ್ನು ಕುರಿತಂತೆ ಅದು ಹೇಗಿರಬಹುದು? ನಕ್ಷತ್ರ ರಾಜ್ಯಕ್ಕೆ ತೆರಳಿದಾಗ ಚಂದ್ರ, ಶುಕ್ರ, ಬುಧ ಮಾತ್ರ ಅಲ್ಲ, ಉಳಿದ ಸಮಸ್ತ ಗ್ರಹೋಪಗ್ರಹಗಳೂ ಸಂಕ್ರಮದಲ್ಲಿ ಪಾಲ್ಗೊಳ್ಳಲು (ಅಂದರೆ ಭೂಮಿ–ನಕ್ಷತ್ರ ರೇಖೆಯನ್ನು ಕತ್ತರಿಸಿ ಸಾಗಲು) ಅರ್ಹತೆ ಪಡೆಯುತ್ತವೆ. ಆಕಾಶದ ಮಹಾವಿಸ್ತಾರದೊಡನೆ ಹೋಲಿಸುವಾಗ ನಕ್ಷತ್ರಗಳ ಸಂಖ್ಯೆ ಕೇವಲ 'ಬೆರಳೆಣಿಕೆಯಷ್ಟಿರುವುದ-ರಿಂದ. ಅರ್ಥಾತ್ ವಿಶ್ವದ ಬಹ್ವಂಶ ಖಾಲಿ ಆಗಿಯೇ ಇರುವುದರಿಂದ, ನಕ್ಷತ್ರವನ್ನು ಕುರಿತು ಗಮನಾರ್ಹ ವೀಕ್ಷಣೆಗೆ ಲಭಿಸುವ ಗ್ರಹಸಂಕ್ರಮ ವಿರಳಸ್ಯ ವಿರಳ ಘಟನೆ ಆಗುತ್ತದೆ. (ಸಾಪೇಕ್ಷವಾಗಿ ನಕ್ಷತ್ರವನ್ನು ಕುರಿತಂತೆ ಚಂದ್ರಸಂಕ್ರಮ ಅಷ್ಟೊಂದು ವಿರಳವಲ್ಲ.) ಅದು ಸಂಭವಿಸಿದಾಗಲೂ ರಾತ್ರಿ ವೇಳೆ ಮಾತ್ರ ನಮಗೆ ಗೋಚರವಾದೀತು ಎಂಬುದು ಸ್ಪಷ್ಟ.

ಖಗೋಳವಿಜ್ಞಾನಿಗಳು ಕೂಡ ಗ್ರಹಸಂಕ್ರಮವನ್ನು (ಅಥವಾ ಯಾವುದೇ ಆಕಾಶ ಘಟನೆಯನ್ನು) ಇತರರಂತೆ ನೋಡುತ್ತಾರೆ ನಿಜ. ಆದರೆ ಈ ತೆರನಾದ ವ್ಯಕ್ತಿನಿಷ್ಠ ವೀಕ್ಷಣೆಗಳಿಂದ ವಸ್ತುನಿಷ್ಠ ಅಧ್ಯಯನ ಸಾಧ್ಯವಾಗದು. ಅಲ್ಲದೆ ವಿಜ್ಞಾನಿಯ ತ್ರಾಣ ಸಹನೆಗಳಿಗೂ ಮಿತಿ ಉಂಟು. ಆದ್ದರಿಂದ ಇಂದು ಎಲ್ಲ ಆಕಾಶಘಟನೆಗಳನ್ನೂ ಸ್ವಚಾಲಿತ ಸೂಕ್ಷ್ಮೋಪಕರಣಗಳ ನೆರವಿನಿಂದ ಆಗಾಗಲೇ ಛಾಯಾಚಿತ್ರೀಕರಿಸಿ ಶಾಶ್ವತ ದಾಖಲೆಗಳನ್ನು ತಯಾರಿಸಿ ಇವನ್ನು ಯಥಾವಕಾಶ ಅಭ್ಯಸಿಸಿ ನಿರ್ಣಯಗಳಿಗೆ ಬರುವುದೇ ವಾಡಿಕೆ. ಉದಾಹರಣೆಗೆ ಸಂಕ್ರಮದ ಹೊತ್ತಿನಲ್ಲಿ ನಕ್ಷತ್ರದಿಂದ ಬರುವ ಬೆಳಕಿನಲ್ಲಾಗುವ ಏರಿಳಿತಗಳನ್ನು ಉಬ್ಬುತಗ್ಗುಗಳಾಗಿ ಕಾಣಿಸುವ ವಕ್ರರೇಖೆಗಳು ನುರಿತ ವಿಜ್ಞಾನಿಗೆ ವಿಶೇಷ ಕತೆಯನ್ನೇ ಹೇಳುತ್ತವೆ.

ಕಾವಲೂರಿನಿಂದ ಕಂಡ ಆಕಾಶ ನಾಟಕ

ಭಾರತೀಯ ವಿಜ್ಞಾನಿಗಳು ಗಣನೆ ಮಾಡಿದರು: ೧೯೭೭ ಮಾರ್ಚ್ ೧೦ರ ರಾತ್ರಿ ಅತಿ ದೂರದ ನಿರ್ದಿಷ್ಟ ನಕ್ಷತ್ರವೊಂದನ್ನು ಕುರಿತಂತೆ ಯುರೇನಸ್ ಗ್ರಹಸಂಕ್ರಮ ಸಂಭವಿಸಲಿದೆಯೆಂದೂ ಕಾವಲೂರು (ತಮಿಳುನಾಡು) ವೇಧಶಾಲೆ ಈ ಆಕಾಶ ನಾಟಕವನ್ನು ವೀಕ್ಷಿಸಲು ಅನುಕೂಲ ಸ್ಥಳದಲ್ಲಿದೆಯೆಂದೂ ಗೊತ್ತಾಯಿತು. ಸರಿ, ಮುಹೂರ್ತಕ್ಕಿಂತ ಮೊದಲೇ ಅವರು ಯಂತ್ರೋಪಕರಣಗಳನ್ನು ಸಜ್ಜುಗೊಳಿಸಿ

ಯುರೇನಸ್ ಸುತ್ತಲೂ ಬಳೆಗಳೆ?



ಯುರೇನಸಿನ ಬಳೆಗಳು- ಕಲಾವಿದನ ಕಲ್ಪನೆ

ಭಾರತೀಯ ಖಗೋಳವಿಜ್ಞಾನಿಗಳು ಕಾವಲೂರಿನಲ್ಲಿ ಯುರೇನಸನ್ನು ವೀಕ್ಷಿಸುತ್ತಿದ್ದ ಸಮಯದಲ್ಲೇ ಅಮೇರಿಕದ ಕಾರ್ನೆಲ್ ವಿಶ್ವವಿದ್ಯಾಲಯದ ಶಾಸ್ತ್ರಜ್ಞರ ತಂಡವೊಂದು ಆಗ್ನೇಯ ಆಸ್ಟ್ರೇಲಿಯದಲ್ಲಿ ಇಂಥದೇ ಕಾರ್ಯದಲ್ಲಿ ನಿರತವಾಗಿತ್ತು. ಜೇಮ್ಸ್ ಈಲಿಯಟ್ ಈ ತಂಡದ ನಾಯಕ. ಒಂದು ವಿಮಾನವನ್ನೇ ವೀಕ್ಷಣಾಲಯವಾಗಿ ಪರಿವರ್ತಿಸಿಕೊಂಡು ಆ ರಾತ್ರಿ ತಮ್ಮ ೩೬ ಅಂಗುಲ ವ್ಯಾಸದ ದೂರದರ್ಶಕವನ್ನು ಯುರೇನಸಿನೆಡೆ ತಿರುಗಿಸಿ ಆ ಗ್ರಹವು ತುಲಾ ರಾಶಿಯಲ್ಲಿ ದೂರದ ನಕ್ಷತ್ರವೊಂದರ ಎದುರು ಹಾಯ್ದು ಸರಿದು ಹೋಗುವುದನ್ನು ನೋಡುವುದು ಅವರ ಉದ್ದೇಶವಾಗಿತ್ತು. ಯುರೇನಸ್ ಈ ನಕ್ಷತ್ರದೆದುರು ಬರುವುದಕ್ಕೆ ನಸುವೆ ಮುಂಚೆ ಹಾಗು ಈ ಗ್ರಹದಿಂದ ಆ ನಕ್ಷತ್ರದ ಗ್ರಹಣವಾಗಿರುವ ಸಮಯದಲ್ಲಿ ನಕ್ಷತ್ರದಿಂದ ಬರುವ ಬೆಳಕಿನಲ್ಲಾಗುವ ವ್ಯತ್ಯಾಸವನ್ನು ಗಮನಿಸಿ ಯುರೇನಸಿನ ಸರಿಯಾದ ವ್ಯಾಸವನ್ನು ಕಂಡುಹಿಡಿಯಲು ಮತ್ತು ಅಲ್ಲಿನ ವಾತಾವರಣವನ್ನು ಗುರುತಿಸಲು ಶಕ್ಯವಾದೀತೆಂದು ಅವರು ಬಗೆದಿದ್ದರು.

ಆದರೆ, ಭಾರತೀಯ ವಿಜ್ಞಾನಿಗಳಿಗೆ ಬಂದಂಥ ಅನುಭವವೇ ತುಸು ಭಿನ್ನ ರೀತಿಯಲ್ಲಿ ಅವರಿಗೂ ಬಂತು. ಯುರೇನಸ್ ಈ ನಕ್ಷತ್ರವನ್ನು ಪೂರ್ತಿ ಮುಚ್ಚುವುದಕ್ಕೆ ಮುನ್ನ ಐದು ಸಲ ಈ ನಕ್ಷತ್ರದಿಂದ ಬರುವ ಬೆಳಕು ಕೆಲವೇ ಸೆಕಂಡುಗಳ ಕಾಲ ಮರೆಯಾಯಿತು. ಮುಂದೆ ನಕ್ಷತ್ರವು ಯುರೇನಸ್ ಉಂಟುಮಾಡಿದ್ದ ಗ್ರಹಣದಿಂದ ಮುಕ್ತವಾಗಿ ಹೊರಕ್ಕೆ ಬಂದ ನಂತರ ಪುನಃ ಸರಿಯಾಗಿ ಐದು ಸಲ ಈ ನಕ್ಷತ್ರದ ಬೆಳಕಿಗೆ ಹಿಂದಿನಂತೆಯೇ ಆತಂಕ ಬಂತು.

ಇದನ್ನು ಕಂಡ ವಿಜ್ಞಾನಿಗಳು ಯುರೇನಸ್ಸಿನ ಸುತ್ತ, ಶನಿಗಿರುವಂತೆಯೇ, ಕನಿಷ್ಠ ಐದು ಬಳೆಗಳು ಇವೆ ಎಂಬ ಒಂದು ನಿರ್ಧಾರಕ್ಕೆ ಬಂದಿದ್ದಾರೆ. ಈ ಬಳೆಗಳು ಪೃಥ್ವಿಯ ವಿಷುವದ್ವೃತ್ತ ಪ್ರದೇಶದ ನೆತ್ತಿಯ ಮೇಲಿರುವುದರಿಂದ ಇಲ್ಲಿಯ ದೂರದರ್ಶಕಗಳಿಂದ ಅವುಗಳನ್ನು ನೋಡುವುದು ಅಸಾಧ್ಯವೆಂದು ಅವರು ಹೇಳುತ್ತಾರೆ. ಈ ಬಳೆಗಳು ೪,೪೦೦ ಮೈಲು ಅಗಲ ಸ್ಥಳವನ್ನು ವ್ಯಾಪಿಸಿವೆ. ಅವುಗಳಲ್ಲಿ ತೀರ ಹೊರಗಿನದರ ಅಗಲ ೬೦ ಮೈಲುಗಳಾದರೆ ಒಳಗಿನ ನಾಲ್ಕು ಆರು ಮೈಲು ಅಗಲವಿವೆಯಂತೆ.

ಶನಿಯ ಸುತ್ತಲಿನ ಬಳೆಗಳಲ್ಲಿ ಹಿಮ ಮತ್ತು ಬರ್ಫಿನ ಉಂಡೆಗಳು ತುಂಬಿವೆಯೆಂದು ವಿಜ್ಞಾನಿಗಳು ತರ್ಕಿಸಿದ್ದಾರೆ. ಯುರೇನಸಿನ ಬಳೆಗಳಲ್ಲೂ ಅವೇ ಇರಬಹುದೇ?

-'ಟೈಮ್' ವರದಿ

ದರ್ಶಕದ ಮೂಲಕ ದೃಗವಲೋಕನವನ್ನು ಕೂಡ ಅವರು ಮಾಡುವವರಿದ್ದರು.

ನಿರ್ದಿಷ್ಟ ಮುಹೂರ್ತದಲ್ಲಿ ನಕ್ಷತ್ರದ ಬೆಳಕು ಮಸಕಾಗುವುದನ್ನು ಅವರು ನಿರೀಕ್ಷಿಸಿದ್ದರು: ಯುರೇನಸಿನ ವಾಯುಮಂಡಲವನ್ನು ಬೆಳಕು ಅತಿಕ್ರಮಿಸಿ ಬರುವಾಗ ಹೀಗಾಗುವುದು ಸಹಜ. ಕಣ್ಣುಗಳು ಕಾಣಬಹುದಾದ ಈ ಮಸಕುತನಕ್ಕೆ ಸಂವಾದಿಯಾಗಿ ಉಪಕರಣ ದಾಖಲಿಸುವ ವಕ್ರರೇಖೆಯಲ್ಲಿ ತಗ್ಗುವಿಕೆ ಇರಲೇಬೇಕು ಎಂಬುದು ಅವರಿಗೆ ತಿಳಿದಿತ್ತು. ಯುಕ್ತ ವೇಳೆಯಲ್ಲಿ ಇವೆರಡೂ ನಿರೀಕ್ಷಣಾನುಸಾರ ಘಟಿಸಿ ಗಣನೆ ಮತ್ತು ವೀಕ್ಷಣೆಗಳನ್ನು ಬೆಸೆದುವು ನಿಜ. ಆದರೆ ಸಂಕ್ರಮದ ಪರ್ವಕ್ಕಿಂತ ಸುಮಾರು ೪೦ ಮಿನಿಟುಗಳ ಮೊದಲು ದಾಖಲೆಯಲ್ಲಿನ ವಕ್ರರೇಖೆಯಲ್ಲಿ ಕಡಿದಾದ ನತಿ (ಡಿಪ್) ಕಂಡುಬಂತು. ಇದಕ್ಕೆ ಸಂವಾದಿಯಾದ ವೀಕ್ಷಣೆಯಲ್ಲಿ ನಕ್ಷತ್ರ ಸುಮಾರು ೬ ಸೆಕೆಂಡುಗಳ ಕಾಲ ಮರೆಯಾಗಿ ಹೋಗಿತ್ತು. ಇದೊಂದು ಅನಿರೀಕ್ಷಿತ ವಿದ್ಯಮಾನ. ಗ್ರಹಸಂಕ್ರಮದ ಪರಿಣಾಮವಿದಲ್ಲ ಎಂಬುದು ಗಣನೆಗಳಿಂದ ಸ್ಥಿರಪಟ್ಟಿತು. ಪ್ರಾಯಶಃ ಯುರೇನಸಿನ ಐದು ಉಪಗ್ರಹಗಳ ಪೈಕಿ ಒಂದು ಇದರ ಕಾರಣವಾಗಿರಬಹುದೆಂದು ಅವರು ಭಾವಿಸಿದರು. ಇದೆಲ್ಲ ಉಪಗ್ರಹಗಳ ರಾಶಿ, ಚಲನ ದರ ಮುಂತಾದ ವಿವರಗಳು ತಿಳಿದಿವೆ. ಆದ್ದರಿಂದ ಈ ವಿದ್ಯಮಾನದ ಅಥವಾ ಅಡಚಣೆಯ ಕಾರಣ ಯಾವುದಿರಬಹುದು ಎಂಬುದನ್ನು ಗಣಿಸಿ ಪರಿಶೀಲಿಸಿದರು. ಎಲ್ಲ ಉಪಗ್ರಹಗಳೂ 'ನಿರಪರಾಧಿಗಳು' ಎಂದು ಸಾಬೀತಾಯಿತು.

ಹಾಗಾದರೆ ಮುಂದೇನು? ಅನಿವಾರ್ಯ ತೀರ್ಮಾನ ಸ್ಪಷ್ಟವಾಗಿದೆ: ಯುರೇನಸಿನ ಆರನೆಯ, ಆ ತನಕ ಕಂಡಿರದಿದ್ದ, ಹೊಸ ಉಪಗ್ರಹವೊಂದು ಈ 'ಅಪರಾಧಿ' ಆಗಿರಬೇಕು. ನಕ್ಷತ್ರದ ಮತ್ತು ಯುರೇನಸಿನ ಸ್ಥಾನಗಳು ನಿಷ್ಕೃಷ್ಟವಾಗಿ ತಿಳಿದಿದ್ದುದರಿಂದ ಆರನೆಯ ಉಪಗ್ರಹದ ಕೆಲವೊಂದು ಮಾಹಿತಿಗಳನ್ನು ಗಣಿಸಿ ಹೇಳುವುದು ಅವರಿಗೆ ಸಾಧ್ಯವಾಯಿತು. ಅದರ ವ್ಯಾಸ ೩೦ ಕಿ.ಮೀ.ಗಿಂತ ಕಡಿಮೆ ಇರಲಾರದು; ಪರಿಭ್ರಮಣಾವಧಿ ಸುಮಾರು ೧೦ ಗಂಟೆಗಳಿರಬಹುದು. ಯುರೇನಸಿನ ಅತ್ಯಂತ ಒಳ (ಅಂದರೆ ಸಮೀಪದ) ಉಪಗ್ರಹವಾಗಿರಬೇಕು.

ಒಂದು ವೀಕ್ಷಣೆ ಮತ್ತು ಒಂದು ದಾಖಲೆಯಿಂದಲೇ ಆರನೆಯ ಉಪಗ್ರಹದ ಅಸ್ತಿತ್ವಕ್ಕೆ ಸ್ಥಿರೀಕರಣ ಲಭಿಸಿತೆಂದೇನೂ ಭಾವಿಸಬೇಕಾಗಿಲ್ಲ. ದುರ್ದೈವವೆಂದರೆ ಅದರ ಅಸ್ತಿತ್ವದ ಬಗ್ಗೆ ಸುಳಿವನ್ನು ನೀಡಿದ ಆಕಾಶ ನಾಟಕ ಅಥವಾ ಪ್ರಯೋಗವನ್ನು ಪುನರಾವರ್ತಿಸಿ ಪರಿಶೀಲಿಸುವುದು ಅಸಾಧ್ಯ. ಇಷ್ಟು ಪ್ರಬಲ ಹಾಗೂ ಸೂಕ್ಷ್ಮ ದೂರದರ್ಶಕ ವೀಕ್ಷಣೆ ಮತ್ತು ಛಾಯಾಚಿತ್ರಣ ಮಾಡುವುದು ಸದ್ಯದ ತಂತ್ರವಿದ್ಯೆಯ ಅಳವಿಗೆ ಮೀರಿದ್ದು. ಯುರೇನಸಿಗೆ ತೀರ ಹತ್ತಿರವಾಗಿ ಅದರ ಅಂಚಿಗೆ ತಾಗಿ ಪರಿಭ್ರಮಿಸುತ್ತಿದೆ ಎಂದು ಭಾವಿಸಲಾಗಿರುವ ಈ ಪುಟ್ಟ ಕಾಯ ಬೀರುವ ಮಸಕು ಬೆಳಕು ಮಾತೃಗ್ರಹದ ಹೆಚ್ಚಿನ ಬೆಳಕಿನಲ್ಲಿ ಲೀನವಾಗಿ ಇದನ್ನು ಪ್ರತ್ಯೇಕವಾಗಿ ಗುರುತಿಸುವುದು ಸಾಧ್ಯವಾಗುತ್ತಿಲ್ಲ. ನೂತನ ತಂತ್ರಗಳನ್ನು ಆವಿಷ್ಕರಿಸಿ ಅವುಗಳ ಬಳಕೆಯಿಂದ ಇದರ ಇರವನ್ನು ಸಂಶಯಾತೀತವಾಗಿ ಸ್ಥಿರೀಕರಿಸಲು ನಮ್ಮ ಖಗೋಳವಿಜ್ಞಾನಿಗಳು ಪ್ರಯತ್ನಶೀಲರಾಗಿರುವರು. ಹೇಗೂ ಮುಂದಿನ ದಶಕದಲ್ಲಿ (೧೯೮೧–೯೦) ಆಕಾಶನೌಕೆಗಳು ಯುರೇನಸನ್ನು ಪರಿಭ್ರಮಿಸುತ್ತ ಅಥವಾ ಅದರ ಸಮೀಪವಾಗಿ ಹಾಯುತ್ತ ಭೂಮಿಯಲ್ಲಿರುವ ಧೃತರಾಷ್ಟ್ರರಿಗೆ ಅಲ್ಲಿನ ಸಂಜಯ ವರದಿಯನ್ನು ಒಪ್ಪಿಸುವುದು ಸಾಧ್ಯವಾದಾಗ ಅಂತಿಮ ಸ್ಥಿರೀಕರಣ ದೊರೆಯುವುದರಲ್ಲಿ ಸಂಶಯವಿಲ್ಲ.

ಏತನ್ಮಧ್ಯೆ ಭಾರತೀಯ ವಿಜ್ಞಾನಿಗಳ ಈ ಸಾಹಸವನ್ನು ಅವರ ಪೂರ್ವಜನಾದ ಅರ್ಜುನ ಖಂಡಿತವಾಗಿಯೂ "ಮಝು ಭಾಪುರೇ" ಎಂದು ಕೊಂಡಾಡಿರುತ್ತಾನೆ. ಗಗನದಲ್ಲಿ ಸುತ್ತುತ್ತಿದ್ದ ಮತ್ಸ್ಯಯಂತ್ರದ ಕಣ್ಣನ್ನು, ದೃಷ್ಟಿಗೆ ಅಡ್ಡವಾಗಿ ನಿಂತಿದ್ದ ರಂಧ್ರಯುತ ಫಲಕದ ಮೂಲಕ, ಬಾಣ ಹೊಡೆದು ಭೇದಿಸಿ ಯಶೋವಂತನಾದವ ಅವನಲ್ಲವೇ? ✡

ಇದುವೆ ಜೀವ ಇದು ಜೀವನ

"ಕವಿ- ಸಾಹಿತಿ- ಆತ್ಮೀಯ- ಮಿತ್ರ ನಾರಾಯಣ ಸಂಗಮರನ್ನು ಕಳೆದುಕೊಂಡು ನಾಲ್ಕು ವರುಷಗಳೇ ಗತಿಸಿದವೇನೋ.

ವರ್ಷಾನುಗಟ್ಟಲೆ, ವಾರದಲ್ಲಿ ಕಡೆಯ ಪಕ್ಷ ಮೂರು ಸಲ ಬಲು ಕೆಟ್ಟ ತಲೆನೋವು ಬರುತ್ತಿತ್ತು ನನಗೆ. ಏನೆಲ್ಲ ಲೇಹ್ಯ, ರಸ, ಮುಲಾಮು, ಔಷಧಗಳಿಗೂ ಅದು ಬಗ್ಗಿರಲಿಲ್ಲ.

ಬೆಂಗಳೂರು ಆಕಾಶವಾಣಿಯಲ್ಲಿ ಕೆಲಸ ಮಾಡುತ್ತಿದ್ದಾಗ, ಹೀಗೊಂದು ದಿನ ತಲೆ ಶೂಲೆಗೆ ಒಳಗಾಗಿ ಮುಂಡೆಯನ್ನು ಮುಂಗೈಲಿಟ್ಟು ಸಂಕಟಪಡುತ್ತ ಕುಳಿತಿದ್ದೆ. ಅಲ್ಲಿ ಸಾಹಿತ್ಯ ನಿರ್ದೇಶಕರಾಗಿದ್ದ ನಾರಾಯಣ ಸಂಗಮರು, ಹಾಗೇ ಹಾದು ಹೋಗುತ್ತಿದ್ದವರು, ನನ್ನ ಬವಣೆ ನೋಡಿ ಹತ್ತಿರ ಬಂದರು. ಅನುಕಂಪದಿಂದ ಪ್ರಶ್ನೆ ಕೇಳಿದರು. ಹೇಳಿದೆ. "ನಾನೊಂದು ಪುಟ್ಟ ಪ್ರಯೋಗ ಮಾಡಲೆ?" ಎಂದರು. "ಏನು ಬೇಕಾದರೂ ಮಾಡಿ; ತಲೆಯನ್ನು ಚಿವುಟಿ ಹಾಕಿದರೂ ಚಿಂತೆಯಿಲ್ಲ. ಈ ನೋವು ಸಹಿಸಲು ಸಾಧ್ಯವಿಲ್ಲ," ಎಂದೆ. "ಛೇ! ಛೇ! ಅಷ್ಟೆಲ್ಲ ಯಾಕೆ! ತುಂಬ ಸುಲಭ ಇದು" ಎಂದು ನುಡಿದು, ನನ್ನನ್ನು ಕುರ್ಚಿಯ ಮೇಲೆ ನೇರವಾಗಿ ಕುಳ್ಳಿರಿಸಿ, ನನ್ನ ಬಲಗಾಲ ಹೆಬ್ಬೆರಳ ಮೇಲೆ ತಮ್ಮ ಮುಂಡಿಯೂರಿ, ದೇಹದ ಭಾರವನ್ನೆಲ್ಲ ಅದರ ಮೇಲೆ ಹೇರಿ, ನನ್ನೆರಡು ಕಣ್ಣುಗಳ ಮಧ್ಯೆ ಮೂಗಿನ ಮೂಲವನ್ನು ಹಿಡಿದು, ಒಮ್ಮೆ ಬಲವಾಗಿ ಹಿಂಡಿ, ನನ್ನ ಕತ್ತನ್ನು ತಟಕ್ಕನೆ ಹಿಂದಕ್ಕೆ ಒತ್ತಿದರು.

ಒಂದು ನಿಮಿಷ ಲಬೋ ಲಬೋ ಮಾಡಿದೆ.

ಸಂಗಮರ ದಿವ್ಯಾತ್ಮಕ್ಕೆ ಚಿರಶಾಂತಿಯಿರಲಿ.

ಅಂದಿನಿಂದ ಇಂದಿನ ವರೆಗೆ ಆ ಕೆಟ್ಟ ತಲೆನೋವು ಮತ್ತೆ ತಲೆ ಹಾಕಲಿಲ್ಲ! ಆದರೆ ಅಂದಿನಿಂದ ಆರು ತಿಂಗಳಕಾಲ, ನನ್ನ ಬಲಗಾಲ, ಹೆಬ್ಬೆರಳಿನ ಹಾಗೂ ಮೂಗಿನ ಮೂಲದ ನರಕಯಾತನೆ ಕಡಿಮೆಯಾಗಲಿಲ್ಲ.

-ಡಾ. ಎಚ್. ಕೆ. ರಂಗನಾಥ

ಒಮ್ಮೆ ಆದೇ ತಾನೇ ಪೇಟೆಯಿಂದ ತಂದ ಊದುಬತ್ತಿಯಲ್ಲಿಯ ಮೂರು ಕಡ್ಡಿಗಳನ್ನು ಹಿಡಿದುಕೊಂಡು, "ನಾನೂ ದೇವರ ಭಜನೆ ಮಾಡುತ್ತೇನೆ" ಎಂದು ನನ್ನ ಮೂರು ವರ್ಷದ ಮಗನೂ ಗಂಟು ಬಿದ್ದ. ಅರ್ಥಾತ್ ಆ ಮೂರು ಕಡ್ಡಿಗಳನ್ನೂ ಅವನಿಗೆ ಹೊತ್ತಿಸಿ ಕೊಡಬೇಕಾಗಿತ್ತು! ಅವನ ಹಟ ಕಡಿಮೆಯಾಗದೇ ಹೋದಾಗ ಅನಿವಾರ್ಯವಾಗಿ ಮೂರೂ ಊದುಬತ್ತಿಗಳನ್ನು ಹೊತ್ತಿಸಿ ಕೊಟ್ಟೆ. ಅವನು ದೇವರ ಪಟದತ್ತ ನಡೆದ. "ದೇವರಿಗೆ "ವಿದ್ಯಾ-ಬುದ್ಧಿ ಕೊಡು ಎಂದು ಕೇಳಿಕೋ," ಎಂದು ಅವನಿಗೆ ಜೋರಾಗಿ ಹೇಳಿದೆ. ನಾನೂ ನನ್ನವಳೂ ಅವನು ಏನು ಮಾಡುತ್ತಾನೆ; ದೇವರಿಗೆ ಏನು ಬೇಡಿಕೊಳ್ಳುತ್ತಾನೆ ಎಂಬುದನ್ನು ನೋಡುತ್ತಾ ನಿಂತೆವು. ಅವನು ನೇರವಾಗಿ ಶ್ರೀ ಸತ್ಯ ಸಾಯಿಬಾಬಾರ ಪ ಟ ದ ತ್ತ ಹೋಗಿ ಅಲ್ಲಿಯೇ ನಿಂತು ತನ್ನದೇ ಆದ ಮಾತಿನಲ್ಲಿ ಹೇಳಿದ: "ಶಂಕರ ಭಜನಾ ಸತ್ಯ-ಶಂಕರ ಭಜನಾ...ಸಾಯಿ ಭಜನಾ...ಏ ದೇವರ ನೀ ನನಗ ವಿದ್ಯಾ-ಬುದ್ಧಿ ಕೊಡು...ಇಲ್ಲಾದರ...ಇಲ್ಲಾದರ...ಈ ಮೂರೂ ಕಡ್ಡಿ ಚುಚ್ಚತೇನ ನೋಡು..."

-ಡಿ. ವಿ. ಸದರಜೋಶಿ

ಸುಮಾರು ನಾಲ್ಕು ವರುಷಗಳ ಹಿಂದೆ ನನ್ನ ಪರಿಚಿತನೊಬ್ಬನು ತನ್ನ ಪ್ರಾಪಂಚಿಕ ಅಡಚಣೆ ಹೇಳಿ ನನ್ನಿಂದ ೧೦ ರೂಪಾಯಿ ಕೈಗಡ ಪಡೆದುಕೊಂಡು ಹೋದ. ಅವನಾಗಿಯೇ ಹಣ ಹಿಂದಿರುಗಿಸಬಹುದು

ಎಂದು ಕೆಲವು ದಿನ ಕಾದೆ. ಹಣ ಮರಳಲಿಲ್ಲ. ಮೂರು-ನಾಲ್ಕು ಸಲ ವಿಚಾರಿಸಿದೆ. ಪ್ರಯೋಜನವಾಗಲಿಲ್ಲ. ಇಂದು-ನಾಳೆ ಎಂದು ಉತ್ತರ ನೀಡಿ ಜಾರಿಕೊಳ್ಳತೊಡಗಿದ. ಈ ವಿಷಯವನ್ನು ಆತ್ಮೀಯ ಗೆಳೆಯರೊಬ್ಬರಿಗೆ ತಿಳಿಸಿದಾಗ ಅವರೂ ಅವನನ್ನು ವಿಚಾರಿಸಿದರು. ಅವರಿಗೂ ಹಾರಿಕೆಯ ಉತ್ತರ ನೀಡಿ ಜಾರಿಕೊಂಡ.

ಇತ್ತೀಚೆಗೆ ಅವನು ಅಜಾರಿಯಿಂದ ಹಾಸಿಗೆ ಹಿಡಿದ. ವೈದ್ಯರ ಬಳಿಗೆ ಚಿಕಿತ್ಸೆಗೆ ಹೋಗಲು ಹಣವಿಲ್ಲದೆ ವಿಮಂಚನೆಗೊಳಗಾದ. ಒಂದು ದಿನ ಮುಂಜಾನೆ ಅಂಜುತ್ತ ಅಂಜುತ್ತ ನಮ್ಮ ಮನೆಗೆ ಬಂದು ತನ್ನ ಬೇನೆಯ ಬಗ್ಗೆ ತೋಡಿಕೊಂಡ. ಕೊನೆಗೆ ೨೦ ರೂಪಾಯಿ ಕೈಗಡ ಕೊಟ್ಟು ಉಪಕಾರ ಮಾಡಬೇಕೆಂದು ಅತ್ಯಂತ ದೈನ್ಯದಿಂದ ಬೇಡಿಕೊಂಡ. ತನ್ನ ಮಗನಿಂದ ಮನಿಯಾರ್ಡರ್ ಬಂದ ತಕ್ಷಣ ನನ್ನ ಹಣ ಹಿಂತಿರುಗಿಸುವುದಾಗಿ ವಚನವಿತ್ತ. ಅವನ ಕಷ್ಟದ ಪರಿಸ್ಥಿತಿ ಕಂಡು ಹಣ ಕೊಟ್ಟೆ. ಅವನು ಬಹಳ ಉಪಕಾರವಾಯಿತು ಎಂದು ಹೇಳಿ ಹೊರಟು ಹೋದ. ನನಗೆ ಹಿಂದೆ ಕೊಡಬೇಕಾಗಿದ್ದ ೧೦ ರೂಪಾಯಿಗಳ ಬಗ್ಗೆ ಅವನು ಪಿಟ್ಟೆನ್ನಲಿಲ್ಲ. ಆ ಬಗ್ಗೆ ನಾನೂ ಒಂದು ಶಬ್ದ ಕೂಡ ಮಾತನಾಡಲಿಲ್ಲ.

ನಿನ್ನೆ ಸಾಯಂಕಾಲ ಅವನು ನಮ್ಮ ಮನೆಗೆ ಬಂದು ನನ್ನ ಕೈಗೆ ೩೦ ರೂಪಾಯಿ ಕೊಟ್ಟ. ಕೈ ಜೋಡಿಸಿ ದೈನ್ಯದಿಂದ, "ರಾಯರೆ, ನನ್ನಿಂದ ಬಹಳ ದೊಡ್ಡ ತಪ್ಪು ಆಗಿದೆ. ನೀವು ಹಿಂದೆ ಕೊಟ್ಟ ೧೦ ರೂ. ನಿಮಗೆ ಮರಳಿ ಕೊಟ್ಟಿರಲಿಲ್ಲ," ಎಂದು ಪ್ರಾರಂಭಿಸಿದನಾದರೂ ಅವನಿಗೆ ಮುಂದೆ ಮಾತಾಡಲಾಗಲಿಲ್ಲ.

–ಮಲ್ಲಿಕಾರ್ಜುನ ಹೆಗ್ಗಳಗಿ

ಒಮ್ಮೆ ನಾನು, ನನ್ನ ಸ್ನೇಹಿತ ಇಬ್ಬರೂ ಮೆಜೆಸ್ಟಿಕ್ ಕಡೆಗೆ ವಾಕಿಂಗ್ ಹೋಗುತ್ತಿದ್ದೆವು. ಆನಂದರಾವ್ ಸರ್ಕಲ್ ಬಳಿ ಬರುತ್ತಿದ್ದಂತೆ ಕೆಂಪು ಸಿಗ್ನಲ್ ಇರುವುದು ಕಂಡುಬಂತು. ಹಸಿರು ಸಿಗ್ನಲ್ ಬರುವುದನ್ನೇ ಕಾಯುತ್ತಾ ನಿಂತೆವು. ಇದ್ದಕ್ಕಿದ್ದಂತೆ ನನ್ನ ಸ್ನೇಹಿತ ಎದುರು ರಸ್ತೆಯಲ್ಲಿ ನಿಂತ ಒಬ್ಬ ವ್ಯಕ್ತಿಯನ್ನು ತೋರಿಸಿ ದಿಟ್ಟಿಸಿ ನೋಡುವಂತೆ ಹೇಳಿದ. ನಾನೂ ನೋಡಿದೆ, ಆದರೆ ಯಾರು ಅಂತ ತಿಳಿಯಲಿಲ್ಲ. ಆದರೆ ನಮ್ಮಿಬ್ಬರಿಗೂ ಆತನನ್ನು ಎಲ್ಲೋ ನೋಡಿದಂತೆ ಅನಿಸುತ್ತಿತ್ತು. ಕಡೆಗೆ ಹಸಿರು ದೀಪ ಬಂದೊಡನೆ ಅವರನ್ನು ಕೇಳುವುದೆಂದು ತೀರ್ಮಾನಿಸಿದೆವು. ಅದರಂತೆ ಓಡುತ್ತ ಹೋಗಿ ರಭಸವಾಗಿ ಹೋಗುತ್ತಿದ್ದ ಆತನನ್ನು ನಿಲ್ಲಿಸಿ, "ನಿಮ್ಮನ್ನು ಎಲ್ಲೋ ನೋಡಿದೀನಲ್ಲ," ಎಂದೆ. "ಸಾರಿ. ನೀವು ನನ್ನನ್ನು ಮತ್ತಾರೋ ಅಂತ ತಿಳಿದಿದೀರ. ಕ್ಷಮಿಸಿ," ಆತ ನಯವಾಗಿ ಹೇಳಿ ಮುನ್ನಡೆದ. ಆತನ ಬಗೆಗೇ ಯೋಚಿಸುತ್ತಾ ರಾತ್ರಿಯೆಲ್ಲಾ ಕಳೆದೆವು. ಬೆಳಗಾದಾಗ ನನ್ನ ಗೆಳೆಯನನ್ನು ಕುರಿತು, "ಲೋ ಇವತ್ತಾದ್ರೂ ಕಾಲೇಜಿಗೆ ಹೋಗೋಣ" ಎಂದೆ. ನಾವಿಬ್ಬರೂ ಕಾಲೇಜಿಗೆ ತಿಂಗಳಿಗೊಮ್ಮೆ ಮಾತ್ರ ಬರುತ್ತಿದ್ದುದು. ಹುಡುಗರೆಲ್ಲಾ ಅಗಲೆ ತಿಂಗಳಾಯ್ತೇನೋ ಅಂತ ಆಶ್ಚರ್ಯ ವ್ಯಕ್ತಪಡಿಸಿದರು. ಬೆಲ್ ಆದ ತಕ್ಷಣ ಎಲ್ಲರೂ ಕ್ಲಾಸಿಗೆ ಹೋದೆವು. ಎಷ್ಟು ಹೊತ್ತಾದರೂ ಲೆಕ್ಚರರ್ ಬರಲಿಲ್ಲ. ಕಾದೂ ಕಾದೂ ಬೇಸತ್ತೆವು. ಕಡೆಗೂ ಅವರು ಬಂದರು. ಬಂದವರೇ ಆಗಲೇ ಹೊರಡುವುದಕ್ಕೆ ರೆಡಿಯಾಗಿದ್ದ ನಮ್ಮನ್ನು ಒಂದು ರೀತಿ ನೋಡಿ, ತಕ್ಷಣ ಆನಂದದಿಂದ ಹೇಳಿದರು: "ರೀ, ಮಿಸ್ಟರ್, ಎಲ್ಲೋ ನೋಡಿದೀನಿ ಅಂದ್ರಲ್ಲಾ, ಇಲ್ಲೆ ಕಾಲೇಜಲ್ಲಿರ್ಬೇಕು. ಯಾಕಂದ್ರೆ ನಾನು ಇಲ್ಲಿ ಸೇರಿ ಆಗಲೇ ನಾಲ್ಕು ತಿಂಗಳಾಯಿತು," ಎಂದಾಗ ನಾವು ತಲೆ ತಗ್ಗಿಸಿದೆವು.

–ತುರುವೇಕೆರೆ ಶ್ರೀನಿವಾಸ ಪಂಡಿತ

ಸ್ನಾಯು ಹಿಡಿತವೇ?




ಅಯೋಡೆಕ್ಸ್ ಗುಣಪಡಿಸುವ ಮುಲಾಮು ತಿಕ್ಕಿರಿ.

ಬೇರೆ ಮುಲಾಮುಗಳು
ನೋವನ್ನು ಉಪಶಮನ
ಗೊಳಿಸಬಹುದು. ಆದರೆ
ಅಯೊಡೆಕ್ಸ್ ಉಪಶಮನ
ಗೊಳಿಸುತ್ತಲೇ ನೋವನ್ನು
ಗುಣಪಡಿಸುತ್ತದೆ. ಏಕೆಂದರೆ
ಅದರಲ್ಲಿ ಅಯೋಡಿನ್ ಇದೆ.

ಸ್ನಾಯು ಮತ್ತು ಸಂದು
ನೋವುಗಳಿಗೆ ಏಕಮಾತ್ರ
ಮುಲಾಮು—ಅಯೊಡೆಕ್ಸ್.





ಅಯೋಡೆಕ್ಸ್
ಹಚ್ಚಿರಿ, ಮತ್ತೆ ಓಡಾಡಿರಿ.

ಲಿಂಟಾಸ್-IODEX.12-172 KN

ಕ್ರಿಸ್‌ಮಸ್ ಅತಿಥಿ

ಮೂಲ: ಕೆನೆತ್ ಬ್ರೌನ್
ಕನ್ನಡಕ್ಕೆ: ರಾಮಾನುಜಾನಂದ

ಬಹು ಕಾಲದ ವರೆಗೆ ಮನೆ ಬಿಟ್ಟು ದೂರದಲ್ಲಿದ್ದಾಗ ಮತ್ತೆ ಮನೆಗೆ ಮರಳಬೇಕು, ನಾಲ್ಕು ಜನ ಆಪ್ತಬಾಂಧವರೊಡನೆ ಕುಶಲ ಸಂಭಾಷಣೆ ನಡೆಸಬೇಕು ಎಂಬ ಭಾವನೆ ಮೂಡುವುದು ಸಹಜವೇ. ದಕ್ಷಿಣ ಅಮೇರಿಕದ ಕಾಡುಗಳಲ್ಲಿದ್ದುಕೊಂಡು ನಾಲ್ಕು ತಿಂಗಳುಗಳ ವರೆಗೆ ನನ್ನ ಸಸ್ಯೋದ್ಯಾನಕ್ಕಾಗಿ ಗಿಡಮೂಲಿಕೆಗಳನ್ನು ಸಂಗ್ರಹಿಸಿದ ಮೇಲೆ ಮನೆಗೆ ಮರಳಿ ನನ್ನವರೊಂದಿಗೆ ಕಾಲ ಕಳೆಯಬೇಕೆನ್ನುವ ತವಕ ದಿನೇ ದಿನೇ ಹೆಚ್ಚಾಗತೊಡಗಿತ್ತು.

ಮನೆಗೆ ಹೋಗುವ ತಯಾರಿ ನಡೆಸತೊಡಗಿದೆ. ಸರಕು ಸರಂಜಾಮುಗಳೆಲ್ಲವನ್ನೂ ಕಟ್ಟಿದ ನಂತರ ಅಲ್ಲಿನ ಆದಿವಾಸಿ ಪೆದ್ರೊ, "ಹೇಗೂ ಕ್ರಿಸ್‌ಮಸ್ ಸಮೀಪಿಸುತ್ತಿದೆ; ನಾಲ್ಕು ದಿನ ಇಲ್ಲಿದ್ದುಕೊಂಡು ನಮ್ಮ ಆತಿಥ್ಯವನ್ನಾದರೂ ಸ್ವೀಕರಿಸಬಹುದಲ್ಲ?" ಎಂದ. ಮಲತ್ರೋ ನದಿಯ ತೀರದಲ್ಲಿರುವ ಆದಿವಾಸಿಗಳ ವಿಚಾರವನ್ನು ಸಾಕಷ್ಟು ಕೇಳಿ ತಿಳಿದಿದ್ದೆನಾದ್ದರಿಂದ ಪೆದ್ರೊವಿನ ಸೂಚನೆಯನ್ನು ಕೂಡಲೇ ಒಪ್ಪಿಕೊಂಡೆ.

ಮರುದಿನವೇ ನಾವಿಬ್ಬರೂ ಸರಕು ಸರಂಜಾಮುಗಳ ಸಮೇತವಾಗಿ ದೋಣಿಯನ್ನೇರಿ ಸಿಸ್ವೇಶಿಯ ಗ್ರಾಮದತ್ತ ನಡೆದೆವು. ಪೆದ್ರೊವಿಗೆ ಇಂಗ್ಲೀಷಾಗಲಿ, ಸ್ಪಾನಿಷ್ ಭಾಷೆಯಾಗಲಿ ಸರಿಯಾಗಿ ಬರುತ್ತಿರಲಿಲ್ಲ. ಆದರೂ ಅವನು ಹೇಳುವುದನ್ನು ಕೇಳಿದರೆ ಕಳೆದ ೨೦ ವರ್ಷಗಳಲ್ಲಿ ಆ ಗ್ರಾಮಕ್ಕೆ ಯಾವ ಬಿಳಿಯ ವ್ಯಕ್ತಿಯೂ ಹೋಗಿರಲಿಲ್ಲ ಎಂಬ ಅರ್ಥ ಹೊರಡುತ್ತಿತ್ತು.

'ಇಂದು ಕ್ರಿಸ್‌ಮಸ್ಸಿನ ಮುಂಚಿನ ದಿನ. ಈ ದಿನವನ್ನು ನಾನು ಎಷ್ಟೋ ಜನರು ಕನಸಿನಲ್ಲಿ ಕಂಡರಿಯದ ಸಿಸ್ವೇಶಿಯ ಗ್ರಾಮದಲ್ಲಿ ಕಳೆಯುತ್ತೇನೆ,' ಆ ಆದಿವಾಸಿಗಳ ಅತಿಥಿಯಾಗುತ್ತೇನೆ." ಅಂದುಕೊಂಡೆ. ಹಿಂದಿನ ಕ್ರಿಸ್‌ಮಸ್ಸಿನ ನೆನಪು ಮರುಕಳಿಸಿ ಬಂದು, ನನ್ನ ಆಪ್ತಬಾಂಧವರ ಚಿತ್ರ ಕಣ್ಣಿಗೆ ಕಟ್ಟಿದಂತಾಯಿತು.

ಸಿಸ್ವೇಶಿಯವನ್ನು ತಲಪಿದಾಗ ಮುಚ್ಚಂಜೆಯಾಗುತ್ತಾ ಬಂದಿತ್ತು. ಆ ಗ್ರಾಮದಲ್ಲಿರುವ ಗುಡಿಸಲುಗಳ ಸಂಖ್ಯೆ ಹತ್ತಿಪ್ಪತ್ತಕ್ಕಿಂತ ಹೆಚ್ಚಾಗಿರಲಿಲ್ಲ. ಬಹುಶಃ ವನ್ಯಮೃಗಗಳಿಂದ ರಕ್ಷಿಸಿಕೊಳ್ಳುವುದಕ್ಕೆಂದೇನೋ ಗುಡಿಸಲುಗಳನ್ನು ಮಂಚಿಗೆಯ ಮೇಲೆ ಕಟ್ಟಿದ್ದರು. ಮುದುಕನೊಬ್ಬ ನಮ್ಮನ್ನು ನೋಡಿ ಸ್ತಂಭಿತನಾದ. ಆಶ್ಚರ್ಯದಿಂದ ನಮ್ಮನ್ನು ಎವೆಯಿಕ್ಕದೆ

ನೋಡಿ, "ಹೋಬರೇಸ್, ಹೋಬರೇಸ್," ಎಂದು ಕೂಗಿದ. ಗಂಡಸರೂ ಹೆಂಗಸರೂ ಕೂಡಲೇ ಗುಡಿಸಲುಗಳಿಂದ ಹೊರಬಂದು ನನಗೆ ನೋಡಲು ಬಂದು ನಮಸ್ಕರಿಸಿದರು. ವಿಚಿತ್ರವಾದ ನೃತ್ಯದಲ್ಲಿ ಏನೋ ಹಾಡಿದರು. ಬಹುಶಃ ಅದು ದೇವರ ಪ್ರಾರ್ಥನೆಯಾಗಿರಬೇಕು ಎಂದು ನಾನೆಂದುಕೊಂಡೆ. ನಾನು ದೋಣಿಯಿಂದಿಳಿದಾಗ ಒಬ್ಬರೂ ನನ್ನತ್ತ ಕಣ್ಣೆತ್ತಿ ನೋಡಿರಲಿಲ್ಲ, ಅಂತಹುದರಲ್ಲಿ ಈಗ ಆಬಾಲವೃದ್ಧರಾಗಿ ಎಲ್ಲರೂ ನನಗೆ ನಮಸ್ಕರಿಸಿದ್ದೇಕೆ? ನನಗೆ ಅರ್ಥವಾಗಲಿಲ್ಲ. ಏನಾದರೂ ಸ್ವಲ್ಪ ವಿವರಣೆ ಕೊಡುವನೆಂದು ಪೆದ್ರೊವಿನತ್ತ ನೋಡಿದಾಗ ಆತ ತನ್ನ ಮುಖವನ್ನು ಪಕ್ಕಕ್ಕೆ ಹೊರಳಿಸಿಕೊಂಡ.

"ನಾವು ಈ ರಾತ್ರಿ ಇಲ್ಲಿಯೇ ಉಳಿದುಕೊಳ್ಳುತ್ತೇವೆಂದು ಅವರಿಗೆ ಹೇಳುತ್ತೀಯಾ?" ಎಂದು ನಾನು ಪೆದ್ರೊವನ್ನು ಕೇಳಿದೆ. ಆತ ಅದನ್ನು ಮೂಲನಿವಾಸಿಗಳ ಭಾಷೆಗೆ ತರ್ಜುಮೆಗೊಳಿಸಿ ಹೇಳಿದಾಗ ಅವರೆಲ್ಲ ನನ್ನ ಹತ್ತಿರ ಓಡಿ ಬಂದರು. ಅವರ ಮುಖಗಳಲ್ಲಿ ಕೃತಜ್ಞತಾಭಾವ ಮೂಡಿತ್ತು. ಕಣ್ಣುಗಳು ಆನಂದಾಶ್ರುಗಳನ್ನು ಸುರಿಸುತ್ತಿದ್ದವು. ಅಂತಹ ಮುಖಭಾವವನ್ನು ನಾನೆಂದೂ ಮರೆಯಲಾರೆ.

ನಾನು ಸ್ನೇಹಪೂರಿತವಾದ ದೃಷ್ಟಿಯನ್ನು ಅವರೆಡೆಗೆ ಹರಿಸಿದಾಗ ಅವರು ನನ್ನ ಪಾದಗಳಿಗೆ ಎರಗಿದರು. ಕೆಲವರು ನನ್ನ ಪಾದುಕೆಗಳನ್ನು ಚುಂಬಿಸಿದರು.

ನಾನು ನಿಶ್ಚಿಂತನಾಗಿ ನದೀತೀರದಲ್ಲಿ ಕುಳಿತೆ; ಆಕಾಶದಿಂದ ಕತ್ತಲೆಯು ಕಾಡಿಗೆ ಉದುರುತ್ತಿತ್ತು. ಗಾಢಾಂಧಕಾರ ಮೆಲ್ಲನೆ ಹೆಚ್ಚುತ್ತಿತ್ತು; ಆ ಆದಿವಾಸಿಗಳು ತಮ್ಮೊಳಗೆ ಮೆಲುದನಿಯಲ್ಲಿ ಏನೇನೋ ಮಾತನಾಡಿಕೊಳ್ಳುತ್ತಿದ್ದರು. ಅಷ್ಟರಲ್ಲಿ ಬೆತ್ತ ಊರಿಕೊಂಡು ಬಾಲಿಕೆಯೊಬ್ಬಳು ಬಂದಳು. ಅವಳಿಗೆ ನಡೆಯಲು ಕಷ್ಟವಾಗುತ್ತಿತ್ತು. ಅವಳ ದೇಹದ



ಎಡ ಭಾಗ ಪಾರ್ಶ್ವವಾಯುವಿನಿಂದ ಪೀಡಿತವಾಗಿತ್ತು. ಬೇರೆ ಯಾರೂ ಸ್ವಲ್ಪವೂ ಕದಲದೇ ತದೇಕಚಿತ್ತರಾಗಿ ಅವಳನ್ನೇ ನೋಡುತ್ತಿದ್ದರು. ಅವಳ ಶರೀರವು ಕಂಪಿಸುತ್ತಿತ್ತು. ಇನ್ನೇನು ಕಾದಿದೆಯೋ ಎಂದು ಆಶ್ಚರ್ಯಪಡುತ್ತ ನಾನು ಎದ್ದುನಿಂತೆ. ನಾನು ಏಳುತ್ತಿದ್ದಂತೆಯೇ ಅವಳು ಮುಗ್ಗರಿಸಿದಳು. ಬೆತ್ತ ಅವಳ ಕೈಯಿಂದ ಜಾರಿ ಬಿತ್ತು. ನಾನು ನಡುಗುತ್ತಿರುವ ಅವಳ ಶರೀರವನ್ನು ಹಿಡಿದುಕೊಂಡೆ. ಆಕೆ ನನ್ನಿಂದ ಕೊಸರಿಕೊಂಡು ಅತ್ಯಾನಂದದಿಂದ ಕೂಗುತ್ತ ಮಿಂಚಿನಂತೆ ಅವರೆಡೆಗೆ ಓಡಿಹೋದಳು. ಅವಳ ಬಂಧುಗಳು ಉಚ್ಚಸ್ವರದಿಂದ ಸುಮಧುರವಾಗಿ ಹಾಡತೊಡಗಿದರು.

ಬಾಲಿಕೆಯ ಬೆತ್ತ ನನ್ನ ಪಾದದ ಬಳಿ ಬಿದ್ದಿತ್ತು. 'ವಿಶ್ವಾಸವೆಂದರೆ ಅಸಂಭವವನ್ನು ನಂಬುವ ಶಕ್ತಿ' ಎಂದು ಹೇಳುವುದನ್ನು ನಾನು ಕೇಳಿದ್ದೆ. ಈ ಬಡವರು, ನಮ್ಮ ವೈಜ್ಞಾನಿಕ ಪ್ರಗತಿಯನ್ನು ಕೇಳಿ ಶ್ವೇತವರ್ಣೀಯರಿಗೆ ರೋಗವನ್ನು ಗುಣಪಡಿಸುವ ಶಕ್ತಿಯಿದೆಯೆಂದು ನಂಬಿರಬಹುದೆ? ಎಂಬ ಭಾವನೆ ನನಗೆ ಬಂತು.

ಈ ವಿಚಿತ್ರವನ್ನು ನೋಡಿದ ನನಗೆ ಅಸ್ವಾಸ್ಥ್ಯವಾದಂತೆನಿಸಿತು. ನಾನು ಆ ಗ್ರಾಮದ ಹಿರಿಯನ ಬಳಿ ಹೋಗಿ ಸನ್ನೆಯ ಮೂಲಕ ನಾನು ವಿಶ್ರಾಂತಿ ತೆಗೆದುಕೊಳ್ಳುವೆನೆಂದು ಸೂಚಿಸಿದೆ. ಅವನು ನನ್ನನ್ನು ಅಲ್ಲಿರುವ ದೊಡ್ಡ ಗುಡಿಸಲಿಗೆ ಕರೆದುಕೊಂಡು ಹೋದ. ಅಲ್ಲಿ ಎಲೆಗಳ ಮೇಲೆ ಬಟ್ಟೆ ಹಾಸಿದ ಒಂದು ಸೆಜ್ಜೆ ನನಗಾಗಿ ಕಾದಿತ್ತು. ಮೊದಲೇ ಹಳ್ಳಿಗಾಡು. ಅದರಲ್ಲೂ ಈ ಜನ ಅನಾಗರಿಕರು. ಆದಿವಾಸಿಗಳು. ನನಗಾಗಿ ಇಷ್ಟು ವ್ಯವಸ್ಥೆ ಮಾಡಿದ್ದೇ ಹೆಚ್ಚು ಎಂದು ಅಷ್ಟರಲ್ಲೆ ತೃಪ್ತನಾದೆ. ನನಗೆ ಎಚ್ಚರವಾದಾಗ ಬೆಳಗಾಗಿತ್ತು. ಕ್ರಿಸ್‌ಮಸ್ ದಿನ. ಆದರೂ ನಂಬಲಸಾಧ್ಯ. ಅನಾಗರಿಕರೆಡೆಯಲ್ಲಿ ಏನು ಕ್ರಿಸ್‌ಮಸ್? ಹಿಂದಿನ ಕ್ರಿಸ್‌ಮಸ್ಸು ನೆನಪಾದಾಗ ಸಂಕಟವಾಯಿತು.

ಅಷ್ಟರಲ್ಲಿ ಗ್ರಾಮವಾಸಿಗಳು ತರತರದ ಕಾಣಿಕೆಗಳನ್ನು ತೆಗೆದುಕೊಂಡು ಬಂದರು. ನನ್ನನ್ನು ನೋಡಿದೊಡನೆಯೇ ಅವರು ಭೂಮಿಗೆರಗಿ ಅವುಗಳನ್ನು ಅರ್ಪಿಸಿದರು. ನಾನೇನು ಸ್ವಪ್ನ ನೋಡುತ್ತಿರುವೆನೆ ಎನಿಸಿತು. ನೋಡನೋಡುತ್ತಿರುವಂತೆಯೇ ಅಲ್ಲಿ ಮೃಗದ ಚರ್ಮ, ಕಟ್ಟಿಗೆಯಲ್ಲಿ ಕೊರೆದ ಪ್ರತಿಮೆಗಳು, ಬಾಳೆಯ ಹಣ್ಣು, ತರತರದ ಬುಟ್ಟಿಗಳು—ಹೀಗೆ ಹತ್ತಾರು ಬಗೆಯ ವಸ್ತುಗಳ ರಾಶಿಯೆ ಬಿದ್ದಿತ್ತು.

ನಾನು ನನ್ನ ಕೃತಜ್ಞತೆಯನ್ನು ಸನ್ನೆಯ ಮೂಲಕ ವ್ಯಕ್ತಪಡಿಸಿದೆ. ಅಷ್ಟರಲ್ಲಿ ಆ ಆದಿವಾಸಿಗಳು ನನಗಾಗಿ ತಿಂಡಿಗಳನ್ನು ತಂದರು. ಉಪಾಹಾರದ ನಂತರ ನನ್ನ ಸಂಗಾತಿಗೆ "ಪೆದ್ರೊ, ನಾವು ಈಗಲೇ ಹೊರಡಬೇಕು," ಎಂದು ಹೇಳಿದೆ. ಅವನು ಆ ವೃದ್ಧನ ಬಳಿಗೆ ಹೋಗಿ ನಾವು ಈಗಲೆ ಹೊರಡುತ್ತೇವೆಂದು



ನಿಮಗಾಗಿ ಏನೂ ಕೇಳಲಿಲ್ಲ.. ತಮ್ಮ ಗಾಡಿ ವಿಚಾರಿಸಿ ಕೊಂಡ್ರು- ಬರ್ಟನ್ ಮತ್ತ್ರ ಟೇಲರ್‌ನ ಯಾಕೆ ಬಿಟ್ಟ


ಉಸಿರಿಗೆ ಅನ್ಯೋನ್ಯವಾದ ಕ್ಲೋಸ-ಅಪ ಆಹ್ಲಾದ
ಮತ್ತು ಹಲ್ಲುಗಳಿಗೆ ಐಕ್ಯವಾದ ಕ್ಲೋಸ-ಅಪ ಬಿಳಿಪು.
ಕ್ಲೋಸ್-ಅಪ್
ಟೂಥ್‌ಪೇಸ್ಟ ಮತ್ತು ಮೌಥ್‌ವಾಶ
ಎರಡೂ ಒಂದರಲ್ಲಿಯೇ
Close-up
Close-up
ಕರ್ನಾಟಕ, ಮಹಾರಾಷ್ಟ್ರ,
ಮಧ್ಯ ಪ್ರದೇಶ, ಗುಜರಾತ, ಗೋವಾ,
ತಮಿಳುನಾಡು, ಆಂಧ್ರಪ್ರದೇಶ
ಮತ್ತು ಕೇರಳ ರಾಜ್ಯಗಳ ಆಯ್ದ
ನಗರಗಳಲ್ಲಿ ದೊರೆಯುತ್ತದೆ.
ಕ್ಲೋಸ್-ಅಪ್
ಮಧುರ ಮಿಲನಕ್ಕಾಗಿ
ಹಿಂದುಸ್ತಾನ್ ಲೀವರ್ ಅವರ ಉತ್ಕೃಷ್ಟ ಉತ್ಪಾದನೆ
ಲಿಂಟಾಸ್-CX.14-172 KN

ವೃದ್ಧ ನಾವರೊ ನನ್ನ ಬಳಿಗೆ ಬಂದು, ಪೆದ್ರೊವಿನ ಮೂಲಕ ಮತ್ತು ಸಂಜ್ಞೆಯಿಂದ ಇನ್ನೂ ಇರಬೇಕಾಗಿ ನನ್ನಲ್ಲಿ ಕೇಳಿಕೊಂಡ.

ಮನೆಯ ಕಡೆಗೆ ಮನಸ್ಸು ಎಳೆಯುತ್ತಿತ್ತು. ತಡ ಮಾಡುವಂತಿರಲಿಲ್ಲ. ನಾನು ಹೊರಡಲೇಬೇಕೆಂದು ತೀರ್ಮಾನಿಸಿದಾಗ ಅವನು ಗ್ರಾಮದ ಜನರನ್ನೆಲ್ಲಾ ಒಂದುಗೂಡಿಸಿದ. ಅವರೆಲ್ಲರೂ ನನಗೆ ಮೊಣಕಾಲೂರಿ ನಮಸ್ಕರಿಸಿದರು. ಸಂಜ್ಞೆಯ ಮೂಲಕ ಏನನ್ನೋ ಹೇಳಲು ಪ್ರಯತ್ನಿಸಿದರು. "ಆಶೀರ್ವದಿಸಿರಿ," ಎಂದ ಪೆದ್ರೊ. ನಾನಾದರೊ ಓರ್ವ ವಯಸ್ಕ ವನಸ್ಪತಿ ಶಾಸ್ತ್ರದ ಪ್ರಾಧ್ಯಾಪಕ. ಅವರನ್ನು ನಾನು ಆಶೀರ್ವದಿಸುವುದೆ? ಆದರೆ ಆ ಜನ ಹಾಗೆಯೆ ಬಿಡಬೇಕಲ್ಲ? ಕೊನೆಗೆ ನಾನು ಅವರ ಒತ್ತಾಯಕ್ಕೆ ಮಣಿದು ಕೈಯೆತ್ತಿ, "ನಾವು ಒಬ್ಬರಿಂದೊಬ್ಬರು ದೂರದಲ್ಲಿರುವಾಗ ಭಗವಂತನೇ ನಮ್ಮನ್ನು ಕಾಪಾಡಲಿ," ಎಂದೆ. ಅನಂತರ ದೋಣಿಯನ್ನೇರಿ ನಾವಿಬ್ಬರೂ ಹೊರಟೆವು. "ಪೆದ್ರೊ, ಇದೆಲ್ಲದರ ಅರ್ಥವೇನು?" ಎಂದು ಕೇಳಿದೆ. ಅವನು ಆಶ್ಚರ್ಯದಿಂದ ನನ್ನನ್ನೊಮ್ಮೆ ನೋಡಿ, "ನಿಮಗೆ ಗೊತ್ತಿರಲೇಬೇಕಲ್ಲ?" ಎಂದ.

"ಇಲ್ಲ, ನನಗೇನೂ ಗೊತ್ತಿಲ್ಲ; ನೀನೇ ಹೇಳು," ಎಂದೆ. ಅವನು ಹೇಳಿದ: "ಕ್ರಿಸ್ತನ ಆಗಮನ." ಯಾವ ಶ್ವೇತವರ್ಣೀಯರೂ ಅಷ್ಟು ಶ್ರದ್ಧೆಯಿಂದ ಆ ಶಬ್ದಗಳನ್ನು ಉಚ್ಚರಿಸಿರಲಿಕ್ಕಿಲ್ಲ,

ಕ್ರಿಸ್ತನ ಆಗಮನ! ಹಿಂದಿನ ರಾತ್ರಿ ನಡೆದ ಘಟನೆಯೆಲ್ಲಾ ನೆನಪು ಬಂತು.

"ಹೌದು, ಹಳೆ ಪಾದ್ರಿಗಳು ಹೇಳಿದ್ದರು: ಕ್ರಿಸ್ತನ ಆಗಮನ. ಕ್ರಿಸ್‌ಮಸ್ಸಿನ ಹಿಂದಿನ ದಿನ ಆತ ದೋಣಿಯಲ್ಲಿ ಸಾಯಂಕಾಲ ಬರುತ್ತಾನೆ, ರಾತ್ರಿ ಸಿಸ್ವೇಶಿಯದಲ್ಲಿ ಇರುತ್ತಾನೆ. ಇದು ಸಿಸ್ವೇಶಿಯದಲ್ಲಿನ ಎಲ್ಲರಿಗೂ ಗೊತ್ತು."

ಈ ಕಾರಣದಿಂದಲೇ ಅವರಿಂದ ಅಂಥ ಸ್ವಾಗತ ಮತ್ತು ಕಾಣಿಕೆಗಳು! ನಾನು ಸ್ತಂಭೀಭೂತನಾದೆ. ಆ ಬಾಲಿಕೆಯ ವಿಶ್ವಾಸವಾದರೂ ಎಂತಹದು! ಎಂತಹ ಅಸಾಧಾರಣ ಬಾಲಕಸದೃಶ ವಿಶ್ವಾಸ ಈ ಆದಿವಾಸಿಗಳದು! ಎಂತಹ ಪರಿಪೂರ್ಣ ಆದರ!

ದೋಣಿ ಮುಂದೆ ಸಾಗಿತು; ದೂರದಲ್ಲಿ ಸಂಗೀತದ ದನಿ ಕೇಳಿಸುತ್ತಿತ್ತು. ನಾನು ಸಿಸ್ವೇಶಿಯಕ್ಕೆ ಬಂದಾಗ ಈ ಜನ ನನ್ನ ಸ್ವಾಗತಕ್ಕಾಗಿ ಸುಮಧುರ ಗೀತಗಳನ್ನು ಹಾಡಿದರು; ಈಗ ನನಗೆ ವಿದಾಯ ಹೇಳಲು, ಹಾಡುಗಳನ್ನು ಹಾಡುತ್ತಿದ್ದಾರೆ! ಪೆದ್ರೊ ಮೆಲ್ಲಗೆ ಕೇಳಿದ: "ನಿಜಕ್ಕೂ ಹೇಳಿ, ಅವನೇ ನೀವಲ್ಲವೆ?"

ಈ ಆದಿವಾಸಿಗಳು ಅನಾಗರಿಕರೋ ಅಥವಾ ನಾನೇ ಅನಾಗರಿಕನೋ ಎಂಬುದು ನನಗೆ ಅರ್ಥವಾಗಲಿಲ್ಲ. ✡



ಒಬ್ಬ ವೈದ್ಯ ತನ್ನ ಬಚ್ಚಲು ಮನೆಯಲ್ಲಿಯ ಕಾರಂಜಿಯನ್ನು ರಿಪೇರಿ ಮಾಡಿಸಲು ಮೇಸ್ತ್ರಿಯನ್ನು ಕರೆಸಿದ. ಆತ ಐದು ನಿಮಿಷಗಳಲ್ಲಿ ಕಾರಂಜಿಯನ್ನು ರಿಪೇರಿ ಮಾಡಿದ. ಆದರೆ ಡಾಕ್ಟರ್ ಆತ ಹದಿನೈದು ರೂ.ಗಳ ಬಿಲ್ ಮಾಡಿದ್ದನ್ನು ನೋಡಿ, "ಅಬ್ಬಾ ಐದು ನಿಮಿಷದ ಕೆಲಸಕ್ಕೆ ಹದಿನೈದು ರೂಪಾಯಿಗಳೇ? ನಾನು ಕೂಡ ಇಷ್ಟು ಫೀ ತೆಗೆದುಕೊಳ್ಳುವದಿಲ್ಲ," ಎಂದು ಗೊಣಗುಟ್ಟಿದ. "ಹೌದು, ಸಾರ್, ಆದರೆ ನಾನು ನನ್ನ ಕೆಲಸಕ್ಕೆ ಗ್ಯಾರಂಟಿಯನ್ನು ಸಹ ಕೊಡುತ್ತೇನೆ," ಎಂದ ಆ ಮೇಸ್ತ್ರಿ.

–ಎನ್. ಕೆ. ನರಸಿಂಹಮೂರ್ತಿ


ಬೇಡೇಕರ್ ಉಪ್ಪಿನಕಾಯಿಯನ್ನು ತಯಾರಿಸುವುದು ಎಷ್ಟು ಸುಲಭ

ನಮ್ಮ ಮಿಶ್ರಿತ ಉಪ್ಪಿನಕಾಯಿಯ ಮಸಾಲೆಯನ್ನು (ಮಿಕ್ಸ್‌ಡ್ ಪಿಕಲ್ ಸ್ಪೈಸಿಸ್) ಕೊಂಡಾಗ ಇದು ಕೇವಲ ಮಸಾಲೆ ಎಂದಷ್ಟೇ ಭಾವಿಸಬೇಡಿರಿ. ನಿಮ್ಮ ತೋಟದ ಹಚ್ಚ ಹಸಿರು ಮಾವಿನಕಾಯಿ ಅಥವಾ ಬಂಗಾರದ ಬಣ್ಣದ ನಿಂಬೆ ಇವುಗಳಿಂದ ಉಪ್ಪಿನಕಾಯಿ ತಯಾರಿಸುವ ಸೂತ್ರವೇ (ಫಾರ್ಮ್ಯುಲಾ) ಇದಾಗಿದೆ. ಪ್ರತಿಯೊಂದು ಪ್ಯಾಕಿನೊಂದಿಗೆ ನೀಡಲಾದ ನಿರ್ದೇಶನಗಳನ್ನು ಪಾಲಿಸಿರಿ, ನಿಮ್ಮ ಉತ್ತಮ ಉಪ್ಪಿನಕಾಯಿಯನ್ನು ತಯಾರಿಸಿರಿ.

ನೀವು ಅಷ್ಟೇ ಅಲ್ಲ, ನಿಮ್ಮ ಪರಿವಾರದವರೆಲ್ಲ ಈ ಉಪ್ಪಿನಕಾಯಿಯನ್ನು ಬಹಳೇ ಮೆಚ್ಚುವಿರಿ.

ಈಗ ಮತ್ತೆ ನೀವು ಕೂಡ ಬೇಡೇಕರರಷ್ಟೇ ಉತ್ತಮವಾಗಿ ಉಪ್ಪಿನಕಾಯಿಯನ್ನು ತಯಾರು ಮಾಡುತ್ತೀರಿ, ಅದು ಕೂಡ ಯಾವ ಶ್ರಮವಿಲ್ಲದೆ, ಆರಾಮ, ನಗುನಗುತ್ತ!

ಬೇಡೇಕರ 'ಮಿಕ್ಸ್‌ಡ್ ಪಿಕಲ್ ಸ್ಪೈಸಿಸ್' (ಉಪ್ಪಿನಕಾಯಿಯ ಮಸಾಲೆ) ಪಡೆಯಿರಿ ಮತ್ತು ನೀವೇ ಸ್ವತಃ ಉಪ್ಪಿನಕಾಯಿಯನ್ನು ತಯಾರಿಸಿ ನೋಡಿರಿ. ಒಂದು ವೇಳೆ, ನಿಮಗೆ ತಯಾರಿಸುವುದು ಬೇಡವಾಗಿದ್ದರೆ, ಬೇಡೇಕರರ ವಿವಿಧ ತರಹದ ಉಪ್ಪಿನಕಾಯಿಗಳು ದೊರೆಯುತ್ತವೆ. ನಿಮ್ಮ ನಚ್ಚಿನದನ್ನು ಆರಿಸಿರಿ.





ಬೇಡೇಕರ್
ಮುಂಬಯಿ 400 004



ವಿತರಕರು : ರಾಜ್ಯಾನುದಾರರು : ಮೆ|| ವಿಶಾಲ ಟ್ರೇಡರ್ಸ್, ... ಕಟ್ಟಡ, ಕಲಾಸಿಪಾಳ್ಯಂ ಮುಖ್ಯ ರಸ್ತೆ, ಬೆಂಗಳೂರು-೫೬೦೦೦೨ ಫೋನ್: ...

ಭೂನಕ್ಷತ್ರ ಮತ್ತು ಇತರ ಅಣಬೆಗಳು

ಕಳೆದ ಸಂಚಿಕೆಯಲ್ಲಿ ಅಣಬೆಗಳ ಬಗ್ಗೆ ಒಂದು ಸಚಿತ್ರ ಸ್ವರೂಪದ ಲೇಖನವೂ ಹಲ ಬಗೆಯ ಅಣಬೆಗಳ ಚಿತ್ರಗಳೂ ಬಂದಿದ್ದುವಷ್ಟೆ. ಅಲ್ಲಿ ಮುಖ್ಯವಾಗಿ ಅಣಬೆಗಳಲ್ಲಿ ವ್ಯಕ್ತವಾಗುತ್ತಿದ್ದ ಸೌಂದರ್ಯಕ್ಕೆ ಖರಿಗಾಗಿ ಮಾತ್ರ ಅವುಗಳ ಚಿತ್ರಗಳನ್ನು ಬರೆಯಲಾಗಿತ್ತು. ಇಲ್ಲಿ ನಮ್ಮ ದೇಶದಲ್ಲೇ ನೋಡಸಿಕ್ಕುವ ಕೆಲ ಅಪರೂಪದ ಅಣಬೆಗಳನ್ನು ಕುರಿತು ಲೇಖಕರು ಹೆಚ್ಚು ವೈಜ್ಞಾನಿಕ ಸ್ವರೂಪದ ಲೇಖನ ಬರೆದಿದ್ದಾರೆ.

ಮಳೆಗಾಲದಲ್ಲಿ ಅಪರೂಪವಾಗಿ ಕಂಡುಬರುವ ಬೆಸಿಡಿಯೋಮೈಸಿಟೀಸ್ ವರ್ಗದ ಗ್ಯಾಸ್ಟರೋಮೈಸಿಟೀಸ್ ಉಪವರ್ಗಕ್ಕೆ ಸೇರಿದ ಒಂದು ವಿಧದ ಅಣಬೆ ಹೂವನ್ನು ಬಹಳವಾಗಿ ಹೋಲುತ್ತದೆ.

ಗ್ಯಾಸ್ಟ್ರಂ ರುಫೆಸೆನ್ಸ್ ಎಂಬ ಈ ಅಣಬೆ ತಿನ್ನಲು ಯೋಗ್ಯವಲ್ಲ. ಇದರ ಕಂದು ಬಣ್ಣದ ಪ್ರತ್ಯುತ್ಪಾದನಾ ಅಂಗವು ಗೋಳಾಕಾರವಾಗಿದ್ದು, ಹೆಚ್ಚು ಕಡಿಮೆ ಸೋಡಾ ಗೋಲಿಯ ಗಾತ್ರದ್ದಿರುತ್ತದೆ. ಪರಿಧಿಯಿಂದ ಒಂದು ಕದೆ-ಯಲ್ಪಡುವ ಇದರ ಕವಚವು ಎರಡು ಆವರಣಗಳುಳ್ಳದ್ದು.

ಪ್ರತ್ಯುತ್ಪಾದನಾ ಅಂಗ ಬೆಳೆಯುತ್ತಾ ಹೋದಂತೆಯೇ ಈ ಹೊರ ಆವರಣವು ನಾಲ್ಕೆಂಟು ಭಾಗಗಳಾಗಿ ಸೀಳಲ್ಪಟ್ಟು ತನ್ನ ಬೆಳ್ಳಗಿನ ಒಳ ಮೈಯನ್ನು ಪ್ರದರ್ಶಿಸುತ್ತ ಹೊರಕ್ಕೆ ಬಾಗುತ್ತದೆ. ಇವು ಹೂವಿನ ಎಸಳು-ಗಳಂತೆ ಕಾಣುತ್ತವೆ.

ವರ್ತುಲಾಕಾರದ ತೆಳುವಾದ ಒಳ ಆವರಣದ ಮೇಲ್ತುದಿಯಲ್ಲಿ ಸ್ವಲ್ಪ ಎತ್ತರವಾಗಿರುವ ಭಾಗವೊಂದಿರುತ್ತದೆ. ಕ್ರಮೇಣ ಇಲ್ಲಿ ರಂಧ್ರವೊಂದು ಏರ್ಪಟ್ಟು ಒಳಗೆ ಅಡಕವಾಗಿರುವ ಅಸಂಖ್ಯಾತ ಹಳದಿ ಬಣ್ಣದ ಸ್ಪೋರ್ (ಬೀಜಕಣ)ಗಳು ಗಾಳಿಯಲ್ಲಿ ಹಾರುತ್ತಾ ಪ್ರಸಾರವಾಗುತ್ತವೆ.

ವಾತಾವರಣದಲ್ಲಿನ ಆರ್ದ್ರತೆಗೆ ಅನುಸಾರವಾಗಿ ಹೊರ ಆವರಣದ ಎಸಳುಗಳು ತೆರೆದು ಮುಚ್ಚಿಕೊಳ್ಳುತ್ತವೆ. ದಿನ ಕಳೆದಂತೆಯೇ ಈ ಎಸಳುಗಳ ಬಿಳಿ ಬಣ್ಣ ನಸು ಕಂದು ಬಣ್ಣಕ್ಕೆ ತಿರುಗುತ್ತದೆ.

ಎಸಳುಗಳಾಗಿ ಸೀಳಲ್ಪಟ್ಟು ಹೊಂದಾಗುವ ಹೊರ ಆವರಣ ದಿಂದಾಗಿ (Earth Star)ಗಳನ್ನು ಸುಲಭವಾಗಿ ಗುರುತಿಸಬಹುದು. ಈ

[illegible] ... ಲಾಗುತ್ತದೆ.

[illegible] ವಾಸನೆಯಿಂದ ಆಕರ್ಷಣೆ[illegible] [illegible]

[illegible] ... ವಾಸನೆ ಹೊರಸೂಸುವುದು [illegible] ... ಒಂದು ಉಪಾಯ.

ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ಮಳೆಗಾಲದಲ್ಲಿ ಕಂಡುಬರುವ ಫ್ಯಾಲಸ್ ಎಂಬ ಬಲೆಬಲೆಯ ಮಿಸಿಸ್ಕರ್ಟನ್ನು ಹೋಲುವ ಅಣಬೆಯೊಂದಿದೆ. ಗೋಟಪಕೆ ಗಾತ್ರದ ತತ್ತಿಯಾಕಾರದ ಕಂದು ಬಣ್ಣದ 'ಮೊಟ್ಟೆ'ಯ ರೂಪದ ಈ ಅಣಬೆಯ ಪ್ರತ್ಯುತ್ಪಾದನಾ ಅಂಗವು ಮೊದಲು ಕಾಣಸಿಗುವುದು. ಮೊಟ್ಟೆಯ ಹೊರ ಆವರಣದೊಳಗಿನ ಪ್ರಮುಖ ಬಿಳಿ- [illegible]

[illegible] ... ಇಳಿಯತೊಡಗುತ್ತದೆ. ಕಾಂಡ ಸ್ತಂಭಾಕಾರದ್ದಾಗಿದ್ದು ಅದಕ್ಕೆ ಚಿಕ್ಕ ಚಿಕ್ಕ ರಂಧ್ರಗಳಿರುತ್ತವೆ. ರಾತ್ರಿ ಕಳೆದು ಮುಂಜಾನೆಯ ಸೂರ್ಯ ಕಿರಣಗಳು ಬೀಳುವ ಮೊದಲೇ ಅತಿ ಶೀಘ್ರ ಗತಿಯಿಂದ ಇದರ ಪೂರ್ಣ ಬೆಳವಣಿಗೆ ಆಗಿರುತ್ತದೆ. ಸಾಮಾನ್ಯವಾಗಿ ಕಾಂಡ ಬೆಳೆಯತೊಡಗುವುದು ಮಧ್ಯರಾತ್ರಿಯ ನಂತರ.

ಶಿರಸ್ಸಿನ ಸುತ್ತಲೂ ಆಲ್ಕೋಹಾಲಿನಂತಹ ಅತಿ ಘಾಟು ವಾಸನೆಯನ್ನು ಹೊರಸೂಸುವ ದ್ರವವಿರುತ್ತದೆ. ಇರುವೆಗಳೂ ಕೀಟಗಳೂ



ಹೂವನ್ನು ಹೋಲುವ ಅಣಬೆ 'ಭೂನಕ್ಷತ್ರ'. ಎಡಕ್ಕೆ ಗೋಲಿಯೋಪಾದಿಯಲ್ಲಿ ಕಾಣುವುದು ಅದರ ಪ್ರತ್ಯುತ್ಪಾದನಾ ಅಂಗ.





ಪೂರ್ಣ ಬೆಳೆದು ನಿಂತಿರುವ ಕ್ಲಾತ್ರಸ್ ಜಾಲಂದ್ರ

ಇದರಿಂದ ಆಕರ್ಷಿತವಾಗುತ್ತವೆ. ಈ ಪ್ರಾಣಿಗಳು ಅವನ್ನು ತಿನ್ನುತ್ತಿದ್ದಂತೆಯೇ ಅಣಬೆಯ ಸ್ಪೋರ್‌ಗಳು ಮೈಮೇಲೆಲ್ಲಾ ಅಂಟಿಕೊಂಡು ಅವು ಹೋದಲ್ಲೆಲ್ಲಾ ಪ್ರಸಾರವಾಗುತ್ತವೆ. ಮುಂದೆ ಅನುಕೂಲ ವಾತಾವರಣ ದೊರೆತಾಗ ಸ್ಪೋರ್‌ಗಳು ಮೊಳೆಯುತ್ತವೆ.

ಫ್ಯಾಲಸ್ ಅಣಬೆಯ ಬೆಳೆದು ಪೂರ್ಣವಾದ ಜೀವಿತಕಾಲ ಕೇವಲ 1-2 ದಿವಸಗಳು. 20-30 ನಿಮಿಷಗಳ ಕಾಲ ಅಂದವಾಗಿರುವ ಬಲೆ ಬಿಸಿಲು ಬಿದ್ದೊಡನೆಯೇ ಬಾಡತೊಡಗುತ್ತದೆ. ಮಳೆಯ ಹೊಡೆತಕ್ಕೆ ಸಿಕ್ಕಿ ಕೆಟ್ಟುಹೋಗುವುದೂ ಇದೆ.

ಪ್ರಾರಂಭದಲ್ಲಿ ಹೇಳಿದ ಕ್ಲಾತ್ರಸ್ ಎಂಬುದು ಇನ್ನೊಂದು ಸ್ಟಿಂಕ್ ಹಾರ್ನ್. ಬಟಾಣಿ ಕಾಳಿನ ಗಾತ್ರದ ಬಿಳಿ ಅಥವಾ ನಸು ಹಳದಿ ಬಣ್ಣದ ಈ ಅಣಬೆಯ ಮೊಟ್ಟೆಯೊಳಗಿನ ಲೋಳೆ ತುಂಬಾ ದಪ್ಪನಾಗಿರುತ್ತದೆ. ಮುಂದೆ ಬೆಳೆಯಲಿರುವ ಬಲೆ ಇದರೊಳಗೆ ಮುದುಗಿರುವುದು. ಮೊಟ್ಟೆಗಳು ಗುಂಪು-ಗುಂಪಾಗಿರುತ್ತವೆ.

ಪೂರ್ಣ ಬೆಳವಣಿಗೆ ಹೊಂದಿದ ಬಲೆ ಅಥವಾ ಜಾಲಂದ್ರದ ಪ್ರತಿಯೊಂದು ಕೋಣೆಯೂ ಪಂಚಭುಜಗಳನ್ನು ಹೊಂದಿರುತ್ತದೆ. ಒಂದು ಭುಜ ಇನ್ನೊಂದನ್ನು ಸೇರುವಲ್ಲಿ ಒಂದು ಚಿಕ್ಕ ಅಂಗವಿರುತ್ತದೆ. ಜಾಲಂದ್ರವು ಹೊರಸೂಸುವ ವಾಸನೆಯಿಂದ ಆಕರ್ಷಿತವಾದ ಕೀಟಗಳು ಸ್ಪೋರ್‌ಗಳನ್ನು ಪ್ರಸಾರಮಾಡುತ್ತವೆ. ಆದರೆ ಈ ಅಣಬೆಗೆ ಕಾಂಡ ಇರುವುದಿಲ್ಲ. ಕೆಳಗಿನ ಎಲ್ಲ ಬಲೆಗಳೂ ಮೊಟ್ಟೆಯ ತಲಭಾಗಕ್ಕೆ ಅಂಟಿಕೊಂಡಿರುತ್ತವೆ. ಅಪರೂಪವಾಗಿ ಕಾಣಸಿಗುವ ಕ್ಲಾತ್ರಸ್ ತನ್ನ ಗಾತ್ರದಿಂದಾಗಿ ಕಣ್ಣಿಗೆ ಬೀಳದೆ ಹೋಗುವ ಸಂಭವವೇ ಹೆಚ್ಚು. ಡಾಗ್ಸ್ ಸ್ಟಿಂಕ್ ಹಾರ್ನ್ ಎಂಬ ಇನ್ನೊಂದು ಅಣಬೆಯ ಕಾಂಡವು ಮಾಂಸದ ಬಣ್ಣದ್ದು. ಅದರ ತುದಿಯಲ್ಲಿ ಕಪ್ಪು ಸ್ಪೋರ್‌ಗಳ ರಾಶಿಯಿರುವುದು.

← ಫ್ಯಾಲಸ್ ಜೀವನಚಕ್ರ

ಚಿತ್ರ ೧: ಫ್ಯಾಲಸ್ ಅಣಬೆಯ ಮೊಟ್ಟೆ. ಅದರ ಹೊರ ಆವರಣ ಸೀಳಿದೆ. ೨: ನಡುರಾತ್ರಿ ಕಳೆದ ಮೇಲೆ ಬೆಳೆಯುತ್ತಿರುವ ಫ್ಯಾಲಸ್ ಅಣಬೆಯ ಕಾಂಡ. ಶಿರಸ್ಸು ಮತ್ತು ಕಾಂಡಗಳ ಸುತ್ತಿರುವ ಬಲೆ ಕಾಣತೊಡಗಿದೆ. ೩: ಪೂರ್ಣ ಬೆಳವಣಿಗೆ ಹೊಂದಿದ ಫ್ಯಾಲಸ್. ಅದರ ಶಿರಸ್ಸಿನ ಮೇಲೆ ಕುಳಿತಿರುವ ಕೀಟಗಳು ಚಿತ್ರದಲ್ಲಿ ಚಿಕ್ಕ ಚುಕ್ಕೆಗಳಂತೆ ಕಾಣುತ್ತವೆ. ೪: ಬಿಸಿಲು ಬಿದ್ದೊಡನೆಯೇ ಬಾಡತೊಡಗಿದ ಫ್ಯಾಲಸ್ ಅಣಬೆಯ ಬಲೆ. ೫: ಮುದುಡಿದ ಫ್ಯಾಲಸ್ ಅಣಬೆಯ ಶಿರಸ್ಸು ಮತ್ತು ಬಲೆಯ ಹತ್ತಿರದ ನೋಟ.

(ಈ ಲೇಖನದ ಜೊತೆಗಿರುವ ಚಿತ್ರಗಳೂ ಲೇಖಕರವೇ.)

ಪಂಡಿತ ಪರೀಕ್ಷೆ

ಅಕಬರನ ದರಬಾರದಲ್ಲಿ ಬೀರಬಲ್ಲನಿದ್ದಂತೆ ವಿಜಯನಗರ ಸಾಮ್ರಾಜ್ಯದ ಪ್ರಸಿದ್ಧ ದೊರೆ ಕೃಷ್ಣದೇವರಾಯನ ಆಸ್ಥಾನದಲ್ಲಿ ಅಪ್ಪಾಜಿ ಇದ್ದನು. ಇವನ ಚುರುಕು ಬುದ್ಧಿಯ ಕತೆಗಳು ಬೀರಬಲ್ಲನ ಕತೆಗಳಂತೆಯೆ ಪ್ರಸಿದ್ಧವಾಗಿವೆ. ಅಪ್ಪಾಜಿ ಆಸ್ಥಾನ ಪಂಡಿತ ಹಾಗೂ ಮಂತ್ರಿಯಾಗುವ ಮೊದಲು ಅವನ ಹೆಸರು ಯಾರಿಗೂ ಗೊತ್ತಿರಲಿಲ್ಲ. ಆದರೆ ಮುಂದೆ ವಿಜಯನಗರ ಸಾಮ್ರಾಜ್ಯದಲ್ಲಷ್ಟೇ ಅಲ್ಲ, ಅಖಿಲ ಭಾರತದಲ್ಲೆ ಅವನೊಬ್ಬ ಅಸಾಧಾರಣ ಬುದ್ಧಿಯ ಮನುಷ್ಯನೆಂದು ಖ್ಯಾತಿಯಾಯಿತು. ಈ ಕೀರ್ತಿ ದಿಲ್ಲಿಯ ಮೊಗಲ ದೊರೆಯ ವರೆಗೂ ಮುಟ್ಟಿತು.

ದಿಲ್ಲಿಯ ಸಮ್ರಾಟನು ಕೇವಲ ಅವನ ಕೀರ್ತಿಯನ್ನು ಕೇಳಿ ಅಪ್ಪಾಜಿ ಅಸಾಧಾರಣ ಬುದ್ಧಿವಂತನೆಂದು ನಂಬಲಿಲ್ಲ. ತಾನೂ ಅಪ್ಪಾಜಿಯ ಬುದ್ಧಿಯನ್ನು ಪರೀಕ್ಷಿಸಿನೋಡಬೇಕೆಂದು ಒಂದು ಉಪಾಯವನ್ನು ಹುಡುಕಿದನು.

ಅವನು ಒಂದೇ ಬಗೆಯ ಮೂರು ಕಂಚಿನ ಗೊಂಬೆಗಳನ್ನು ಮಾಡಿಸಿದನು. ಅವುಗಳನ್ನು ನೋಡಿದರೆ ಯಾವುದೇ ಭೇದ ಕಂಡುಬರುವಂತಿರಲಿಲ್ಲ. ಈ ಮೂರೂ ಗೊಂಬೆಗಳ ಗುಣಪರೀಕ್ಷೆಯನ್ನು ಮಾಡಿ ಇವನ್ನು ಉತ್ತಮ, ಮಧ್ಯಮ, ಅಧಮ ಎಂಬ ಕ್ರಮದಲ್ಲಿ ಇರಿಸಬೇಕೆಂದು ಹೇಳಿ ಆ ಗೊಂಬೆಗಳನ್ನು ಅಪ್ಪಾಜಿಯ ಬುದ್ಧಿ ಪರೀಕ್ಷೆಗೋಸ್ಕರ ವಿಜಯನಗರದ ದೊರೆ ಕೃಷ್ಣದೇವರಾಯನ ಕಡೆಗೆ ಕಳಿಸಿದನು.

ಕೃಷ್ಣದೇವರಾಯನಾದರೋ ಥಟ್ಟನೆ ಅಪ್ಪಾಜಿಯನ್ನು ಕರೆಸದೆ ಮೊದಲು ಆ ಗೊಂಬೆಗಳನ್ನು ದರಬಾರದಲ್ಲಿ ಇಟ್ಟು ಇವುಗಳಲ್ಲಿಯ ಭೇದವೇನೆಂಬುದನ್ನು ಗುರುತಿಸಬೇಕೆಂದು ಸಭಾಸದರನ್ನೂ ಮಂತ್ರಿಗಳನ್ನೂ ಕೇಳಿಕೊಂಡನು. ಅವರೆಲ್ಲರೂ ಆ ಗೊಂಬೆಗಳನ್ನು ಎತ್ತಿ ಹೊರಳಿಸಿ, ತಿರುವಿ, ಮೇಲೆ ಕೆಳಗೆ ನೋಡಿದರು. ಯಾರಿಗೂ ಇದರಲ್ಲಿಯ ಗೂಢವೇನೆಂಬುದು ತಿಳಿಯಲಿಲ್ಲ. ಕೊನೆಗೆ ಅಪ್ಪಾಜಿಯನ್ನು ಕರೆಯಲಾಯಿತು.


ಅಪ್ಪಾಜಿ ಅಲ್ಲಿಗೆ ಬಂದನು. ರಾಜನು ಕರೆಸಿಕೊಂಡ ಕಾರಣವನ್ನು ಹೇಳಿದನು. ಅಪ್ಪಾಜಿ ಆ ಮೂರೂ ಗೊಂಬೆಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿ ನೋಡಿದನು. ಆ ಮೂರು ಗೊಂಬೆಗಳ ಕಿವಿಯಲ್ಲಿ ಸಣ್ಣ ತೂತು ಇರುವುದನ್ನು ಕಂಡನು. ಇದರಲ್ಲೇ ಏನಾದರೂ ತಿರುಳಿರಬೇಕೆಂದು ತರ್ಕಿಸಿ ಒಂದು ದಾರವನ್ನು ತರಿಸಿಕೊಂಡನು. ಸೂಜಿಯಲ್ಲಿ ದಾರವನ್ನು ಸೇರಿ-

ಸುವಾಗ ದಾರದ ತುದಿಯನ್ನು ಹಿಡಿ ಜೋಪಾ-ಗುವಂತೆ ಮಾಡಿಕೊಂಡು ಆ ದಾರವನ್ನು ಒಂದು ಗೊಂಬೆಯ ಕಿವಿಯಲ್ಲಿ ಸೇರಿಸಿದನು. ದಾರವು ಆ ಗೊಂಬೆಯ ಬಾಯೊಳಗಿಂದ ಹೊರಬಂದಿತು. ಪುನಃ ಇದೇ ರೀತಿ ಎರಡನೇ ಹಾಗೂ ಮೂರನೇ ಗೊಂಬೆಯ ಕಿವಿಗಳಲ್ಲೂ ಸೇರಿಸಿದನು. ಎರಡನೇ ಗೊಂಬೆಯ ಕಿವಿಯಲ್ಲಿ ಸೇರಿಸಿದ ದಾರ ಇನ್ನೊಂದು ಕಿವಿಯಿಂದ ಹೊರಬಂದಿತು. ಮೂರನೇ ಗೊಂಬೆಯ ಕಿವಿಯಲ್ಲಿ ಸೇರಿಸಿದ ದಾರ ಒಳಗೇ ತಡೆಯಲ್ಪಟ್ಟಿತು.

ಅಪ್ಪಾಜಿಗೆ ಗೊಂಬೆಗಳ ಗುಟ್ಟು ಗೊತ್ತಾಯಿತು. ಅಪ್ಪಾಜಿ ಸಂತೋಷದಿಂದ ನಸುನಗುತ್ತ ಎದ್ದುನಿಂತು, ರಾಜನೆದುರು ಮಣಿದು ಅರಿಕೆಮಾಡಿಕೊಂಡನು: "ಪ್ರಭೂ, ಚಿತ್ತಯಿಸಬೇಕು. ಆ ಗೊಂಬೆಯ ಕಿವಿಯಲ್ಲಿ ಸೇರಿಸಿದ ದಾರ ಬಾಯೊಳಗಿಂದ ಹೊರಬರುತ್ತದೆ. ಇದು ಕನಿಷ್ಠವಾದ ಗೊಂಬೆ. ಕೇಳಿದ ಲೋಕನಿಂದೆಗಳನ್ನು ಎಲ್ಲರೆದುರು ಹೇಳುತ್ತ ತಿರುಗುವ ಮನುಷ್ಯನಂತೆ ಇದರ ಸ್ವಭಾವ. ಈ ಎರಡನೇ ಗೊಂಬೆಯ ಕಿವಿಯಲ್ಲಿ ಸೇರಿಸಿದ ದಾರವು ಇನ್ನೊಂದು ಕಿವಿಯಿಂದ ಹೊರಬರುವುದು. ಕೆಲವರ ಕಿವಿಯ ಮೇಲೆ ಏನಾದರೂ ವದಂತಿ ಬಿದ್ದರೆ ಅವರು ಆ ಬಗ್ಗೆ ಹೆಚ್ಚು ಆಲೋಚನೆ ಮಾಡುತ್ತ ಉಳಿಯದೇ ಅವನ್ನು ಆಗಲೇ ಮರೆತುಬಿಡುತ್ತಾರೆ. ಒಂದು ಕಿವಿಯಿಂದ ಕೇಳಿ ಇನ್ನೊಂದು ಕಿವಿಯಿಂದ ಬಿಟ್ಟುಬಿಡುವರು ಈ ಜನರು. ಈ ಬಗೆಯ ಜನರು ಹಿಂದಿನವರಂತೆ ಅಪಾಯ ಮಾಡುವುದಿಲ್ಲವಾದ್ದರಿಂದ ಇವರ ಸ್ಥಾನ ಮಧ್ಯಮ. ಈ ಎರಡನೇ ಗೊಂಬೆಯ ಸ್ಥಾನ ಮಧ್ಯಮ. ಆದರೆ ಇದಕ್ಕೂ ಉತ್ತಮವಾದ ಬಗೆ ಇನ್ನೊಂದಿದೆ. ಅದು ಈ ಮೂರನೇ ಗೊಂಬೆಯಲ್ಲಿ ವ್ಯಕ್ತವಾಗಿದೆ. ಕೆಲವರು ತಾವು ಕೇಳಿದ ವಿಷಯಗಳನ್ನು ಸುಮ್ಮನೇ ಬಯಲಿಗೆ ಎಳೆಯದೇ ಅಥವಾ ತಾತ್ಸಾರ ಭಾವನೆಯಿಂದ ಮರೆತೂಬಿಡದೆ ಹಾಗೇ ಮನಸ್ಸಿನಲ್ಲಿ ಇಟ್ಟುಕೊಳ್ಳುತ್ತಾರೆ. ಅವರ ಸ್ವಭಾವದ ರೀತಿಯನ್ನು ಸೂಚಿಸುವುದು ಈ ಮೂರನೇ ಗೊಂಬೆ. ಏಕೆಂದರೆ, ಇದರ ಕಿವಿಯಲ್ಲಿ ಸೇರಿಸಿದ ದಾರ ಹೊರಬರುವುದೇ ಇಲ್ಲ, ಒಳಗೇ ಉಳಿಯುತ್ತದೆ. ಈ ರೀತಿ ಮನುಷ್ಯ ಸ್ವಭಾವದ ಪ್ರತೀಕವೇ ಆಗಿದೆ ಈ ಗೊಂಬೆಗಳ ಕ್ರಮ."

ಅಪ್ಪಾಜಿಯ ಬುದ್ಧಿಚಾತುರ್ಯಕ್ಕೆ ಸಮಸ್ತ ಓಲಗವೇ ತಲೆದೂಗಿತು.

ಈ ಉತ್ತರವನ್ನು ಅಪ್ಪಾಜಿ ಕಂಡುಹಿಡಿದದ್ದನ್ನು ಕೇಳಿ ದಿಲ್ಲಿಯ ಸಮ್ರಾಟನಿಗೆ ಅತೀವ ಆನಂದವಾಯಿತು. ಆತ ಮುತ್ತು, ರತ್ನ, ಹೊನ್ನು, ವಜ್ರ, ವೈಢೂರ್ಯಗಳ ರಾಶಿಯನ್ನು ಒಂದು ಆನೆಯ ಮೇಲೆ ಹೇರಿ ಅಪ್ಪಾಜಿಗೆ ಬಹುಮಾನವಾಗಿ ವಿಜಯನಗರಕ್ಕೆ ಕಳಿಸಿಕೊಟ್ಟನು. ✡



ಆಗೊಮ್ಮೆ ಈಗೊಮ್ಮೆ [illegible] ಹರಿಯುವವು ನನ್ನ ಮೇಲೆ;

—ಜಾನ್ ಫೋರ್ಡ್

ನಾನೊಂದು ಅಣಬೆ...

[illegible] ೫೦,೦೦೦ ಅಡಿ ಎತ್ತರದ [illegible] ತುದಿಯ ನಾಯಿಕೊಡೆ!

—ಪಾಲ್ ಡಬ್ಲ್ಯು. ಟಿಬ್ಬೆಟ್

([illegible])


ಐಟೆಕ್ಸ್
ಸೌಂದರ್ಯ ಸಾಧನಗಳು
EYETEX
BINDI
MAT FINISH
EYETEX
EYETEX
REGD.
EYETEX
DELUXE
KUMKUM
EYETEX
KUMKUM
PASTE
ARAVIND LABORATORIES MADRAS-600 033

ಮರಾಠಿ ಕಥೆ

ಮೂಲ : ದಿವಂಗತ ಅಣ್ಣಾ ಭಾವು ಸಾಠೆ
ಕನ್ನಡಕ್ಕೆ : ರಂಗರಾವ ತಲಚೇರಕರ

ಮೂರು ರೊಟ್ಟಿಗಳು

ನಾವು ಮಿಂಚೇಕರನ ಚಕ್ಕಡಿಯಲ್ಲಿ ಪಾಲಿಯ ಖಂಡೋಬನ ಜಾತ್ರೆಗೆ ಹೊರಟಿದ್ದೆವು. ನಾವು ಅಂದರೆ ಮಿಂಚೇಕರ, ಅವನ ಮಗಳು, ಅಳಿಯ ಮತ್ತು ನಾನು.

ಮಿಂಚೇಕರ ಮುದುಕ. ಚಕ್ಕಡಿಗೆ ಹೂಡಿದ ಎರಡೂ ಎತ್ತುಗಳು ಅವನಂತೆಯೇ ಇಳಿ ವಯಸ್ಸಿನವು. ರಸ್ತೆ ತೀರಾ ಕೆಟ್ಟಿತ್ತು. ನ್ಯಾಯಕ್ಕೆ ತಮ್ಮ ಕಾರ್ಯವನ್ನು ಸಹಕಾರದಿಂದ ಮಾಡುವುದನ್ನು ಬಿಟ್ಟು ಈ ಎತ್ತುಗಳು ಚಕ್ಕಡಿಯನ್ನು ತಮ್ಮ ಕಡೆಗೇನೇ ಎಳೆಯಲು ಯತ್ನಿಸುತ್ತಿದ್ದವು- ಎತ್ತು ಏರಿಗೆಳೆದರೆ ಕೋಣ ಕೆರೆಗೆಳೆಯಿತು ಎಂಬಂತೆ. ಹಾಗಾಗಿ, ಚಕ್ಕಡಿ ಒಮ್ಮೆ ಬಲಕ್ಕೆ, ಮತ್ತೊಮ್ಮೆ ಎಡಕ್ಕೆ ಹೊರಳುತ್ತಿತ್ತು. ಇವೆಲ್ಲದರ ಪರಿಣಾಮ— ಒಳಗೆ ಕೂತವರ ಅಂಗಾಂಗಗಳೆಲ್ಲ ಜಜ್ಜಿಹೋದಂತಾಗಿದ್ದು.

ಮಿಂಚೇಕರನು ಎತ್ತುಗಳನ್ನು "ಓ ಇಂಗ್ಲೀಷಾ, ಓ ಗಾಂಧಿ," ಎಂದು ಕರೆಯುತ್ತ ಅವುಗಳ ಹಗ್ಗವನ್ನು ಮೇಲಿಂದ ಮೇಲೆ ಜಗ್ಗುತ್ತ ಚಕ್ಕಡಿಯನ್ನು ದಾರಿಯಲ್ಲಿ ಎಳೆಯುವಂತೆ ಹೇಗೋ ಮಾಡುತ್ತಿದ್ದ.

ಎತ್ತುಗಳಿಗೆ ಅವನು ಇಟ್ಟ ಹೆಸರು ಕೇಳಿ ಮೋಜೆನಿಸಿತು. "ಎಂತಹ ಹೆಸರು ಇಟ್ಟಿದ್ದೀಯಪ್ಪಾ?" ಎಂದು ಕೇಳಿದೆ.

"ಏನು ತಪ್ಪಾಯಿತು? ಗಾಂಧಿ ಮುದುಕ; ಇಂಗ್ಲಿಷಿನವನೋ ಶಕ್ತಿಯನ್ನೇ ಕಳೆದುಕೊಂಡಿದ್ದಾನೆ– ಅವನೂ ಮುದುಕನೇ. ಗಾಂಧಿಯವರ, ಇಂಗ್ಲಿಷಿನವರ ನಡುವೆ ಹೋರಾಟ ನಡೆದೇಯಿದೆ. ಇಬ್ಬರೂ ನಮ್ಮ ನಾಡನ್ನು ಪರಸ್ಪರ ವಿರುದ್ಧ ದಿಶೆಗೆ ಒಯ್ಯಲು ಯತ್ನಿಸುತ್ತಿದ್ದಾರೆ. ಈ ನನ್ನ ಎತ್ತುಗಳೂ ಹಾಗೆಯೇ. ಒತ್ತಟ್ಟಿಗೇ ಬೆಳೆವರೂ ಒಂದರ ಮೇಲೊಂದು ಹರಿಹಾಯುತ್ತವೆ!"

"ಆದಿರಬಹುದು. ಆದರೆ ರಾಷ್ಟ್ರದ ನಾಯಕರ ಹೆಸರನ್ನು ಯಃಕಶ್ಚಿತ್ ಎತ್ತಿಗೆ ಇಡುವದು ಯೋಗ್ಯವಲ್ಲ," ನಾನೆಂದೆ.

"ಯಾಕೆ ರಾವಸಾಬರೇ, ನೀವು ಎತ್ತು ಅಂದರೆ ಏನೆಂದು ತಿಳಿದಿರಿ? ಎತ್ತು ನಮ್ಮ ಅನ್ನದಾತ. ಅದರ ಜೀವದ ಮೇಲೇ ನಾವು ಬದುಕುತ್ತೇವೆ. ಎತ್ತು ಇಲ್ಲದಿದ್ದರೆ ಬೆಳೆಯೂ ಇಲ್ಲ; ಜಗತ್ತಿಗೆ ಅನ್ನವೂ ಸಿಗಲಾರದು. ನಾವು ಹಳ್ಳಿಯಲ್ಲಿ ಎತ್ತಿಗೆ ಬಲಿರಾಜ ಅನ್ನುತ್ತೇವೆ. ಅಂದ ಬಳಿಕ ಗಾಂಧಿ ಎಂದು ಕರೆದರೆ ತಪ್ಪೇನು?"

ಈಗ ನಾನು ನಿರುತ್ತರನಾದೆ. ಅಷ್ಟರಲ್ಲಿ ಕತ್ತಲಾಗುತ್ತ ಬಂತು. ಈಗ ಎತ್ತುಗಳು ಪರಸ್ಪರ ಸಹಕರಿಸಿ ಚಕ್ಕಡಿಯನ್ನು ಸರಿಯಾಗಿ ಎಳೆಯಲಾರಂಭಿಸಿದವು.

"ನೋಡಿದಿರಾ, ಗಾಂಧಿಯವರಿಗೂ ಇಂಗ್ಲೀಷರಿಗೂ ಗಾಂಧಿ–ಐರ್ವಿನ್ ಒಪ್ಪಂದವಾದ ಹಾಗೆ ನನ್ನ ಗಾಂಧಿ ಹಾಗೂ ಇಂಗ್ಲೀಷರೊಳಗೆ ಒಪ್ಪಂದವಾಗಿದೆ. ನೋಡಿರಿ, ಈಗ ಹೇಗೆ ಎಳೆಯುತ್ತಿವೆ!" ಮಿಂಚೇಕರ ತನ್ನ ಈ ಜಾಣತನದ ಮಾತಿಗಾಗಿ ತನ್ನನ್ನೆ ತಾನು ಶ್ಲಾಘಿಸಿಕೊಳ್ಳುವ ಧ್ವನಿಯಲ್ಲಿ ಹೇಳಿದ.

ನಾವು ಜಕಣೆವಾಡಿಯನ್ನು ಸಮೀಪಿಸಿದ್ದೆವು. ಎತ್ತುಗಳು ಆಯಾಸದಿಂದ ಸೋತು ಸುಣ್ಣಾಗಿದ್ದವು. ರಸ್ತೆಯ ಬದಿಯಲ್ಲೆ ಒಂದು ದೇವರ ಗುಡಿ ಇತ್ತು. ಅಲ್ಲಿ ವಿಶ್ರಾಂತಿ ಪಡೆದು ಮರುದಿನ ಮುಂಜಾನೆ ಪಯಣ ಮುಂದುವರಿಸಬಹುದೆಂದು ನಾನು ಸೂಚಿಸಿದೆ. ಸೂಚನೆ ಸರ್ವಾನುಮತದಿಂದ ಒಪ್ಪಿತವಾಯಿತು. ಹಳ್ಳಿಯ ಬಡ ದೇವಸ್ಥಾನ. ದೇವರ ವಿಗ್ರಹವಲ್ಲದೆ ಒಳಗೆ ಬೇರೇನೂ ಇರಲಿಲ್ಲ. ಆದ್ದರಿಂದ ದ್ವಾರ ಮುಕ್ತವಾಗಿಯೇ ಇತ್ತು. ನಮ್ಮ ಮಟ್ಟಿಗದು ಈಗ ಪ್ರವಾಸಿ ಬಂಗಲೆಯಾಯಿತು. ಒಳಗೆ ಹೋದವರೇ ನಾವು ತಂದಿದ್ದ ಕಂಬಳಿಗಳನ್ನು ಹಾಸಿ ಮಿಂಚೇಕರನು ನೀಡಿದ ಜೋಳದ ರೊಟ್ಟಿ, ಬೆಳ್ಳುಳ್ಳಿ ಚಟ್ನಿಯ ಮೇಲೆ ಪ್ರಹಾರ ಮಾಡಿದೆವು. ಮಿಂಚೇಕರನ ಮಗಳು, ಅಳಿಯ ಊಟವನ್ನು ಬೇಗನೇ ಮುಗಿಸಿದರು. ನಮ್ಮ ಊಟವಿನ್ನೂ ಮುಗಿದಿರಲಿಲ್ಲ. ಮೂರು ಸಣ್ಣ ರೊಟ್ಟಿ ಉಳಿದಿದ್ದವು. ಅವುಗಳನ್ನು ಮಿಂಚೇಕರನ ಸೊಸೆ ಬಡಿಸಲು ಬಂದಾಗ ನಾನು, "ನನಗೆ ಒಂದೇ ಸಾಕು; ಅಪ್ಪನಿಗೆ ಬಡಿಸು," ಅಂದೆ. ಮಿಂಚೇಕರ, "ಈ ಮೂರೂ ರೊಟ್ಟಿಗಳನ್ನು ಉಳಿಸುವುದು ಬೇಡ; ಮುಗಿಸಿಬಿಡೋಣ. ನಾನು ಒಂದು ತಿಂತೇನೆ; ನೀನು ಎರಡು ತಿನ್ನು," ಅಂದು ಗಹಗಹಿಸಿ ನಕ್ಕನು. ಅವನು ಎಡಬಿಡದೆ ನಗುತ್ತಿದ್ದುದನ್ನು ನೋಡಿ ನಾವೆಲ್ಲ ಏಕೆಂದು ಕೇಳಿದೆವು. ನಗುವನ್ನು ನಿಲ್ಲಿಸದೆ ಅವನು, "ಎರಡು ವರ್ಷಗಳ ಕೆಳಗೆ ಇಲ್ಲೇ ನೆರೆಯ ಗ್ರಾಮದಲ್ಲಿ ನಡೆದ ಚಮತ್ಕಾರಿಕ ಘಟನೆಯೊಂದು ನೆನಪಾಯಿತು," ಎಂದು ಹೇಳಿ ಇನ್ನೂ ಜೋರಾಗಿ ನಕ್ಕನು. ಅದಾವ ಘಟನೆ ಎಂದು ನಾವು ಕೇಳಿದಾಗ ಅವನು ಹೇಳಿದ ವೃತ್ತಾಂತ ಇದು:

ಇಲ್ಲಿಗೆ ಸಮೀಪದ ಊರಿನ ಬದಿಯಲ್ಲೊಂದು ಬೇತಾಳನ ಗುಡಿ ಇದೆ. ಅದರ ಹತ್ತಿರ ಸಂತಾಜಿ ಎಂಬವನ ಮನೆ ಇತ್ತು. ಅವನು ತನ್ನ ಅದೃಷ್ಟ ಪರೀಕ್ಷಿಸುವದಕ್ಕಾಗಿ ಮುಂಬಯಿಗೆ ಹೋಗಿ ಅಲ್ಲಿ ಯಾವುದೋ ಉದ್ಯೋಗ ಮಾಡುತ್ತಿದ್ದ. ಮನೆಯಲ್ಲಿ ಅವನ ತಾಯಿ, ಹೆಂಡತಿ ಇಬ್ಬರೇ. ವಯಸ್ಸಿನಿಂದಾಗುವ ವ್ಯತ್ಯಾಸವನ್ನು ಬಿಟ್ಟರೆ ಅತ್ತೆ–ಸೊಸೆಯರು ಸಂಪೂರ್ಣ ಪರಸ್ಪರರು ಅನುರೂಪರಾಗಿಯೇ ಇದ್ದರು. ಇಬ್ಬರೂ ಜಗಳಗಂಟಿಯರೆಂದು ಪ್ರಸಿದ್ಧರಾಗಿದ್ದರು. ದಿನಾಲೂ ಅವರಿಬ್ಬರೊಳಗೆ ಬಡಿದಾಟ ಇದ್ದೇ ಇರುತ್ತಿತ್ತು. ಆದರೆ ನಡು ನಡುವೆ ಅವರು ಒಂದಾಗುವ ಸಂದರ್ಭಗಳೂ ಇರದಿರಲಿಲ್ಲ.

ಸಂತಾಜಿಯ ತಾಯಿ ಮಾಟಗಾತಿಯೆಂದು ಊರಲ್ಲಿ ಪ್ರತೀತಿಯಿತ್ತು. ತಾನು ವಶಪಡಿಸಿಕೊಂಡಿದ್ದ ಭೂತನ ಮುಖಾಂತರ ಇತರರ ಮನೆಯೊಳಗಿದ್ದ ಧಾನ್ಯವನ್ನು ಆಕೆ ತನ್ನಲ್ಲಿಗೆ ಸಾಗಿಸುತ್ತಾಳೆಂದು ಜನ ಆಡಿಕೊಳ್ಳುತ್ತಿದ್ದರು. ಎಮ್ಮೆ ಹಾಲು ಕೊಡದಿದ್ದರೆ, ಎಳೇ ಕೂಸು ಥಕ್ಕನೆ ಅಸ್ವಸ್ಥವಾದರೆ, ಅದು ಅವಳ ಕೆಟ್ಟ ಕಣ್ಣು ಬಿದ್ದುದರ ಪರಿಣಾಮವೆಂದು ಊರವರು ನಂಬುತ್ತಿದ್ದರು. ಅವರ ದೃಷ್ಟಿಯಲ್ಲಿ, ಊರಲ್ಲಿ ನಡೆಯುವ ಯಾವತ್ತೂ ಅನಿಷ್ಟ ಸಂಗತಿಗಳಿಗೆ ಅವಳೇ ಕಾರಣಳಾದರೂ ಅವಳ ನಾಲಿಗೆಗೆ ಹೆದರಿ

ಯಾರೂ ಅವರ ಪ್ರಸ್ತಾಪವನ್ನು ಮಾಡುತ್ತಿರಲಿಲ್ಲ. ಎಲ್ಲರೂ ಆಕೆಗೆ ಅಂಜುತ್ತಿದ್ದರು. ಅತ್ತೆ–ಸೊಸೆಯರು ದಿನಾಲೂ ಜಗಳಾಡುತ್ತಿದ್ದರೂ ಯಾರೊಬ್ಬರಿಗೂ ನಡುವೆ ಬಂದು ಬಿಡಿಸಲು ಧೈರ್ಯವಾಗುತ್ತಿರಲಿಲ್ಲ.

"ಒಂದು ದಿನ ರಾತ್ರಿಯಿಡೀ ಅವರಿಬ್ಬರೂ ಜಗಳಾಡಿದರು. ಅವರ ಬೊಬ್ಬೆಯ ಮಾತು ಊರಿಗೆಲ್ಲಾ ಮರುದಿನ ಮುಂಜಾನೆಯ ತನಕ ಕೇಳಿಸುತ್ತಿತ್ತು. ಸೂರ್ಯ ದಿಗಂತ ದಾಟಿ ಮೇಲಕ್ಕೆ ಬರುವ ವೇಳೆಯಲ್ಲಿ ಅವರ ಮಾತು ಒಮ್ಮೆಲೆ ನಿಂತದ್ದನ್ನು ಕಂಡು ಕುತೂಹಲದಿಂದ ಒಬ್ಬನು ಅವರ ಮನೆಯೊಳಗೆ ಹೋದನು. ಅಲ್ಲಿ ಕಂಡ ದೃಶ್ಯ ಅವನಿಗೆ ಆಶ್ಚರ್ಯವನ್ನುಂಟು ಮಾಡಿತು. ಅತ್ತೆ–ಸೊಸೆಯರಿಬ್ಬರೂ ಮನೆಯ ಜಗಲಿಯ ಮೇಲೆ ಸತ್ತುಬಿದ್ದಿದ್ದರು.

ಮಾಟಗಾತಿ ಮುದುಕಿಯೂ ಅವಳ ಸೊಸೆಯೂ ಸತ್ತುಬಿದ್ದಿದ್ದಾರೆಂಬ ಸುದ್ದಿ ಊರಲ್ಲೆಲ್ಲಾ ಹಬ್ಬಿತು. ಮಾಟಗಾತಿಯ ಸಾವಿನಿಂದಾಗಿ ಜನರು ಸಮಾಧಾನದ ನಿಟ್ಟುಸಿರು ಬಿಟ್ಟರು. ಊರ ಗೌಡರು ಬಂದು ಶವಗಳನ್ನು ನೋಡಿ ಕೂಡಲೇ ಅಂತ್ಯಸಂಸ್ಕಾರ ಮಾಡಬೇಕೆಂದು ಊರವರಿಗೆ ಹುಕುಂ ಮಾಡಿದರು. ಅಗ್ನಿಸಂಸ್ಕಾರದ ತಯಾರಿಯೂ ತಡವಿಲ್ಲದೆ ಆಯಿತು. ಎರಡು ಬಿದಿರು ತಂದು ಸಿದಿಗೆ ಕಟ್ಟಿ ಅದರ ಮೇಲೆ ಎರಡೂ ಹೆಣಗಳನ್ನು ಇಟ್ಟು ನಾಲ್ವರು ಸಶಕ್ತ ಯುವಕರು ಅದನ್ನು ಸ್ಮಶಾನಕ್ಕೆ ಸಾಗಿಸಿದರು. ಸತ್ತವರಿಗಾಗಿ ಮರುಗುವವರು ಯಾರೂ ಇರಲಿಲ್ಲ. ಸಿದಿಗೆಯನ್ನು ಹೊತ್ತ ನಾಲ್ವರಲ್ಲದೆ ಇತರರು ಯಾರೂ ಸ್ಮಶಾನಕ್ಕೆ ಹೋಗಲಿಲ್ಲ.

ಸ್ಮಶಾನದಲ್ಲಿ ಸಿದಿಗೆ ಇಳಿಸಿ .ಶವಗಳಿಗೆ ಬೆಂಕಿ ಹಚ್ಚಬೇಕೆನ್ನುವಾಗ ನೋಡುತ್ತಾರೆ– ಯಾರೊಡನೆಯೂ ಕಡ್ಡಿ ಪೆಟ್ಟಿಗೆ ಇಲ್ಲ. ಸರಿ, ಒಬ್ಬ ಅದನ್ನು ತರಲು ಊರ ಕಡೆ ಹೋದ. ಅವನು ತಿರುಗಿ ಬರುವ ಹಾದಿ ನೋಡುತ್ತಾ ಕುಳಿತ ಮೂವರು ತಮ್ಮೊಳಗೆ ಮಾತಾಡಹತ್ತಿದರು.

"ಏಕಾ ಏಕೀ ಒಂದೇ ರಾತ್ರಿ ಇಬ್ಬರೂ ಹೇಗೆ ಸತ್ತರು?" ಒಬ್ಬ ಉದ್ಗರಿಸಿದ.

"ಆ ಮಾಟಗಾತಿ ವಶಪಡಿಸಿಕೊಂಡಿದ್ದ ಭೂತಗಳ ಪೈಕಿ ಒಂದು ಸಿಟ್ಟಿಗೆದ್ದು ಅವರ ಕತ್ತು ಹಿಸುಕಿರಬೇಕು," ಇನ್ನೊಬ್ಬ ತನ್ನ ಅಭಿಪ್ರಾಯ ವ್ಯಕ್ತ ಮಾಡಿದ.

"ಅಗ್ನಿ ಕೊಡುವ ತನಕ ಮಾತಾಡಬೇಡಿರೊ," ಎಂದ ಮೂರನೆಯವನು. ಇವರ ವಿಷಯ



ಮಾತಾಡುತ್ತಾರೆಂದು ತಿಳಿದರೆ ಸತ್ತವರು ಎದ್ದು ಬರಬಹುದೆಂಬ ಭಯವಿದ್ದ ಹಾಗೆ ಎಚ್ಚರಿಕೆಯ ಮಾತನ್ನು ಹೇಳಿದ.

ಆ ಭೀತಿ ವಾಸ್ತವಿಕವೋ ಎಂಬಂತೆ ಮೂವರೂ ಮೌನ ತಳೆದರು.

ಒಂದೈದು ನಿಮಿಷಗಳಲ್ಲಿ ಚಟ್ಟದೊಳಗೆ ಸರಸರ ಶಬ್ದವಾಯಿತು: ಏನೆಂದು ಅದರ ಕಡೆಗೆ ದೃಷ್ಟಿ ಹಾಯಿಸುವಾಗ ಒಂದು ಶವದಿಂದ, "ಒಳ್ಳೆಯದು ಹೆಣ್ಣೇ, ನೀನು ಎರಡು ತಿನ್ನು; ನಾನು ಒಂದು ತಿಂತೇನೆ," ಎಂಬ ಮಾತು ಹೊರಬಿದ್ದಂತೆ ಕೇಳಿಸಿತು. ಈ ಮೂವರೂ ಬೆಸ್ತುಗೊಂಡು ಇದೇನೆಂಬ ಪ್ರಶ್ನಾರ್ಥಕ ಮುಖಭಾವದಿಂದ ಒಬ್ಬರನ್ನೊಬ್ಬರು ನೋಡ-ಹತ್ತಿದರು. ಅಷ್ಟರಲ್ಲಿ ಸೊಸೆಯ ಶವದಿಂದ ಉತ್ತರ ಬಂತು: "ಇದನ್ನು ಮೊದಲೇ ಯಾಕೆ ಹೇಳಲಿಲ್ಲ ?"

ಇನ್ನು ಸಂಶಯಕ್ಕೆ ಎಡೆ ಇರಲಿಲ್ಲ. ಸತ್ತವರು ಇಷ್ಟರಲ್ಲೇ ಭೂತಗಳಾಗಿ ಮೂವರನ್ನೂ ತಿಂದು ಹಾಕುವ ಎತ್ತುಗಡೆಯಲ್ಲಿದ್ದಾರೆಂಬುದು ಸ್ಪಷ್ಟ-ವಾಗಿತ್ತು. ಭೀತಿಯಿಂದ ಅವರ ಕೈಕಾಲುಗಳು ತಣ್ಣಗಾದವು. ಬಾಯಿಂದ ಮಾತು ಹೊರಡಲಿಲ್ಲ. ಕೊನೆಗೆ ಇವರಲ್ಲೊಬ್ಬನು ಧೈರ್ಯ ತಂದು ಕೊಂಡು, "ದೇವಾ, ರಕ್ಷಿಸು," ಎಂದು ಬೊಬ್ಬಿಡುತ್ತಾ ಊರ ಕಡೆಗೆ ಓಡಿದನು. ಅವನು ಓಡಿದ್ದನ್ನು ನೋಡಿ ತುಸು ಧೈರ್ಯ ತಂದು ಕೊಂಡು ಉಳಿದಿಬ್ಬರೂ ಅವನನ್ನು ಹಿಂಬಾಲಿಸಿದರು. ದಾರಿಯಲ್ಲಿ ಅವರಿಗೆ ಕಟ್ಟಿಗೆ ತರಲು ಹೋಗಿದ್ದ ಮನುಷ್ಯ ಎದುರಿಗೆ ಸಿಕ್ಕಿದ. ಅವನನ್ನು ನೋಡಿ, "ಒಳ್ಳೇ ಮನುಷ್ಯ ನೀನು. ನಮ್ಮನ್ನು ಭೂತಗಳ ಬಾಯಿಗೆ ಕೊಟ್ಟು ನೀನು ಪಾರಾಗುವ ಪ್ರಯತ್ನ ಮಾಡಿದಿ," ಎಂದು-ದ್ಗರಿಸಿದರು.

"ಅಂದರೆ ಆದದ್ದಾದರೂ ಏನು ?" ಅವನು ಪ್ರಶ್ನಿಸಿದ.

"ಆಗುವದೇನು ? ಸತ್ತ ಆ ಮಾಟಗಾತಿಯರು ಭೂತಗಳಾಗಿ ನಮ್ಮನ್ನು ತಿಂದುಹಾಕಲು ಹೊರ-ಟಿವೆ," ಎಂದು ಗಡಿಬಿಡಿಯಿಂದ ಹೇಳಿ ಅವರು ಪುನಃ ಓಡಹತ್ತಿದರು. ಅದನ್ನು ನೋಡಿ ಈ ನಾಲ್ಕನೆಯವನೂ ಅವರ ಹಿಂದಿನಿಂದಲೆ ಓಡ-ಹತ್ತಿದ. ಆ ನಾಲ್ವರೂ ಭೂತ-ಭೂತ ಎಂದು ಬೊಬ್ಬಿಡುತ್ತಾ ತಮ್ಮ ಮನೆಗಳಿಗೆ ಮುಟ್ಟಿದಾಗ, ಆಯಾಸ-ಭೀತಿಗಳಿಂದ ಬಳಲಿ ಹಾಸಿಗೆ ಧೊಪ್ಪನೆ ಬಿದ್ದುಬಿಟ್ಟರು. ತುಸು ಹೊತ್ತಿನ ಮೇಲೆ ಅವರು ಹೇಳಿದ ಸಂಗತಿ ಕೇಳಿದಾಗ ಇಡಿಯ ಊರಲ್ಲಿ ಭೀತಿಯ ಛಾಯೆ ಪಸರಿಸಿತು. "ಈ ಮಾಟಗಾತಿಯರು ಸತ್ತರೂ ನಮ್ಮ ಬೆನ್ನು ಬೆನ್ನು ಹತ್ತುವುದನ್ನು ಬಿಡಲಿಲ್ಲ. ಇನ್ನೇನು ಮಾಡುವುದು ?" ಎಂದು ಒಬ್ಬರು ಇನ್ನೊಬ್ಬ-ರನ್ನು ಕೇಳಹತ್ತಿದರು. ಊರಲ್ಲೆಲ್ಲ ಹಾಹಾ-ಕಾರವೆದ್ದಿತು. ಕೆಲವು ಉತ್ಸಾಹಿ ತರುಣರು ನಿಜಪರಿಸ್ಥಿತಿ ಏನೆಂಬುದನ್ನು ತಿಳಿದುಕೊಳ್ಳುವ ಕುತೂಹಲದಿಂದ ಸ್ಮಶಾನದೆಡೆಗೆ ಹೋದರು. ಅಲ್ಲಿ ನೋಡುತ್ತಾರೇನು? ಶವಗಳು ಮಾಯ-ವಾಗಿದ್ದವು. ಸಿದಿಗಿ ಅಸ್ತವ್ಯಸ್ತವಾಗಿತ್ತು. ಏನೋ ಚಮತ್ಕಾರ ನಡೆದಿದೆ ಎಂದು ಅವರಿಗೆ ಖಾತ್ರಿಯಾಯಿತು. ಆದರೆ ಶವಗಳು ಎಲ್ಲಿಗೆ ಹೋದವೆಂಬ ಸಮಸ್ಯೆ ಮಾತ್ರ ಬಗೆಹರಿಯ-ಲಿಲ್ಲ.

ಆ ದಿನ ಯಾವುದೇ ಅನಾಹುತ ಸಂಭವಿಸ-ದಿದ್ದುದರಿಂದ ಜನರು ತುಸು ಶಾಂತರಾದರು. ಮರುದಿನ ಊರ ಅಗಸ ಧೋಂಡು ಬಟ್ಟೆ ಗಂಟನ್ನು ಹೊತ್ತುಕೊಂಡು ನದಿಯ ಕಡೆಗೆ ಹೋದ. ಅವನು ಬಟ್ಟೆ ಒಗೆಯುವ ಜಾಗ ಸ್ಮಶಾನದ ಸಮೀಪವಿತ್ತು. ಸೂರ್ಯಾಸ್ತ-ದೊಳಗೇ ತನ್ನ ಕೆಲಸ ಮುಗಿಸಬೇಕೆಂದು ಅವನು ಬೇಗ ಬೇಗ ಒಗೆದ ಬಟ್ಟೆಗಳನ್ನು ಅಲ್ಲೇ ಒಣಗ-ಲಿಕ್ಕೆ ಹಾಕುತ್ತಿದ್ದ. ಕೆಲಸ ಮಾಡುತ್ತಿರು-ವಂತೆಯೇ ಅವನ ಮನಸ್ಸಿನಲ್ಲೂ ಭೂತಗಳ ವಿಚಾರವೇ ಸುತ್ತುತ್ತಿತ್ತು. 'ಆ ಭೂತಗಳು ಇಲ್ಲಿಗೆ ಬಂದರೆ ನಾನೇನು ಮಾಡಲಿ? ಜೀವ ಹಿಡಿದುಕೊಂಡು ಊರಿಗೆ ಓಡಿಹೋಗಲು ಸಾಧ್ಯ-ವಾದೀತೆ? ಆ ಅತ್ತೆ-ಸೊಸೆ ಬಹಳ ಕೆಟ್ಟ ಜನ. ಅಂತೆಯೇ ಅವರು ಸತ್ತೊಡನೆ ದೇವರು ಅವರನ್ನು ಭೂತಗಳನ್ನಾಗಿಸಿಬಿಟ್ಟಿದ್ದಾನೆ. ಆ ಭೂತಗಳು ನಮ್ಮ ಊರಿಗೆ ಹಾನಿ ಮಾಡ-ಬಾರದು. ಅದಕ್ಕಾಗಿ ಮನೆಗೊಂದು ಕೋಳಿ

ಜೊತೆ ಊರವರೆಲ್ಲರೂ ಮಸೋಬನ ಗುಡಿಗೆ ಆರ್ಜಿಸಬೇಕು.'

ಈ ರೀತಿ ಅವನ ವಿಚಾರಚಕ್ರ ತಿರುಗುತ್ತಿದ್ದಾಗ ಪತ್ತಿರದ ಆಲದ ಮರದ ಹಿಂದಿನಿಂದ ಮಾತಿನ ಗುಜುಗುಜು ಕೇಳಿಸಿತು. ಕಿವಿ ನೆಟ್ಟಗೆ ಮಾಡಿ ಆಲಿಸಿದಾಗ, "ನೀವು ರಾತ್ರಿಯೇ ಯಾಕೆ ಹೇಳಲಿಲ್ಲ, ನಾನು ಒಂದು ತಿಂತೇನೆಂದು? ನೀವು ಒಂದು ತಿಂತೇನೆಂದಿದ್ದರೆ ಹೀಗೇಕಾಗುತ್ತಿತ್ತು?" ಈ ಶಬ್ದಗಳು ಅವನ ಕಿವಿಗೆ ಬಿದ್ದೊಡನೆ ಧೋಂಡು ಹೋ ಹೋ ಹೋ ಎಂದು ಬೊಬ್ಬಿಡುತ್ತಾ ಒಂದೇ ಸವನೆ ಊರ ಕಡೆಗೆ ಓಡಿದನು. ಊರಲ್ಲಿ ಪುನಃ ಗೊಂದಲ ಪ್ರಾರಂಭವಾಯಿತು. "ಏನಾಯಿತು? ಭೂತಗಳು ಯಾರನ್ನು ತಿಂದವು? ಯಾರು ಸತ್ತರು?" ಇಂತಹ ಪ್ರಶ್ನೆಗಳನ್ನು ಒಬ್ಬರಿಗೊಬ್ಬರು ಕೇಳಹತ್ತಿದರು. ಅಷ್ಟರಲ್ಲಿ ಒಬ್ಬನು ಫೌಜದಾರ ಸಾಹೇಬರು ಊರಿಗೆ ಬಂದಾರೆಂಬ ಸುದ್ದಿ ತಂದನು. ಜನರು ತುಸು ಧೈರ್ಯಗೊಂಡರು. ಅವರಲ್ಲಿ ಎಲ್ಲವನ್ನೂ ಅರಿಕೆ ಮಾಡೋಣ ಎಂದು ಗೌಡರು ಸೂಚಿಸಿದರು.

ಫೌಜದಾರ ಸಾಹೇಬರು ಒಂದು ಅಪರಾಧದ ತಪಾಸಣೆಗಾಗಿ ಆ ಊರಿಗೆ ಬಂದು ಗ್ರಾಮದ ಚಾವಡಿಯಲ್ಲಿ ಇಳಿದಿದ್ದರು. ಅವರ ಸಂಗಡ ನಾಲ್ವರು ಪೋಲಿಸರೂ ಇದ್ದರು. ಫೌಜದಾರ ಸಾಹೇಬರ ಕುದುರೆಯು ಹಿಂಗಾಲುಗಳಿಗೆ ಹಗ್ಗ ಕಟ್ಟಿ ಅದನ್ನು ಚಾವಡಿಯ ಮುಂದಿನ ಅಂಗಳದಲ್ಲಿ ನೆಟ್ಟಿದ್ದ ಎರಡು ಗೂಟಗಳಿಗೆ ಸಿಕ್ಕಿಸಿದ್ದರು.

ಜನರ ಗುಂಪು ತನ್ನ ಕಡೆಗೆ ಬರುತ್ತಿದ್ದುದನ್ನು ನೋಡಿ, "ಏನು ಜಾತ್ರೆ ನಡಿಸಿದ್ದೀರೇನು?" ಎಂದು ಆ ಪೋಲೀಸ್ ಅಧಿಕಾರಿ ಸಹಜ ಧಿಮಾಕಿನಿಂದ ಬಂದವರನ್ನು ಕೇಳಿದರು.

"ನಿನ್ನೆ ಸರಕಾರ, ರಾತ್ರಿ ಇಬ್ಬರು ಹೇಗಸರು ಸತ್ತರು. ಮುಂಜಾನೆ ಅವರು ಭೂತವಾಗಿ ಊರನ್ನೇ ಸುಡಹತ್ತಿದ್ದಾರೆ," ಎಂದು ಗೌಡರು ಅರಿಕೆ ಮಾಡಿಕೊಂಡರು.

"ಏನೋ, ರಾತ್ರಿ ಸತ್ತ ಮನುಷ್ಯ ಮುಂಜಾನೆಯೊಳಗೆ ಭೂತವಾಗುತ್ತಾನೇನೋ? ನಿಮ್ಮ ತಲೆಗಿಲೆ ಕೆಟ್ಟಿದೆಯೋ ಹೇಗೆ?"

"ಅಗದಿ ಖರೇ ಅದೆ, ಸಾಹೇಬರೆ. ಎರಡೂ ಶವಗಳು ಸ್ಮಶಾನದ ಬಳಿಯಿಂದ ಮಾಯವಾದವು. ಈಗ ಮೂರು ಜನರ ಬಲಿ ಬೇಡುತ್ತವೆ."

"ಶವಗಳು ಎದ್ದು ನಡೆದವು! ಮೂವರ ಬಲಿ ಬೇಡುತ್ತವೆ! ಎಲ್ಲಾ ಚಮತ್ಕಾರಿಕ. ಈಗ ಶವಗಳು ಎಲ್ಲಿವೆ?" ಫೌಜದಾರ ಸಾಹೇಬರು ಎದ್ದು ನಿಂತು ತಮ್ಮ ಸಮವಸ್ತ್ರವನ್ನು ಸರಿಪಡಿಸಿಕೊಳ್ಳುತ್ತಾ ಕೇಳಿದರು.

ಗೌಡರು ಧೊಂಡೂನನ್ನು ಮುಂದೆ ಮಾಡಿ, "ನದಿ ತೀರದಲ್ಲಿ ಆಲದ ಮರದ ಕೆಳಗೆ ಇವೆ ಎಂದು ಇವನು ಹೇಳುತ್ತಾನೆ," ಎಂದು ಭಯದಿಂದ ನುಡಿದರು.

"ಹೌದೇನೋ?" ಎಂದು ಫೌಜದಾರರು ಗರ್ಜಿಸಿದರು. ಹೌದೆಂದು ಧೋಂಡು ತಲೆ ತಗ್ಗಿಸಿದ ಮೇಲೆ ಅವರು ಪೋಲೀಸರನ್ನು ಕರೆದು, "ನೋಡಿ ಬನ್ನಿರೋ, ಏನು ಸಮಾಚಾರ," ಎಂದು ಹುಕುಂ ಮಾಡಿ, ಕೂಡಿದ ಜನರನ್ನುದ್ದೇಶಿಸಿ, "ಈ ಪೋಲೀಸರಿಗೆ ನಿಮ್ಮ ಭೂತಗಳನ್ನು ತೋರಿಸಿರಿ. ಸುಳ್ಳಾದರೆ ನಿಮ್ಮ ಚರ್ಮ ಸುಲಿಸಿಬಿಟ್ಟೇನು," ಎಂದು ಗದರಿಸಿದರು.

ಪೋಲೀಸರು, ಊರವರು ಎಲ್ಲರೂ ಧೋಂಡೂನನ್ನು ಮುಂದೆ ಹಾಕಿಕೊಂಡು ನದಿಯ ಕಡೆಗೆ ಹೊರಟರು. ಆದರೆ ಅಲ್ಲಿ ಹೋಗಿ ನೋಡಿದರೆ ಏನೂ ಇಲ್ಲ. ಒಂದು ರೀತಿಯಿಂದ ಜನತೆಗೆಲ್ಲ ನಿರಾಶೆಯೇ ಆಯಿತು. ಪೋಲೀಸರು ಜನತೆಯ ಪರಿಹಾಸ್ಯ ಮಾಡಹತ್ತಿದರು.

ಅಷ್ಟರಲ್ಲಿ ಮುದುಕ ಪೀರಾಜಿ, "ಎಲಾ, ಅಲ್ಲಿ ನೋಡಿರಿ," ಅಂದ.

"ಅಲ್ಲಿ ಅಂದರೆ ಎಲ್ಲಿ?" ಎಲ್ಲರ ಪ್ರಶ್ನೆ.

"ನೋಡಿರಿ, ಆ ಕಲ್ಲುಗಳನ್ನು."

- ಪಿರಾಜಿ ತೋರಿಸಿದ ಸ್ಥಳದಲ್ಲಿ ಎರಡು ಉದ್ದನ್ನ ಸಪಾಟ ಕಲ್ಲುಗಳಿದ್ದವು. ಅವುಗಳ ಮೇಲೆ ಒಣ ಹಾಕಿದ ಸೀರೆಗಳನ್ನು ಯಾರೊ ಎಳೆಯುತ್ತಿದ್ದರು. ಇದನ್ನು ನೋಡಿ ಧೊಂಡು "ಭೂತ!" ಎಂದು ಬೊಬ್ಬಿಟ್ಟ. ಅದನ್ನು ಕೇಳಿದೊಡನೆ ಹೋದ ಜನರೆಲ್ಲರೂ ಊರ ಕಡೆಗೆ ಓಡ

ಹತ್ತಿದರು. ಎಲ್ಲರ ಮುಂದೆ ಪೋಲೀಸರು ಓಡುತ್ತಿದ್ದರು. ಓಡುತ್ತಿದ್ದವರು, "ಬಂತು, ಬಂತು, ಭೂತ ಬಂತು!" ಎಂದು ಶಕ್ತಿ ಮೀರಿ ಬೊಬ್ಬಿಡುತ್ತಿದ್ದರು. ಜನರು ಊರನ್ನು ತಲಪುವ ಮೊದಲೇ ಅವರ ಭಯಂಕರ ಬೊಬ್ಬೆ ಊರನ್ನು ಮುಟ್ಟಿತು. ಈ ರೀತಿ ಬೊಬ್ಬಿಡುತ್ತಾ ಪೋಲೀಸರೂ ಇತರರೂ ಒಂದೇ ಸಮನೆ ಓಡಿ ಬರುವುದನ್ನು ನೋಡಿ ಫೌಜದಾರರೂ ಏನೊ ಭಯಂಕರ ಘಟನೆ ನಡೆಯಲಿದೆ ಎಂದು ದಿಗಿಲುಗೊಂಡರು. ಅಲ್ಲದೆ ತಾವು ಸಹ ಪಲಾಯನ ಸೂತ್ರವನ್ನೇ ಕೈಕೊಳ್ಳುವದು ಒಳಿತೆಂದು ಭಾವಿಸಿ ತಮ್ಮ ಕುದುರೆಯ ಮೇಲೆ ಹಾರಿ ಕುಳಿತು ಚಾಬೂಕಿನಿಂದ ಅದಕ್ಕೆ ಬಲವಾದ ಏಟು ಕೊಟ್ಟರು. ಭೀತಿಯಿಂದುಂಟಾದ ಗೊಂದಲದಲ್ಲಿ ಕುದುರೆಯ ಹಿಂಗಾಲುಗಳನ್ನು ಹಗ್ಗದಿಂದ ನೆಲದಲ್ಲಿ ಹೂತ ಗೂಟಗಳಿಗೆ ಕಟ್ಟಿದ್ದು ಅವರ ನೆನಪಿಗೆ ಬರಲೇ ಇಲ್ಲ. ಚಾಟಿಯ ಏಟು ಬಿದ್ದೊಡನೆ ಕುದುರೆ ಓಡಲುದ್ಯುಕ್ತವಾಯಿತು. ಓಡುವ ರಭಸದಲ್ಲಿ ಆ ಗೂಟಗಳು ನೆಲದಿಂದ ಕಿತ್ತುಹೋದವು. ಕುದುರೆ ನಾಗಾಲೋಟದಿಂದ ಓಡುವಾಗ ಆ ಹಗ್ಗ ಕಟ್ಟಿದ ಗೂಟಗಳು ಫೌಜದಾರ ಸಾಹೇಬರ ಬೆನ್ನಿಗೆ ತಾಲಬದ್ಧವಾಗಿ ಬಡಿಯಹತ್ತಿದವು. ಫೌಜದಾರ ಸಾಹೇಬರಿಗೆ ಹಿಂತಿರುಗಿ ನೋಡುವ ಧೈರ್ಯ ಸಹ ಉಳಿಯಲಿಲ್ಲ. ಯಾರೋ ತನ್ನ ಬೆನ್ನಿಗೆ ಹೊಡೆಯುತ್ತಿದ್ದಾರೆ. ಅದು ಭೂತವೇ ಇರಬೇಕು ಎಂಬ ಭೀತಿಯಿಂದ ಫೌಜದಾರ ಸಾಹೇಬರ ಬುದ್ಧಿಯೇ ನಷ್ಟವಾಯಿತು. ಅವರು ಇನ್ನಷ್ಟು ಜೋರಿನಿಂದ ಕುದುರೆಯನ್ನು ಓಡಿಸಹತ್ತಿದರು. ಕೊನೆಗೆ ದಾರಿಯಲ್ಲಿದ್ದ ಒಂದು ದೊಡ್ಡ ಕಲ್ಲಿಗೆ ಕುದುರೆಯು ಎಡವಿ ಕುದುರೆ, ಸವಾರ ಇಬ್ಬರೂ ಧೊಪ್ಪನೆ ಬಿದ್ದುಬಿಟ್ಟರು.

ನದಿಯ ಕಡೆಯಿಂದ ಬರುವ ಜನರ ಈ ಬೊಬ್ಬೆ ಕೇಳಿ ಊರಲ್ಲಿದ್ದ ಜನರೂ ಗಾಬರಿ



ಗೌಡರು. ಗಂಡಸರು ಮಾತ್ರವಲ್ಲದೆ ಹೆಂಗಸರು, ಮಕ್ಕಳು ಸಹ ಅವರೊಡನೆ ಪೋಲೀಸರ ಮುಂದಾಳುತನದಲ್ಲಿ ಫೌಜದಾರರು ಹೋದ ಕಡೆಗೇ ಓಡಿದರು. ಫೌಜದಾರರು ಬಿದ್ದೆಡೆಗೆ ಬರುವ ವರೆಗೆ ಯಾರೂ ಹಿಂದಿರುಗಿ ನೋಡಲಿಲ್ಲ. ಬಳಲಿ ಬೆಂಡಾಗಿದ್ದ ಅವರು ಫೌಜದಾರರನ್ನು ಎಬ್ಬಿಸಿದ ಬಳಿಕ ಅಲ್ಲೇ ತುಸು ಹೊತ್ತು ಮುಂಗಾಣದಂತೆ ತೆಪ್ಪಗೆ ನಿಂತಿದ್ದರು.

ಅಷ್ಟರಲ್ಲಿ, "ಓಡಬೇಡಿರಿ, ನಿಲ್ಲಿರಿ," ಎಂದು ಕೂಗುತ್ತಾ ಸಂತಾಜಿ ಅಲ್ಲಿಗೆ ಬಂದ. ಅವನನ್ನು ನೋಡಿ ಗೌಡರು, "ಯಾವಾಗ ಬಂದಿ ಸಂತಾಜಿ?" ಎಂದು ಕೇಳಿದರು. "ಇಂದೇ ಮುಂಜಾನೆ," ಎಂದವನು ಉತ್ತರಿಸಿದ.

"ನೀನು ಬಂದದ್ದು ಒಳಿತಾಯಿತು ನೋಡು. ಇದೆಲ್ಲ ನಿನ್ನ ತಾಯಿ—ಹೆಂಡತಿ ಮಾಡಿದ ಅವಾಂತರ!"

"ಅವರೇನು ಮಾಡ್ಯಾರ?"

"ಅವರೇನು ಮಾಡ್ಯಾರ! ಇನ್ನೇನು ಮಾಡಬೇಕು? ಸತ್ತು ಭೂತಗಳಾಗಿ ಊರನ್ನೇ ನುಂಗಲು ಹೊರಟಿದ್ದಾರೆ."

"ಇಲ್ಲ ಗೌಡರೆ, ಹಾಗೇನೂ ಆಗಿಲ್ಲ. ಸುಳ್ಳೇ ಗುಲ್ಲು ಎಬ್ಬಿಸಿದ್ದೀರಿ."

"ಅಂದರೆ, ಅವರಿಬ್ಬರು ಎಲ್ಲಿ ಇದ್ದಾರೆ ಈಗ?"

"ಮನೆಯಲ್ಲಿ."

"ಅವರು ಸಾಯಲಿಲ್ಲ, ಭೂತವಾಗಲಿಲ್ಲ ಅಂತೀಯೇನು?"

"ನಿಶ್ಚಯವಾಗಿ."

"ಆದರೆ, ಅವರ ಶವಗಳನ್ನು ನಾಲ್ವರು ನೋಡಿದ್ದಾರಲ್ಲ? ಶವಗಳು ಅಲ್ಲಿಂದ ಮಾಯವಾದವು. ಇದೆಲ್ಲಾ ಹೇಗಾಯಿತು? ನೀನು ಒಂದು ತಿನ್ನು, ನಾನು ಎರಡು ತಿಂತೇನೆ ಎಂದು



ಸಂಕ್ರಾಂತಿ ಅಗರ್‌ಬತ್ತಿಗಳ ಸುಗಂಧ ಮನಶ್ಶಾಂತಿಯನ್ನು ತರುವ ವಿನೂತನ ಅನುಭವ

ಪ್ರಶಾಂತಿಯ ಕ್ಷಣಗಳಿಗಾಗಿ, ಸಮ್ಮೋಹಕ ಶಾಂತಿಯನ್ನು ಪಡೆಯಲು ಅಂತಹ ಕ್ರಿಯಾತ್ಮಕ ಸುಗಂಧ ಬೀರುವ ಅಗರಬತ್ತಿಗಳನ್ನು ಹಚ್ಚುವುದಕ್ಕಿಂತ ಸಾಟಿ ಬೇರೊಂದಿಲ್ಲ.

ಅದಕ್ಕಾಗಿ ಸಂಕ್ರಾಂತಿ ಅಗರಬತ್ತಿಗಳನ್ನೇ ಹಚ್ಚಿರಿ.

ಸಂಕ್ರಾಂತಿ
ಅಗರಬತ್ತಿ ಕಂಪೆನಿ
ನಂ. 33 ಪಿಳ್ಳಪ್ಪ ಲೇನ್,
ನಗರ್ತರಪೇಟೆ ಕ್ರಾಸ್
ಬೆಂಗಳೂರು-560 002

ಶವದಿಂದಲೇ ಶಬ್ದಗಳು ಹೊರಟವಲ್ಲಾ. ಸತ್ತವರು ಭೂತವಾಗಿರದಿದ್ದರೆ ಸತ್ತ ಶವದಿಂದ ಮಾತು ಹೊರಡುವುದು ಹೇಗೆ?"

"ಅದೆಲ್ಲ ಚಮತ್ಕಾರಿಕ ಕತೆ."

"ಏನದು ಬೇಗ ಹೇಳು."

"ಹೇಳುತ್ತೇನೆ. ಮೊದಲು ಊರಿಗೆ ಹಿಂತಿರುಗೋಣ."

ಎಲ್ಲರೂ ಮರಳಿದರು. ಫೌಜದಾರ ಸಾಹೇಬರನ್ನು ಪೋಲೀಸರೂ ಗೌಡರೂ ಕೈ ಹಿಡಿದು ಮೆಲ್ಲಗೆ ನಡೆಸಿ ತಂದು ಚಾವಡಿಯಲ್ಲಿ ಕೂರಿಸಿದರು. ಅವರ ಬೆನ್ನು ಬಾತು ಹೋಗಿ ಕೆಲವು ಕಡೆ ರಕ್ತ ಸಹ ಬಂದಿತ್ತು. ಗೌಡರು ಬೆನ್ನಿಗೆ ಎಣ್ಣೆ ಮತ್ತು ಅರಿಶಿಣಪುಡಿ ಸವರಿದರು. ಊರವರೆಲ್ಲ ಚಾವಡಿಯ ಸುತ್ತ ಕೂಡಿದರು.

"ಈಗ ಹೇಳು, ಏನು ಅವಾಂತರ ನಡೆಯಿತು?" ಫೌಜದಾರರು ಕೇಳಿದರು.

"ಅವಾಂತರ ಏನೂ ಇಲ್ಲ," ಸಂತಾಜಿ ನಡೆದ ಸಂಗತಿ ಹೇಳಲು ಸುರು ಮಾಡಿದ:

"ಮನೆಯಲ್ಲಿ ಕಾಳೇ ಇರಲಿಲ್ಲ. ಇದ್ದ ಬೇರೆ ಬೇರೆ ಕಾಳು ಸೇರಿಸಿ ಹಿಟ್ಟು ಮಾಡಿ ಮೂರು ಸಣ್ಣ ರೊಟ್ಟಿ ಮಾಡಿದರು. ಆ ಮೂರೂ ರೊಟ್ಟಿಗಳಿಂದ ಇಷ್ಟೆಲ್ಲಾ ಅವಾಂತರವಾಯಿತು".

"ಅಂದರೆ ಹೇಗೆ?" ಪಾಟೀಲರು ಉತ್ಸುಕತೆಯಿಂದ ಕೇಳಿದರು.

"ಸಾಹೇಬರೆ, ಅತ್ತೆ–ಸೊಸೆ ಇಬ್ಬರೂ ಹಟಮಾರಿಗಳು. ಮೂರು ಭಕ್ಕರಿಗಳಲ್ಲಿ ಎರಡು ಯಾರು ತಿನ್ನಬೇಕು ? ಒಂದು ಯಾರು ತಿನ್ನಬೇಕು? ಎಂಬ ವಿಷಯದಲ್ಲಿ ಇಬ್ಬರ ಮನಸ್ಸಿನಲ್ಲಿ ವಿಚಾರ ಬೇರೆಯೇ ಬಂತು. ತಾನು ಅತ್ತೆಗೆ ಊಟ ಬಡಿಸಿದರೆ ಆಕೆಗೆ ಎರಡು ರೊಟ್ಟಿ ಹಾಕಿ ತಾನು ಒಂದನ್ನೇ ತಿನ್ನಬೇಕಾದೀತೆಂಬ ಭಯ ಸೊಸೆಗೆ–ಅರ್ಥಾತ್ ನನ್ನ ಹೆಂಡತಿಗೆ. ತಾನು ಮೊದಲು ಸೊಸೆಗೆ ಊಟ ಬಡಿಸಿದರೆ ಆಕೆಗೆ ಎರಡು ರೊಟ್ಟಿ ಹಾಕಿ ತಾನು ಒಂದರಲ್ಲೇ ತೃಪ್ತಿಯಾಗಬೇಕಾದೀತೆಂಬ ಭಯ ಆ ಕ್ಷಣಕ್ಕೇ ಅತ್ತೆಯನ್ನು, ಅಂದರೆ ನನ್ನ ತಾಯಿಯನ್ನು ಕಾಡುತ್ತಿತ್ತು. ಆ ಬಗ್ಗೆ ಅವರಲ್ಲಿ ಹೇಗೋ ಮನಸ್ತಾಪವಾಗಿ ಭಾರೀ ಜಗಳವೇ ಆಯಿತು. ಇಬ್ಬರೂ ಹಸಿದ ಹೊಟ್ಟೆಯಲ್ಲೇ ಮಲಗಿದರು. ಹಠಮಾರಿತನದಲ್ಲಿ ಇವರಿಬ್ಬರಲ್ಲಿ ಯಾರನ್ನು ಯಾರು ಮೀರಿಸುತ್ತಾರೆಂದು ಹೇಳುವುದೇ ಅಸಾಧ್ಯ. ಸತ್ತರೂ ಚಿಂತೆಯಿಲ್ಲ, ತಾವು ಮೊದಲು ಕಣ್ಣು ತೆರೆಯುವುದಿಲ್ಲ, ಬಾಯಿ ಬಿಡುವುದಿಲ್ಲ ಎಂದಿಬ್ಬರೂ ತಮ್ಮ ತಮ್ಮ ಮನಸ್ಸಿನಲ್ಲೇ ನಿರ್ಧರಿಸಿ ಬಿಟ್ಟಿದ್ದರು. ಅಂತೆಯೆ ಸ್ಮಶಾನಕ್ಕೊಯ್ದರೂ ಇಬ್ಬರೂ ಬಾಯಿ ತೆರೆಯಲಿಲ್ಲ. ಆದರೆ ಕೊನೆಗೆ ಮುದುಕಿ ಅಂಜಿದಳು. ಈಗ ಬಾಯಿ ಬಿಡದಿದ್ದರೆ ಹೆಣಗಳೆಂದು ತಮ್ಮಿಬ್ಬರನ್ನೂ ಜನ ಸುಟ್ಟು ಬಿಡುವುದು ಖಂಡಿತ. ವಿನಾಕಾರಣ ಸಾಯಬೇಕಾದೀತಲ್ಲ ಎಂಬ ಅರಿವಾಗಿ ಅವಳೇ ಮೊದಲು ಮಾತಾಡಿದಳು."

"ಏನು ಹೇಳಿದಳು?" ಫೌಜದಾರ ಸಾಹೇಬರು ಕೇಳಿದರು.

"ನೀನು ಎರಡು ತಿನ್ನು, ನಾನು ಒಂದು ತಿಂತೇನೆ."

ಸ್ಮಶಾನಕ್ಕೆ ಚಟ್ಟ ಹೊತ್ತುಕೊಂಡ ಹೋದವರ ಪೈಕಿ ಒಬ್ಬ ಉದ್ಗರಿಸಿದ: "ಹೀಗೊ? ನಾವು ಅಲ್ಲಿ ಮೂವರಿದ್ದೆವು. ನೀನು ಇಬ್ಬರನ್ನು ತಿನ್ನು, ನಾನು ಒಬ್ಬನನ್ನು ತಿಂತೇನೆ ಅಂತ ಹೇಳುತ್ತಾಳೆಂದು ನಾವು ಅರ್ಥ ಮಾಡಿದೆವಲ್ಲ!"

ಕೂಡಿದ ಜನರು ಸಮಾಧಾನದ ದೀರ್ಘಶ್ವಾಸ ಬಿಟ್ಟು ತಮ್ಮ ತಮ್ಮ ಮನೆಗಳಿಗೆ ಮರಳಿ ಹೋದರು. ಫೌಜದಾರ ಸಾಹೇಬರು ಸುಸ್ತಾಗಿ ಬಿಟ್ಟಿದ್ದರು. ಅವರಲ್ಲಿಗೆ ಬಂದದ್ದು ಇನ್ನಾವುದೋ ಒಂದು ಅಪರಾಧ ಚೌಕಶಿಗೆಂದು. ಅದನ್ನು ಬಿಟ್ಟು ಮರುದಿನ ತಮ್ಮ ಠಾಣೆಗೆ ಹಿಂದಿರುಗಿದರು.

ಇದು ಮೀಂಚೇಕರ ಹೇಳಿದ ಮೂರು ರೊಟ್ಟಿಗಳ ಕಥೆ.



ಡಾ. ನಾ. ಸು. ಹರ್ಡೀಕರರ ಆತ್ಮಚರಿತ್ರೆ

ಸ್ವಯಂಸೇವಕನ ನೆನಪುಗಳು

ಸಂಗ್ರಹ: ಸುರೇಂದ್ರ ದಾನಿ

ಸ್ವಯಂಸೇವಕನ ನೆನಪುಗಳು

ಭಾರತದ ಸ್ವಾತಂತ್ರ್ಯ ಹೋರಾಟದ ಸೇನಾನಿ ಡಾ. ನಾ. ಸು. ಹರ್ಡೀಕರರು ಸುಸಂಬದ್ಧವಾದ ಆತ್ಮಚರಿತ್ರೆಯನ್ನು ಬರೆದಿಟ್ಟಿಲ್ಲ; ಆದರೂ ೧೯೩೪ರಲ್ಲಿ Some Recollections In Life ಎಂಬ ಶೀರ್ಷಿಕೆಯಲ್ಲಿ ಕೆಲ ನೆನಪುಗಳನ್ನು ಬರೆದಿಟ್ಟಿದ್ದಾರೆ. ಅದು ಇಂಗ್ಲೀಷಿನಲ್ಲಿ ಟೈಪ್ ಮಾಡಿದ ೨೦-೨೨ ಪುಟಗಳ ಚಿಕ್ಕ ಹಸ್ತಪ್ರತಿ. ಮುಂದೆ ೪೦ ವರ್ಷಗಳ ನಂತರ ಅವರ ಜೀವನದ ಸಂಜೆಯಲ್ಲಿ ಧಾರವಾಡ ಆಕಾಶವಾಣಿ ಕೇಂದ್ರದವರು 'ಪರೋಪಕಾರಾರ್ಥಮಿದಮ್ ಶರೀರಂ' ಎಂಬ ಶೀರ್ಷಿಕೆಯಲ್ಲಿ ಅವರ ಜೀವನ ಸ್ಮೃತಿಗಳನ್ನು ಧ್ವನಿಮುದ್ರಿಸಿಕೊಂಡಿದ್ದಾರೆ. ಇವೆರಡನ್ನೂ ಸೇರಿಸಿ ಒಂದು ಸುಸಂಬದ್ಧ ಗ್ರಂಥವನ್ನು ಸಿದ್ಧಪಡಿಸಬಹುದೆಂಬ ವಿಚಾರವನ್ನು ಕರ್ನಾಟಕ ಆರೋಗ್ಯಧಾಮದ ಮುಖ್ಯಸ್ಥರಾದ ಡಾ. ಎಂ. ಕೆ. ವೈದ್ಯರು ತಕ್ಷಣ ಒಪ್ಪಿಕೊಂಡರು; ತಮ್ಮಲ್ಲಿರುವ ಹಸ್ತಪ್ರತಿಗಳನ್ನೂ ಲಭ್ಯಮಾಡಿಕೊಟ್ಟರು. ಅವರಿಗೂ ಧ್ವನಿಮುದ್ರಿಕೆಯ ಮೂಲ ಪ್ರತಿಯನ್ನು ಉಪಯೋಗಿಸಿಕೊಳ್ಳಲು ಅನುಮತಿ ನೀಡಿದ ಧಾರವಾಡ ಆಕಾಶವಾಣಿ ಕೇಂದ್ರದವರಿಗೂ ಕೃತಜ್ಞತೆಗಳು.

ನಾನು ಜನ್ಮ ತಳೆದದ್ದು ಧಾರವಾಡದಲ್ಲಿ—೧೮೮೯ರ ಮೇ ತಿಂಗಳ ೭ನೇ ದಿನಾಂಕದಂದು. ತಂದೆ–ತಾಯಿ, ಏಳು ಜನ ಸಹೋದರರು ಮತ್ತು ಸಹೋದರಿಯರು ಹೀಗೆ ನಮ್ಮದು ತುಂಬಿದ ಮನೆಯಾಗಿತ್ತು. ಆದರೆ ಬಡತನದಿಂದಾಗಿ ಆರ್ಥಿಕ ಪರಿಸ್ಥಿತಿ ಎಂದೂ ಚೆನ್ನಾಗಿರಲಿಲ್ಲ. ನನ್ನ ತಂದೆಯ ಮೇಲೆ ದೊಡ್ಡ ಕುಟುಂಬ ನಡೆಸುವ ಹೊಣೆ ಇತ್ತು. ಅವರ ಸಂಬಳ ೫೦ ರೂ. ಮಾತ್ರ ಇತ್ತಂತೆ. ಮನೆಯಲ್ಲಿ ಬೇರೆ ಯಾರೂ ಗಳಿಸುವವರಿರಲಿಲ್ಲ. ಭೂಮಿಕಾಣಿಗಳಂತೂ ಇರಲೇ ಇಲ್ಲ ಎನ್ನಬಹುದು: ಏನೊ ಒಂದು ಸಣ್ಣ ತುಂಡು ಭೂಮಿ ಇದ್ದರೂ ಅದರಿಂದ ವರ್ಷಕ್ಕೆ ೫೦ ರೂ. ಕೂಡ ಆದಾಯ ಬರುತ್ತಿರಲಿಲ್ಲ. ಹೀಗಾಗಿ ನಮ್ಮ ತಂದೆ ಭಿಕ್ಷಾವೃತ್ತಿಯಿಂದಲೇ ಜೀವಿಸಬೇಕಾಗುತ್ತಿತ್ತು. ತಮ್ಮ ಬಾಲ್ಯದಲ್ಲಿ ಸಹ ಅವರು ಅನಾಥರಾಗಿ ಭಿಕ್ಷೆ ಬೇಡಿ ಉಪಜೀವನ ನಡೆಸಿದರಂತೆ. ಧಾರವಾಡದಲ್ಲಿ ನಾನು ಹುಟ್ಟಿದ ಮನೆಯೆಂದರೆ ಒಂದು ಸಂದಿಯಲ್ಲಿದ್ದ ಮೂರು ಕೋಣೆಗಳ ಕತ್ತಲು ಗುಹೆ. ೧೯೨೮ ರಲ್ಲಿ ನಮ್ಮ ಅಣ್ಣ ಅದನ್ನು ಮಾರಿದಾಗ ೪೦೦ ರೂ.ಗಳಿಗಿಂತ ಹೆಚ್ಚು ಬೆಲೆ ಬರಲಿಲ್ಲ. ಅದರಲ್ಲೇ ನಾವು ಹನ್ನೆರಡು ಜನರಿದ್ದೆವು.

ಮಕ್ಕಳ ಬೇಡಿಕೆಗಳನ್ನು ಪೂರೈಸುವದು ನಮ್ಮ ತಾಯ್ತಂದೆಗಳಿಗೆ ಎಷ್ಟೊಂದು ಕಷ್ಟದಾಯಕವಾಗಿತ್ತೆಂಬುದು ನನಗೆ ನಿಚ್ಚಳವಾಗಿ ನೆನಪಿದೆ. ದೀಪಾವಳಿ ಮತ್ತು ದಸರೆ ಹಬ್ಬಗಳು ಬಂದಾಗ ನಾವು ಸಣ್ಣ ಮಕ್ಕಳು ಹೊಸ ಅಂಗಿ ಟೊಪ್ಪಿಗೆಗಳಿಗಾಗಿ ನಮ್ಮ ನಮ್ಮಲ್ಲಿ ಜಗಳಾಡುತ್ತಿದ್ದೆವು. ತಾಯ್ತಂದೆಗಳು ನಮ್ಮನ್ನು ಹೇಗೋ ಸಂತೈಸುತ್ತಿದ್ದರು. ೧೮೯೭ರಲ್ಲಿ ನಮ್ಮ ತಂದೆಯವರು ವಿಧಿವಶರಾದರು. ನಮ್ಮ ಕುಟುಂಬದ ಜೀವನಾಧಾರವೆಲ್ಲ ಅವರ ಗಳಿಕೆಯನ್ನೇ ಅವಲಂಬಿಸಿದ್ದರಿಂದ ನಮ್ಮ ಆರ್ಥಿಕ ಸ್ಥಿತಿ ಚಿಂತಾಜನಕವಾಯಿತು. ಕೆಲ ಸ್ನೇಹಿತರು ಪಟ್ಟಿ ಹಾಕಿ ನಮ್ಮ ಕುಟುಂಬದ ಉದರಪೋಷಣೆಗೆ ಹಣ ಕೊಡಲು ಆರಂಭಿಸಿದರು. ನಮ್ಮ ಹಿರಿಯ ಅಣ್ಣ ಹದಿನೆಂಟನೇ ವಯಸ್ಸಿನಲ್ಲೇ ಶಿಕ್ಷಣ ನಿಲ್ಲಿಸಿ ನೌಕರಿ ಹಿಡಿಯಬೇಕಾಯಿತು. ನಾರ್ಥ್ಪುರರ

[illegible] ನಮ್ಮ ತಂದೆ ಮಾಡುತ್ತಿದ್ದ ಕೆಲಸವೇ ಅವನಿಗೆ ದೊರೆಯಿತು. ಅವನು ತರುತ್ತಿದ್ದ ಚಿಲ್ಲರೆ ಸಂಬಳ ಮತ್ತು ಸ್ನೇಹಿತರು ಕೊಡುತ್ತಿದ್ದ ಪಟ್ಟಿಯ ಹಣದಲ್ಲಿ ನಮ್ಮ ಉಪಜೀವನ ಸಾಗುತ್ತಿತ್ತು.

ನಮ್ಮ ತಂದೆ ತೀರಿಕೊಂಡ ನಾಲ್ಕೇ ವರ್ಷಗಳಲ್ಲಿ ನಮ್ಮ ಕುಟುಂಬದ ಅನೇಕರು ಒಬ್ಬರ ನಂತರ ಒಬ್ಬರು ಇಹಲೋಕ ತ್ಯಜಿಸಿದರು. ನಾವು ನಾಲ್ವರು ಅಣ್ಣ ತಮ್ಮಂದಿರು ಮತ್ತು ತಾಯಿ ಮಾತ್ರ ಉಳಿದುಕೊಂಡೆವು. ನೌಕರಿ ಹಿಡಿದಿದ್ದ ಹಿರಿಯ ಅಣ್ಣ ದುಡಿತದ ಭಾರದಿಂದ ಹೃದಯ ವಿಕಾರಕ್ಕೆ ತುತ್ತಾಗಿ ಕಾಲವಶನಾದ. ಇನ್ನುಳಿದ ವರಲ್ಲಿ ಹಿರಿಯವನಾದ ರಾಮಚಂದ್ರ ತನ್ನ ಭವಿಷ್ಯವನ್ನು ಅರಸಿ ಪುಣೆಗೆ ಹೊರಟುಹೋದ. ಅವನೊಬ್ಬನ ಭಾರ ಕುಟುಂಬಕ್ಕೆ ಕಡಿಮೆ ಆಯಿತು. ಅವನು ಅಲ್ಲಿ ಯಾರ ಯಾರದೋ ನೆರವಿನಿಂದ ಶಿಕ್ಷಣ ಮುಂದುವರಿಸಿ ಮ್ಯಾಟ್ರಿಕ್ ಪಾಸಾಗಿ ವಿಜಾಪುರದಲ್ಲಿ ಸದರ್ನ್ ಮರಾಠಾ ಹೈಸ್ಕೂಲಿನಲ್ಲಿ ಶಿಕ್ಷಕನೆಂದು ನೌಕರಿ ಹಿಡಿದ. ಆ ನೌಕರಿ ಮಾಡುವಾಗಲೂ ಅವನು ಮುಂದಿನ ಶಿಕ್ಷಣದ ಪ್ರಯತ್ನ ನಡೆಸುತ್ತಲೇ ಇದ್ದ. ಎರಡನೆಯವನಾದ ಲಕ್ಷ್ಮಣ ಪುಣೆಗೆ ಹೋಗಿ ಕಂಪೌಂಡರ್ ನೌಕರಿ ಹಿಡಿದ. ಅವನ ಸಂಬಳ ತಿಂಗಳಿಗೆ ಹತ್ತು ರೂಪಾಯಿ. ದುರ್ದೈವದಿಂದ ವಿಜಾಪುರದಲ್ಲಿದ್ದ ಅಣ್ಣ ಪ್ಲೇಗ್ ಬೇನೆಗೆ ತುತ್ತಾಗಿ ತೀರಿಕೊಂಡ. ಪುತ್ರಶೋಕದಿಂದಲೂ ಕಷ್ಟ ಪರಂಪರೆಗಳಿಂದಲೂ ಎದೆ ಒಡೆದುಕೊಂಡ ನನ್ನ ತಾಯಿ ಪುಣೆ ಅಣ್ಣನ ಕಡೆಗೆ ಹೋಗಿ ಇರತೊಡಗಿದಳು. ಅವಳ ಜೊತೆಗೆ ನಾನಲ್ಲದೆ ನಮ್ಮ ಇನ್ನೊಬ್ಬ ಅಣ್ಣ ಗಣಪತಿ ಮತ್ತು ನಮ್ಮ ಮನೆಯಲ್ಲೇ [illegible] ಅನಾಥರಾಗಿ ಲಕ್ಷ್ಮಣನ ತುತ್ತಿನಲ್ಲಿ ಪಾಲುಗಾರರಾದೆವು. ಇದು ೧೯೦೨–೧೯೦೩ರ ಕಾಲ. ಕ್ರಮೇಣ ನಮ್ಮ ಅಣ್ಣನಿಗೆ ಎರಡು ರೂಪಾಯಿ ಮತ್ತು ನಂತರ ಮೂರು ರೂಪಾಯಿ ಬಡತಿ ಸಿಕ್ಕಿತು.

ನಮ್ಮದು ಎಂದಿನಿಂದಲೂ ಅರೆ ಹೊಟ್ಟೆ, ಅರೆ ಬತ್ತಲೆ ಜೀವನ. ಯಾವಾಗಲೂ ನಮಗೆ ಊಟ ಬಟ್ಟೆಗಳ ಕೊರತೆ. ೧೯೦೩ರ ಪ್ಲೇಗಿನ ಹಾವಳಿಯ ಕಾಲಕ್ಕೆ ಪುಣೆಯಲ್ಲಿ ಊರ ಹೊರಗೆ ಗುಡಿಸಲಲ್ಲಿ ನಾವಿದ್ದ ನೆನಪು ನನಗಿದೆ. ನಮ್ಮ ಅಣ್ಣ ಊರಲ್ಲಿ ಎರಡು ಮೈಲು ದೂರದಲ್ಲಿದ್ದ ದವಾಖಾನೆಯಲ್ಲಿ ಕಂಪೌಂಡರ್ ಕೆಲಸ ಮಾಡುತ್ತಿದ್ದ. ನಾವು ಅವನಿಗೆ ದಿನಾಲು ಊಟ ಒಯ್ದು ಕೊಡುತ್ತಿದ್ದೆವು. ಮನೆಯಲ್ಲಿಯ ಪಾತ್ರೆ ಪರಡೆಗಳೂ ಅಷ್ಟಕ್ಕಷ್ಟೇ. ಅದೆಂಥ ಬಡತನದ ಬವಣೆ! ನಮ್ಮ ತಾಯಿಯ ಸಂಕಟ ವನ್ನಂತೂ ಊಹಿಸಲೂ ಅಸಾಧ್ಯ. ಅವಳಿಗೆ ಹುಚ್ಚು ಹಿಡಿಯುವದೊಂದೇ ಬಾಕಿ ಉಳಿದಿತ್ತು. ಅಂದಿನ ದಿನಗಳ ನೆನಪಾದರೆ ಇನ್ನೂ ಮೈ ಜುಮ್ಮೆನ್ನುತ್ತದೆ. ಈ ದುಃಖವನ್ನು ಅನುಭವಿಸುತ್ತಲೇ ನಮ್ಮ ತಾಯಿ ನಮ್ಮೆಲ್ಲರನ್ನೂ ಪರದೇಶಿಗಳನ್ನಾಗಿ ಮಾಡಿ ಅಸು ನೀಗಿದಳು.

ನಮ್ಮ ತಂದೆ ಸಾಯುವ ಮೊದಲು ನಾನು ಧಾರವಾಡದಲ್ಲಿ ಮರಾಠಿ ಶಾಲೆಯಲ್ಲಿ ಓದುತ್ತಿದ್ದೆ. ಅಲ್ಲಿ ನಾನು ಮೊದಲಿನ ಮೂರು ವರ್ಗಗಳನ್ನು ಮುಗಿಸಿದ ನೆನಪು. ತಂದೆ ಸತ್ತ ನಂತರ ಮರಾಠಿ ನಾಲ್ಕನೆ ವರ್ಗವನ್ನೂ ಅಲ್ಲಿಯೇ ಮುಗಿಸಿದೆ. ಅದರ ನಂತರ ನಾವು ಕಲಘಟಗಿಗೆ ತೆರಳಬೇಕಾಯಿತು. ಅಲ್ಲಿ ಕನ್ನಡ ಶಾಲೆ ಮಾತ್ರ ಇತ್ತು. ಕನ್ನಡದ ಮೂರು ವರ್ಗಗಳನ್ನು ಅಲ್ಲಿ ಓದಿದೆ. ಕೌಟುಂಬಿಕ ಆರ್ಥಿಕ ಪರಿಸ್ಥಿತಿಯಿಂದಾಗಿ ಕ್ರಮಬದ್ಧವಾಗಿ ಶಿಕ್ಷಣ ಪೂರೈಸುವದು ನನಗೆ ಆಗಲೇ ಇಲ್ಲ. ೧೯೦೦ರ ಸುಮಾರಿಗೆ ನಾನು ಧಾರವಾಡದಲ್ಲಿ ಹೈಸ್ಕೂಲು ಅಭ್ಯಾಸವನ್ನಾರಂಭಿಸಿದೆ. ಅಷ್ಟರಲ್ಲಿ ಮತ್ತೆ ಪುಣೆಗೆ ಹೋದುದರಿಂದ ಅಲ್ಲಿ ಶಿಕ್ಷಣ ಮುಂದುವರಿಯಿತು. ಮರು ವರುಷವೇ ವಿಜಾಪುರದಲ್ಲಿದ್ದ ನಮ್ಮ ಅಣ್ಣನ ಹತ್ತಿರ ಹೋದುದರಿಂದ ಅಲ್ಲಿಯ ಶಾಲೆಗೆ ಸೇರಿದೆ. ಆ ಅಣ್ಣ ತೀರಿಕೊಂಡದ್ದರಿಂದ ಮತ್ತೆ ಪುಣೆಗೆ ಹೋದೆ.

ಕೊನೆಗೆ ೧೯೦೪ರಲ್ಲಿ ನಾನು ಹುಬ್ಬಳ್ಳಿಗೆ ಬಂದೆ. ಅಲ್ಲಿ ನಮ್ಮ ಅಬಚಿಯ ಅಂದರೆ ಶೇವಡೆಯವರ ಮನೆಯಲ್ಲಿ ಇರತೊಡಗಿದೆ. ಅಲ್ಲಿ ನನ್ನ ಶಿಕ್ಷಣ ಮುಂದುವರಿಯಿತು. ಹೊಟ್ಟೆ ಬಟ್ಟೆಯ ಸಮಸ್ಯೆಯೂ ಸುಗಮವಾಯಿತು. ನಾನು ಹುಬ್ಬಳ್ಳಿಗೆ ಹೋದುದರಿಂದ ಪುಣೆ-

ಯಲ್ಲಿಯ ನನ್ನ ತಾಯಿ ಮತ್ತು ಅಣ್ಣ-ತಮ್ಮಂದಿರು ಒಂದೆರಡು ತುತ್ತು ಹೆಚ್ಚು ಅನ್ನ ಉಂಡು ಒಂದೆರಡು ಬಟ್ಟೆ ಹೆಚ್ಚಿಗೆ ತೊಡು-ವಂತಾಯಿತು; ನನ್ನ ಅಬಚಿಯ ಮಗ ದಿವಂಗತ ಭಾವುರಾವ ಶೇವಡೆ ಮತ್ತು ಅವರ ಪತ್ನಿ ನನ್ನನ್ನು ತಮ್ಮ ಮನೆಯವನಂತೆಯೆ ಕಂಡರು. ಅವರ ಮನೆಯಲ್ಲಿ ಇರುವ ವರೆಗೂ ನನಗೆ ಯಾವುದರ ಕೊರತೆಯೂ ಅನಿಸಲಿಲ್ಲ. ನಾನು ಅಲ್ಲಿಯ ಲ್ಯಾಮಿಂಗ್‌ಟನ್ ಹೈಸ್ಕೂಲಿನಲ್ಲಿ ಐದನೇ ವರ್ಗಕ್ಕೆ ಸೇರಿಕೊಂಡೆ. ೧೯೦೬ರಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತೆ. ಆದರೆ ಗಣಿತದಲ್ಲಿ ಪಾಸಾಗ-ಲಿಲ್ಲ. ಮೇಲಿಂದ ಮೇಲೆ ಸ್ಥಳಗಳ ಬದಲಾವಣೆ-ಯಿಂದಾಗಿ ನನ್ನ ಓದು ಸರಿಯಾಗಿ ಆಗಲಿಲ್ಲ. ಸಂಸ್ಕೃತ ಮತ್ತು ಗಣಿತ ವಿಷಯಗಳು ನನ್ನ ತಲೆಗೆ ಹತ್ತಲೇ ಇಲ್ಲ. ಗಣಿತದ ಬಗ್ಗೆ ನನ್ನಲ್ಲಿ ಎಷ್ಟೊಂದು ತಾತ್ಸಾರ ಬೆಳೆದಿತ್ತೆಂದರೆ ಸುಲಭದ ಅಂಕಿ ಮಗ್ಗಿಗಳ ಬಗ್ಗೆಯೂ ನನಗೆ ಹೆದರಿಕೆ. ಇಂದಿಗೂ ನನಗೆ ಗಣಿತವೆಂದರೆ ಅಷ್ಟಕ್ಕಷ್ಟೆ.

ವಂಗ ಭಂಗ, ಸ್ವದೇಶೀ ಮತ್ತು ಬಹಿಷ್ಕಾರ ಚಳವಳಿಗಳ ನಡುವೆಯೇ ನನ್ನ ರಾಜಕೀಯ ಶಿಕ್ಷಣ ಆರಂಭವಾಯಿತು. ಪುಣೆಯ 'ಕೇಸರಿ' ಪತ್ರಿಕೆಯೇ ನನ್ನ ಸಾಪ್ತಾಹಿಕ ಶಿಕ್ಷಕ; ಅದರ ಸಂಪಾದಕ ಲೋಕಮಾನ್ಯ ಟಿಳಕರೇ ನನ್ನ ರಾಜಕೀಯ ಗುರು. 'ಕಾಳ' 'ಭಾಲಾ' 'ವಿಹಾರ' ಮೊದಲಾದ ಮರಾಠಿ ಪತ್ರಿಕೆಗಳನ್ನು ತಪ್ಪದೆ ಓದುತ್ತಿದ್ದೆ. ನಾನಾಗ ಆರನೇ ವರ್ಗ-ದಲ್ಲಿ ಓದುತ್ತಿದ್ದೆ. ಪ್ರಪಂಚದ ಅನುಭವವೇನೂ ಇರಲಿಲ್ಲ. ರಾಜಕೀಯವೆಂದರೇನೆಂಬ ಕಲ್ಪ-ನೆಯೂ ಇರಲಿಲ್ಲ. ಆದರೂ ಸ್ವದೇಶೀ ಚಳುವಳಿ-ಯಲ್ಲಿ ನಾನು ಸಿಕ್ಕಿಹಾಕಿಕೊಂಡೆ. ಹುಬ್ಬಳ್ಳಿ-ಯಲ್ಲಿ ನನಗೆ ಮಾರ್ಗದರ್ಶನ ಮಾಡುವಂಥವ ರಾರೂ ಇರಲಿಲ್ಲ. ರಾಜಕೀಯದ ಶಿಕ್ಷಣ ಕೊಡು-ವವರಾರೂ ಇರಲಿಲ್ಲ. ಪ್ರಚಾರ ಹೇಗೆ ನಡೆಸ ಬೇಕೆಂಬ ಮಾರ್ಗದರ್ಶನ ಮಾಡುವವರೂ ಯಾರೂ ಇರಲಿಲ್ಲ. ನನ್ನಷ್ಟಕ್ಕೆ ನಾನೇ ಮಾರ್ಗ-ದರ್ಶನ ಮಾಡಿಕೊಂಡು ನನ್ನ ಕಾರ್ಯಪದ್ಧತಿ-ಯನ್ನು ನಾನೇ ಕಂಡುಕೊಳ್ಳಬೇಕಾಗಿತ್ತು. ನನ್ನಂಥ ಮತ್ತೆ ಕೆಲ ಕಚ್ಚಾ ಸ್ನೇಹಿತರೇ ನನ್ನ ಸಹಕಾರಿಗಳು, ಅನುಭವ ಮತ್ತು ವೈಫಲ್ಯಗಳೇ ನನ್ನ ಮುಖ್ಯ ಶಿಕ್ಷಕ ಹಾಗೂ ಮಾರ್ಗದರ್ಶಕ-ರಾಗಿದ್ದರು. ಒಂದು ದೃಷ್ಟಿಯಿಂದ ಅದು ಒಳ್ಳೆಯದೇ ಆಯಿತು.

ಸ್ವದೇಶೀ ಚಳವಳಿಯ ವಿವಿಧ ಅಂಶಗಳನ್ನು ಕುರಿತು ನಾನು ೧೯೦೫ ರಲ್ಲೇ ಭಾಷಣ ಮಾಡ-ಲಾರಂಭಿಸಿದೆ. ಸಾಪ್ತಾಹಿಕ ಪತ್ರಿಕೆಗಳಲ್ಲಿ ನಾನು ಓದಿದ್ದನ್ನೆಲ್ಲ ಅಲ್ಲಿ ಪುನರುಚ್ಚರಿಸುತ್ತಿದ್ದೆ. ನನ್ನ ರಾಜಕೀಯ ಜೀವನ ಆರಂಭವಾದದ್ದು ಹೀಗೆ. ೧೯೦೯ರ ವರೆಗೂ ಇದೇ ರೀತಿಯ ಜೀವನ ಸಾಗಿತು. ಈ ಅವಧಿಯಲ್ಲಿ ನಾನು ಸುತ್ತು-ಮುತ್ತಲಿನ ಹಳ್ಳಿ ಪಟ್ಟಣಗಳಿಗೂ ಹೋಗು-ತ್ತಿದ್ದೆ. ಅಲ್ಲಿಯೂ ಈ ಪ್ರಚಾರ ನಡೆಸುತ್ತಿದ್ದೆ. ಸಂತೆ ಜಾತ್ರೆಗಳಲ್ಲೆಲ್ಲ ಹೋಗಿ ಸ್ವದೇಶಿ ವಸ್ತುಗಳ ಪುರಸ್ಕಾರ, ಮದ್ಯಪಾನ ನಿಷೇಧ ಮೊದಲಾ-ದವುಗಳ ಪ್ರಚಾರ ಮಾಡುತ್ತಿದ್ದೆ. ನನ್ನ ಮೇಲೆ ಒಂದು ದೊಡ್ಡ ಹೊಣೆಗಾರಿಕೆ ಬಿದ್ದಿದೆಯೆಂದು ನನಗಾಗ ಅನಿಸುತ್ತಿತ್ತು.

೧೯೦೬ರಲ್ಲಿ ನಮ್ಮ ತಾಯಿಗೆ ಬಹಳ ಜಡ್ಡಾದ ಸುದ್ದಿ ಬಂದದ್ದರಿಂದ ಅವಳನ್ನು ನೋಡಲು ಪುಣೆಗೆ ಹೋದಾಗ ಲೋಕಮಾನ್ಯ ಟಿಳಕರನ್ನು ಕಂಡೆ. ನನ್ನ ಭವಿಷ್ಯದ ಬಗ್ಗೆ ಅವರೊಡನೆ ಸಂಭಾಷಿಸಿದೆ. ಅವರು ಏನು ಹೇಳಿದರೆಂಬುದು ಇಂದು ನನಗೆ ಚೆನ್ನಾಗಿ ನೆನಪಿಲ್ಲ. ಆದರೆ ಅಂದಿನ ಕಾಲದ ಮಹಾ-ಪುರುಷನೊಬ್ಬನನ್ನು ನೋಡಿದ ಧನ್ಯತೆ ನನ್ನಲ್ಲಿ ಮೂಡಿತ್ತು. ಅಂದಿನ ನನ್ನ ಭಾವನೆಯನ್ನು ಬಾಯಿಂದ ಹೇಳಲು ಸಾಧ್ಯವಿಲ್ಲ. ನನ್ನ ಗುರು-ವನ್ನು ಕಂಡದ್ದಕ್ಕಾಗಿ ನಾನು ಹಿಗ್ಗಿ ಹಿರೇಕಾಯಿ ಆಗಿದ್ದೆ. ನಾನವರನ್ನು ಕಂಡದ್ದು ಅದೇ ಮೊದಲು; ಅದೇ ಕೊನೆ. ೧೯೦೮ರಲ್ಲಿ ಅವರಿಗೆ ಗಡಿಪಾರು ಶಿಕ್ಷೆ ಆಯಿತು. ೧೯೧೪ರಲ್ಲಿ ಅವರ ಬಿಡುಗಡೆ ಆದಾಗ ನಾನು ಅಮೇರಿಕದಲ್ಲಿದ್ದೆ. ನಾನು ಅಲ್ಲಿಂದ ಹಿಂದಿರುಗುವ ಮೊದಲೇ ಅವರು ತೀರಿಕೊಂಡಿ-ದ್ದರು. ಅವರ ಕೈಯಲ್ಲಿ ಕೆಲಸ ಮಾಡಬೇಕೆಂಬ ಹಂಬಲ ನನಗಿದ್ದರೂ ಅದು ಈಡೇರಲಿಲ್ಲ. ನನ್ನ ಗುರುವನ್ನು ನನ್ನ ಜೀವನದಲ್ಲಿ ಒಮ್ಮೆ ಮಾತ್ರ ಅದೂ ಅರ್ಧ ಗಂಟೆ ವರೆಗಷ್ಟೇ ನೋಡಿದೆ. ನನ್ನ

ಮಾತೃಭೂಮಿಯ ಕೆಲಸ ಮಾಡಲು ಅವರೇ ನನಗೆ ಸ್ಫೂರ್ತಿ ನೀಡಿದರು. ೧೯೦೭ರಲ್ಲಿ ನಾನು ಅವರೊಡನೆ ಕೆಲ ಪತ್ರ ವ್ಯವಹಾರ ನಡೆಸಿದೆ. ಅವರು ನನಗೆ ಒಳ್ಳೇ ವಾತ್ಸಲ್ಯದಿಂದ ಪತ್ರ ಬರೆಯುತ್ತಿದ್ದರು.

ಅಂತೂ ನಾನು ಮ್ಯಾಟ್ರಿಕ್ ಪಾಸಾದೆ. ಮುಂದೆ ನಾನು ಯಾವುದಾದರೊಂದು ನೌಕರಿ ಹಿಡಿದು ಉಪಜೀವನಕ್ಕೆ ಹತ್ತಬೇಕೆಂಬುದು ಶೇವಡೆಯವರ ಅಪೇಕ್ಷೆಯಾಗಿತ್ತು. ಅವರ ಬಳಗದವರೊಬ್ಬರು ಆಗ ಹುಬ್ಬಳ್ಳಿಯಲ್ಲಿ ಮಾಮಲೇದಾರರಾಗಿದ್ದರು. ಅವರು ನನ್ನನ್ನು ಅವರಲ್ಲಿಗೆ ಕರೆದೊಯ್ದು ನನಗೊಂದು ನೌಕರಿ ಕೊಡಲು ಕೇಳಿಕೊಂಡರು. ಆದರೆ ನಾನದನ್ನೊಪ್ಪಲಿಲ್ಲ. "ಎಂಥ ಪರಿಸ್ಥಿಯಲ್ಲೂ ನಾನು ಸರಕಾರಿ ನೌಕರಿ ಮಾಡಲಾರೆ. ಕೇವಲ ಕಾರಕೂನನಾಗಿ ಜೀವನ ಕಳೆಯುವದಕ್ಕೆ ನನ್ನ ಒಪ್ಪಿಗೆಯಿಲ್ಲ. ಅದಕ್ಕಿಂತ ಹೆಚ್ಚಿನದನ್ನು ನನ್ನ ಜೀವನದಲ್ಲಿ ಸಾಧಿಸಬೇಕೆಂಬುದು ನನ್ನ ಬಯಕೆ," (ಅದೊಂದು ಮಹತ್ವಾಕಾಂಕ್ಷೆ ಎಂದು ಈಗ ಅರ್ಥವಾಗುತ್ತಿದೆ) ಎಂದು ನಾನು ಉತ್ತರ ಕೊಟ್ಟೆ. ಈ ಹೆಚ್ಚಿನ ಬಯಕೆ ಏನೆಂಬುದರ ಸ್ಪಷ್ಟ ಕಲ್ಪನೆ ನನಗಾಗ ಇರಲಿಲ್ಲ. ಇದು ನಡೆದದ್ದು ೧೯೦೭–೧೯೦೮ ರಲ್ಲಿ.

ನಮ್ಮ ಪ್ರಾಚೀನ ಆರ್ಯ ಸಂಸ್ಕೃತಿಯಲ್ಲಿ ನಿಃಸ್ವಾರ್ಥ ಸೇವೆಗೆ ಒಂದು ಮಹತ್ವದ ಸ್ಥಾನವಿದೆ. ನಿಃಸ್ವಾರ್ಥಸೇವೆ ಅಂದರೆ ತಾನು ಕೈಕೊಂಡ ಸೇವಾಕಾರ್ಯದಲ್ಲಿ ಸ್ವಾರ್ಥದ ಲವಲೇಶವೂ ಇರುವುದಿಲ್ಲ. ಇದು ಪರೋಪಕಾರದ ಇನ್ನೊಂದು ಮುಖವು. ಸ್ವಾರ್ಥಕ್ಕಿಂತಲೂ ಇದಕ್ಕೆ ಹೆಚ್ಚಿನ ಸ್ಥಾನವಿದೆ.

ಇದು ಒಂದು ಅಭಿಜಾತ ಗುಣ. ಹುಟ್ಟಿನಿಂದಲೇ ಈ ಗುಣ ಮೈಗೂಡಿರುತ್ತದೆ. ಇದೇನೂ ಕಲಿಯುವ ವಿಷಯವಲ್ಲ. ಕಲಿಸಿದರೂ ಬರುವ ವಿಷಯವಲ್ಲ. ಸೇವಾಭಾವನೆಯು ಹುಟ್ಟಿನಿಂದ ಬಂದಾಗ ಗೃಹ ಶಿಕ್ಷಣದ ಪ್ರಭಾವದಿಂದ ಅದನ್ನು ಹೆಚ್ಚು ಹೆಚ್ಚು ಮೈಗೂಡಿಸಿಕೊಳ್ಳಬಹುದು. ಈ ನಿಃಸ್ವಾರ್ಥ ಸೇವೆ ಮಾಡುವ ಮನಸ್ಸು ಇದ್ದರೆ ಸಾಕು. ಅದಕ್ಕೇನೂ ಗುಣ, ಜಾತಿ, ವಯಸ್ಸು, ಸ್ಥಾನಮಾನ ಇವು ಯಾವವೂ ಬೇಡ. ಸೇವೆ ಮಾಡುವ ಮನಸ್ಸು, ಸೇವೆ ಮಾಡುವ ಬುದ್ಧಿ ಇದ್ದರೆ ಸಾಕು.

ಈ ಮಾದರಿಯ ನಿಃಸ್ವಾರ್ಥ ಸೇವೆ ಮಾಡಿ ತಮ್ಮ ಜೀವನ ಸಫಲ ಮಾಡಿಕೊಂಡ ಸಾಧುಸಂತ ಸತ್ಪುರುಷರ ಚರಿತ್ರೆಗಳು ನಮಗೆ ಆದರ್ಶಪ್ರಾಯವಾಗಿವೆ.

ನನ್ನ ಮಟ್ಟಿಗೆ ಹೇಳಬೇಕಾದರೆ ನಾನು–ಬಾಲ್ಯದಿಂದಲೂ ಶ್ರೀರಾಮನ ಭಕ್ತ, ಮಾರುತಿಯ ಉಪಾಸಕ. ರಾಮಾಯಣದಲ್ಲಿಯ ಪ್ರಸಂಗಗಳ, ಅದರಲ್ಲಿಯೂ ವಿಶೇಷವಾಗಿ ಮಾರುತಿಯ ಸೇವಾತತ್ಪರತೆಯ ಪ್ರಭಾವವು ನನ್ನ ಎಳೆ ಮನದ ಮೇಲೆ ಮೂಡಿಬಂದಿತ್ತು. ಎಲ್ಲಿಯೇ ಇರಲಿ, ಯಾವುದೇ ಸಾರ್ವಜನಿಕ ಕೆಲಸವಿರಲಿ, ನಾನು ಅದರಲ್ಲಿ ತತ್ಪರತೆಯಿಂದ, ತನ್ಮಯತೆಯಿಂದ ಭಾಗವಹಿಸುತ್ತಿದ್ದೆ. ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯರಾದ ಶ್ರೀ ವಿದ್ಯಾರಣ್ಯರು, ಮಹಾರಾಷ್ಟ್ರದ ಸತ್ಪುರುಷ ಶಿರೋಮಣಿಗಳಾದ ಸಮರ್ಥ ಸ್ವಾಮಿ ರಾಮದಾಸರು, ಶ್ರೀ ರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು ಇವರಂಥ ನರ ಶ್ರೇಷ್ಠರು ಮಾನವತೆಯ ಉದ್ಧಾರಕ್ಕಾಗಿ ನಿಃಸ್ವಾರ್ಥ ಬುದ್ಧಿಯಿಂದ ಮಾಡಿದ ಸೇವಾ ಕಾರ್ಯವು ನನ್ನ ಎಳೆ ಮನದ ಮೇಲೆ ಪ್ರಭಾವ ಬೀರಿತ್ತು.

ಇಂಥ ಮನಃಸ್ಥಿತಿಯಲ್ಲಿದ್ದಾಗ ನಮ್ಮ ಮಾತೃಭೂಮಿಯ ಬಂಧ ವಿಮೋಚನೆಯ ಚಳವಳಿ ದಿನ ದಿನಕ್ಕೂ ಪ್ರಖರವಾಗುತ್ತ ಸಾಗಿತ್ತು. ನಾನು ಕೈಕೊಳ್ಳಬೇಕೆಂದಿದ್ದ ಸೇವಾಕಾರ್ಯಕ್ಕೆ ಇದು ಒಂದು ಒಳ್ಳೇ ಅವಕಾಶ ನೀಡಿತು.

೧೯೦೩–೦೪ ರಲ್ಲಿ ಅಂದರೆ ನಾನು ಇನ್ನೂ ಕೇವಲ ೧೨–೧೩ ವಯಸ್ಸಿನ ಎಳೆ ಬಾಲಕನಿದ್ದಾಗಲೇ ಈ ಸೇವಾಕಾರ್ಯವನ್ನು ಪ್ರಾರಂಭಿಸಿದೆ. ಈ ನನ್ನ ಕಾರ್ಯವು ವ್ಯವಸ್ಥಿತವಾಗಿ ಸಾಗುವುದಕ್ಕಾಗಿ ನನ್ನ ಓರಿಗೆಯ ಗೆಳೆಯರನ್ನು ಕಲೆ ಹಾಕಿದೆ. ೧೯೦೦ರಲ್ಲಿ 'ಆರ್ಯ ಬಾಲ ಸಭಾ' ಎಂಬ ಒಂದು ಸಂಘವನ್ನು ಕಟ್ಟಿದೆ. ಅದರ ಮುಖಾಂತರ ನನ್ನ ಗೆಳೆಯರು ಸವೃಥ-

ರಾಗಬೇಕು; ಮಾರುತಿಯಂತೆ ವಜ್ರದೇಹಿಗಳಾಗಬೇಕು ಎಂದು ಅವರಿಗೆ ವ್ಯಾಯಾಮ ಮಾಡುವ ವ್ಯವಸ್ಥೆ ಮಾಡಿದೆ. ಬೆಳಗು ಮುಂಜಾನೆ ೪ ಗಂಟೆಗೆ ಎದ್ದು ಓಣಿ ಓಣಿಗಳಲ್ಲಿ ಸುತ್ತಾಡಿ ನನ್ನ ಗೆಳೆಯರನ್ನು ಎಬ್ಬಿಸಿ ಅವರನ್ನು ಕೂಡಿಕೊಂಡು ಊರ ಹೊರಗೆ ಮೈಲು ಎರಡು ಮೈಲು ತಿರುಗುತ್ತಿದ್ದೆವು. ಅಲ್ಲಿಂದ ಆಗ ಕಟ್ಟಲಿಕ್ಕೆ ಆರಂಭವಾಗಿದ್ದ ಲ್ಯಾಮಿಂಗ್ಟನ್ ಹಾಯ್‌ಸ್ಕೂಲಿನ ಸ್ಥಳದಲ್ಲಿ ಸಾಮು, ದಂಡ ಉಠಾಬೈಸ್ ಮೊದಲಾದ ನಮ್ಮ ದೇಶೀಯ ವ್ಯಾಯಾಮ ಪದ್ಧತಿಯಂತೆ ವ್ಯಾಯಾಮ ಮಾಡುತ್ತಿದ್ದೆವು.

ಮುಂದೆ ಈ ಕೆಲಸವು ನಿಯಮಿತತನದಿಂದ ನಡೆಯತೊಡಗಿದ್ದರಿಂದ ಒಂದು ವ್ಯಾಯಾಮ ಶಾಲೆಯನ್ನು ಪ್ರಾರಂಭಿಸಿದೆ. 'ಆರ್ಯ ಬಾಲಸಭಾ'ದ ಸದಸ್ಯರಿಗೆ ಶಾಸ್ತ್ರೀಯವಾಗಿ ಶಾರೀರಿಕ ಶಿಕ್ಷಣ ಕೊಡುವುದಕ್ಕಾಗಿ ಬಡೋದೆಯ ಜುಮ್ಮಾದಾದಾ ವ್ಯಾಯಾಮ ಶಾಲೆಯಲ್ಲಿ ವ್ಯಾಯಾಮ ಶಿಕ್ಷಕರಾಗಿ ಕೆಲಸ ಮಾಡಿ ಅನುಭವಿಕರಾದ ಶ್ರೀ ಕುಲಕರ್ಣಿ ಮಾಸ್ತರ ಎಂಬ ವ್ಯಾಯಾಮ ಪಟು ಮತ್ತು ಎಲುಬುಕೀಲು ಕೂಡಿಸುವವರು ವ್ಯಾಯಾಮ ಶಿಕ್ಷಣ ಕೊಡಲಿಕ್ಕೆ ಸುರು ಮಾಡಿದರು.

ನಮ್ಮ ಸಂಘದ ಸದಸ್ಯರ ಬೌದ್ಧಿಕ ವಿಕಾಸಕ್ಕಾಗಿ ಒಂದು ವಾಚನಾಲಯವನ್ನು ಪ್ರಾರಂಭ ಮಾಡಿದೆ. ಆಗ ಪ್ರಕಟವಾಗುತ್ತಿದ್ದ ಪತ್ರಿಕೆಗಳನ್ನು ಈ ವಾಚನಾಲಯಕ್ಕೆ ತರಿಸುತ್ತಿದ್ದೆ. ಈ ವ್ಯಾಯಾಮಶಾಲೆಯನ್ನು ನಡೆಸಲಿಕ್ಕೆ, ಶ್ರೀ ಕುಲಕರ್ಣಿ ಮಾಸ್ತರರಿಗೆ ತಿಂಗಳಿಗೆ ಅವರ ಜೀವನ ನಿರ್ವಹಣೆಗಾಗಿ ವೇತನ ಕೊಡಲಿಕ್ಕೆ, ವಾಚನಾಲಯಕ್ಕೆ ಬೇಕಾಗುವ ಪತ್ರಿಕೆಗಳನ್ನು ತರಿಸಲಿಕ್ಕೆ ಇವೆಲ್ಲಕ್ಕೂ ಬೇಕಾಗುತ್ತಿದ್ದ ಹಣವನ್ನು ಸಂಗ್ರಹಿಸುವುದಕ್ಕಾಗಿ ಮನೆಮನೆಗೆ ಹೋಗಿ ಮುಷ್ಟಿಫಂಡ್ ಭಿಕ್ಷೆ ಬೇಡುತ್ತಿದ್ದೆ. ಇವೆಲ್ಲ ಕೆಲಸವನ್ನೂ ನಾನು ನನ್ನ ಶಾಲೆಯ ಅಭ್ಯಾಸ ಮಾಡಿಕೊಂಡು ಸಂಜೆಯ ಹೊತ್ತಿನಲ್ಲಿ ಹುಬ್ಬಳ್ಳಿಯ ಪ್ರಮುಖ ಕೇಂದ್ರಸ್ಥಳಗಳಾದ ದುರ್ಗದ ಬೈಲು, ಜವಳಿ ಸಾಲು, ಸರಾಫಗಟ್ಟಿ ಮೊದಲಾದೆಡೆ ಸಾರ್ವಜನಿಕ ಸಭೆಗಳನ್ನು ನಡೆಸುತ್ತಿದ್ದೆ. ನನ್ನ ಗೆಳೆಯರಲ್ಲಿ ಕೆಲವರು ತಮ್ಮ ಸಂಗಡ ದೀಪದ ವ್ಯವಸ್ಥೆಗಾಗಿ ಕಂದೀಲುಗಳನ್ನು ತರುತ್ತಿದ್ದರು. ಮತ್ತೆ ಕೆಲವರು ಭಾಷಣಕಾರನಾದ ನನಗೆ ಭಾಷಣ ಮಾಡಲಿಕ್ಕೆ ಎತ್ತರದಲ್ಲಿ ನಿಂತುಕೊಳ್ಳುವದಕ್ಕಾಗಿ ತಮ್ಮ ಸಂಗಡ ಸಾಬೂನಿನ ಪೆಟ್ಟಿಗೆಗಳನ್ನು ತರುತ್ತಿದ್ದರು.

ಸ್ವದೇಶೀ ವಸ್ತುಗಳ ಪ್ರಚಾರ, ಮದ್ಯಪಾನ ನಿಷೇಧ ಮತ್ತು ಮಾದಕದ್ರವ್ಯಗಳ ಮಾರಾಟ ನಿರೋಧ, ಪರದೇಶಿ ವಸ್ತುಗಳ ಬಹಿಷ್ಕಾರ ಇವುಗಳಿಗಾಗಿ ಮತ್ತು ಮಾತೃಭೂಮಿಯ ಬಂಧವಿಮೋಚನೆಗಾಗಿ ನಡೆಸುತ್ತಿದ್ದ ಈ ಸಭೆಯನ್ನು ಮೊದಲು ವಂದೇ ಮಾತರಂ ರಾಷ್ಟ್ರಗೀತವನ್ನು ಸಾಮೂಹಿಕವಾಗಿ ಹಾಡಿದ ನಂತರ,

ಮೇಹರ್ಬಾನೀಸೇ ಅರ್ಜ ಸುನೋ
ಯಹೀ ಚೀಜ ದೇಶಕೀ ಲೇ ।
ಚೀಜ ದೇಶಕೀ ಲೇಕೆ ಆಪಕಾ
ಅಚ್ಛಾ ತುಮ್ ಕರ ಲೇ ॥

ಎಂಬ ಹಾಡಿನಿಂದ ಪ್ರಾರಂಭಿಸುತ್ತಿದ್ದೆ.

ನನ್ನ ಭಾಷಣ ನಡೆದಾಗ ಪೋಲೀಸರು ಬಂದು ಸಭೆಯನ್ನು ಚದುರಿಸುತ್ತಿದ್ದರು. ಅಲ್ಲಿಂದ ನಾವೆಲ್ಲರೂ ಮತ್ತೊಂದು ಸ್ಥಳಕ್ಕೆ ಹೋಗಿ ಅಲ್ಲಿ ಮತ್ತೆ ಸಭೆ ನಡೆಸುತ್ತಿದ್ದೆವು. ಇದೆಲ್ಲ ಸೇವಾ ಕಾರ್ಯ ನಡೆಯುತ್ತಿದ್ದುದು ನಾನು ಇನ್ನೂ ೧೩-೧೪ ವರ್ಷದವನಿದ್ದಾಗ. ಈ ಸಂದರ್ಭದಲ್ಲಿ ಆಗ ನಡೆದ ಒಂದು ದುರ್ಘಟನೆ ನೆನಪಿಗೆ ಬರುತ್ತಿದೆ.

ಇಂದು ಮಹಾತ್ಮಾ ಗಾಂಧಿ ಮಾರ್ಕೆಟ್ ಎಂದು ಕರೆಯಲ್ಪಡುವ ಆಗಿನ ರಾಬರ್ಟಸನ್ ಮಾರ್ಕೆಟ್ಟಿಗೆ ಬೆಂಕಿ ಹತ್ತಿತ್ತು. ಅದನ್ನು ನಂದಿಸುವಲ್ಲಿ ನಾನು ಮುಂದಾದೆ. ಈಗ ಜಯಚಾಮರಾಜನಗರವೆಂದು ಕರೆಯಲ್ಪಡುವ ಸ್ಥಳದಲ್ಲಿ ಆ ಕಾಲದಲ್ಲಿ ಅರಳೀಪೇಟೆ ಇತ್ತು. ಆ ಅರಳೀಪೇಟೆಯಲ್ಲಿಯ ಕೆಲವು ಉಗ್ರಾಣಗಳಿಗೆ ಬೆಂಕಿಹತ್ತಿತು. ಅದನ್ನು ನಂದಿಸುವ ಕಾರ್ಯದಲ್ಲಿ ನಾನು ಜೀವದ ಪರವೆ ಇಲ್ಲದೆ ಮುಂದಾಗಿ

ಮಾಡಿದೆ. ನನ್ನ ಇವೆಲ್ಲ ಚಟುವಟಿಕೆಗಳಿಂದ [illegible] ಯಾವುದೇ ಕೆಲಸಕ್ಕಾಗಿ ನಾನು ಭಿಕ್ಷೆ ಬೇಡಲು ಹೋದಾಗ ನನಗೆ ಯಾರೂ ಎಂದಿಗೂ ಇಲ್ಲವೆನ್ನಲಿಲ್ಲ. ಅಂತೆಯೇ ನನಗೆ ನನ್ನ ಮುಂದಿನ ಆಯುಷ್ಯದಲ್ಲಿ ಸಾರ್ವಜನಿಕ ಚಟುವಟಿಕೆಗಳನ್ನು ಕೈಕೊಳ್ಳಲಿಕ್ಕೆ ಅನುಕೂಲವಾಯಿತು.

ಆಗ ನಾನು ಗಣಪತಿ ಉತ್ಸವದಲ್ಲೂ ಭಾಗವಹಿಸುತ್ತಿದ್ದೆ. ಕಲಘಟಗಿ ಮತ್ತು ಹುಬ್ಬಳ್ಳಿಗಳಲ್ಲಿ ಶಿವಾಜಿ ಉತ್ಸವವನ್ನು ನಾನೇ ಪ್ರಾರಂಭಿಸಿದೆ. ೧೯೦೦ ರ ವರೆಗೂ ಅವು ನಡೆದವು. ಆಮೇಲೆ ಏನಾಯಿತೆಂಬುದು ನನಗೆ ಗೊತ್ತಿಲ್ಲ. ನಾನು ಹೋದಲ್ಲೆಲ್ಲ ಪೈಸಾಫಂಡ್ ಸಂಗ್ರಹಿಸುತ್ತಿದ್ದೆ. [illegible] ಗಳು, ಸಭೆ ಸಮ್ಮೇಲನಗಳು, ಸಂತೆಗಳು ನಡೆದಲ್ಲೆಲ್ಲ ಹೋಗಿ ನಾನು ನಿಧಿ ಸಂಗ್ರಹಿಸುತ್ತಿದ್ದೆ. ಇದನ್ನು ನಾನು ಪುಣೆಯಲ್ಲಿಯ 'ಕೇಸರಿ' ಪತ್ರಿಕೆಯ ಕಚೇರಿಗೆ ಕಳಿಸುತ್ತಿದ್ದೆ.

ನನ್ನ ಅಜ್ಜಿಯ ಮಗ ಅಣ್ಣ ಭಾವುರಾವ ಸ್ವದೇಶೀ ಬಹಿಷ್ಕಾರ ದಿನಗಳಲ್ಲಿ ಸ್ವದೇಶೀ ಅಂಗಡಿಯೊಂದನ್ನು ಪ್ರಾರಂಭಿಸಲು ನನಗೆ ನೆರವಾದ. ನಾವು ಅಲ್ಲಿ ಕಡಿ ಪೆಟ್ಟಿಗೆ, ಪೆನ್ಸಿಲ್, ಸ್ವದೇಶಿ ಸಕ್ಕರೆ ಮೊದಲಾದವುಗಳನ್ನು ಮಾರುತ್ತಿದ್ದೆವು. ಅದು ಸುಮಾರು ೧೮ ತಿಂಗಳ ವರೆಗೆ ನಡೆಯಿತು. ಅಷ್ಟರಲ್ಲಿ ಇನ್ನೂ ಹೆಚ್ಚು ಬಂಡವಾಳ ಹಾಕಿ ಇದೇ ಮಾದರಿಯ ಬೇರೆ ಅಂಗಡಿಗಳು ತಲೆ ಎತ್ತಿದ್ದರಿಂದ ನಮ್ಮ ಅಂಗಡಿಯನ್ನು ಮುಚ್ಚಬೇಕಾಯಿತು. ನಾವು ಹಾಕಿದ ಹಣವೆಲ್ಲ ಮುಳುಗಿಹೋಯಿತು. ನಮಗೊಂದೂ ಲಾಭ ಬರಲೇ ಇಲ್ಲ.

೧೯೦೭ರಲ್ಲಿ ನಾನು ಪ್ರಚಾರಕಾರ್ಯಕ್ಕೆಂದು ಪಂಢರಪುರಕ್ಕೆ ಹೊರಟೆ. ಈ ರೀತಿ ಹೋಗುವ ವಿಷಯವನ್ನು ನಾನು ಮನೆಯಲ್ಲಿ ಹೇಳಿರಲೇ ಇಲ್ಲ. ಆದರೆ ದೃಢನಿರ್ಧಾರದ ಅಭಾವದ ಮೂಲಕ ನಾಲ್ಕು ತಿಂಗಳು ಬೆಳಗಾವಿಯಲ್ಲಿ ಕಳೆದು ನಾನು ಮನೆಗೆ ಹಿಂತಿರುಗಿದೆ. ಈ ಅವಧಿಯಲ್ಲಿ ನಾನು ಜವಾಹಿರ ಮಗ್ಗದ ಮೇಲೆ ನೇಯುವುದನ್ನು ಕಲಿತೆ. ಖಾಸಗೀ ಇಂಗ್ಲಿಷ್ ಶಾಲೆ [illegible] ಕೆಲಕಾಲ [illegible] ಕೆಲಸ ಮಾಡಿದೆ. ಇವೆಲ್ಲ ಕೆಲ ತಿಂಗಳುಗಳು ಮಾತ್ರ.

ನನ್ನ ಹದಿವಯದಲ್ಲಿ ನಾನು ಬಹಳ ಭಾವನಾತ್ಮಕ ವ್ಯಕ್ತಿಯಾಗಿದ್ದೆ. ನನ್ನ ವಿಚಾರಗಳು ಚಂಚಲವಾಗಿರುತ್ತಿದ್ದವು. ನನಗೆ ನಿಶ್ಚಿತ ಧ್ಯೇಯವೆಂಬುದು ಇರಲಿಲ್ಲ. ಹುಬ್ಬಳ್ಳಿಯಲ್ಲಿಯ ಕುಟುಂಬದವರನ್ನು ನಾನು ಬಹಳಷ್ಟು ಹಚ್ಚಿಕೊಂಡಿದ್ದೆ. ಅತ್ತಿಗೆ ಉಮಾಬಾಯಿಯವರು ನನಗೆ ತಾಯಿಯಂತಿದ್ದರು. ಅವರ ವಾತ್ಸಲ್ಯಕ್ಕೆ ನಾನು ಮಾರುಹೋಗಿದ್ದೆ. ಮನೆಗೆ ಹಿಂದಿರುಗಬೇಕೆಂದು ಬಹಳಷ್ಟು ಹಂಬಲಿಸುತ್ತಿದ್ದೆ. ಆದರೆ ಒಮ್ಮೆ ಬಿಟ್ಟುಹೋದವನು ಮತ್ತೆ ಮನೆ ಸೇರುವುದು ಹೇಗೆ? ಅಂತೂ ನನ್ನ ಅತ್ತಿಗೆಯ ವಾತ್ಸಲ್ಯ ನಾನು ಮನೆಗೆ ಹಿಂದಿರುಗುವಂತೆ ಮಾಡಿತು.

ನನಗೆ ಮೊದಲಿನಿಂದಲೂ ಇಸಬಿನ ತೊಂದರೆ ಇತ್ತು. ಕಲಘಟಗಿ ತಾಲೂಕಿನ ಬಗಡಗೇರಿ ಸಾಧುಗಳ ಸೇವೆ ಮಾಡಿದರೆ ಅದು ಹೋಗುವುದೆಂದು ಕೆಲ ಸ್ನೇಹಿತರು ನನಗೆ ಹೇಳಿದರು. ನಾನು [illegible] ಹುಬ್ಬಳ್ಳಿಗೆ ಬಂದಾಗಲೆಲ್ಲ ಬಗಡಗೇರಿಗೆ ಹೋಗಿ ಬರುತ್ತಿದ್ದೆ. ಆ ಸಾಧುಗಳ ಆಕರ್ಷಣೆ ನನಗೆ ಬಹಳವಾಗಿತ್ತು. ಒಮ್ಮೆಯಂತೂ ನಾನು ಓದುವುದನ್ನು ಬಿಟ್ಟು ಅಲ್ಲಿಯೇ ಇರಲು ನಿರ್ಧರಿಸಿದೆ. ಜಪ, ತಪ, ನಾಮಸಂಕೀರ್ತನೆ, ಪುರಾಣ ಶ್ರವಣ, ಗೀತಾಪಠಣ ಮೊದಲಾದವು ನನ್ನ ನಿತ್ಯದ ಕಾರ್ಯಕ್ರಮಗಳಾದವು. ಕೆಲ ಪದ ಭಜನೆಗಳನ್ನೂ ರಚಿಸಿದೆ. ಅವುಗಳಲ್ಲಿ ಕೆಲವು ಇನ್ನೂ ನನ್ನ ಹತ್ತಿರ ಇವೆ. ಬಗಡಗೇರಿಯ ಸಾಧುಗಳು ಲಕ್ಷ ಲಿಂಗ ಪೂಜಾ ಕಾರ್ಯಕ್ರಮವನ್ನು ಹಾಕಿಕೊಂಡಿದ್ದರು. ಅದಕ್ಕಾಗಿ ನಿಧಿ ಸಂಗ್ರಹ ಕಾರ್ಯದಲ್ಲಿ ನಾನು ಅವರಿಗೆ ನೆರವಾಗಬೇಕಾಯಿತು. ಆಗ ಮೈಸೂರಿನ ದಿವಾನರಾಗಿದ್ದ ಸರ್. ಎಂ. ವಿಶ್ವೇಶ್ವರಯ್ಯನವರ ಕಡೆಗೆ ಸಹ ನಾನು ನಿಧಿ ಬೇಡಲು ಹೋಗಿದೆ. ಆದರೆ ಅವರು ಕೊಡಲಿಲ್ಲ.

ಇಷ್ಟೆಲ್ಲ ಮಾಡಿದರೂ ನನ್ನ ಇಸಬು ಮಾತ್ರ ಹೋಗಲಿಲ್ಲ.

ನಾನು ಸುಮಾರು ೧೬-೧೭ ವರ್ಷದವ ನಿದ್ದಾಗ ಮಿರಜಿನಲ್ಲಿ ಅಮೇರಿಕದಿಂದ ಇಲ್ಲಿಗೆ ಬಂದು ಇಲ್ಲಿಯ ರೋಗಿಗಳ ನಿವಾರಣೆಗಾಗಿ ನಡೆಸುತ್ತಿದ್ದ ಆಸ್ಪತ್ರೆಯನ್ನು ನೋಡುವ ಸಂದರ್ಭ ಬಂದಿತು. ಆ ರುಗ್ಣಾಲಯವನ್ನೂ ರುಗ್ಣ ಸೇವೆಯನ್ನೂ ನೋಡಿ, ನಾವೂ ಇಂಥ ಒಂದು ಸಂಸ್ಥೆಯನ್ನು ಕಟ್ಟಿ ದೀನ ದಲಿತ ರುಗ್ಣರ ಸೇವೆ ಯಾಕೆ ಮಾಡಮಾಡಬಾರದು ಎಂಬ ಕಲ್ಪನೆ ತಲೆಯಲ್ಲಿ ಮೂಡಿತು.

ಇಂಥ ಮಹತ್ಕಾರ್ಯಕ್ಕೆ ಲಕ್ಷ ಲಕ್ಷ ಹಣ ಬೇಕು. ನಾನಾದರೋ ಹುಟ್ಟು ದರಿದ್ರ; ನನ್ನಂಥವರಿಗೆ ಇದು ಹೇಗೆ ಸಾಧಿಸೀತು? ಎಂದು ಒಮ್ಮೊಮ್ಮೆ ಎದೆಗುಂದುತ್ತಿದ್ದೆ. ನನ್ನ ಇಬ್ಬರು ಬಾಲಮಿತ್ರರ ಸಂಗಡ ಈ ವಿಷಯ ವಾಗಿ ವಿಚಾರ ಮಾಡಿದೆ. ಅವರೂ ನನ್ನ ವಿಚಾ-ರಕ್ಕೆ ಅನುಮತಿ ಕೊಟ್ಟರು. ನಾವು ಮೂವರೂ ಕೂಡಿ ಹಣ ಇಲ್ಲದೆ ಈ ಕೆಲಸವನ್ನು ಹೇಗೆ ಮಾಡಬೇಕೆಂದು ವಿಚಾರ ನಡೆಸಿದಾಗ ನಮಗೆ ಒಂದು ವಿಚಾರ ಹೊಳೆಯಿತು. ನಾವು ಮೂವರೂ ಅಂದರೆ ನಾನು, ನನ್ನ ಗೆಳೆಯ ದಿವಂಗತ ಗೋವಿಂದ ಅಂಕಲೀಕರ ಮತ್ತು ಇನ್ನೊಬ್ಬ ಗೆಳೆಯ ಕುಂದಗೋಳದ ರಾಮು ನಾಡಗೀರ ಮೂವರೂ ವೈದ್ಯಶಾಸ್ತ್ರದಲ್ಲಿ ಒಂದೊಂದು ವಿಷಯವನ್ನು ತೆಗೆದುಕೊಂಡು ಪರಿಣತರಾಗಬೇಕು. ಆ ನಂತರ ಒಂದು ಧರ್ಮಾರ್ಥ ಸಾರ್ವಜನಿಕ ರುಗ್ಣಾಲಯವನ್ನು ಪ್ರಾರಂಭಿಸಬೇಕು ಎಂದು ನಿರ್ಧರಿಸಿದೆವು. ಅದಕ್ಕನುಸರಿಸಿ ನಾವು ಮೂವರೂ ಕಲಕತ್ತೆಗೆ ಹೋಗಿ ಅಲ್ಲಿ ನ್ಯಾಶನಲ್ ಕೌನ್ಸಿಲ್ ಆಫ್ ಎಜ್ಯುಕೇಶನ್ ಸಂಸ್ಥೆಯವರು ನಡೆಸುತ್ತಿದ್ದ ಕಾಲೇಜ್ ಆಫ್ ಫಿಜಿಸಿಯನ್ಸ್ ಆ್ಯಂಡ್ ಸರ್ಜನ್ಸ್ ವಿದ್ಯಾಲಯದಿಂದ ಎಂ. ಸಿ. ಪಿ. ಎಸ್. ಪದವಿ ಪಡೆದು ಹೊರಬಿದ್ದೆವು.

ಕಲಕತ್ತೆಗೆ ಹೋಗುವ ಕಾಲಕ್ಕೆ ನಾನು ಹುಬ್ಬಳ್ಳಿಯಲ್ಲಿ 'ಕನ್ನಡ ಕೇಸರಿ' ಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದೆ. ಅಲ್ಲಿ ನನಗೆ ತಿಂಗಳಿಗೆ ೧೫-೨೦ ರೂಪಾಯಿ ಸಂಬಳ ಬರುತ್ತಿತ್ತು. ಅಲ್ಲಿ ನಾನು ನೌಕರಿಗೆ ಸರಿಯಾಗಿ ಎಂದು ಸೇರಿದೆ ಮತ್ತು ಈ ಅಲ್ಪ ಸಂಬಳವನ್ನು ಹೇಗೆ ವೆಚ್ಚ ಮಾಡುತ್ತಿದ್ದೆ ಎಂಬುದರ ನೆನಪು ನನಗೆ ಈಗ ಇಲ್ಲ. ಆದರೆ ಈ ಪತ್ರಿಕೆಯಲ್ಲಿಯ ಕೆಲಸ ಬಿಟ್ಟ ಕೆಲವೇ ತಿಂಗಳುಗಳಲ್ಲಿ ನಾನು ಕಲಕತ್ತೆಗೆ ಹೋದೆ.


ನಾನು ಕಲಕತ್ತೆಯಲ್ಲಿದ್ದಾಗ ಆರ್ಥಿಕ ಅಡಚಣೆಗಳಿದ್ದರೂ ಓದುವ ಹಸಿವನ್ನು ತೀರಿಸಿಕೊಂಡೆ. ಕಾಲೇಜ್ ಆಫ್ ಫಿಜಿಸಿಯನ್ಸ್ ಆ್ಯಂಡ್ ಸರ್ಜನ್ಸ್ ಹಾಗೂ ನ್ಯಾಶನಲ್ ಕೌನ್ಸಿಲ್ ಆಫ್ ಎಜ್ಯುಕೇಶನ್ ಎರಡರಲ್ಲೂ ನಾನು ಹೆಸರು ಹಚ್ಚಿದ್ದೆ. ಮೊದಲನೆಯದು ನನಗೆ ಎಂ. ಸಿ. ಪಿ. ಎಸ್. ಪದವಿ ನೀಡಿತು. ಎರಡನೆಯ ಸಂಸ್ಥೆಯಲ್ಲಿ ನಾನು ಏಳನೆಯ ವರ್ಗವನ್ನು ಪಾಸಾದೆ. ಅದು ಆಗ ಬೇರೆ ಕಾಲೇಜುಗಳಲ್ಲಿಯ ಇಂಟರ್‌ಮೀಡಿಯೇಟ್ ಪರೀಕ್ಷೆಗೆ ಸಮಾನವೆಂದು ಪರಿಗಣಿಸಲ್ಪಡು-ತ್ತಿತ್ತು.

ಕಲಕತ್ತೆಯಲ್ಲಿ ೧೯೦೯ರಿಂದ ೧೯೧೩ರ ವರೆಗೆ ವೈದ್ಯಕೀಯ ಶಿಕ್ಷಣ ಪಡೆಯಲು ನಾನು ಬಹಳ ಕಷ್ಟ ಸೋಸಬೇಕಾಯಿತು. ಮೊದಲು ಅಲ್ಲಿಯ ಮಹಾರಾಷ್ಟ್ರ ಲಾಜ್‌ನವರು ನನಗೆ ಆಶ್ರಯ ಕೊಟ್ಟರು. ಅದರ ಸದಸ್ಯರೊಬ್ಬರು ತಮ್ಮ ಕೋಣೆಯಲ್ಲಿ ಇರಲು ನನಗೆ ಸ್ವಲ್ಪ ಸ್ಥಳ ಕೊಟ್ಟರು ಮತ್ತು ನನ್ನ ಊಟದ ವೆಚ್ಚದ ಭಾರವನ್ನು ಎಲ್ಲರೂ ಒಟ್ಟಾಗಿ ವಹಿಸಿ ಕೊಂಡರು. ಈ ವ್ಯವಸ್ಥೆ ಆರು ತಿಂಗಳು ನಡೆ-ಯಿತು. ಅಷ್ಟರಲ್ಲಿ ಅಮರಾವತಿಯ ಬಳವಂತ-ರಾವ್ ಖಾಪರ್ಡೆ ಎಂಬವರು ನನ್ನ ಬಗ್ಗೆ ಆಸ್ಥೆವಹಿಸಿ ನನ್ನ ಊಟ ವಸತಿಗಳ ಏರ್ಪಾಡು ಮಾಡಿಕೊಟ್ಟರು. ಅನಂತರ ನಾವು ಅಲ್ಲಿ ಕರ್ನಾ-ಟಕ ಕ್ಲಬ್ ಪ್ರಾರಂಭಿಸಿದೆವು. ಅಲ್ಲಿ ನನಗೆ ಉಚಿತ ಊಟದ ಏರ್ಪಾಡು ಆಯಿತು. ಆದರ ಆರೇಳು ಜನರು ಒಟ್ಟಾಗಿ ಗುಜರಾತಿ ಹೋಟಲೊಂದರಿಂದ ಊಟ ತರಿಸುತ್ತಿದ್ದರು. ಆದರಲ್ಲೇ ನನ್ನ ಊಟವೂ ಆಗುತ್ತಿತ್ತು. ನಾನು ಪಾತ್ರೆಗಳನ್ನು ತೊಳೆದು ಸದಸ್ಯರಿಗೆ

ಸಂಪಾದಿಸುತ್ತಿದ್ದೆ ಮತ್ತು ಆಗಾಗ ಪೇಟೆಯಿಂದ ಸಾಮಾನು ತರುವ ಕೆಲಸವನ್ನೂ ಮಾಡುತ್ತಿದ್ದೆ.

ಅಂಕಲೀಕರ ಗೋವಿಂದನ ಪುಸ್ತಕಗಳೇ ನನ್ನ ಪುಸ್ತಕಗಳು. ಅವನ ಕೋಣೆಯೇ ನನ್ನ ಕೋಣೆ. ಅದೂ ಒಳಗೆ ಮಲಗಲು ಸ್ಥಳ ಇರುತ್ತಿರಲಿಲ್ಲ. ನಾನು ಹೊರಗೇ ಮಲಗಬೇಕಾಗುತ್ತಿತ್ತು. ಅವನ ಕೋಣೆ ನಾಲ್ಕನೇ ಅಂತಸ್ತಿನಲ್ಲಿತ್ತು. ಓಡಾಡುವವರ ಗದ್ದಲವೆಲ್ಲ ಮುಗಿಯುವವರೆಗೆ, ಅನೇಕ ಸಲ ನಡುರಾತ್ರಿ ಮೀರುವವರೆಗೂ, ಕಾದಿದ್ದು ನಂತರ ನಾನು ಆ ಕೋಣೆಯ ಮುಂದಿನ ಹಾದಿಪಟ್ಟಿಯಲ್ಲಿ ಹಾಸಿಗೆ ಹಾಸುತ್ತಿದ್ದೆ. ಬೆಳಿಗ್ಗೆ ಮತ್ತೆ ಎಲ್ಲರೂ ಎದ್ದು ಓಡಾಡಲು ಆರಂಭಿಸುವ ಮೊದಲೇ ಎದ್ದು ನನ್ನ ಹಾಸಿಗೆ ತೆಗೆದು ಇಟ್ಟುಬಿಡುತ್ತಿದ್ದೆ.

ನಮ್ಮ ಕಲಕತ್ತೆಯ ವ್ಯಾಸಂಗದ ನಂತರ ಉಚ್ಚ ವ್ಯಾಸಂಗಕ್ಕಾಗಿ ಅಮೇರಿಕಕ್ಕೆ ಹೋಗಬೇಕೆಂದು ಗೊತ್ತು ಮಾಡಿಕೊಂಡೆವು. ನಾನು ಸಾರ್ವಜನಿಕ ಆರೋಗ್ಯವನ್ನು ಆಯ್ದುಕೊಂಡೆ. ಅಂಕಲೀಕರ ಔಷಧಿ ಶಾಸ್ತ್ರವನ್ನು ತೆಗೆದುಕೊಂಡ. ನಾಡಗೀರ ಶಸ್ತ್ರಚಿಕಿತ್ಸೆಯನ್ನು ಆರಿಸಿಕೊಂಡ. ಈ ವಿಷಯಗಳಲ್ಲಿ ಪರಿಣತಿ ಪಡೆಯುವುದಕ್ಕಾಗಿ ಮೂವರೂ ಅಮೆರಿಕಕ್ಕೆ ಹೊರಟೆವು. ನನ್ನ ಇಬ್ಬರೂ ಗೆಳೆಯರು ಸ್ಥಿತಿವಂತರಿದ್ದುದರಿಂದ ಅವರ ಪ್ರವಾಸದ ವ್ಯವಸ್ಥೆಗೇನೂ ತೊಂದರೆ ಆಗಲಿಲ್ಲ. ಆದರೆ ನಾನು ಕಡು ಬಡವನಾದುದರಿಂದ ನನ್ನ ಪ್ರವಾಸ ವೆಚ್ಚಕ್ಕಾಗಿ ಹಣ ಕೂಡಿಸುವುದೊಂದು ದೊಡ್ಡ ಕೆಲಸ ಗಂಟು ಬಿದ್ದಿತು. ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿಯ ನನ್ನ ಸ್ನೇಹಿತರಿಂದ ನಾನು ಆಣೆ ಪೈಗಳ ಕಾಣಿಕೆ ಸ್ವೀಕರಿಸಿದ ನೆನಪು ನನಗಿದೆ. ಮನೆ ಮನೆಗೂ ಹೋಗಿ ಸಹಾಯ ಯಾಚಿಸಿದೆ. ನನ್ನ ಈ ನಿಧಿ ಸಂಗ್ರಹ ಕಾರ್ಯದಲ್ಲಿ ಅನೇಕ ರಾಷ್ಟ್ರೀಯ ಪುಢಾರಿಗಳೂ ನನಗೆ ನೆರವಾದರು. ಜಮಖಂಡಿ ಸರಕಾರ, ಕೊಲ್ಲಾಪುರ ಮಹಾರಾಜರು ಮೊದಲಾದವರನ್ನೂ ಯಾಚಿಸದೆ ಬಿಡಲಿಲ್ಲ. ಅವರೆಲ್ಲ ನೆರವಾಗುವ ಭರವಸೆಯನ್ನು ಸಹ ನೀಡಿದ್ದರು. ಆದರೆ ದುರ್ದೈವ ಅಡ್ಡ ಬಂದಿತು. ದಕ್ಷಿಣ ಸಂಸ್ಥಾನಗಳ ಪೊಲಿಟಿಕಲ್ ಏಜಂಟನಿಗೆ ಈ ಸುದ್ದಿ



2145 KAN

ತಿಳಿದ ಕೂಡಲೇ ಅವನು ನನ್ನಂಥ ರಾಜಕೀಯ ಚಳವಳಿಗಾರನಿಗೆ ಸಹಾಯ ನೀಡಕೂಡದೆಂದು ಆಜ್ಞೆ ಮಾಡಿದ. ನಾನು ರಾಷ್ಟ್ರೀಯ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದುದರಿಂದ ನನ್ನ ವಿರುದ್ಧ ಸರಕಾರಕ್ಕೆ ಅನೇಕ ಪೋಲೀಸ್ ವರದಿಗಳು ಹೋಗಿದ್ದವು. ಆದರೂ ನನ್ನ ತಂದೆಯ ಸ್ನೇಹಿತರೊಬ್ಬರು ಶಿಕ್ಷಣ ಇಲಾಖೆಯಲ್ಲಿ ಉಚ್ಚ ಅಧಿಕಾರಿಗಳಿದ್ದುದರಿಂದ ಅವರ ಮಧ್ಯಸ್ಥಿಕೆಯಿಂದ ನನಗೆ ಅನುಮತಿ ಪತ್ರ ದೊರೆಯಿತು. ಮತ್ತು ನನ್ನ ಹಿತಚಿಂತಕರಿಂದ ಪ್ರವಾಸ ವೆಚ್ಚವೂ ದೊರೆಯಿತು. ಹೀಗೆ ಸಿದ್ಧತೆ ಮಾಡಿಕೊಂಡು ನಾನು ಅಮೇರಿಕಕ್ಕೆ ಹೊರಟಾಗ ನನಗೆ ಸಹಾಯ ಮಾಡುವ ಆಶ್ವಾಸನೆ ಕೊಟ್ಟಿದ್ದ ಓರ್ವ ಹಿತಚಿಂತಕರು ನಿಧನ ಹೊಂದಿದ್ದರಿಂದ ನಾನು ಅಮೇರಿಕದ ಪ್ರವಾಸಕ್ಕೆ ಹೋಗಬಾರದೆಂದೂ ತಿರುಗಿ ಬರಬೇಕೆಂದೂ ನಾನು ಇದ್ದ ಹಡಗಕ್ಕೆ ಒಂದು ತಂತಿ ಕಳಿಸಿದರು. ಅದಕ್ಕೆ ನಾನು ಉತ್ತರವಾಗಿ ಏಡನ್‌ನಿಂದ ಒಂದು ಸುದೀರ್ಘ ಪತ್ರವನ್ನು ನನ್ನ ಹಿರಿಯ ಅಣ್ಣಂದಿರಿಗೆ ಬರೆದೆ. ಆ ಪತ್ರವನ್ನು ಬರೆದ ವಿಚಾರಗಳು ನನ್ನ ಮನೋಭೂಮಿಕೆಯ ಪ್ರತೀಕವಾಗಿದ್ದವು. ಆದುದರಿಂದ ಆ ಬಗ್ಗೆ ಒಂದೆರಡು ಮುಖ್ಯಾಂಶಗಳನ್ನು ಇಲ್ಲಿ ಹೇಳಬೇಕಾಗಿದೆ.

“...... ೧೯೦೬ರಲ್ಲಿಯೇ ನಾನೊಂದು ದೃಢ ನಿಶ್ಚಯ ಮಾಡಿದೆ. ಶಕ್ಯವಿದ್ದ ಮಟ್ಟಿಗೆ ಹೆಣಗಿ ಆತ್ಮೋದ್ಧಾರ ಮಾಡಿಕೊಳ್ಳಬೇಕು. ಅದಕ್ಕಾಗಿ ಎಂಥ ಕಷ್ಟದ ಪ್ರಸಂಗ ಬಂದರೂ ಎದುರಿಸಬೇಕು. ಕಷ್ಟ ಶಬ್ದದ ಅರ್ಥವನ್ನೆ ಕೊನೆಗೆ ಸುಖ ಎಂದು ಕಲ್ಪಿಸಿಕೊಂಡೆ. ಅದಕ್ಕಾಗಿ ಈ ನನ್ನ ಶರೀರಕ್ಕೆ ಹೆಚ್ಚೆಚ್ಚು ಕಷ್ಟ ಕಾರ್ಪಣ್ಯಗಳನ್ನು ಕೊಟ್ಟೆ. ಇದರಲ್ಲಿ ಎಳ್ಳಷ್ಟೂ ಅನೃತವಿಲ್ಲ. ಇಂದಿಗೂ ಕೂಡ ಅದೇ ನಿರ್ಧಾರದಿಂದಲೇ ನಾನು ಜೀವನ ನಡೆಸಿದ್ದೇನೆ. ಯಾಕೆಂದರೆ,

ಉದ್ಧರೇದಾತ್ಮನಾತ್ಮಾನಂ
ನಾತ್ಮಾನಮವಸಾದಯೇತ್
ಆತ್ಮೈವಹಿ ಆತ್ಮನೋ ಬಂಧು ः
ಆತ್ಮೈವರಿಪುರಾತ್ಮನಃ

ಎಂಬ ಭಗವಂತನ ಉಕ್ತಿಯಲ್ಲಿ ನನಗೆ ಅಚಲ ನಂಬಿಕೆ ಇದೆ. ಅದರಂತೆಯೇ ನಾನು ಆತ್ಮೋದ್ಧಾರಕ್ಕಾಗಿ ಇಷ್ಟೆಲ್ಲ ಪ್ರಯತ್ನ ನಡೆಸಿದ್ದೇನೆ. ಅದರಂತೆ ವರ್ತಿಸಿರಿ ಎಂದು ನನ್ನ ದೇಶಬಾಂಧವರಿಗೆ ಕೇಳಿಕೊಳ್ಳುತ್ತೇನೆ. ಅದಕ್ಕನುಸಾರವಾಗಿ ನನ್ನ ವರ್ತನೆಯನ್ನು ಇಟ್ಟುಕೊಂಡೆ. ಪಾರತಂತ್ರ್ಯದಲ್ಲಿ ತೊಳಲುತ್ತಿರುವ ನನ್ನ ಮಾತೃಭೂಮಿಯಲ್ಲಿ ಇದ್ದುಕೊಂಡು ಅದನ್ನು ಸಾಧಿಸುವುದು ಅಶಕ್ಯವೆಂದು ನನಗೆ ಅನಿಸಿದ್ದರಿಂದ ನಾನು ಈ ಮಾರ್ಗವನ್ನು ಅನುಸರಿಸಿದ್ದೇನೆ.

ನಾನು ಹುಟ್ಟಿದ್ದು ನನ್ನ ಸ್ವಂತದ ಹಿತಕ್ಕಾಗಿ ಅಲ್ಲ. ನಾನು ಹುಟ್ಟಿ ಬಂದದ್ದು ಅನನ್ಯಗತಿಕರೂ ರೋಗರುಜಿನಗಳಿಂದ ಬಳಲುತ್ತಿರುವವರೂ ಆದ ನನ್ನ ದೇಶಬಾಂಧವರ ಸೇವೆಗಾಗಿ ಎಂದು ನಾನು ನಂಬಿದ್ದೇನೆ. ಅದಕ್ಕಾಗಿ ನಾನು ಹಗಲಿರುಳೂ ದುಡಿಯಬೇಕಾಗುವುದು. ಅದೇ ಉದ್ದೇಶದಿಂದಲೇ ನಾನು ವೈದ್ಯಕೀಯ ವೃತ್ತಿಯನ್ನು ಆಯ್ದುಕೊಂಡದ್ದು. ಅದರಲ್ಲಿ ನಾನು ಶಕ್ಯವಿದ್ದಷ್ಟು ಪ್ರಾವೀಣ್ಯ ಪಡೆಯಬೇಕಾಗಿದೆ. ಅದಕ್ಕಾಗಿ ನಾನು ಪ್ರಿಯ ಮಾತೃಭೂಮಿಯನ್ನು ಬಿಟ್ಟು ೧೩೦೦೦ ಮೈಲು ದೂರದಲ್ಲಿರುವ ದೇಶಕ್ಕೆ ಹೊರಟಿದ್ದೇನೆ. ನಾನು ಉಳಿದುಕೊಳ್ಳುವುದೇ ನನ್ನ ಮನೆ; ಉಣಲಿಕ್ಕೆ ಸಿಗುವುದೇ ಊಟ; ಮಲಗಿದ್ದೇ ನನ್ನ ಹಾಸಿಗೆ. ಪಾಲಿಗೆ ಬಂದದ್ದೇ ಪಂಚಾಮೃತವೆಂಬ ತತ್ತ್ವ ನನ್ನದಿರುವಾಗ ನನಗೆ ಯಾವ ಅಡಚಣೆಯೂ ಉಂಟಾಗಲಾರದು.

ನಮ್ಮ ದೇಶಬಾಂಧವರಲ್ಲಿ ಆಲಸ್ಯ ಮನೆಮಾಡಿಬಿಟ್ಟಿದೆ. ಎಲ್ಲ ಹಿಂದೀಯರು ಅನ್ನುವದಕ್ಕೆ ಬದಲಾಗಿ ನಿಮ್ಮನ್ನೇ ನಾನು ಉದ್ದೇಶಿಸಿ ಉಲ್ಲೇಖಿಸುತ್ತಿದ್ದೇನೆ. ದಯಮಾಡಿ ನಿಮ್ಮಲ್ಲಿರುವ ಆಲಸ್ಯವನ್ನು ಹೊಡೆದೋಡಿಸಿರಿ. ನಿಮ್ಮಲ್ಲಿಯೂ ಜೀವವಿದೆ, ಸತ್ವವಿದೆ ಎಂಬುದನ್ನು ಜಗತ್ತಿಗೆ ತೋರಿಸಿಕೊಡಿರಿ. ನಾವು ಆಲಸಿಗಳು, ದುರ್ಬಲರು ಎಂದು ಇಡೀ ಪ್ರಪಂಚವೇ ನಮ್ಮನ್ನು ಮೂದಲಿಸುತ್ತಿದೆ. ಅದು ಸುಳ್ಳು ಎಂಬುದನ್ನು ತೋರಿಸಿಕೊಡಿರಿ. ಏಳಿರಿ, ಸತತೋದ್ಯೋಗಿಗಳಾಗಿರಿ.

ನಹಿ ಸುಪ್ತಸ್ಯ ಸಿಂಹಸ್ಯ
ಪ್ರವಿಶಂತಿ ಮುಖೇ ಮೃಗಾಃ

ಎಂಬ ಸುಭಾಷಿತವನ್ನು ಮರೆಯಬೇಡಿರಿ. ನಿಮ್ಮ ದುಡಿಮೆಯೇ ನಿಮಗೆ ಅನ್ನವನ್ನು ಒದಗಿಸುವದು. ದುಡಿಮೆಯಿಂದ ಸಂಪಾದಿಸಿದ ಅನ್ನಕ್ಕಿಂತ ರುಚಿಕರವಾದ ಅನ್ನ ಬೇರೆ ಇನ್ನಾವುದೂ ಇಲ್ಲವೆಂಬುದನ್ನು ಮರೆಯಬಾರದೆಂದು ಬೇಡಿಕೊಳ್ಳುತ್ತೇನೆ."

ಅಂದು ನಾನು ಅಣ್ಣಾಂದಿರಿಗೆ ಬರೆದ ಆ ಪತ್ರ ನನ್ನ ಮನೋಭೂಮಿಕೆಯ ಸ್ಪಷ್ಟ ಚಿತ್ರವಾಗಿದೆ. ಅಂದು ನಾನು ಆಯ್ದುಕೊಂಡ ಜೀವನ ಮಾರ್ಗದಂತೆ ಇಂದಿಗೂ ನಾನು ನಡೆಯುತ್ತ ಬಂದಿದ್ದೇನೆ. ಈ ದೇಹದಲ್ಲಿ ಉಸಿರು ಇರುವವರೆಗೂ ಅದೇ ನನಗೆ ನನ್ನ ದಾರಿದೀಪವಾಗಿದೆ.

೧೯೨೨ರಲ್ಲಿ ಅಂದರೆ ನಾನು ಅಮೇರಿಕದಿಂದ ಹಿಂದಿರುಗಿದ ವರ್ಷ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯವರು ನನ್ನ ಸ್ವಂತ ವೆಚ್ಚಕ್ಕೆಂದು ತಿಂಗಳಿಗೆ ೫೦ ರೂಪಾಯಿ ಕೊಡುತ್ತಿದ್ದರು. ಕೆಲ ದಿನಗಳ ನಂತರ ನಾನು ಆ ರೀತಿ ತೆಗೆದುಕೊಳ್ಳುವುದನ್ನು ನಿಲ್ಲಿಸಿಬಿಟ್ಟೆ. ಬೇರೆ ಯಾವ ಸಂಸ್ಥೆಗಳಿಂದಲೂ ಈ ರೀತಿ ಸ್ವೀಕರಿಸಬಾರದೆಂದು ನಿರ್ಧರಿಸಿದೆ. ಶ್ರೀ. ಎಸ್. ವಿ. ಕೌಜಲಗಿ, ಶ್ರೀ ಎನ್. ಸಿ. ಕೇಳಕರ, ಲಾಲಾ ಲಜಪತರಾಯ ಹಾಗೂ ಇನ್ನಿತರ ಕೆಲ ನನ್ನ ಹಿತೈಷಿಗಳು ಆಗಾಗ ನನ್ನ ಖಾಸಗೀ ವೆಚ್ಚಕ್ಕೆಂದೋ ಬಟ್ಟೆಬರೆಗಳಿಗೆಂದೋ ಅಲ್ಪ ಸ್ವಲ್ಪ ಹಣ ಕೊಡುತ್ತಿದ್ದರು. ಇಂದಿಗೂ ಸಹ ನನ್ನ ಬಟ್ಟೆಬರೆಗಳು ಮೊದಲಾದ ಜೀವನಾವಶ್ಯಕ ವಸ್ತುಗಳನ್ನು ನನ್ನ ಕಾರುಣ್ಯಪೂರ್ಣ ಸ್ನೇಹಿತರೇ ಪೂರೈಸುತ್ತಾರೆ. ಹುಬ್ಬಳ್ಳಿಯಲ್ಲಿ ಶೇವಡೆ ಕುಟುಂಬದವರು ಇಂದಿಗೂ ನನ್ನನ್ನು ತಮ್ಮ ಕುಟುಂಬದವನೆಂದೇ ಭಾವಿಸಿ ಊಟ ಉಪಹಾರಗಳನ್ನು ನೋಡಿಕೊಳ್ಳುತ್ತಾರೆ. ನನ್ನ ವೈಯಕ್ತಿಕ ಅಗತ್ಯಗಳು ಸಹ ಬಹಳವಿಲ್ಲ.

ನಾನು ಹುಟ್ಟಿದಾಗಿನಷ್ಟೇ ಇಂದಿಗೂ ಬಡವನಾಗಿದ್ದೇನೆ. ನನ್ನ ಜೀವನವೆಲ್ಲವನ್ನೂ ದೇಶಸೇವೆಗೆ ಸಮರ್ಪಿಸಿದ ನನಗೆ ನನ್ನ ಜೀವನೋಪಾಯಕ್ಕಾಗಿ ದುಡಿಯುವುದು ಸಾಧ್ಯವಾಗಲಿಲ್ಲ. ನನಗೆ ಅಪೇಕ್ಷೆಯೂ ಇರಲಿಲ್ಲ. ಅಕಿಂಚನ ವೃತ್ತಿಯನ್ನು ಸ್ವೀಕರಿಸಿದ್ದೇನೆ. ಮೊದಲಿನಿಂದಲೂ ಬಡತನ ತನ್ನ ಮುದ್ರೆಯನ್ನು ನನ್ನ ಮೇಲೆ ಒತ್ತಿದೆ.

ಇಂದು ಈ ಪ್ರಪಂಚದಲ್ಲಿ ನನ್ನದೆಂಬುದು ಒಂದೇ ಒಂದು ಉಳಿದಿದೆ. ಅದೆಂದರೆ ನನ್ನಲ್ಲಿ ಆಳವಾಗಿ ನೆಲೆಗೊಂಡಿರುವ "ನಾನು."

*

ಅಮೇರಿಕದಲ್ಲಿ ನನ್ನ ವಿದ್ಯಾಭ್ಯಾಸವನ್ನು ಮುಂದುವರಿಸಲೆಂದು ನಾನು ಭಾರತ ತೀರವನ್ನು ಬಿಟ್ಟಾಗ ನನ್ನ ಕಿಸೆಯಲ್ಲಿದ್ದವು ಲಂಡನ್ ವರೆಗಿನ ಟಿಕೆಟ್ಟು ಮತ್ತು ಏಳು ನೂರು ರೂಪಾಯಿಗಳು ಮಾತ್ರ. ನ್ಯೂಯಾರ್ಕಿನಲ್ಲಿಳಿದಾಗ ನನ್ನ ಕಿಸೆಯಲ್ಲಿ ಮುನ್ನೂರು ರೂಪಾಯಿಗಳು ಉಳಿದಿದ್ದವು. ನನ್ನ ವಿದ್ಯಾಭ್ಯಾಸಕ್ಕಾಗಿ ಆನ್ ಆರ್ಬರ್‌ನಲ್ಲಿ ಸೇರಿಕೊಂಡೆ. ಜೀವನಕ್ಕಾಗಿ ಗೋಡೆಗಳಿಗೆ ಬಣ್ಣ ಬಳಿಯುವುದು, ಉಪಾಹಾರ ಗೃಹಗಳಲ್ಲಿ ಪಾತ್ರೆ ಪಡಗಗಳನ್ನು ತೊಳೆಯುವುದು ಇವೇ ಮೊದಲಾದ ಕೆಲಸ ಕೈಕೊಂಡು ವಿದ್ಯಾರ್ಜನೆ ಮಾಡಿದೆ. ಪುಣೆಯಲ್ಲಿಯ ನಮ್ಮ ಅಣ್ಣಾಸಾಹೇಬ ಟಿಳಕರಿಂದ ಪತ್ರ ತೆಗೆದುಕೊಂಡು ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ತಿರುಗಾಡಿ ನಿಧಿ ಸಂಗ್ರಹ ಮಾಡಿ ನನಗೆ ಒಂದೆರಡು ಸಲ ಕಳಿಸಿದ. ಆದರೆ ಅಲ್ಲಿಯ ವೆಚ್ಚದೊಡನೆ ಹೋಲಿಸಿದರೆ ಈ ನೆರವು ಯಾವುದಕ್ಕೂ ಸಾಲಲಿಲ್ಲ. ಆದರೆ ಮಿಶಿಗನ್ ವಿಶ್ವವಿದ್ಯಾಲಯದಲ್ಲಿಯ ವೈದ್ಯಕೀಯ ವಿಭಾಗದ ಫೆಲೋಶಿಪ್ ಮತ್ತು ಅಸಿಸ್ಟಂಟ್‌ಶಿಪ್ ನನ್ನ ನೆರವಿಗೆ ಬಂದವು. ಅವುಗಳಿಂದಾಗಿ ನಾನು ಅಮೇರಿಕದಲ್ಲಿ ಗೌರವಯುತ ಬಾಳುವೆ ನಡೆಸುವಂತಾಯಿತು.

ಇತಿಹಾಸ, ಭೂಗೋಲ, ರಾಜ್ಯಶಾಸ್ತ್ರಗಳೆಂದರೆ ನನಗೆ ಅಚ್ಚುಮೆಚ್ಚು. ನಾನು ವಿಶೇಷ ವ್ಯಾಸಂಗ ಮಾಡಿದ ಸಾರ್ವಜನಿಕ ಆರೋಗ್ಯವೊಂದನ್ನು ಬಿಟ್ಟರೆ ಬೇರೆ ಯಾವ ವಿಷಯದಲ್ಲೂ ನನ್ನ ಆಸ್ಥೆ ಕಿರಲಿಲ್ಲ. ವೈದ್ಯಕೀಯ ಮತ್ತು ತತ್ಸಂಬಂಧಿ ವಿಷಯಗಳ ಅಭ್ಯಾಸವನ್ನೇ ಬಹಳ ದಿನಗಳವರೆಗೆ ಮಾಡಿದ್ದರಿಂದ ಬೇರೆ ವಿಷಯಗಳಲ್ಲಿಯ ನನ್ನ ವ್ಯಾಸಂಗ ಅಷ್ಟಕ್ಕಷ್ಟೇ ಉಳಿಯಿತು. ನನ್ನ ಸಾರ್ವಜನಿಕ ಜೀವನದಲ್ಲಿ ನನಗೆ ಈ ಕೊರ-

ತೆಯ ಅನುಭವ ಮತ್ತೆ ಮತ್ತೆ ಆನಿಸುತ್ತದೆ. ಶೇಕ್ಸ್‌ಪಿಯರ್, ಮಿಲ್ಟನ್, ಕಾಳಿದಾಸ, ಭವಭೂತಿ ಮೊದಲಾದವರ ಅವತರಣಿಕೆಗಳನ್ನು ಯಾರಾದರೂ ಉದ್ಗರಿಸಿದಾಗ ನನಗೆ ಬಹಳ ಸಂಕೋಚವೆನಿಸುತ್ತದೆ ಅವುಗಳ ಅರ್ಥವನ್ನು ಗ್ರಹಿಸದೆ ನಾನು ಸುಮ್ಮನೆ ತಲೆ ಅಲ್ಲಾಡಿಸಬೇಕಾಗುತ್ತದಲ್ಲ ಎಂದು. ನಾನು ಸಾಹಿತಿ ಅಲ್ಲವೆ ಅಲ್ಲ. ನಾನು ಎಷ್ಟೊಂದು ಓದಿಕೊಂಡಿದ್ದರೂ ಇನ್ನೂ ಓದಬೇಕಾದದ್ದು ಬಹಳಷ್ಟಿದೆಯೆಂಬ ಕಲ್ಪನೆ ನನಗೆ ಇದ್ದೇ ಇದೆ.

ಅಮೇರಿಕದ ಮಿಶಿಗನ್ ವಿಶ್ವವಿದ್ಯಾಲಯದಲ್ಲಿ ನಾನು ಸಾರ್ವಜನಿಕ ಆರೋಗ್ಯ ಮತ್ತು ಕ್ಷಯರೋಗ ವಿಷಯಗಳಲ್ಲಿ ಪರಿಣತಿ ಪಡೆದೆ. ೧೯೧೬ರಲ್ಲಿ ಸಾರ್ವಜನಿಕ ಆರೋಗ್ಯ ವಿಷಯದಲ್ಲಿ ನಾನು ಎಂ. ಎಸ್. ಪದವಿ ಸ್ವೀಕರಿಸಿದೆ. ಮುಂದೆ ಅದೇ ವಿಷಯದಲ್ಲಿ ಪಿಯೆಚ್. ಡಿ. ಮಾಡಬೇಕೆಂದು ಅರ್ಬಾನ್‌ನದಲ್ಲಿಯ ಇಲಿನಾಯ್ ವಿಶ್ವವಿದ್ಯಾಲಯವನ್ನು ಸೇರಿದೆ. ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರಗಳಲ್ಲಿ ನಾನು ಹೆಚ್ಚಿನ ವ್ಯಾಸಂಗ ಮಾಡಬೇಕೆಂದುಕೊಂಡಿದ್ದೆ. ಆದರೆ ರಾಜಕೀಯದಲ್ಲಿ ಹೆಚ್ಚು ಸಕ್ರಿಯವಾಗಿ ಭಾಗವಹಿಸತೊಡಗಿದ್ದರಿಂದ ಅದನ್ನು ಬಿಟ್ಟುಕೊಡಬೇಕಾಯಿತು. ಲಾಲಾ ಲಜಪತರಾಯರ ಪ್ರಭಾವದಿಂದಾಗಿ ನಾನು ವಿಶ್ವವಿದ್ಯಾಲಯ ವ್ಯಾಸಂಗವನ್ನು ಬಿಟ್ಟು ರಾಜಕೀಯವನ್ನು ಪ್ರವೇಶಿಸಬೇಕಾಯಿತು. ಇದರಿಂದಾಗಿ ೧೯೧೬ರಲ್ಲಿ ನನ್ನ ಜೀವನಕ್ಕೆ ವಿಶಿಷ್ಟವಾದ ಮತ್ತು ಹೊಸ ತಿರುವು ದೊರೆಯಿತು.

ಲಾಲಾ ಲಜಪತರಾಯರು ಅಮೇರಿಕಕ್ಕೆ ಬರುವ ಮೊದಲೇ ನಾನು ಕೆಲ ಚಟುವಟಿಕೆಗಳಲ್ಲಿ ತೊಡಗಿದ್ದೆ. ಭಾರತದ ಇತಿಹಾಸವನ್ನು ಪೂರ್ತಿಯಾಗಿ ಅಭ್ಯಾಸ ಮಾಡಿ ಅದರ ಆರ್ಥಿಕ ಪರಿಸ್ಥಿತಿಯನ್ನು ಅರಿತುಕೊಂಡೆ. ಮಿಶಿಗನ್ ವಿಶ್ವವಿದ್ಯಾಲಯದಲ್ಲಿ ಅವರ ವ್ಯಾಸಂಗ ವಿಸ್ತರಣ ಮಾಲೆಯ ಉಪನ್ಯಾಸಗಳೆಂದು ನಾನು ಭಾರತದ ಬಗ್ಗೆ ಮಾಯಾಲಾಂದ್ರದ ಮೂಲಕ ಭಾಷಣಗಳನ್ನು ನೀಡುತ್ತಿದ್ದೆ. ಕಾಸ್ಮಾಪಾಲಿಟನ್ ಮತ್ತು ಇನ್ನಿತರ ಕ್ಲಬ್ಬುಗಳು ಸಹ ನನ್ನ ಭಾಷಣವನ್ನು ಆಗಾಗ ಏರ್ಪಡಿಸುತ್ತಿದ್ದವು. ಆಗಾಗ ಅಮೇರಿಕದ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆಯುತ್ತಿದ್ದೆ. ಅಮೇರಿಕಕ್ಕೆ ಹೋದೊಡನೆಯೇ ಅಲ್ಲಿ ನಾನು ಮಾಡಿದ ಮೊದಲ ಕೆಲಸವೆಂದರೆ ಮಹಾರಾಷ್ಟ್ರ ಮಂಡಳವನ್ನು ಸ್ಥಾಪಿಸಿದ್ದು. ಅಲ್ಲಿರುವ ದಕ್ಷಿಣ ಭಾರತೀಯರನ್ನೆಲ್ಲ ಒಂದೆಡೆ ಸಂಘಟಿಸುವುದೇ ಅದರ ಗುರಿಯಾಗಿತ್ತು. ೧೯೧೬ರಲ್ಲಿ ಒಂದು ವರ್ಷ ನಾನು ಹಿಂದುಸ್ತಾನ ಅಸೋಸಿಯೇಶನ್ ಆಫ್ ಅಮೇರಿಕ ಸಂಸ್ಥೆಯ ಅಧ್ಯಕ್ಷನಾಗಿದ್ದೆ. ಆ ಸಂಸ್ಥೆಯ ವತಿಯಿಂದಲೇ ನಾನು ಶಿಕ್ಯಾಗೋದಲ್ಲಿ ಲಾಲಾ ಲಜಪತರಾಯರನ್ನು ಸ್ವಾಗತಿಸಿದೆ. ಪ್ರತ್ಯಕ್ಷವಾಗಿ ಅವರನ್ನು ಕಂಡು ಅವರೆದುರು ನನ್ನ ಧ್ಯೇಯದ ರೂಪ ರೇಷೆಗಳನ್ನು ವಿವರಿಸಿದೆ. ಶಿಕ್ಯಾಗೋದಲ್ಲಿ ಸೇರಿದ್ದ ಪ್ರಮುಖ ಭಾರತೀಯರ ಸಭೆಯೊಂದರಲ್ಲಿ ಅವರು ನನ್ನನ್ನು ಅಭ್ಯಾಸ ಬಿಟ್ಟು ತಮ್ಮೊಡನೆ ರಾಜಕೀಯ ಕ್ಷೇತ್ರ ಪ್ರವೇಶಿಸಲು ಕರೆಯಿತ್ತರು. "ದೇಶಸ್ವಾತಂತ್ರ್ಯವೇ ಅತ್ಯಂತ ಮಹತ್ವದ್ದು. ದೇಶವು ಸ್ವತಂತ್ರವಾಯಿತೆಂದರೆ ದೇಶದ ಉಳಿದ ಎಲ್ಲ ಸಮಸ್ಯೆಗಳನ್ನೂ ಪರಿಹರಿಸಬಹುದು. ಅದಕ್ಕೆ ಪೂರ್ಣಾವಧಿ ಕಾರ್ಯಕರ್ತರು ಬೇಕು. ನೀನು ನನಗೆ ಈ ಕಾರ್ಯದಲ್ಲಿ ನೆರವಾಗಬೇಕು," ಎಂದು ಕೇಳಿಕೊಂಡರು. ನನ್ನ ಮಿತ್ರರೊಡನೆ ಸಮಾಲೋಚನೆ ಮಾಡಿದ ನಂತರ ನಾನು ಮರುದಿನ ಲಾಲಾಜಿಯವರ ಬಿಡಾರಕ್ಕೆ ಹೋಗಿ ಅವರ ಹತ್ತಿರ ನಿಂತು ಕೆಲಸ ಮಾಡಲು ಒಪ್ಪಿದೆ. ನಾಲ್ವತ್ತು ತಿಂಗಳುಗಳ ಕಾಲ ಅವರ ಮಾರ್ಗದರ್ಶನದಲ್ಲಿ ನಾನು ನನ್ನ ಮಾತೃಭೂಮಿಯ ಬಂಧ ವಿಮೋಚನೆಗಾಗಿ ದುಡಿದೆ. ಅಮೇರಿಕದ ಜನತೆಯ ಮನದಲ್ಲಿ ನನ್ನ ದೇಶದ ಬಗೆಗೂ ಭಾರತೀಯರ ಆಶೆ–ಆಕಾಂಕ್ಷೆಗಳ ಬಗೆಗೂ ಸಹಾನುಭೂತಿಯನ್ನು ಪಡೆಯುವದಕ್ಕಾಗಿ ಇಡೀ ಅಮೇರಿಕ ಖಂಡದ ಮೂಲೆ ಮೂಲೆಗಳನ್ನು ಸುತ್ತಾಡಿ ವ್ಯಾಖ್ಯಾನಗಳನ್ನು ಕೊಟ್ಟೆ. ಅದಕ್ಕಾಗಿಯೇ ಲಾಲಾಜಿಯವರು ಪ್ರಾರಂಭಿಸಿದ 'ಯಂಗ್ ಇಂಡಿಯಾ' ಎಂಬ ಮಾಸಪತ್ರಿಕೆಯ ವ್ಯವಸ್ಥಾಪಕ ಸಂಪಾದಕನಾದೆ. ಅದೇ ಉದ್ದೇಶದಿಂದಲೇ ಲಾಲಾಜಿಯವರು ಇಂಡಿಯನ್ ಹೋಂ

ರೂಲ್ ಲೀಗ್ ಎಂಬ ಒಂದು ಸಂಸ್ಥೆ ಸ್ಥಾಪಿಸಿ ಅವರು ಅಧ್ಯಕ್ಷರಾದರು. ೧೯೧೭ರ ನವೆಂಬರಿನಿಂದ ೧೯೨೦ ರ ಸಪ್ಟೆಂಬರ್‌ವರೆಗೆ ನಾನು ಇದರ ಕಾರ್ಯದರ್ಶಿಯಾಗಿದ್ದೆ. ಲಾಲಾಜಿಯವರು ಭಾರತಕ್ಕೆ ಮರಳಿದ ನಂತರ ಅಮೇರಿಕದ ಸುಪ್ರಸಿದ್ಧ ವ್ಯಕ್ತಿಯಾದ ಜೆ. ಟಿ. ಸುಂಟರ್‌ಲೇಡ್ ಅವರು ಅದರ ಅಧ್ಯಕ್ಷರಾದರು.

ಒಂದು ಸಂಸ್ಥೆಯ ಹೊಣೆಗಾರಿಕೆ ನಿರ್ವಹಿಸುವುದು ಹೇಗೆಂಬ ಬಗ್ಗೆ ನನಗೆ ಮಾರ್ಗದರ್ಶನ ಮಾಡಿದ್ದಲ್ಲದೆ ಸಂಪೂರ್ಣ ತರಬೇತಿಯನ್ನು ನೀಡಿದ್ದಕ್ಕಾಗಿ ನಾನು ಲಾಲಾಜಿಯವರಿಗೆ ಕೃತಜ್ಞನಾಗಿದ್ದೇನೆ. ಭಾರತದ ಸ್ಥಿತಿಗತಿಗಳ ಬಗ್ಗೆಯೂ ಅವರು ನನಗೆ ತಿಳುವಳಿಕೆ ನೀಡಿದರು. ಪ್ರಚಲಿತ ವಿಷಯಗಳನ್ನು ಕುರಿತು ಭಾಷಣ ಮಾಡುವುದು ಹೇಗೆ ಮತ್ತು ಲೇಖನ ಬರೆಯುವುದು ಹೇಗೆ ಎಂಬುದನ್ನು ಕೂಡ ಅವರು ನನಗೆ ಕಲಿಸಿದರು. ನಾನು ಮೂರು ಸಲ ಅಮೇರಿಕದ ಸಂಚಾರ ಕೈಕೊಂಡೆ. ಅಮೇರಿಕದ ೪೮ ರಾಜ್ಯನಗಳಲ್ಲಿ ೪೦ ರಾಜ್ಯನಗಳನ್ನು ಸಂದರ್ಶಿಸಿದೆ. ನಮ್ಮ ಈ ಭಾರತ ಪ್ರಚಾರ ಕಾರ್ಯಕ್ರಮದಲ್ಲಿ ಬ್ರಿಟಿಶ್ ಸಹಾನುಭೂತಿಗರಿಂದ ವಿರೋಧ ಮತ್ತು ಅಡ್ಡಿ ಅಡಚಣೆಗಳನ್ನು ಎದುರಿಸಬೇಕಾಗುತ್ತಿತ್ತು. ಥಿಯಾಸಫಿಕಲ್ ಸೊಸೈಟಿಗಳು, ಕಾರ್ಮಿಕ ಸಂಘಗಳು, ಸಮಾಜವಾದೀ ಗುಂಪುಗಳು, ಹಿಂದುಸ್ತಾನೀ ವಿದ್ಯಾರ್ಥಿ ಸಂಘಗಳು ಮೊದಲಾದವುಗಳ ಮುಖಾಂತರ ನಾವು ಸಭೆಗಳನ್ನು ಏರ್ಪಡಿಸುತ್ತಿದ್ದೆವು. ಭಾರತದ ಪ್ರಚಾರಕ್ಕಾಗಿ ನಾವು ಸಹಸ್ರಾವಧಿ ಹಸ್ತಪತ್ರಿಕೆಗಳನ್ನು ಅಮೇರಿಕದಲ್ಲಿ ಪ್ರಚಲಿತವಿರುವ ವಿವಿಧ ಭಾಷೆಗಳಲ್ಲಿ ಮುದ್ರಿಸಿ ಹಂಚಿದೆವು. ಅಮೇರಿಕ ಮತ್ತು ಯುರೋಪ್ಯ ಪತ್ರಿಕೆಗಳಲ್ಲೂ ಅವು ಪ್ರಕಟವಾದವು.

ಇಂಡಿಯನ್ ಹೋಂ ರೂಲ್ ಲೀಗ್ ಆಫ್ ಅಮೇರಿಕ ಸಂಸ್ಥೆಯನ್ನು ಸ್ಥಾಪಿಸಿದ ನಂತರ ನಾವು 'ಇಂಡಿಯನ್ ಇನ್‌ಫರ್ಮೇಶನ್ ಬ್ಯೂರೋ' ಎಂಬ ಇನ್ನೊಂದು ಸಂಸ್ಥೆಯನ್ನು ಸ್ಥಾಪಿಸಿದೆವು. ಅಮೇರಿಕಕ್ಕೆ ಬರುವ ಭಾರತೀಯರಿಗೆ ಸೂಕ್ತ ಮಾಹಿತಿ ಕೊಡುವುದು ಇದರ ಉದ್ದೇಶವಾಗಿತ್ತು. ಅಮೇರಿಕಕ್ಕೆ ಕೆಲಸ ಹುಡುಕಿಕೊಂಡು ಬರುವ ಕಾರ್ಮಿಕರಿಗೆ ನೆರವಾಗಲೆಂದು ಭಾರತೀಯ ಕಾರ್ಮಿಕ ಸಂಘವೊಂದನ್ನೂ ನಾವು ಸ್ಥಾಪಿಸಿದೆವು.

ಕೆನಡಾದಲ್ಲಿ ವಾಸಿಸುತ್ತಿದ್ದ ಭಾರತೀಯರು ಲಾಲಾಜಿಯವರನ್ನು ಆಮಂತ್ರಿಸಿದರು. ಆದರೆ ಅವರು ಅವರ ಆ ಆಮಂತ್ರಣವನ್ನು ಸ್ವೀಕರಿಸಲಿಲ್ಲ. ನಾನು ಅಲ್ಲಿಗೆ ಹೋಗಬೇಕಾಯಿತು. ಪೂರ್ವದಿಂದ ಪಶ್ಚಿಮದ ವರೆಗೆ ಕೆನಡಾದಲ್ಲೆಲ್ಲ ನಾನು ಸಂಚರಿಸಿದೆ. ಆ ದೇಶದ ಎಂಟು ರಾಜ್ಯಗಳಲ್ಲಿ ಆರು ರಾಜ್ಯಗಳನ್ನು ಸಂದರ್ಶಿಸಿ ಭಾರತದ ಸಂದೇಶವನ್ನು ಅಲ್ಲಿಯ ಜನತೆಗೆ ತಲುಪಿಸಿದೆ. ಕೋಲಂಬಿಯದಲ್ಲಿ ಅಲ್ಲಿಯ ಅಧ್ಯಕ್ಷರು ಕೌನ್ಸಿಲ್ಲಿಗೆ ನನ್ನನ್ನು ಆಮಂತ್ರಿಸಿ ಸಭೆಯಲ್ಲಿಯೇ ನನಗೊಂದು ಆಸನ ನೀಡಿ

ಉಚಿತ ಉಚಿತ

ಬಿಳಿ ಮಚ್ಚೆಗಳು

ಬಿಳಿ ಕಲೆಗಳುಳ್ಳ ರೋಗಿಗಳಿಗೆ ನಿವಾರಣೆ ಹೊಂದಲು ನಮ್ಮ ಚಿಕಿತ್ಸೆಯು ಬಹು ದೊಡ್ಡ ಪ್ರಖ್ಯಾತಿ ಹೊಂದಿದೆ. ಔಷಧಿಯ ಉಚಿತ ಪಾಕೆಟ್ಟಿಗಾಗಿ ಬರೆದು ಕೊಳ್ಳಿರಿ ಚಿಕಿತ್ಸೆಯನ್ನು ಪ್ರಾರಂಭಿಸಿದ ಕೂಡಲೇ ಸುಧಾರಣೆಯೂ ಕಂಡು ಬರುವುದು. ರೋಗದ ವಿವರಗಳೊಂದಿಗೆ ಬರೆಯಿರಿ.

BHARAT
AYURVED ASHRAM
P. O. Katri Sarai (GAYA)

ಅಪೂರ್ವ ರೀತಿಯಲ್ಲಿ ಗೌರವಿಸಿದರು. ನನ್ನ ಸಂಚಾರ ಪೂರೈಸಿದ ನಂತರ ಕೊಲಂಬಿಯ ರಾಜ್ಯದ ಭಾರತೀಯರು ಮೂರು ಸಾವಿರ ಡಾಲರುಗಳ ಹಮ್ಮಿಣಿಯೊಂದನ್ನು ವಾಂಕೂವರಿನಲ್ಲಿ ಸೇರಿದ ಸಭೆಯೊಂದರಲ್ಲಿ ನೀಡಿದರು.

ನಾನು ಅಮೇರಿಕದಲ್ಲಿದ್ದಾಗ ನನ್ನ ಬ್ರಹ್ಮಚರ್ಯ ವ್ರತದ ಪರೀಕ್ಷಾ ಸಂದರ್ಭಗಳೂ ಒಂದೆರಡು ಸಲ ಒದಗಿದವು. ನನ್ನ ಅಬಚಿಯ ಮೊಮ್ಮಗಳಾದ ಗಂಗೂತಾಯಿಯು ಮತ್ತು ನಾನು ಹುಬ್ಬಳ್ಳಿಯಲ್ಲಿ ಕೂಡಿ ಆಡಿ ಬೆಳೆದವರು. ಸ್ವದೇಶಿ ಮತ್ತು ಬಹಿಷ್ಕಾರ ಚಳವಳಿಯಲ್ಲಿ ನಾವಿಬ್ಬರೂ ಒಟ್ಟಿಗೆ ಕೆಲಸ ಮಾಡಿದ್ದೆವು. ಆದರೆ ಗಂಗೂತಾಯಿ ತನ್ನ ಹನ್ನೆರಡನೇ ವಯಸ್ಸಿನಲ್ಲೇ ವಿಧವೆಯಾದಳು. ಅದು ನನ್ನ ಮನಸ್ಸಿನ ಮೇಲೆ ದೊಡ್ಡ ಆಘಾತವುಂಟುಮಾಡಿತು. ಆಗಲೇ ಅಂದರೆ ೧೯೦೮ ರಲ್ಲೇ ನಾನು ಬ್ರಹ್ಮಚಾರಿಯಾಗಿ ಉಳಿಯುವ ವ್ರತ ಸ್ವೀಕರಿಸಿದೆ. ನನಗಿನ್ನೂ ಆಗ ಹದಿವಯಸ್ಸು; ಇಂಥ ಪ್ರತಿಜ್ಞೆಯ ಪರಿಪೂರ್ಣ ಕಲ್ಪನೆ ನನಗಾಗ ಇರಲಿಲ್ಲ.

ಆದರೆ ಅಮೇರಿಕದ ವಿಲಾಸೀ ಜೀವನ ನನ್ನನ್ನು ಎರಡು ಸಲ ಬ್ರಹ್ಮಚರ್ಯ ವ್ರತವನ್ನು ಮರೆಯುವಂತೆ ಮಾಡಿತು. ನ್ಯೂಯಾರ್ಕ್‌ನಲ್ಲಿಯ 'ಯಂಗ್ ಇಂಡಿಯಾ' ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದ ತರುಣಿಯೋರ್ವಳೊಡನೆ ನಾನು ಬಹಳಷ್ಟು ಸಲಿಗೆ ಬೆಳೆಸಿದೆ. ಆದರೆ ಅದರಿಂದ ಮುಂದಾಗಬಹುದಾಗಿದ್ದ ಅಪಾಯದಿಂದ ನನ್ನನ್ನು ಉಳಿಸಿದ್ದಕ್ಕಾಗಿ ನನ್ನ ಸ್ನೇಹಿತ ಜಿ. ವಿ. ಅಂಕಲೀಕರ ಮತ್ತು ನನ್ನ ಗುರು ಲಾಲಾಜಿಯವರಿಗೆ ನಾನು ಕೃತಜ್ಞತೆಗಳನ್ನರ್ಪಿಸಬೇಕು. ಅವರು ನನಗೆ ಎಚ್ಚರಿಕೆ ನೀಡಿ ಪಾರು ಮಾಡಿದಾಗ ನಾನಿನ್ನೂ ಬಹಳ ಆಳಕ್ಕೆ ಇಳಿದಿರಲಿಲ್ಲ. ಅಂದಿನ ನನ್ನ ತಾರುಣ್ಯದ ದಿನಗಳಲ್ಲಿ ಮತ್ತು ಅಲ್ಲಿಯ ಪರಿಸರದಲ್ಲಿ ನನ್ನ ಪ್ರತಿಜ್ಞೆಯ ವಿಸ್ಮರಣೆಯಾದದ್ದು ಸ್ವಾಭಾವಿಕವಾಗಿತ್ತು. ಆದರೆ ದೇವರು ದೊಡ್ಡವನು. ನಾನು ಪಾರಾದೆ. ಇಲ್ಲದೆ ಹೋದರೆ ನಾನು ವಿವಾಹಿತನಾಗಬಹುದಾಗಿತ್ತು. ಆಗ ನನ್ನ ಮುಂದಿನ ಜೀವನದ ಮಾರ್ಗವೇ ಬೇರೆ ಆಗಬಹುದಿತ್ತು. ನಾನು ಅಮೇರಿಕದ ನಾಗರಿಕನಾಗಿಯೇ ಉಳಿದು ಸಂಸಾರದ ಉದರಂಭರಣಕ್ಕಾಗಿ ಕೆಲ ಡಾಲರುಗಳನ್ನು ಗಳಿಸುತ್ತ ಜೀವನ ನಡೆಸುತ್ತಿದ್ದೇನೋ ಏನೋ ! ಆ ದಿನಗಳ ನೆನಪು ಬಂದರೆ ಇಂದಿಗೂ ನನ್ನ ಮೈಯಲ್ಲಿ ನಡುಕ ಹುಟ್ಟುತ್ತದೆ. ಇಡೀ ವಿಚಾರವೇ ಓಕರಿಕೆ ಬರಿಸುತ್ತದೆ. ನನ್ನ ಜೀವನದಲ್ಲಿ ಲಾಲಾಜಿಯವರು ಪ್ರವೇಶಿಸಿದ್ದರಿಂದಲೇ ನಾನು ಆ ವಿಪತ್ತಿನಿಂದ ಪಾರಾದೆನೆಂದು ನನ್ನ ಅದೃಷ್ಟದ ಉಪಕಾರ ಸ್ಮರಿಸುತ್ತೇನೆ.

ನಾನು ಮಾತೃಭೂಮಿಗೆ ಮರಳಿದ ಮೇಲೆ ನನಗೆಂದೂ ಮದುವೆಯ ವಿಚಾರ ಬರಲೇ ಇಲ್ಲ. ಕೆಲವರು ನನ್ನ ಮದುವೆಯ ಪ್ರಸ್ತಾಪ ಮಾಡಿದಾಗಲೆಲ್ಲ ನಾನು ದೃಢ ನಿರ್ಧಾರದಿಂದ ನಿರಾಕರಿಸಿದ್ದೇನೆ. "ನಾನೀಗಾಗಲೇ ದೇಶದೊಡನೆ ವಿವಾಹಬದ್ಧನಾಗಿದ್ದೇನೆ; ಇನ್ನೊಂದು ಮದುವೆ ನನ್ನಿಂದ ಸಾಧ್ಯವಿಲ್ಲ. ಈ ವಿಷಯದಲ್ಲಿ ಇನ್ನೊಮ್ಮೆ ಉಪದೇಶ ಮಾಡಲಿಕ್ಕೆ ಯಾರೂ ಬರಬೇಡಿರಿ. ಮದುವೆ ಆಗಬಾರದೆಂದು ನಾನು ಪ್ರತಿಜ್ಞೆ ಮಾಡಿದ್ದೇನೆ" ಎಂದು ನಾನವರಿಗೆ ಸ್ಪಷ್ಟವಾಗಿ ಹೇಳಿದ್ದೇನೆ.

ಆದರೆ ಒಮ್ಮೊಮ್ಮೆ ದೇಹ–ಮನಸ್ಸುಗಳೆರಡೂ ದಣಿದಾಗ ಕ್ಷಣಮಾತ್ರ ಒಂದು ವಿಚಾರ ಹೊಳೆಯುತ್ತದೆ– ಆಜನ್ಮ ಬ್ರಹ್ಮಚರ್ಯ ವ್ರತ ಪಾಲನೆಯ ಪ್ರತಿಜ್ಞೆ ಸ್ವೀಕರಿಸಿ ಮೂರ್ಖತನ ಮಾಡಿದೆನೇನೋ ಎಂದು. ಆದರೆ ಅದು ಒಂದು ಕ್ಷಣ ಮಾತ್ರ. ಮರುಕ್ಷಣದಲ್ಲಿ ಅದು ಅಳಿಸಿ ಹೋಗುತ್ತವೆ. ಅಂತರಾತ್ಮ ಜಾಗೃತನಾಗಿ ಈ ದುಷ್ಟ ವಿಚಾರವನ್ನು ಓಡಿಸುತ್ತಾನೆ. ೧೯೦೮ ರಲ್ಲಿ ನಾನು ಸ್ವೀಕರಿಸಿದ ಬ್ರಹ್ಮಚರ್ಯ ವ್ರತದ ನೆನಪು ಮತ್ತೆ ನೆಲೆಗೊಳ್ಳುತ್ತದೆ.

ಅಮೇರಿಕದಲ್ಲಿಯ ಪ್ರಚಾರ ಕಾರ್ಯವು ಸುವ್ಯವಸ್ಥಿತವಾಗಿ ನಡೆಯುವದಕ್ಕೆ ನಾನು ಅಲ್ಲಿಯೇ ಉಳಿದುಕೊಳ್ಳಲು ಲಾಲಾಜಿ ಆದೇಶ ನೀಡಿದ್ದರಿಂದ ನಾನು ಅಲ್ಲಿಯೇ ಉಳಿದುಕೊಂಡೆ. ಈ ರೀತಿಯಾಗಿ ನನ್ನ ಜೀವನಕ್ಕೆ ಲಾಲಾಜಿಯವರು ಒಂದು ಹೊಸ ತಿರುವು ಕೊಟ್ಟಿದ್ದರಿಂದ ನನ್ನ ಮೂಲ ಉದ್ದೇಶ ಹಿಂದೆ ಬಿದ್ದುಕೊಂಡಿತು.

ಈ ಅವಧಿಯಲ್ಲಿ ಭಾರತದ ರಾಜಕೀಯ ಕ್ಷೇತ್ರದಲ್ಲಿ ಅನೇಕ ಸ್ಥಿತ್ಯಂತರಗಳಾಗಿದ್ದವು. ಲೋಕಮಾನ್ಯ ಟಿಳಕರು ನಿಧನರಾಗಿದ್ದರು. ರಾಷ್ಟ್ರೀಯ ಆಂದೋಲನದ ಸೂತ್ರಗಳು ಮಹಾತ್ಮಾ ಗಾಂಧಿಯವರ ಕೈಯಲ್ಲಿ ಬಂದಿದ್ದವು. ಅಸಹಕಾರ ಆಂದೋಲನವು ರಭಸದಿಂದ ಪಸರಿಸತೊಡಗಿತ್ತು.

ಭಾರತದಲ್ಲಿ ನಡೆದಿರುವ ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸುವದಕ್ಕಾಗಿ ನಾನು ಭಾರತಕ್ಕೆ ಮರಳಬೇಕೆಂದೂ ಅಮೇರಿಕದ ಕಾರ್ಯಗಳನ್ನು ನನ್ನ ಸಹಕಾರಿಗಳಿಗೆ ಒಪ್ಪಿಸಬೇಕೆಂದೂ ಲಾಲಾಜಿಯವರು ನನಗೆ ಪತ್ರ ಬರೆದರು. ಅನಂತರ ನಾನು ೧೯೨೦ರ ಸಪ್ಟೆಂಬರ್ ತಿಂಗಳಲ್ಲಿ ಎಂಟು ವರ್ಷಗಳ ನನ್ನ ಅಮೇರಿಕೆಯ ವಾಸ್ತವ್ಯವನ್ನು ಮುಕ್ತಾಯಗೊಳಿಸಿ ನನ್ನ ಪ್ರಿಯ ಮಾತೃಭೂಮಿಯ ಮೇಲೆ ಪುನಃ ಪದಾರ್ಪಣಮಾಡಿದೆ.

ಭಾರತಕ್ಕೆ ಬರುವಾಗ ಮಾರ್ಗದಲ್ಲಿ ನಾನು ಇಂಗ್ಲಂಡ್ ಮತ್ತು ಸ್ಕಾಟ್ಲಂಡ್‌ಗಳನ್ನು ಸಂದರ್ಶಿಸಿ ಅಮೇರಿಕದಲ್ಲಿಯ ಭಾರತೀಯರು ನಡೆಸುತ್ತಿದ್ದ ಚಟುವಟಿಕೆಗಳನ್ನು ಅಲ್ಲಿಯ ಜನರಿಗೆ ವಿವರಿಸಿದೆ.

*

ನಾನು ಭಾರತಕ್ಕೆ ಬಂದು ನನ್ನ ಬಂಧು ಬಳಗದವರನ್ನು ಕಾಣುತ್ತ ಕೆಲ ದಿನ ಕಳೆಯುವದರೊಳಗಾಗಿ ಮಹಾತ್ಮಾ ಗಾಂಧಿಯವರನ್ನು ಕಾಣಲು ಮುಂಬಯಿಗೆ ಬರಬೇಕೆಂದು ಲಾಲಾಜಿ ಅವರು ನನಗೆ ಪತ್ರ ಬರೆದರು. ಅದರಂತೆಯೇ ನಾನು ಮುಂಬಯಿಗೆ ಹೋದೆ. ಅಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆ ನಡೆದಿತ್ತು. ಲಾಲಾಜಿಯವರು ಗಾಂಧೀಜಿ ಅವರೆಡೆಗೆ ನನ್ನನ್ನು ಕರೆದುಕೊಂಡು ಹೋಗಿ ಭೆಟ್ಟಿ ಮಾಡಿಸಿದರು. ಗಾಂಧೀಜಿ ಅವರು ನನಗಾಗಿ ಒಂದು ಹೊಣೆಗಾರಿಕೆಯ ಕೆಲಸವನ್ನು ಗೊತ್ತುಪಡಿಸಿದ್ದುದಾಗಿ ತಿಳಿಸಿದರು. ಆಗ ಅವರು ನಡೆಸುತ್ತಿದ್ದ 'ಯಂಗ್ ಇಂಡಿಯಾ' ಸಾಪ್ತಾಹಿಕಕ್ಕೆ 'ಕಾಂಗ್ರೆಸ್ ಬುಲೆಟನ್' ಎಂಬ ಪುರವಣಿಯನ್ನು ಜೋಡಿ

Learn **ADMISSION OPEN**

RADIO

AT HOME (ENGLISH, KANNADA & TAMIL MEDIUM)

Short term Course in Radio Engg. Duration 8 months

Transistor Course duration 3 months

American Method of Postal Tuition

Every one has to assemble a radio and IREE supplies Radio Kit. Transistor Kit. Text books, Tools, Printed notes etc with clear instruction charts. For further details, prospectus, application forms write to Principal, IREE, Southend Road, Bangalore—4 with Re. 1/-M. O. or postal stamps.

Principal : K. L. V. Iyer.

ಸುಪ್ರಮ: ಅವರ ಸಂಪಾದಕತ್ವವನ್ನು ನಾನು ನಿರ್ವಹಿಸುವುದು ಎಂದು ಗಾಂಧೀಜಿ ಅವರು ಬಗೆದಿದ್ದರು. ಅವರೆ ಅಷ್ಟರಲ್ಲಿ ಗುಜರಾತದಲ್ಲಿ ಬಾರ್ಡೋಲೀ ಸತ್ಯಾಗ್ರಹದ ಸಿದ್ಧತೆ ನಡೆಯಿತು. ಗಾಂಧೀಜಿ ಅವರು ಈ ಸತ್ಯಾಗ್ರಹದ ಮುಖಂಡತ್ವ ವಹಿಸುವುದಾಗಿ ವಾಯಿಸ್‌ರಾಯರಿಗೆ ಪತ್ರ ಬರೆದು ತಿಳಿಸಿದರು. ಹೀಗೇ ಬಿಟ್ಟರೆ ತಮ್ಮ ಸಾಮ್ರಾಜ್ಯಶಾಹಿ ಮುಳುಗಿಹೋಗುವದೆಂದು ಬ್ರಿಟಿಶ್ ಆಳರಸರು ಗಾಂಧೀಜಿ ಅವರನ್ನು ಬಂಧಿಸಿ ಆರು ವರ್ಷದ ಶಿಕ್ಷೆ ವಿಧಿಸಿದರು. ಅದರಿಂದ ಕಾಂಗ್ರೆಸ್ ಬುಲೆಟಿನ್ ಕಾರ್ಯವು ಉಳಿದುಹೋಯಿತು.

ನಾನು ಅಲ್ಲಿಂದ ಕರ್ನಾಟಕಕ್ಕೆ ಬಂದೆ. ಮಹಾರಾಷ್ಟ್ರದಲ್ಲಿ ಕೆಲಸ ಮಾಡಬೇಕೆಂದು ದಿವಂಗತ ನರಸಿಂಹ ಚಿಂತಾಮಣಿ ಕೇಳಕರರು ನನಗೆ ತಿಳಿಸಿದರು. ಅಮೇರಿಕದಲ್ಲಿದ್ದಾಗ ನಮಗೆ ನಮ್ಮ ಕಾರ್ಯವನ್ನು ಮುಂದೆ ಸಾಗಿಸಿಕೊಂಡು ಹೋಗುವಲ್ಲಿ ವಿಪರೀತವಾಗಿ ಹಣದ ಅಡಚಣಿ ಬಿದ್ದುದರಿಂದ ನಾನು ನನ್ನ ಅಣ್ಣಂದಿರ ಮುಖಾಂತರ ಲೋಕಮಾನ್ಯ ಟಿಳಕರಿಗೆ ಬಿನ್ನಹ ಪತ್ರ ಬರೆದೆ. ಅದಕ್ಕೆ ಶ್ರೀಮತಿ ಆ್ಯನಿ ಬೆಜಂಟರ ಮುಖಾಂತರ ಅವರು ನನಗೆ ೫೦೦೦ ಡಾಲರುಗಳನ್ನು ಕಳಿಸಿದ್ದರು ಮತ್ತು ಲಾಲಾಜಿಯವರು ನಾನು ಅಮೆರಿಕದಲ್ಲಿ ಕೈಕೊಂಡ ಚಟುವಟಿಕೆಗಳ ವಿವರವನ್ನು ತಿಳಿಸಿದಾಗ ಲೋಕಮಾನ್ಯರು ನನ್ನ ಕಾರ್ಯವನ್ನು ಮೆಚ್ಚಿ ನನಗೆ ತರುಣ ವೀರಾಗ್ರಣಿ ಎಂದು ಸ್ತುತಿಪರ ಮಾತುಗಳನ್ನು ಬರೆದು ನನ್ನನ್ನು ಅಭಿನಂದಿಸಿದ್ದರು. ಮುಂದೆ ಮಗಳಿ ಭಾರತಕ್ಕೆ ಹೊರಟಾಗ ಲಾಲಾಜಿಯವರ ಹೇಳಿಕೆಯಂತೆ ಶ್ರೀ ಕೇಳಕರರು ನನ್ನ ಪ್ರವಾಸ ವೆಚ್ಚಕ್ಕಾಗಿ ಹಣ ಕಳಿಸಿದ್ದರು. ಈ ಕಾರಣಗಳ ಮೂಲಕ ನನ್ನ ಮೇಲೆ ಅವರು ಆತ್ಮೀಯತೆಯ ಹಕ್ಕನ್ನು ಇಟ್ಟುಕೊಂಡಿದ್ದರು. ಅದೇ ಮೇರೆಗೆ ಪಂಜಾಬದಲ್ಲಿ ತಾವು ಸ್ಥಾಪಿಸಿದ ಅನೇಕ ಸಂಘ ಸಂಸ್ಥೆಗಳ ಸಂಚಾಲನೆಯನ್ನು ವಹಿಸಿಕೊಳ್ಳಬೇಕೆಂದು ಲಾಲಾಜಿ ಅವರು ದುಂಬಾಲು ಬಿದ್ದರು,

ಆದರೆ ನಾನು ನನ್ನ ಜನ್ಮಸ್ಥಳವಾದ ಕರ್ನಾಟಕದಲ್ಲಿಯೇ ಉಳಿದು ಅವನ್ನೇ ನನ್ನ ಕಾರ್ಯಕ್ಷೇತ್ರವನ್ನಾಗಿ ಆಯ್ದುಕೊಂಡೆ. ಆ ವರ್ಷ ನನ್ನನ್ನು ಕರ್ನಾಟಕ ಪ್ರಾಂತಿಕ ಸಮಿತಿಯ ಗೌರವ ಕಾರ್ಯದರ್ಶಿಯನ್ನಾಗಿ ಮಾಡಲಾಯಿತು.

ಕರ್ನಾಟಕವನ್ನು ನನ್ನ ಕಾರ್ಯಕ್ಷೇತ್ರವನ್ನಾಗಿ ಆಯ್ದುಕೊಂಡ ನಂತರ ಹುಬ್ಬಳ್ಳಿಯಲ್ಲಿ ನನ್ನ ಕೆಲಸವನ್ನಾರಂಭಿಸಿದೆ. ದೇಶದ ಬೇರೆ ಬೇರೆ ಭಾಗಗಳಲ್ಲಿ ನಡೆದ ರಾಷ್ಟ್ರೀಯ ಚಟುವಟಿಕೆಗಳನ್ನು ನಮ್ಮ ಪ್ರದೇಶದಲ್ಲಿ ಪ್ರಸಾರ ಮಾಡುವದಕ್ಕಾಗಿ ಮತ್ತು ಇಲ್ಲಿ ನಡೆಯುತ್ತಿದ್ದ ಚಟುವಟಿಕೆಗಳನ್ನು ಹೊರನಾಡಿಗೆ ಬಿತ್ತರಿಸಲಿಕ್ಕಾಗಿ 'ವಾರ್ತಾ ಪ್ರಸಾರಕ ಸಂಘ' ಎಂಬ ಹೆಸರಿನಿಂದ ಒಂದು ಸುದ್ದಿ ವ್ಯವಸ್ಥೆಯನ್ನು ಸಂಘಟಿಸಿದೆ. ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯು ರಚಿಸಿದ್ದ ಸ್ವಯಂಸೇವಕ ಮಂಡಲದ ಕೆಲಸವನ್ನು ನಾನೇ ಮಾಡುತ್ತಿದ್ದೆ. ೧೯೨೨ ರಿಂದ ಐದು ವರ್ಷಗಳ ವರೆಗೆ ಹುಬ್ಬಳ್ಳಿ ತಾಲೂಕಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿದೆ.

ಸ್ತ್ರೀಶಿಕ್ಷಣ, ಮಹಿಳೋದ್ಧಾರ ಇವುಗಳ ಕಡೆಗೆ ನನಗೆ ಚಿಕ್ಕಂದಿನಿಂದಲೂ ಆಸಕ್ತಿ ಇತ್ತು. ನಮ್ಮ ಮಹಿಳೆಯರು ಸುಶಿಕ್ಷಿತರಾಗಿ ಸಾರ್ವಜನಿಕ ಕಾರ್ಯಕ್ರಮಗಳಲ್ಲಿಯೂ ರಾಜಕೀಯ ಆಂದೋಲನಗಳಲ್ಲಿಯೂ ಭಾಗವಹಿಸುವದು ರಾಷ್ಟ್ರದ ಸರ್ವಾಂಗೀಣ ಪ್ರಗತಿಯ ದೃಷ್ಟಿಯಿಂದ ಅವಶ್ಯವೆಂದು ನಾನು ಮೊದಲಿನಿಂದಲೂ ತಿಳಿಯುತ್ತ ಬಂದಿದ್ದೆ. ಅಷ್ಟೇ ಏಕೆ, ಅಮೇರಿಕದಲ್ಲಿ ನಾನಿದ್ದಾಗ ಮೇಲಿಂದ ಮೇಲೆ ಮನೆಗೆ ಪತ್ರ ಬರೆದು ನನ್ನ ಅಣ್ಣನ ಮಗಳಾದ ಶ್ರೀಮತಿ ಗಂಗೂತಾಯಿಗೆ ಈ ಕಾರ್ಯದಲ್ಲಿ ಉತ್ತೇಜನ ಕೊಡುತ್ತ ಬಂದಿದ್ದೆ. ಆದುದರಿಂದ ಆ ದಿಸೆಯಲ್ಲಿ ಕೆಲಸ ಪ್ರಾರಂಭಿಸಿ ನಗರದ ಎಲ್ಲ ಭಗಿನಿಯರ ಸಂಘಟನೆಗಾಗಿ 'ಭಗಿನೀ ಮಂಡಳ' ಎಂಬ ಹೆಸರಿನಿಂದ ಒಂದು ಸಂಘಟನೆಯನ್ನು ೧೯೨೨ರ ಜನವರಿ ೧೫ರಂದು ಪ್ರಾರಂಭಿಸಿದೆ. ಮುಂದೆ ಒಂದು ವರ್ಷದಲ್ಲೇ ಕರ್ನಾಟಕ ಪ್ರಾಂತಿಕ ಭಗಿನೀ ಮಂಡಳವು ಸ್ಥಾಪಿತವಾಯಿತು.

ಈ ಭಗಿನೀ ಮಂಡಳವು 'ಟಿಳಕ ಕನ್ಯಾಶಾಲೆ' ಎಂಬ ಒಂದು ರಾಷ್ಟ್ರೀಯ ಶಾಲೆಯನ್ನು ಪ್ರಾರಂಭಿಸಿತು. ಮತ್ತು ಈ ಸಂಘಟನೆಯು ಪ್ರಭಾವಶಾಲಿಯಾಗುತ್ತ ಸಾಗಿದಂತೆ ತನ್ನ ಕಾರ್ಯಕಲಾಪಗಳನ್ನು ವಿಸ್ತಾರಗೊಳಿಸತೊಡಗಿತು. ಸುದೈವದಿಂದ ಮುಂದೆ ಶ್ರೀಮತಿ ಉಮಾಬಾಯಿ ಕುಂದಾಪುರರಂಥ ಸುಸಮರ್ಥ ಸಂಘಟಕರು ಈ ಭಗಿನೀ ಮಂಡಳದ ಅಧಿಕಾರ ಸೂತ್ರಗಳನ್ನು ನಿರ್ವಹಿಸತೊಡಗಿದ್ದರಿಂದ ಇಡೀ ಕರ್ನಾಟಕದ ಮಹಿಳೆಯರಲ್ಲಿ ಜಾಗೃತಿ ಉಂಟಾಯಿತು. ಕೇವಲ ಹುಬ್ಬಳ್ಳಿಯನ್ನು ತನ್ನ ಕಾರ್ಯಕ್ಷೇತ್ರವನ್ನಾಗಿ ಆರಿಸ್ಕೊಂಡ ಭಗಿನೀ ಮಂಡಳವು ಮುಂದೆ ಕರ್ನಾಟಕದ ಬೇರೆ ಬೇರೆ ಸ್ಥಳಗಳಲ್ಲಿ ಭಗಿನೀ ಮಂಡಳಗಳನ್ನು ಸ್ಥಾಪಿಸಿತು. ಮತ್ತು ಅನೇಕ ಭಗಿನಿಯರು ಸ್ವಾತಂತ್ರ್ಯ ಚಳುವಳಿಯಲ್ಲಿ ಸ್ವಯಂಸೇವಿಕೆಯರಾಗಿದ್ದು ಕಾರಾವಾಸವನ್ನು ಅನುಭವಿಸಿದರು. ಹುಬ್ಬಳ್ಳಿ ಭಗನೀ ಮಂಡಳ ಮತ್ತು ಟಿಳಕ ಕನ್ಯಾಶಾಲೆಗಳನ್ನು ಸರಕಾರ ೧೯೩೨ ರಲ್ಲಿ ಅಕ್ರಮ ಸಂಸ್ಥೆಗಳೆಂದು ಸಾರಿತು.

ಮುಂದೆ ಒಂದು ವರ್ಷದೊಳಗಾಗಿ ಅಂದರೆ ೧೯೨೩ರಲ್ಲಿ ನಾಗಪುರದಲ್ಲಿ ಧ್ವಜ ಸತ್ಯಾಗ್ರಹ ಪ್ರಾರಂಭವಾಯಿತು. ಈ ಸತ್ಯಾಗ್ರಹದಲ್ಲಿ ಭಾಗವಹಿಸಲು ದೇಶದ ಎಲ್ಲ ಪ್ರಾಂತಗಳಿಂದಲೂ ಸ್ವಯಂಸೇವಕರ ತಂಡಗಳು ನಾಗಪುರಕ್ಕೆ ಬಂದವು. ಕರ್ನಾಟಕದಿಂದ ಆರು ಜನ ಸ್ವಯಂಸೇವಕರೊಂದಿಗೆ ಈ ಸತ್ಯಾಗ್ರಹದಲ್ಲಿ ಭಾಗವಹಿಸಲು ನಾನು ಹೋದೆ. ಈ ಸತ್ಯಾಗ್ರಹದ ನಾಯಕತ್ವವು ಶೇಠ ಜಮನಾಲಾಲ ಬಜಾಜರ ಕಡೆಗೆ ಇತ್ತು. ಜಮನಾಲಾಲಜೀ ಅವರು ಜೂನ್ ೧೭ ರಂದು ಬಂಧಿಸಲ್ಪಟ್ಟರು. ಅವರ ಬಂಧನದ ನಂತರ ಈ ಸತ್ಯಾಗ್ರಹದ ಧುರೀಣತ್ವವು ನನ್ನ ಕಡೆಗೆ ಬಂದಿತು. ಮರುದಿನ ಅಂದರೆ ತಾ. ೧೮ರ ದಿನ ೨೦೦ ಜನ ಸ್ವಯಂಸೇವಕರೊಂದಿಗೆ ನಾನು ಸತ್ಯಾಗ್ರಹ ಕೈಕೊಳ್ಳಬೇಕೆಂದು ನಿರ್ಧರಿಸಿದೆ. ಅದರಂತೆ ನಾನು ಮತ್ತು ಆಚಾರ್ಯ ವಿನೋಬಾ ಭಾವೆ ಇಬ್ಬರೂ ರಾತ್ರಿಯ ೧ ಗಂಟೆಯ ವರೆಗೆ ಕುಳಿತು ಆಲೋಚನೆ ಮಾಡಿ ಕಾರ್ಯಕ್ರಮವನ್ನು ಗೊತ್ತುಪಡಿಸಿದೆವು. ಆದರೆ ಮುಂದೆ ಸ್ವಲ್ಪೇ ವೇಳೆಯಲ್ಲಿ ನಾನು ಮತ್ತು ಸ್ವಯಂಸೇವಕರು ತಂಗಿದ್ದ ಶಿಬಿರಕ್ಕೆ ನಾಗಪುರದ ಪೋಲೀಸರು ಮುತ್ತಿಗೆ ಹಾಕಿ ನಮ್ಮನ್ನು ಬಂಧಿಸಿ ನಮ್ಮ ಮೇಲೆ ಖಟ್ಲೆ ಹಾಕಿದರು. ಮ್ಯಾಜಿಸ್ಟ್ರೇಟರು ನಮಗೆಲ್ಲರಿಗೂ ಒಂದು ವರ್ಷದ ಶಿಕ್ಷೆ ವಿಧಿಸಿ ಸೆರೆಮನೆಗೆ ಕಳಿಸಿದರು.

WHEN NATURE
FAILS !

ಮತ್ತಷ್ಟು ಎತ್ತರವಾಗಿ ಬೆಳೆಯಬಲ್ಲಿರಿ
(೨ ರಿಂದ ೮ ಅಂಗುಲಗಳವರೆಗೆ)


ನೀವು ಎತ್ತರವಾಗಿ ಬೆಳೆಯಬೇಕಾದರೆ ನಮ್ಮ ಹೈಟೆಕ್ಸ್ ಔಷಧವನ್ನು ಉಪಯೋಗಿಸಿರಿ ಸ್ತ್ರೀಯರೂ ಪುರುಷರೂ ಸಹ ಉಪಯೋಗಿಸಬಹುದು. ಬೆಲೆ ಪ್ರತಿ ಫಾಯಿಲಿಗೆ (20 Tabs) ರೂ. 7-20 ಮನಿಆರ್ಡರಿನಿಂದ 3 Phials (50 Tabs) Rs. 15-00 P.

ರೂ. 1,000 ಗಳ ಬಹುಮಾನ

ನಿಮಗೆ ಬೇಕಾದ್ದನ್ನು ಪಡೆಯಬಹುದು, ನಿಮ್ಮ ತೊಂದರೆ, ಕಷ್ಟಗಳನ್ನು ನಿವಾರಿಸಿಕೊಳ್ಳ ಬಯಸಿದ್ದರೆ ಇಂದೇ ನಮ್ಮ ಮಂತ್ರ ಶಕ್ತಿಯ ಉಂಗುರ ಧರಿಸಿ, ಲಾಟರಿ, ವರ್ಗಾವರ್ಗಿ, ಮೇಲಧಿಕಾರ, ವಿವಾಹಾದಿ ಎಲ್ಲ ವಿಧದಲ್ಲೂ ಖಂಡಿತ ಜಯ ಲಭಿಸುತ್ತದೆ. ನಿಮ್ಮ ಇಚ್ಛೆಯಂತೆ ಕೆಲಸ ಮಾಡುತ್ತದೆ,

ಮಂತ್ರ ಮುಂಗುರ: ರೂ. 7-00 ಮನಿಆರ್ಡರಿನಿಂದ ಮುಂಗಡ (ಪತ್ರವ್ಯವಹಾರ ಇಂಗ್ಲೀಷಿನಲ್ಲಿ)

M/s. Victoria Commercial Coy. (K.H.M. 5/77) Flat Door No. 3833
Beat No. 1 Ambala Cantt. 133001 (N. I.) (Correspond in English)



ಇಲ್ಲಿ ಪುರಾತನವು ಆಧುನಿಕತೆಯ ಸೊಬಗನ್ನು ಪಡೆಯುತ್ತದೆ!

ಪುರಾತನ ಕಾಲದಿಂದಲೂ ಕರ್ನಾಟಕ ಹಾಗೂ ಹಿಂದುಸ್ತಾನಿ ಪದ್ಧತಿಯ ಸಂಗೀತಕ್ಕಾಗಿ ಭಾರತವು ಸುವಿಖ್ಯಾತವಾಗಿದೆ. ಇವೆರಡೂ ಪದ್ಧತಿಯ ಸಂಗೀತಗಳಲ್ಲಿ ರಾಗಗಳ ಆಲಾಪಗಳಿಗೆ ಸಂಬಂಧಿಸಿದ ಪದಗಳು ಬೇರೆ ಆಗಿವೆ. ಹಾಡುಗಾರಿಕೆಯ ಮೂಲಕವೇ ಭಾರತದ ಈ ಪ್ರಮುಖ ಕಲೆಯು ತಲೆತಲಾಂತರಗಳಿಂದ ಉಳಿದುಬಂದಿದೆ. ಅದೇ ಬಗೆಯಾಗಿ ದಾವಣಗೆರೆಯ ನಮ್ಮ ಮಿಲ್ಲಿನಲ್ಲಿ ತಯಾರಾಗುತ್ತಿರುವ ಬಟ್ಟೆಗಳು ಕಾಲಕ್ಕೆ ತಕ್ಕಂತೆ ಬಗೆಬಗೆಯ ವೈವಿಧ್ಯತೆಗಳಲ್ಲಿ ಬರುತ್ತಿವೆ. ಹಿಂದಿನ ಕಾಲದಲ್ಲಿ ಕೇವಲ ಹತ್ತಿಯ ಬಟ್ಟೆಗಳು ತಯಾರಾಗುತ್ತಿದ್ದವು. ಆಮೇಲೆ ಉಚ್ಚ ಮಟ್ಟದ ಶ್ರೇಣಿಗಳಲ್ಲಿ ಬಂದವು. ಈಗ ದಾವಣಗೆರೆಯ ನಮ್ಮ ಮಿಲ್ಲಿನಲ್ಲಿ ಶ್ರೇಷ್ಠ ಮಟ್ಟದ ಬ್ಲೆಂಡೆಡ್ ಬಟ್ಟೆಗಳೂ ತಯಾರಾಗುತ್ತಿವೆ. ಅವು ನೀವು ಕೊಡುವ ಹಣಕ್ಕೆ ದೊರೆಯಬಹುದಾದ ಉತ್ಕೃಷ್ಟ ಬಟ್ಟೆಗಳಾಗಿವೆ.

MONSIEUR ಮೊನ್ಸಿಯರ್-ಟೆರಿನ್ ಕಾಟನ್ ಸೂಟಿಂಗ್

RAMSOON ರಾಮ್ಸೂನ್-ಟೆರಿನ್ ಕಾಟನ್ ಸೂಟಿಂಗ್

DAWARIN ದಾವರಿನ್-ಟೆರಿನ್ ಕಾಟನ್ ಶರ್ಟಿಂಗ್

'ಟೆರಿನ್' ಕ್ಯಾಲಿ ಅವರ ರಜಿಸ್ಟರ್ಡ್ ಟ್ರೇಡ್ ಮಾರ್ಕ್

ದಾವಣಗೆರೆ

ಗುಣಕ್ಕೆ, ಪ್ರಾಮಾಣ್ಯತೆ ದೊರೆಯುತ್ತದೆ

ದಿ ದಾವಣಗೆರೆ ಕಾಟನ್ ಮಿಲ್ಸ್ ಲಿಮಿಟೆಡ್ ದಾವಣಗೆರೆ, ಕರ್ನಾಟಕ

ದಾ

PIN CODE FOR FAST MAIL

THOMASIDCMI676 Kan

ಆಗಿನ ಕಾರಾವಾಸ ನರಕ ಸದೃಶವಾಗಿತ್ತು. ಅರೆ ಬೆಂದ ಹಲಕೆಲವು ಹಸಿ ಬಿಸಿ ತರುಣರು ಕ್ಷಮಾಪತ್ರ ಬರೆದುಕೊಟ್ಟು ಸೆರೆಮನೆಯಿಂದ ಬಿಡುಗಡೆ ಹೊಂದಿದರೆಂಬ ಸುದ್ದಿ ನಮ್ಮ ಕಿವಿಗೆ ಬಿತ್ತು. ಅದನ್ನು ಕೇಳಿ ನಮಗೆಲ್ಲ ಬಹಳ ದುಃಖವಾಯಿತು.

ನಾವು ಸೆರೆಮನೆಯಲ್ಲಿದ್ದಾಗಲೇ ವರ್ಧಾದ ನೀಲಕಂಠರಾವ್, ಭಡೋಚದ ಡಾ. ಚಂದೂಲಾಲ ದೇಸಾಯಿ, ಸುರತದ ಫಿಯ್ಯಾ, ಆಣಂದದ ಮೋಹನಲಾಲ ಪಾಂಡ್ಯ ಮತ್ತು ನಾನು ಎಲ್ಲರೂ ಕೂಡಿ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಕೆಲ ಜನ ಯುವಕರು ಕ್ಷಮೆ ಕೇಳಿ ಬಿಡುಗಡೆ ಹೊಂದಿದುದರ ಕಾರಣವನ್ನು ವಿವೇಚಿಸಿದೆವು. ಮತ್ತು ದೇಶದಲ್ಲಿಯ ತರುಣರ ಸಂಘಟನೆ ಮಾಡಿ ಅವರಿಗೆ ಶಿಸ್ತು, ಸಂಯಮ, ಕಷ್ಟಸಹಿಷ್ಣುತೆ, ಶರೀರ ಬಲವರ್ಧನೆ ಇವೆಲ್ಲವುಗಳನ್ನು ಒದಗಿಸುವುದಕ್ಕಾಗಿ ಒಂದು ಸಂಘಟನೆಯನ್ನು ಕಟ್ಟಬೇಕೆಂದು ನಿರ್ಧರಿಸಿದೆವು. ಮತ್ತು ಅದಕ್ಕಾಗಿ ಅಖಿಲ ಭಾರತ ಸ್ವಯಂಸೇವಕ ಪರಿಷತ್ತನ್ನು ಕರೆಯಬೇಕೆಂದು ನಿರ್ಧರಿಸಿದೆವು.

ಮುಂದೆ ಸೆಂಟ್ರಲ್ ಅಸೆಂಬ್ಲಿಯ ಅಧ್ಯಕ್ಷರಾಗಿದ್ದ ದಿವಂಗತ ವಿಠ್ಠಲಭಾಯಿ ಪಟೇಲರ ಮಧ್ಯಸ್ಥಿಯ ಪರಿಣಾಮವಾಗಿ ಕಾಂಗ್ರೆಸ್ ಮತ್ತು ಸರಕಾರದ ನಡುವೆ ಒಪ್ಪಂದವಾಯಿತು. ಯಾವ ಉದ್ದೇಶಕ್ಕಾಗಿ ಈ ಸತ್ಯಾಗ್ರಹವನ್ನು ಹೂಡಲಾಗಿತ್ತೋ ಅದರಲ್ಲಿ ಕಾಂಗ್ರೆಸ್ಸಿಗೆ ಯಶ ದೊರಕಿತು. ಬಂಧಿತರೆಲ್ಲರೂ ಬಿಡುಗಡೆ ಹೊಂದಿದರು.

ನಾವು ಸೆರೆಮನೆಯಿಂದ ಹೊರಗೆ ಬಂದ ಕೆಲ ದಿನಗಳಲ್ಲಿಯೇ ದಿಲ್ಲಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆ ಸೇರಿತು. ಮುಂದೆ ಅದೇ ವರ್ಷ ಡಿಸೆಂಬರ್ ತಿಂಗಳಲ್ಲಿ ಕಾಕಿನಾಡದಲ್ಲಿ ಕಾಂಗ್ರೆಸ್ ಅಧಿವೇಶನ ಸೇರಿದಾಗ ಹಿಂದುಸ್ತಾನೀ ಸೇವಾದಲವು ಜನ್ಮ ತಳೆಯಿತು.

ನಾನು ಕರ್ನಾಟಕಕ್ಕೆ ಬಂದೊಡನೆಯೆ ಸ್ವಯಂಸೇವಕರ ಸಂಘಟನೆ ಮತ್ತು ತರಬೇತಿಯ ಕೆಲಸವನ್ನು ಏಕೆ ಕೈಕೊಂಡೆನೆಂಬುದು ಈಗ ಸರಿಯಾಗಿ ನೆನಪಿಲ್ಲ. ಆದರೆ ಮುಂದೆ ಹದಿನೆಂಟೇ ತಿಂಗಳುಗಳಲ್ಲಿ ಸ್ವಯಂಸೇವಕ ಚಳುವಳಿ ನನ್ನ ಜೀವನದ ಕಾರ್ಯವಾಯಿತು.

ನಾನು ಏಳೆಂಟು ವರ್ಷದವನಿದ್ದಾಗಲೇ ಧಾರವಾಡದಲ್ಲಿ ಬ್ರಿಟಿಶ್ ಸೈನಿಕರು ಹಾಯ್ದು ಹೋಗುವುದನ್ನು ನೋಡಿದ್ದೆ. ಅವರ ಸಮವಸ್ತ್ರದ ಶಿಸ್ತನ್ನು ಕಂಡು ಆಗಲೇ ನಾನೂ ಅವರಂತೆ ಆಗಬೇಕೆಂದು ಅಂದುಕೊಂಡ ನೆನಪು ನನಗಿದೆ. ೧೯೨೧ರಲ್ಲಿ ಅಮೇರಿಕದಿಂದ ಹಿಂದಿರುಗಿದೊಡನೆ ಲಂಡ ಚಣ್ಣ ಮತ್ತು ಸಮವಸ್ತ್ರ ಧರಿಸತೊಡಗಿದೆ. ಆಗಲೇ ನನಗೆ ಬಾಲ್ಯದ ನೆನಪು ಬಂತು. ಅದನ್ನು ಕುರಿತು ನನ್ನ ಸ್ನೇಹಿತರು ಮತ್ತು ಬಳಗದವರಿಗೆ ಅದನ್ನು ಹೇಳಿದೆ. ೧೯೦೦ರಲ್ಲಿ ನಾನು ಧಾರವಾಡದಿಂದ ಹುಬ್ಬಳ್ಳಿಗೆ ಪ್ರವಾಸ ಮಾಡುತ್ತಿದ್ದಾಗ ಸದರ್ನ್ ಮರಾಠಾ ರೇಲ್ವೆಯ ಕೆಲ ಸ್ವಯಂಸೇವಕರು ರೇಲ್ವೆ ಮಾರ್ಗದ ಬದಿಯಲ್ಲಿ ಕವಾಯತು ಮಾಡುವುದನ್ನು ನೋಡಿದಾಗ ಸಹ ನನಗೆ ನಾನೂ ಹೀಗೆ ಕವಾಯತು ಮಾಡಬೇಕು ಮತ್ತು ಮಾಡಿಸಬೇಕು ಎಂದೆನಿಸಿತ್ತು. ಆದರೆ ಅದಕ್ಕೆ ಆಗ ಅವಕಾಶವಿರಲಿಲ್ಲ. ೧೯೦೫ರ ಬಂಗಾಲ ವಿಭಜನೆ ಚಳುವಳಿಯ ಕಾಲಕ್ಕೆ ಹುಬ್ಬಳ್ಳಿಯಲ್ಲಿ 'ಆರ್ಯ ಬಾಲಸಭಾ ಸಂಸ್ಥೆ'ಯನ್ನು ಸ್ಥಾಪಿಸಿದಾಗಲೂ ನಾನು ನನ್ನ ಸ್ನೇಹಿತರಿಗೆ ಶಿಸ್ತು ಮತ್ತು ಕವಾಯತುಗಳನ್ನು ಬೋಧಿಸುತ್ತಿದ್ದೆ. ಅದಕ್ಕಾಗಿಯೇ ನಾನೊಂದು ವ್ಯಾಯಾಮಶಾಲೆಯನ್ನು ಸಹ ಪ್ರಾರಂಭಿಸಿದ್ದೆ. ನಾನಾಗ ಖಡಕ್ ಶಿಸ್ತಿನವನಾಗಿದ್ದೆ. ಅಮೆರಿಕಕ್ಕೆ ಹೊರಡುವುದಕ್ಕಿಂತ ಪೂರ್ವದಲ್ಲಿ ನಾನು ಹುಬ್ಬಳ್ಳಿಯಲ್ಲಿ ಪ್ರಾರಂಭಿಸಿದ ಎಲ್ಲ ಸಂಘಟನೆ ಮತ್ತು ಸಂಸ್ಥೆಗಳಲ್ಲಿ ಸೈನ್ಯದ ಶಿಸ್ತು ಮತ್ತು ಅಚ್ಚುಕಟ್ಟುತನಗಳನ್ನು ಅಪೇಕ್ಷಿಸುತ್ತಿದ್ದೆ. ಆದರೆ ನಾನು ಹೀಗೇಕೆ ಮಾಡುತ್ತಿದ್ದೆನೆಂಬ ತಿಳಿವಳಿಕೆ ನನಗಾಗ ಇರಲಿಲ್ಲ.

ಅಮೇರಿಕದಲ್ಲಿದ್ದಾಗ ಸಹ ನಾನು ನನ್ನ ಮೆಚ್ಚುಗೆಯ ವಿಷಯವೆಂದು ಸೈನ್ಯಶಾಸ್ತ್ರವನ್ನು ಅಭ್ಯಸಿಸಲು ಪ್ರಯತ್ನಿಸಿದೆ. ಆದರೆ ನನ್ನ ಪ್ರಕೃತಿ ಅಷ್ಟೊಂದು ಸದೃಢವಾಗಿರಲಿಲ್ಲವಾದ್ದರಿಂದ ನಾನು ಸೈನ್ಯ ಸೇರ್ಪಡೆಗೆ ಅನರ್ಹನೆಂದು

ತಿರಸ್ಕರಿಸಲ್ಪಟ್ಟೆ. ಆದರೂ ನಾನು ಯುರೋಪ್ ಮತ್ತು ಇನ್ನಿತರ ಕಡೆಗಳಲ್ಲಿ ನಡೆದ ಯುದ್ಧಗಳನ್ನು ಆಸ್ಥೆಯಿಂದ ಅಭ್ಯಸಿಸುತ್ತಿದ್ದೆ. ಸಾರ್ವಜನಿಕರಿಗೆ ಲಭ್ಯವಿರುವ ನಕ್ಷೆ ನಕಾಶೆಗಳನ್ನು ಒಳ್ಳೇ ಕುತೂಹಲದಿಂದ ವೀಕ್ಷಿಸುತ್ತಿದ್ದೆ. ಮೆಕ್ಸಿಕನ್ ಯುದ್ಧಕಾಲದಲ್ಲಿ ನಾನು ಸೇವೆ ಸಲ್ಲಿಸಲು ಸಿದ್ಧನೆಂದು ಅಮೇರಿಕನ್ ಸರಕಾರಕ್ಕೆ ತಿಳಿಸಿದ್ದೆ. ಅದೇ ರೀತಿ ಬ್ರಿಟಿಶ್ ವೈದ್ಯಕೀಯ ಪಥಕದಲ್ಲಿ ಸೇರುವ ಅಪೇಕ್ಷೆ ವ್ಯಕ್ತಪಡಿಸಿ ಬ್ರಿಟಿಶ್ ರಾಯಭಾರಿ ಕಚೇರಿಗೆ ಬರೆದಿದ್ದೆ. ಆದರೆ ನನ್ನ ಸೇವೆ ಸ್ವೀಕೃತವಾಗಲಿಲ್ಲ. ೧೯೨೧ರಲ್ಲಿ ಸ್ವದೇಶಕ್ಕೆ ಮರಳುವಾಗಲೂ ನಾನು ಯುರೋಪಿನಲ್ಲಿಯ ರಣರಂಗಗಳನ್ನೆಲ್ಲ ಸಂದರ್ಶಿಸಬೇಕೆಂದೂ ಅಲ್ಲಿನ ಸೇನಾಪತಿಗಳೊಡನೆ ವಿಚಾರ ವಿನಿಮಯ ನಡೆಸಬೇಕೆಂದು ಅಪೇಕ್ಷೆಪಟ್ಟಿದ್ದೆ. ಅದೇ ರೀತಿ ಬೆಲ್ಜಿಯಮ್ಮಿನ ಆಂಟ್ವರ್ಪ್ ನಗರಕ್ಕೆ ಹೋಗಲು ಟಿಕೆಟ್ಟನ್ನೂ ಕೊಂಡಿದ್ದೆ. ಆದರೆ ಬ್ರಿಟಿಶ್ ಮಿಲಿಟರಿ ಪಾಸಪೋರ್ಟ್ ಅಧಿಕಾರಿಗಳು ನನ್ನ ಈ ಪ್ರವಾಸಕ್ಕೆ ಅಪ್ಪಣೆ ಕೊಡಲಿಲ್ಲ. ನಾನು ನೇರವಾಗಿ ಮುಂಬಯಿ ತಲುಪಬೇಕೆಂದು ವಿಧಿಸಿದರು. ನನಗೆ ಬಹಳ ನಿರಾಶೆಯಾಯಿತು.

೧೯೬೭ರಲ್ಲಿ ಚೀನದ ಯಾದವೀಯುದ್ಧದ ಕಾಲಕ್ಕೆ ವೈದ್ಯಕೀಯ ಪಥಕವೊಂದನ್ನು ಕಳಿಸುವ ವಿಚಾರ ಸಹ ನನ್ನ ಈ ಸೈನಿಕ ಬುದ್ಧಿಯ ಶಿಶು.

೧೯೨೧ರಲ್ಲಿ ಅಹಮದಾಬಾದ ಕಾಂಗ್ರೆಸ್ ಅಧಿವೇಶನದಲ್ಲೇ ನಾನು ಸ್ವಯಂಸೇವಕ ವ್ಯವಸ್ಥೆಯನ್ನು ಅಭ್ಯಸಿಸಿದೆ. ಅದರಲ್ಲಿ ಏನೋ ಲೋಪವಿದೆಯೆಂದು ನನಗೆ ಆಗಲೇ ಅನಿಸಿತು. ಕೂಡಲೇ ಅದನ್ನು ಸಮಗ್ರವಾಗಿ ಪುನಸ್ಸಂಘಟಿಸಬೇಕೆಂದೂ ಬೇರೆ ವಿಧಾನದಲ್ಲಿ ಅದರ ಕಾರ್ಯವಿಧಾನವನ್ನು ರೂಪಿಸಬೇಕೆಂದೂ ನಿರ್ಧರಿಸಿದೆ.

ಶಿವಾಜಿ, ರಾಣಾ ಪ್ರತಾಪ ಮೊದಲಾದವರ ಶೌರ್ಯದ ಕತೆಗಳನ್ನು ಓದುವ ಹುಚ್ಚು ನನಗೆ ಸಣ್ಣವನಿದ್ದಾಗಿನಿಂದಲೂ ಇತ್ತು. ಬಾಲ್ಯದಲ್ಲೂ ನಾನು ಐತಿಹಾಸಿಕ, ಯುದ್ಧದ ಮತ್ತು ಪತ್ತೇದಾರಿ ಕತೆ ಕಾದಂಬರಿಗಳನ್ನೇ ಮೆಚ್ಚುತ್ತಿದ್ದೆ. ವಿದ್ಯಾರ್ಥಿ ದೆಸೆಯಲ್ಲಿ ಸಹ ಇತಿಹಾಸ ಮತ್ತು ತತ್ಸಂಬಂಧಿ ವಿಷಯಗಳಲ್ಲೇ ನನ್ನ ಆಸ್ಥೆ ಹೆಚ್ಚು.

ಭಾರತದ ಯುವ ಜನಾಂಗಕ್ಕೆ ತರಬೇತಿ ಕೊಡುವ ಸಂಸ್ಥೆಯ ಅಧಿಪತಿ ನಾನಾಗಿದ್ದರೂ ನಾನು ಸ್ವತಃ ಯಾವುದೇ ಸೈನ್ಯದಲ್ಲಿ ಇಲ್ಲವೆ ಸ್ಕೌಟ್ ಶಿಬಿರದಲ್ಲಿ ತರಬೇತಿ ಪಡೆದಿಲ್ಲವೆಂದರೆ ಅನೇಕರು ಅಚ್ಚರಿಪಡಬಹುದು. ನನ್ನ ಬಡಕಲು ದೇಹ ಮತ್ತು ದುರ್ಬಲ ಪ್ರಕೃತಿಯನ್ನು ಕಂಡವರೂ ಆಶ್ಚರ್ಯಪಡುತ್ತಾರೆ. ಹರ್ಡೀಕರ




ಪ್ಯೂರಿಟಸ್

ಸಾಮಾನ್ಯ ನೆಲದ ನೀರಿನ ಕಲ್ಮಷಗಳನ್ನು ಸೋಸಿ, ಕುಡಿಯಲು 100% ನಿರಪಾಯಕರವಾಗುವಂತೆ ಹೇಗೆ ಮಾಡುತ್ತದೆಂದು ನೋಡಿರಿ

ನೀರಿನ ಮೂಲಕ ಹರಡುವ ವಾಂತಿಭೇದಿ, ಟೈಫಾಯ್ಡ್, ಆಮಶಂಕೆ, ಜಠರದ ಮತ್ತು ಕರುಳಿನ ಊತ ಇತ್ಯಾದಿ ವ್ಯಾಧಿಗಳು ಬರದಂತೆ ತಡೆಯಲು ಇದಕ್ಕಿಂತ ಉತ್ತಮ ಉಪಾಯ ಇನ್ನೊಂದಿಲ್ಲ.







ಎಚ್ಚರಿಕೆ
ನಿಜವಾದ ಪ್ಯೂರಿಟಸ್ ಫಿಲ್ಟರ್ ನಿಮಗೆ ಸಿಗುತ್ತದೆಂದು ಖಾತ್ರಿ ಮಾಡಿಕೊಳ್ಳಿರಿ. ಮೇಲಿನ ಅರೆಯ ಪ್ಯೂರಿಟಸ್ ಲೇಬಲನ್ನು ಗಮನಿಸಿರಿ. ... ಪ್ಯೂರಿಟಸ್ ಹೆಸರು ಮತ್ತು ರಿಜಿಸ್ಟರ್ಡ್ ನಂಬರ್ 196501 ಇರುವುದನ್ನು ನೋಡಿಕೊಳ್ಳಿರಿ.

ನಿಮ್ಮ ಪರ ಕ್ಷೇಮಕ್ಕಾಗಿ ಮುಂಜಾಗ್ರತೆ ವಹಿಸಿ. ಇಂದೇ ಪ್ಯೂರಿಟಸ್ ಕೊಳ್ಳಿರಿ.

ಬಲ್ಸಾರಾ
ಸುಖಮಯ ಜೀವನಕೆ ಆಧುನಿಕ ಸಾಧನಗಳು
BALSARA ಬಲ್ಸಾರಾ ಅಂಡ್ ಕಂಪನಿ (ಪ್ರೈ.) ಲಿ.

BLS-18-KAN

ಎಂದರೆ ಎತ್ತರದ ದಷ್ಟಪುಷ್ಟ ಆಸಾಮಿ ಎಂದು ಅನೇಕರ ಕಲ್ಪನೆ. ಸೈನ್ಯದ ನೂರೆಂಟು ಜರ್ಮನ್ ಚಾವಟಿಗಳನ್ನು ಹಚ್ಚಿಕೊಂಡ ಸಮವಸ್ತ್ರದಲ್ಲಿರುವ ಕಲ್ಲಿ ಮೀಸೆಯ ಆಕಾರವೆಂದೂ ಬಹು ಜನರು ಊಹಿಸಿರಬಹುದು. ಅಮೇರಿಕದಲ್ಲಿ ಸಹ ನನ್ನನ್ನು ಕಂಡವರು ನನ್ನ ಬಗ್ಗೆ ಇಂಥ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ನಾನು ತರಬೇತಿ ಹೊಂದಿದ ಸೈನಿಕನಲ್ಲ; ಆಜನ್ಮ ಸೈನಿಕ.

*

ಹಿಂದುಸ್ತಾನೀ ಸೇವಾದಲವು ಜನ್ಮತಳೆದ ನಂತರ ದೇಶವನ್ನೆಲ್ಲ ನಾನು ಸುತ್ತಾಡಿದೆ. ಪ್ರತಿಯೊಂದು ಪ್ರಾಂತದಲ್ಲಿ ಸೇವಾದಲದ ಶಾಖೆಗಳನ್ನು ಪ್ರಾರಂಭಿಸಲಾಯಿತು. ತರುಣ ತರುಣಿಯರಿಗೆ ತರಬೇತಿ ಕೊಡಲು ದೇಶದ ಬೇರೆ ಬೇರೆ ಭಾಗಗಳಲ್ಲಿ ಶಿಬಿರಗಳನ್ನು ತೆರೆಯಲಾಯಿತು. ಲಕ್ಷಾವಧಿ ತರುಣ ತರುಣಿಯರು ಈ ಶಿಬಿರಗಳಲ್ಲಿ ತರಬೇತಿ ಪಡೆದು ಶಿಸ್ತಿನ ಸೈನಿಕರಾಗಿ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಲು ಸನ್ನದ್ಧರಾದರು.

೧೯೩೦ರಲ್ಲಿ ಗಾಂಧೀಜಿಯವರು ಉಪ್ಪಿನ ಸತ್ಯಾಗ್ರಹ ಹೂಡಿದಾಗ ನಮ್ಮ ಈ ಸೇವಾದಲದ ಸೈನಿಕರು ವಹಿಸಿದ ಪಾತ್ರ ಅವರ್ಣನೀಯವಾಗಿತ್ತು. ಲಕ್ಷಾವಧಿ ತರುಣ ತರುಣಿಯರು ಸೆರೆಮನೆ ಕಂಡರು.

ಗಾಂಧೀಜಿ ಮತ್ತು ಲಾರ್ಡ್ ಐರ್ವಿನ್ ಇವರ ನಡುವೆ ಒಪ್ಪಂದವಾದುದರಿಂದ ಎಲ್ಲ ಬಂಧಿತರೂ ಬಿಡುಗಡೆ ಹೊಂದಿದರು. ಆದರೆ ೧೯೩೧ರ ಕೊನೆಗೆ ಮತ್ತೆ ಆಂದೋಲನ ಪ್ರಾರಂಭವಾದಾಗ ಸರಕಾರವು ದುರ್ದಮ್ಯವಾದ ದಬ್ಬಾಳಿಕೆ ನಡೆಸಿತು. ಕಾಂಗ್ರೆಸ್‌ನೊಂದಿಗೆ ಹಿಂದುಸ್ತಾನೀ ಸೇವಾದಲವೂ ಅಕ್ರಮ ಸಂಸ್ಥೆಯೆಂದು ಸಾರಲ್ಪಟ್ಟಿತು. ಸೇವಾದಲದ ಆಸ್ತಿಪಾಸ್ತಿಗಳು, ಅದಕ್ಕೆ ಹೊಂದಿಕೊಂಡಿದ್ದ ಟಿಳಕ ಗ್ರಂಥ ಸಂಗ್ರಹಾಲಯ ಇವೆಲ್ಲವುಗಳನ್ನೂ ಸರಕಾರವು ವಶಪಡಿಸಿಕೊಂಡಿತು. ಈ ಟಿಳಕ ಗ್ರಂಥ ಸಂಗ್ರಹಾಲಯವನ್ನು ನಾನು ಒಂದು ಸಾವಿರ ಗ್ರಂಥಗಳಿಂದ ಶೇವಡೆಯವರ ಮನೆಯಲ್ಲಿ ಪ್ರಾರಂಭಿಸಿದ್ದೆ. ೧೯೩೧ರ ಹೊತ್ತಿಗೆ ಪುಸ್ತಕಗಳ ಸಂಖ್ಯೆ ೬೦೦೦ಕ್ಕೇರಿತು. ಆಗ ಅದನ್ನೊಂದು ಸಾರ್ವಜನಿಕ ಟ್ರಸ್ಟ್ ಆಗಿ ರಜಿಸ್ಟರ್ ಮಾಡಿಸಿದೆ. ಸರಕಾರ ವಶಪಡಿಸಿಕೊಂಡಾಗ ಅದರಲ್ಲಿ ಸುಮಾರು ೧೫೦೦೦ ರೂಪಾಯಿ ಬೆಲೆಯ ಪುಸ್ತಕಗಳಿದ್ದವು. ೧೯೪೬ರಲ್ಲಿ ಅದರ ಮೇಲಿನ ನಿರ್ಬಂಧವನ್ನು ಹಿಂತೆಗೆದುಕೊಂಡಾಗ ಅದರ ಹೆಸರಿನ ಹೊರತು ಬೇರೇನೂ ನಮ್ಮ ಕೈಗೆ ಬರಲಿಲ್ಲ.

ಸೇವಾದಲ ಸಂಘಟನೆಗೆ ಕಾಕಿನಾಡಾ ಕಾಂಗ್ರೆಸ್ ಅಧಿವೇಶನದಲ್ಲಿ ಮನ್ನಣೆ ದೊರೆಯಿತಾದರೂ ಅದು ಸ್ವತಂತ್ರವಾಗಿಯೇ ಕೆಲಸ ಮಾಡುತ್ತಿತ್ತು. ೧೯೩೧ರ ಜುಲೈ ತಿಂಗಳಲ್ಲಿ ಸೇರಿದ್ದ ಕಾಂಗ್ರೆಸ್ ಕಾರ್ಯಸಮಿತಿಯ ಸಭೆ ಸೇವಾದಲವು ಕಾಂಗ್ರೆಸ್ಸಿನ ಅಂಗಸಂಸ್ಥೆ ಆಗಬೇಕೆಂದು ಸೂಚಿಸಿತು. ೧೯೩೧ರ ಆಗಸ್ಟ್ ೯ ರಂದು ಮುಂಬಯಿಯಲ್ಲಿ ಸೇರಿದ್ದ ಸೇವಾದಳದ ವಿಶೇಷ ಪರಿಷತ್ತು ಈ ಸೂಚನೆಯನ್ನು ಸ್ವೀಕರಿಸಿತು. ಮಹಾತ್ಮಾ ಗಾಂಧಿಯವರು ಈ ಪರಿಷತ್ತಿನ ಅಧ್ಯಕ್ಷತೆ ವಹಿಸಿದ್ದರು. ಅಂದಿನಿಂದ ಸೇವಾದಲ ಕಾಂಗ್ರೆಸ್ಸಿನ ನೇರ ನಿರ್ದೇಶನದಲ್ಲಿ ಕೆಲಸ ಮಾಡಲಾರಂಭಿಸಿತು.

೧೯೩೧ರಲ್ಲಿ ಗಾಂಧೀಜಿಯವರು ಕಾಂಗ್ರೆಸ್ ಮತ್ತು ಸೇವಾದಲಗಳಲ್ಲಿಯ ಸಂಬಂಧಗಳನ್ನು ಕುರಿತು ಚರ್ಚಿಸಲು ನನ್ನನ್ನು ಎರಡು ಸಲ ಕರೆಸಿದ್ದರು. ಅವರೊಡನೆ ಚರ್ಚಿಸಿದ ನಂತರ ನಾನು ಪಂಡಿತ ಜವಾಹರಲಾಲರೊಡನೆ ಸಮಾಲೋಚನೆ ನಡೆಸಿದೆ. ಸೇವಾದಲವನ್ನು ಕಾಂಗ್ರೆಸ್ಸಿಗೆ ಒಪ್ಪಿಸಿಬಿಡಬೇಕೆಂಬ ನಿರ್ಣಯವನ್ನು ನಾವಿಬ್ಬರೂ ಕೂಡಿ ಸ್ವೀಕರಿಸಿದೆವು.

ಹಿಂದುಸ್ತಾನೀ ಸೇವಾದಳದಲ್ಲಿ 'ಮಹಿಳಾ ವಿಭಾಗವನ್ನು ಪ್ರಾರಂಭಿಸಬೇಕೆಂಬುದು ನನ್ನ ಅಪೇಕ್ಷೆಯಾಗಿತ್ತು. ೧೯೨೩ರಿಂದಲೂ ನಾನು ಈ ದಿಸೆಯಲ್ಲಿ ಪ್ರಯತ್ನ ನಡೆಸುತ್ತಲೇ ಇದ್ದೆ. ಆದರೆ ಸೇವಾದಳದ ಅಖಿಲ ಭಾರತ ಮಂಡಳಿಯ ಕೆಲ ಸದಸ್ಯರು ನನ್ನನ್ನು ನಿರುತ್ಸಾಹಗೊಳಿಸಿದರು. ಆದರೂ ೧೯೨೯ರಲ್ಲಿ ಲಾಹೋರಿನಲ್ಲಿ ನನಗೆ ಜಯ ಲಭಿಸಿತು. ಅಖಿಲ ಭಾರತ

ಮುಂಬಯಿಯಲ್ಲಿಯ ಮಹಿಳಾಸದಸ್ಯರು ತಮ್ಮದೇ ಒಂದು ಸಮಿತಿಯನ್ನು ರಚಿಸಿಕೊಂಡು ಭಾರತೀಯ ಮಹಿಳೆಯರ ತರಬೇತಿ, ಶಿಸ್ತು ಮತ್ತು ಸಂಘಟನೆಯ ಹೊಣೆ ನಿರ್ವಹಿಸಬೇಕೆಂದು ನಿರ್ಣಯಿಸಲಾಯಿತು. ೧೯೩೦ರ ಉಪ್ಪಿನ ಸತ್ಯಾಗ್ರಹ ಸಮಯದಲ್ಲಿ ಮುಂಬಯಿಯಲ್ಲಿಯ ಕೆಲ ಮಹಿಳೆಯರು ಸೇವಿಕಾದಳವೊಂದನ್ನು ಪ್ರಾರಂಭಿಸಿ ತರಬೇತಿಪಡೆದರು. ಅವರು ಸತ್ಯಾಗ್ರಹ ನಡೆಸಿ ಜೇಲಿಗೆ ಹೋದರು. ೧೯೩೧ ಮತ್ತು ೧೯೩೨ರಲ್ಲಿ ಈ ಸೇವಿಕಾದಳದವರು ಮುಂಬಯಿಯಲ್ಲಿ ಚೆನ್ನಾಗಿ ಕೆಲಸ ಮಾಡಿದರು.

ಸೇವಾದಳದ ಕೇಂದ್ರ ಮಹಿಳಾ ಸಮಿತಿಯನ್ನು ವಿಸ್ತರಿಸಬೇಕೆಂದು ೧೯೩೧ ರಲ್ಲಿ ಕರಾಚಿಯಲ್ಲಿ ಸೇರಿದ ಸಭೆಯಲ್ಲಿ ನಿರ್ಧರಿಸಲಾಯಿತು. ಆ ಮೇಲೆ ದೇಶದಾದ್ಯಂತ ಮಹಿಳಾ ಸಂಘಟನಾ ಪ್ರಯತ್ನ ನಡೆಯಿತು. ಈ ಪ್ರತಿನಿಧಿಗಳು ಎರಡು ಸಲ ಸಭೆ ಸೇರಿಸಿದರು. ಕಮಲಾದೇವಿ ಚಟ್ಟೋಪಾಧ್ಯಾಯರು ಮತ್ತು ಮುಂಬಯಿಯ ಇನ್ನಿತರ ಮಹಿಳೆಯರು ಈ ಕೆಲಸದಲ್ಲಿ ಮಹತ್ವದ ಪಾತ್ರ ವಹಿಸಿದರು. ಕಾಂಗ್ರೆಸ್ಸು ಸೇವಾದಳವನ್ನು ತನ್ನ ವಶಕ್ಕೆ ತೆಗೆದುಕೊಂಡ ಕೂಡಲೇ ನಾನು ಮತ್ತು ಪಂ. ಜವಾಹರಲಾಲ ನೆಹರು ಇಬ್ಬರೂ ಮಹಿಳಾ ವಿಭಾಗದ ಸಂಘಟನೆಗಾಗಿ ಯತ್ನಿಸಿದೆವು. ಕಾಂಗ್ರೆಸ್ ಕಾರ್ಯ ಸಮಿತಿ ಈ ಯೋಜನೆಗೆ ಒಪ್ಪಿಗೆ ನೀಡಿತು. ಕಮಲಾದೇವಿ ಚಟ್ಟೋಪಾಧ್ಯಾಯ, ಸೋಫಿಯಾ ಸೋಮಜಿ ಮತ್ತು ನಾನು ಉತ್ತರ ಮತ್ತು ದಕ್ಷಿಣ ಭಾರತಗಳಲ್ಲಿ ಸಂಚರಿಸಿದೆವು. ಮುಂಬಯಿ ಹತ್ತಿರ ಮಾಟುಂಗಾದಲ್ಲಿ ಮಹಿಳೆಯರ ತರಬೇತಿ ಶಿಬಿರವೊಂದನ್ನು ನಡೆಸಿದೆವು. ೧೯೩೭ರಲ್ಲಿ ಇದು ಸಹ ಅಕ್ರಮ ಕೂಟವೆಂದು ಸಾರಲ್ಪಟ್ಟಿತು.

ಸ್ವಯಂಸೇವಕ ಸಂಘಟನೆಯನ್ನು ಹೆಚ್ಚಿನ ಪರಿಣತಿ ಪಡೆಯುವವರಿಗಾಗಿ ೧೯೨೩ ರಲ್ಲೇ ಹುಬ್ಬಳ್ಳಿಯಲ್ಲಿ 'ಪ್ರಬುದ್ಧ ವರ್ಗ' ಎಂಬ ವ್ಯವಸ್ಥೆಯನ್ನು ಪ್ರಾರಂಭಿಸಲಾಗಿತ್ತು. ೧೯೩೪ರಲ್ಲಿ ಸೇವಾದಳದ ವರ್ಗ ಮತ್ತು ಶಿಬಿರಗಳನ್ನು ಎಲ್ಲೆಡೆಗೆ ಪ್ರಾರಂಭಿಸಿದ್ದರಿಂದ ಇದನ್ನು ನಿಲ್ಲಿಸಿಬಿಡಲಾಯಿತು.

'ವಾಲಂಟಿಯರ್' ಎಂಬ ಇಂಗ್ಲಿಷ್ ಮಾಸ ಪತ್ರಿಕೆಯನ್ನು ನಾನು ಬೆಳಗಾವಿ ಕಾಂಗ್ರೆಸ್ ಅಧಿವೇಶನ ಮುಗಿದೊಡನೆಯೇ ಪ್ರಾರಂಭಿಸಿದೆ. ಅದರಲ್ಲಿ ಕೆಲ ಪುಟಗಳನ್ನು ಹಿಂದಿಗಾಗಿ ಮೀಸಲಾಗಿರಿಸಲಾಗುತ್ತಿತ್ತು. ಸೇವಾದಳದ ವಿಚಾರವನ್ನು ಸಾರ್ವಜನಿಕರಲ್ಲಿ ಪ್ರಚುರಪಡಿಸುವದಲ್ಲದೆ ಸ್ವಯಂಸೇವಕ ಚಳುವಳಿಯನ್ನು ಕುರಿತಾಗಿ ಭಾರತದಲ್ಲಿ ಸಾಹಿತ್ಯವನ್ನು ನಿರ್ಮಿಸುವದೂ ಇದರ ಉದ್ದೇಶವಾಗಿತ್ತು. ಕಿಸೆಯಲ್ಲಿ ಒಂದು ಪೈ ಸಹ ಇಲ್ಲದೆ ನಾನು ಈ ಪತ್ರಿಕೆಯನ್ನು ಪ್ರಾರಂಭಿಸಿದೆ. ಮುದ್ರಕರಾದ ಧಾರವಾಡದ ಶ್ರೀ ವಾಯ್. ವಿ. ಜತಾರರು ಈ ಕಾರ್ಯದಲ್ಲಿ ನನಗೆ ಬಹಳಷ್ಟು ಸಹಾಯ ನೀಡಿ ಪ್ರೋತ್ಸಾಹಿಸಿದರು. ಅವರ ನೆರವಿಲ್ಲದೆ ಹೋಗಿದ್ದರೆ ಈ ಮಾಸಪತ್ರಿಕೆಯನ್ನು ಪ್ರಕಟಿಸುವುದೇ ನನ್ನಿಂದ ಸಾಧ್ಯವಾಗುತ್ತಿರಲಿಲ್ಲ. ಮೊದಲ ಮೂರು ವರ್ಷಗಳವರೆಗೆ ನಾನು ಇದನ್ನು ಧಾರವಾಡದಲ್ಲೇ ಮುದ್ರಿಸುತ್ತಿದ್ದೆ. ನಂತರ

ಉಚಿತ! ಉಚಿತ!! ಉಚಿತ!!!

ಬಿಳಿ ಕಲೆ

ನಮ್ಮ ಚಿಕಿತ್ಸೆ ಸುರುವಾದ ಕ್ಷಣದಿಂದಲೇ ಕಲೆಯು ಬಣ್ಣ ಬದಲಾಯಿಸಲಾರಂಭಿಸುತ್ತದೆ. ನೀವೇ ಪರೀಕ್ಷಿಸಿ ನೋಡಿರಿ—ಚಿಕಿತ್ಸೆಯು ಎಷ್ಟೊಂದು ಫಲದಾಯಕವೆಂದು? ರೋಗಿ ವಿವರಣೆ ಬರೆದು ಪ್ಯಾಕೆಟೊಂದನ್ನು ಉಚಿತವಾಗಿ ತರಿಸಿಕೊಳ್ಳಿರಿ.

LALIT AYURVEDIC PHARMACY (51)
P.O. KATRI SARAI (GAYA)

ಅದನ್ನು ಮುಂಬಯಿಗೆ ಒಯ್ದೆ. ೧೯೩೦ ರ ಎಪ್ರಿಲ್ ವರೆಗೂ ಅದು ಪ್ರಕಟವಾಗುತ್ತಿತ್ತು. ಆಗ ಸತ್ಯಾಗ್ರಹ ಚಳವಳಿಯಿಂದಾಗಿ ಅದು ನಿಂತು ಹೋಯಿತು. 'ವಾಲಂಟಿಯರ್' ಪತ್ರಿಕೆಗಾಗಿ ನನ್ನ ಅನೇಕ ಸ್ನೇಹಿತರು ನನಗೆ ನೆರವು ನೀಡಿದರು. ಆದರೂ ಅದರ ಹಾನಿ ತುಂಬಿ ಬರಲಿಲ್ಲ. ವೆಚ್ಚವೆಂದೂ ಬಾಯಿಗೂಡಲಿಲ್ಲ. ನಾನು ಅದಕ್ಕಾಗಿ ಸಾಲ ಹೊರಬೇಕಾಯಿತು. ಅನೇಕರ ನಿಷ್ಠುರವನ್ನೂ ಕಟ್ಟಿಕೊಳ್ಳಬೇಕಾಯಿತು. ೧೯೩೧ರಲ್ಲಿ ಅದನ್ನು ಮತ್ತೆ ಪ್ರಾರಂಭಿಸಬೇಕೆಂದು ಕೆಲ ಸ್ನೇಹಿತರು ಮತ್ತು ಸಹೋದ್ಯೋಗಿಗಳು ಇಚ್ಛೆಪಟ್ಟರು. ಆದರೆ ಅಂದಿನ ರಾಜಕೀಯ ಪರಿಸ್ಥಿತಿಯ ಅನಿಶ್ಚಿತತೆಯಿಂದಾಗಿ ಅದು ಸಾಧ್ಯವಾಗಲಿಲ್ಲ.


ಬಾಗಲಕೋಟೆಯಲ್ಲಿಯ ನನ್ನ ಸ್ನೇಹಿತರೊಬ್ಬರು ವ್ಯಾಯಾಮಶಾಲೆ ಕಟ್ಟಿಸಬೇಕೆಂದು ಹೇಳಿ ನನಗೊಂದು ನಿವೇಶನವನ್ನು ಕೊಟ್ಟರು. ದಾನಪತ್ರ ಕೊಟ್ಟಂದಿನಿಂದ ಎರಡು ವರ್ಷಗಳೊಳಗಾಗಿ ಅದರ ನಿರ್ಮಾಣ ಆಗಬೇಕೆಂಬುದು ಅವರ ಕರಾರಾಗಿತ್ತು. ಆದ್ದರಿಂದ ಅದಕ್ಕಾಗಿ ನಾನು ಕೂಡಲೇ ನಿಧಿ ಸಂಗ್ರಹ ಆರಂಭಿಸಬೇಕಾಯಿತು. ಆ ವ್ಯಾಯಾಮ ಶಿಕ್ಷಣ ಸಂಸ್ಥೆಯ ಕಟ್ಟಡದ ಶಂಕುಸ್ಥಾಪನೆ ೧೯೨೭ ರ ನವಂಬರ್ ೨೦ ರಂದು ಹೈದರಾಬಾದಿನ ಶ್ರೀ ವಾಮನರಾವ ನಾಯಕ ಎಂಬವರ ಹಸ್ತದಿಂದ ನೆರವೇರಿತು. ಅದೇ ನಗರದ ರಾಜಾ ಧನರಾಜ ಗರಜಿ ಬಹಾದೂರ ಎಂಬವರು ಈ ಕಟ್ಟಡಕ್ಕಾಗಿ ೩,೦೦೦ ರೂ. ದೇಣಿಗೆ ನೀಡಿದರು. ೧೯೨೮ ರ ಅಗಸ್ಟ ೧ ರಂದು ಅವರ ಹಸ್ತದಿಂದಲೇ ಕಟ್ಟಡದ ಉದ್ಘಾಟನೆ ಆಯಿತು.

ಹಿಂದೂಸ್ತಾನೀ ಸೇವಾದಳದ ತರಬೇತಿ ಸಂಸ್ಥೆಯಾದ ಇದನ್ನು ೧೯೩೦ ರ ಚಳವಳಿ ಕಾಲಕ್ಕೆ ಸರಕಾರದವರು ವಶಕ್ಕೆ ತೆಗೆದುಕೊಂಡರು. ಸೇವಾದಲವು ಕಾಂಗ್ರೆಸ್ಸಿನ ಸಂಪೂರ್ಣ ಅಂಗಸಂಸ್ಥೆಯಾದಾಗ ಅದರ ಆಸ್ತಿವಿತ್ತಗಳೆಲ್ಲ ಅದಕ್ಕೆ ಒಪ್ಪಿಸಲ್ಪಟ್ಟವು. ಆದ್ದರಿಂದ ಈ ಸೇವಾದಳ ಕಟ್ಟಡವೂ ಕಾಂಗ್ರೆಸಿಗೆ ಸೇರಿದ್ದಾಯಿತು. ಇದಕ್ಕಾಗಿ ನಿಧಿ ಸಂಗ್ರಹಿಸಲು ನಾನು ಕರ್ನಾಟಕದಾದ್ಯಂತ ಸಂಚರಿಸಬೇಕಾಯಿತು. ಸುಮಾರು ೧೪,೦೦೦ ರೂಪಾಯಿ ಕೂಡಿಸಿ ವೆಚ್ಚ ಮಾಡಲಾಯಿತು. ಬೇರೆ ಬೇರೆ ಪ್ರಾಂತಗಳ ಅನೇಕ ಯುವಕರು ಇಲ್ಲಿಗೆ ಬಂದು ತರಬೇತಿ ಪಡೆದು ಹೋದರು. ಹೀಗಾಗಿ ಈ ಸೇವಾದಳ ಸಂಸ್ಥೆ ಅಖಿಲ ಭಾರತ ಕೇಂದ್ರವಾಗಿ ಪರಿಣಮಿಸಿತು.

೧೯೨೯ರಲ್ಲಿ ಇದೇ ಸ್ಥಳದಲ್ಲಿ ಕರ್ನಾಟಕ ಶರೀರ ಶಿಕ್ಷಣ ಪರಿಷತ್ತೊಂದು ನಡೆಯಿತು. ಬೆಂಗಳೂರಿನ ಪ್ರೊ. ಕೆ. ವಿ. ಅಯ್ಯರ್ ಅವರು ಅದರ ಅಧ್ಯಕ್ಷತೆ ವಹಿಸಿದ್ದರು. ಈ ಕಾರ್ಯವನ್ನು ಮುಂದುವರಿಸಬೇಕೆಂದು ನಾನು ಬಹಳ ಅಪೇಕ್ಷಿಪಟ್ಟಿದ್ದೆ. ಆದರೆ ೧೯೩೦ ರ ಚಳವಳಿಯಿಂದಾಗಿ ಅದನ್ನು ಅಲ್ಲಿಗೇ ಕೈಬಿಡಬೇಕಾಯಿತು. ಆದರೂ ೧೯೨೯ ರಲ್ಲಿ ಕರ್ನಾಟಕದಾದ್ಯಂತ ಶರೀರ ಶಿಕ್ಷಣ ಪ್ರಸಾರದ ಬಗ್ಗೆ ಸಾಕಷ್ಟು ಕಾರ್ಯ ನಡೆಯಿತು.

ಹಿಂದುಸ್ತಾನೀ ಸೇವಾದಳವು ದೇಶದ ತರುಣರಲ್ಲಿ ಮೂಡಿಸಿದ ದೇಶಾಭಿಮಾನ, ಸ್ಫೂರ್ತಿ, ಶಿಸ್ತು, ತ್ಯಾಗ, ಬಲಿದಾನಗಳ ಪ್ರಭಾವವು ಪುಟಕ್ಕೆ ಇಟ್ಟ ಬಂಗಾರದಂತೆ ಸರಕಾರದ ದಬ್ಬಾಳಿಕೆಯಿಂದ ಮತ್ತಷ್ಟು ತೇಜಸ್ವಿಯಾಯಿತು.

೧೯೩೦ರ ಉಪ್ಪಿನ ಸತ್ಯಾಗ್ರಹದ ಕಾಲಕ್ಕೆ ಅಗಸ್ಟ ೨ರಂದು ಮುಂಬಯಿಯಲ್ಲಿ ನನ್ನ ಬಂಧನವಾಯಿತು. ಆಗ ನಾನು ಕಾಂಗ್ರೆಸ್ ಕಾರ್ಯ ಸಮಿತಿಯ ಸದಸ್ಯನಾಗಿದ್ದೆ. ನನಗಾಗ ಮೂರು ತಿಂಗಳ ಸಾದಾ ಶಿಕ್ಷೆ ವಿಧಿಸಿದರು. ಅದೇ ವರ್ಷ ಡಿಸೆಂಬರ್ ೩೧ ರಂದು ಹುಬ್ಬಳ್ಳಿಯಲ್ಲಿ ಮತ್ತೆ ನನ್ನ ಬಂಧನವಾಯಿತು. ಆಗ ನನಗೆ ದಂಡ ಕೊಡದ ತಪ್ಪಿಗೂ ಸೇರಿ ಒಂಭತ್ತೂವರೆ ತಿಂಗಳ ಶಿಕ್ಷೆ ಆಯಿತು. ಆದರೆ ೧೯೩೧ರ ಜನೆವರಿ ೨೬ರಂದು ಕಾಂಗ್ರೆಸ್ ಕಾರ್ಯ ಸಮಿತಿಯ ಸದಸ್ಯರನ್ನೆಲ್ಲ ಬಿಡುಗಡೆ ಮಾಡಿದಾಗ ನನ್ನನ್ನೂ ಬಿಟ್ಟರು. ೧೯೩೨ ರ ಜನೆವರಿ ೧೬ ರಂದು ಮುಂಬಯಿಯಲ್ಲಿ ಮತ್ತೆ ನನ್ನನ್ನು ಬಂಧಿಸಿ ಹಿಂಡಲಗಿ ಜೇಲಿನಲ್ಲಿ ಎರಡು ತಿಂಗಳ ವರೆಗೆ ಸ್ಥಾನಬದ್ಧನನ್ನಾಗಿ ಇಟ್ಟರು. ಎರಡು ತಿಂಗಳ ಅವಧಿಯ ನಂತರ ನನ್ನ



ಭಾರತದಲ್ಲಿಯೇ ಪ್ರಥಮ ಬಾರಿಗೆ

ಜರ್ಮನ್ ತಾಂತ್ರಿಕತೆಯಿಂದ ತಯಾರಿಸಿದ್ದು ಅತ್ಯಂತ ವಿಶಾಲ ಪ್ರಸಂಶೆಗೆ ಪಾತ್ರವಾಗಿದೆ. ಅಗತ್ಯವೇಕಾದ ಹೊಸ ಬಟ್ಟೆ "ಪಾ ಲಿಟೆಕ್ಸ್" ಇಸ್ತ್ರಿ ಮಾಡುವುದು ಬೇಕಾಗಿಲ್ಲ.

ಪಕ್ಕಾ ಬಣ್ಣದ ಬಗ್ಗೆ ಗ್ಯಾರಂಟಿ

೧.೨೦ ಮೀಟರಿನ ಪ್ಯಾಂಟ ಪೀಸಿಗೆ ರೂ. ೩೫/- ೨ ಮೀಟರುಗಳ ಶರ್ಟ ಪೀಸಿಗೆ ರೂ. ೩೫/- ಅಂಚೆವೆಚ್ಚ ಉಚಿತ ಪ್ರತಿ ಗ್ರಾಮ ಮತ್ತು ನಗರಕ್ಕೂ ಕಳಿಸಬಹುದು. ನಮ್ಮ ಕಡೆಗೆ ಲಭ್ಯವಿದೆ. ಇಂದೇ ನಿಮ್ಮ ಆರ್ಡರ ಕೊಡಿರಿ.

MUFATLAL TEXTILES

153/1 Harinagar Ashram, NEW-DELHI-110014

ಹುಬ್ಬಳ್ಳಿಗೆ ಬಂದೆ. ಅಂದಿನವರೆಗೆ ನಾನು ಹುಬ್ಬಳ್ಳಿ ನಗರದ ಸ್ಥಾನಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದಿಲ್ಲ. ಏಕೆಂದರೆ ಹಿಂದುಸ್ತಾನೀ ಸೇವಾದಳದಂಥ ದೇಶವ್ಯಾಪೀ ಸಂಘಟನೆಯನ್ನು ವ್ಯವಸ್ಥಿತವಾಗಿ ಸಾಗಿಸಿಕೊಂಡು ಹೋಗುವ ದಕ್ಕಾಗಿ ನಾನು ಸದಾ ಕಾಲವೂ ಸಂಚಾರದಲ್ಲಿರುತ್ತಿದ್ದೆ. ಸೇವಾದಲದ ಮುಖ್ಯ ಕಚೇರಿ ಹುಬ್ಬಳ್ಳಿಯಲ್ಲಿ ಇದ್ದುದರಿಂದ ಆಗಾಗ ಅಲ್ಲಿಗೆ ಬಂದು ಹೋಗುತ್ತಿದ್ದೆ.

ಬ್ರಿಟಿಶ್ ಸರಕಾರವು ಕಾಂಗ್ರೆಸ್ಸಿನ ಮೇಲಿನ ನಿರ್ಬಂಧವನ್ನು ತೆಗೆದು ಹಾಕಿದರೂ ಹಿಂದುಸ್ತಾನೀ ಸೇವಾದಳದ ಮೇಲಿನ ನಿರ್ಬಂಧ ತೆಗೆಯದ್ದರಿಂದ ಅನಿವಾರ್ಯವಾಗಿ ನಾನು ಹಿಂದುಸ್ತಾನೀ ಸೇವಾದಳವನ್ನು ೧೯೩೪ರ ಎಪ್ರಿಲ್ ತಿಂಗಳಲ್ಲಿ ವಿಸರ್ಜಿಸಬೇಕಾಯಿತು.

*

ಅಮೇರಿಕದಿಂದ ಭಾರತಕ್ಕೆ ಮರಳಿ ಬಂದಾಗಿನಿಂದಲೂ ನಾನು ಮೈಸೂರು ಸಂಸ್ಥಾನದ ಮುಖಂಡರೊಡನೆ ಸಂಪರ್ಕ ಬೆಳೆಸಿಕೊಂಡಿದ್ದೆ. ಅನೇಕ ಜನ ಮಿತ್ರರು ನಾನು ಪ್ರಾರಂಭಿಸಿದ ಹಿಂದುಸ್ತಾನೀ ಸೇವಾದಳದ ಸಂಘಟನಾ ಕಾರ್ಯದಲ್ಲಿ ನೆರವಾಗುತ್ತಿದ್ದರು. ಮಾತ್ರವಲ್ಲದೆ ಮೈಸೂರಿನ ಅನೇಕ ಜನ ಸುಶಿಕ್ಷಿತ ತರುಣರು ಸೇವಾದಳದಲ್ಲಿ ಸೇರಿಕೊಂಡು ನನ್ನ ಕೆಲಸದಲ್ಲಿ ನೆರವಾಗುತ್ತಿದ್ದರು. ಕಾಂಗ್ರೆಸ್ಸಿನ ಚಟುವಟಿಕೆಗಳಲ್ಲೂ ಮೈಸೂರಿನ ಮುಖಂಡರು ಭಾಗವಹಿಸುತ್ತಿದ್ದರು. ಕಾಂಗ್ರೆಸ್ಸಿನ ಘಟನೆಯಲ್ಲಿ ಮೈಸೂರು ಸಂಸ್ಥಾನವು ಕರ್ನಾಟಕದ ಅಧೀನ ಪ್ರದೇಶವಾಗಿದ್ದುದರಿಂದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯಲ್ಲಿ ಮೈಸೂರಿನ ನನ್ನ ಮಿತ್ರರು ಪದಾಧಿಕಾರಿಗಳೂ ಆಗಿದ್ದರು. ಈ ರೀತಿಯಾಗಿ ಮೈಸೂರಿನ ಮುಖಂಡರ ಸಹಕಾರವು ನನಗೆ ೧೯೨೨ರಿಂದಲೂ ದೊರಕುತ್ತಿತ್ತು.

ಮೈಸೂರು ಪ್ರಗತಿಪರ ಸಂಸ್ಥಾನವಿದ್ದುದರಿಂದ ಅಲ್ಲಿ ಪ್ರಜಾಪ್ರತಿನಿಧಿ ಸಭೆಯು ೧೮೮೧ರಲ್ಲಿ ಅಸ್ತಿತ್ವದಲ್ಲಿ ಬಂದಿತ್ತು. ಮತ್ತು ೧೯೦೭ರಲ್ಲೇ ಮೈಸೂರು ವಿಧಾನಸಭೆ ಕಾರ್ಯ ಮಾಡುತ್ತಿತ್ತು. ಆದರೂ ಭಾರತದಲ್ಲಿ ರಾಷ್ಟ್ರೀಯ ಆಂದೋಲನವು ಪ್ರಖರವಾಗುತ್ತ ನಡೆದಂತೆ ರಾಜ್ಯದ ಆಡಳಿತದಲ್ಲಿ ಪ್ರಜಾಪ್ರತಿನಿಧಿಗಳಿಗೂ ಸ್ಥಾನವಿರಬೇಕೆಂಬ ಆಂದೋಲನವು ಮೈಸೂರು ಸಂಸ್ಥಾನದಲ್ಲಿ ಹಬ್ಬಿತು.

ನಾನು ನನ್ನ ಇತರ ಸಹಕಾರಿಗಳೊಡನೆ ಮೈಸೂರು ಸಂಸ್ಥಾನವನ್ನೆಲ್ಲ ಸುತ್ತಾಡಿ ಅಲ್ಲಿಯೂ ಕಾಂಗ್ರೆಸ್ ಸಮಿತಿಗಳನ್ನು ರಚಿಸಿದೆ. ಈ ಕಾರಣದಿಂದ ಮೈಸೂರಿನ ಅನೇಕ ಮುಖಂಡರ ಸಂಪರ್ಕವು ನನಗೆ ಬಂದಿತು. ಅವರೆಲ್ಲರೂ ಕಾಂಗ್ರೆಸ್ ಸಂಸ್ಥೆಯಲ್ಲಿ ಸೇರಿ ಅದನ್ನು ಬಲಪಡಿಸಬೇಕೆಂದು ಅವರನ್ನು ಕೇಳಿಕೊಂಡೆ. ಅಂದಿನವರೆಗೆ ಪ್ರಜಾಪಕ್ಷದ ಹೆಸರಿನಲ್ಲಿ ಕೆಲಸ ಮಾಡುತ್ತಿದ್ದ ಅವರು ತಮ್ಮ ತಮ್ಮೊಳಗೆ ವಿಚಾರ ನಡೆಸಿ ಎಲ್ಲರೂ ಕಾಂಗ್ರೆಸ್ ಪಕ್ಷ ಸೇರಬೇಕೆಂದು ನಿರ್ಧರಿಸಿದರು. ಮುಂದೆ ಅದಕ್ಕೆ ಅಖಿಲ ಭಾರತ ರಾಷ್ಟ್ರೀಯ ಮಹಾಸಭೆಯ ಅನುಮತಿಯೂ ದೊರೆಯಿತು.

ಮೈಸೂರಿನ ಆಡಳಿತದಲ್ಲಿ ಪ್ರಜಾಪ್ರತಿನಿಧಿಗಳಿಗೂ ಪ್ರಾತಿನಿಧ್ಯವಿರಬೇಕೆಂದು ಮೈಸೂರು ಸಂಸ್ಥಾನದಾದ್ಯಂತ ಉಗ್ರ ಆಂದೋಲನ ನಡೆಯಿತು. ಈ ಆಂದೋಲನದಲ್ಲಿ ಅನೇಕರು ಸೆರೆಮನೆ ಕಂಡರು; ಮತ್ತೆ ಅನೇಕರು ರಾಜ್ಯದಿಂದ ಗಡೀಪಾರು ಮಾಡಲ್ಪಟ್ಟರು. ಇವರಲ್ಲಿ ಅನೇಕರು ಹುಬ್ಬಳ್ಳಿಗೆ ಬಂದು ಅಲ್ಲಿಂದಲೇ ತಮ್ಮ ಚಟುವಟಿಕೆಗಳನ್ನು ನಡೆಸಿದರು. ಶ್ರೀ ಬಿ. ಎನ್. ಗುಪ್ತರನ್ನೂ ಅವರ 'ಪ್ರಜಾಮತ' ಪತ್ರಿಕೆಯನ್ನೂ ಸರಕಾರ ಬಹಿಷ್ಕರಿಸಿ ಅವರನ್ನು ಗಡೀಪಾರು ಮಾಡಿದ್ದರಿಂದ ಅವರು ಹುಬ್ಬಳ್ಳಿಗೆ ಬಂದು ನೆಲೆಸಿದರು. ಮತ್ತು ಕೆಲ ಕಾಲ ನಾನು ಅವರ 'ಪ್ರಜಾಮತ' ಪತ್ರಿಕೆಯ ಸಂಪಾದಕತ್ವವನ್ನು ವಹಿಸಿಕೊಂಡೆ.

ಹುಬ್ಬಳ್ಳಿ ನಗರ ಸಭೆಯ ಆಡಳಿತವು ಗುಂಪುಗಾರಿಕೆಯ ಶಿಕ್ಕಾಟದಿಂದ ಹದಗೆಟ್ಟಿತ್ತು. ಹೊಣೆಗಾರ ನಾಗರಿಕರು ಎಷ್ಟೇ ಪ್ರಯತ್ನ ಮಾಡಿದರೂ ಅದು ಸುಧಾರಿಸದೆ ದಿನದಿನಕ್ಕೆ ಅವ್ಯವಸ್ಥೆಯು ಹೆಚ್ಚುತ್ತ ಸಾಗಿದ್ದರಿಂದ ನಾಗರಿಕರು ನಗರಸಭೆಯ ಆಡಳಿತವು ರದ್ದಾಗಬೇಕೆಂದು ಆಂದೋಲನ ಹೂಡಿದ್ದರು. ಈ ಆಂದೋಲನದ

[illegible] ನಾನು ಕೈಹಾಕಿ ತೆಗೆದುಕೊಳ್ಳ-[illegible] ಒತ್ತಾಯಮಾಡಿದ್ದರಿಂದ ನಾನು ಅದಕ್ಕೆ ಒಪ್ಪಿಕೊಂಡೆ. ಪ್ರತಿಯೊಂದು ಓಣಿ ಕೇರಿಯಲ್ಲಿ [illegible] ಮಾಡಬೇಕಾಯಿತು.

ಹುಬ್ಬಳ್ಳಿ ನಗರಸಭೆ ರದ್ದಾಗಬೇಕೆಂಬ ಆಂದೋಲನ ಪ್ರಖರವಾಗುತ್ತ ಸಾಗಿ ಕೊನೆಗೆ ೧೯೩೯ರ ಜನೇವರಿ ೫ ರಂದು, ನಗರಸಭೆಯ ಆಡಳಿತವು ಸರಕಾರದ ವಶಕ್ಕೆ ಹೋಯಿತು. ಅವರ ಆಡಳಿತವನ್ನು ಸಾಗಿಸಿಕೊಂಡು ಹೋಗುವದಕ್ಕಾಗಿ ಸರಕಾರವು ಒಬ್ಬ ಆಡಳಿತಗಾರರನ್ನು ನಿಯಮಿಸಿತು. ಈ ಆಡಳಿತಗಾರರಿಗೆ ನಾಗರಿಕರ ಬೇಕು ಬೇಡಗಳನ್ನು ತಿಳಿಸುವದಕ್ಕಾಗಿಯೂ ನಗರ ಸುಧಾರಣೆಯ ಯೋಜನೆಗಳನ್ನು ಪ್ರಚಾರಪಡಿಸುವದಕ್ಕಾಗಿಯೂ ನಾಗರಿಕರಿಗೆ ಅವರ ಹಕ್ಕುಬಾಧ್ಯತೆಗಳನ್ನು ತಿಳಿಯಪಡಿಸುವದಕ್ಕಾಗಿಯೂ ೧೯[illegible]ರ ಜನೇವರಿ [illegible] ರಂದು 'ಹುಬಳಿ ಗೆಜೆಟ್' ಎಂಬ ಒಂದು ಪಾಕ್ಷಿಕ ಪತ್ರಿಕೆಯನ್ನು ನನ್ನ ಸಂಪಾದಕತ್ವದಲ್ಲಿ ಪ್ರಾರಂಭಿಸಿದೆ. ಈ ಪತ್ರಿಕೆಯು ಬರಬರುತ್ತ ಹೆಚ್ಚೆಚ್ಚು ಜನಪ್ರಿಯ ಆಗತೊಡಗಿದ್ದರಿಂದ ಸಾಪ್ತಾಹಿಕ ಪತ್ರಿಕೆಯನ್ನಾಗಿ ಮಾರ್ಪಡಿಸಿದೆ.

೧೯೪೭ರಲ್ಲಿ ಅದರ ಹೆಸರನ್ನು 'ಜಯ-[illegible]' ಎಂದು ನಾಮಾಂತರ ಮಾಡಿದೆ. ಅಂದಿನ ವರೆಗೆ ಈ ಪತ್ರಿಕೆಯನ್ನು ಬೇರೆ ಮುದ್ರಣಾಲಯದಲ್ಲಿ ಮುದ್ರಿಸಲಾಗುತ್ತಿತ್ತು. ಅದರಿಂದ ಅನಾನುಕೂಲತೆಯೂ ಬಹಳ ಆಗುತ್ತಿತ್ತು. ಈ ವಿಷಯವನ್ನು ನನ್ನ ಮಿತ್ರರಾದ ದಿವಂಗತ ಕಡೇಕಾರ ಗುರುರಾಯರಿಗೆ ತಿಳಿಸಿದಾಗ ಅವರು ಮುಂದಾಗಿ ತಮ್ಮ ಎಲ್ಲ ಮಿತ್ರರ ನೆರವಿನಿಂದ [illegible] ರೂಪಾಯಿಗಳನ್ನು ಸಂಗ್ರಹಿಸಿ ಕೊಟ್ಟರು. ಆ ಹಣದಿಂದ 'ಅಮರ ಮುದ್ರಣ' ಎಂಬ ಮುದ್ರಣಾಲಯವನ್ನು ಆರಂಭಿಸಿದೆ. ಮುಂದೆ ೧೯[illegible]ರಲ್ಲಿ 'ಜಯಂತ್ ಸೇವಾ ಟ್ರಸ್ಟ್' ಎಂಬ [illegible] ಸಂಸ್ಥೆಯನ್ನು ಸ್ಥಾಪಿಸಿ [illegible]ಣಾಲಯವನ್ನು ಆ ಸಂಸ್ಥೆಗೆ ಒಪ್ಪಿಸಿ [illegible]

ಈ ಮಧ್ಯೆ 'ಸಂಯುಕ್ತ ಕರ್ನಾಟಕವ' [illegible] ಸಂಯುಕ್ತ ಕರ್ನಾಟಕದ [illegible] ಶ್ರೀ ರಾಮಕೃಷ್ಣರಾವ್ ಆಮಟೆ ಅವರಿಗೆ ಈ ವಿಚಾರವನ್ನು ತಿಳಿಸಿ ಅವರ ಕಾರ್ಯಾಲಯಕ್ಕಾಗಿ ಒಂದು ಕಟ್ಟಡವನ್ನು ಕಟ್ಟಿಸಿಕೊಡಬೇಕೆಂದು ಕೇಳಿಕೊಂಡೆ. ಅವರು ಅದಕ್ಕೆ ಒಪ್ಪಿ ತಮ್ಮ ಕಂಪನಿಯ ಆವಾರದಲ್ಲಿ ಒಂದು ಕಟ್ಟಡವನ್ನು ಕಟ್ಟಿಸಿಕೊಟ್ಟರು. ಅದರಿಂದ 'ಸಂಯುಕ್ತ ಕರ್ನಾಟಕವು ೧೯[illegible]ರಿಂದ ಹುಬ್ಬಳ್ಳಿಯಿಂದ ಪ್ರಕಟವಾಗತೊಡಗಿತು. ಮತ್ತು ಮೊಹರೆಯವರ ಕಲ್ಪನೆಯಂತೆ ಅದರ ಪ್ರಸಾರವೂ ಭರದಿಂದ ಬೆಳೆಯತೊಡಗಿತು.

ನಗರದಲ್ಲಿಯ ಕೆಲ ಮಿತ್ರರು ಕೂಡಿಕೊಂಡು ಹುಬಳಿ ಎಜ್ಯುಕೇಶನ್ ಸೊಸೈಟಿ ಎಂಬ ಒಂದು ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಬೇಕೆಂದು ತಮ್ಮ ಯೋಜನೆಯನ್ನು ನನ್ನ ಮುಂದಿಟ್ಟರು. ಅದರಂತೆ ಅದು ಸ್ಥಾಪಿಸಲ್ಪಟ್ಟಿತು. ಅದರ ವತಿಯಿಂದ ಸಿಟಿ ಹೈಸ್ಕೂಲ್ ಎಂಬ ಮಾಧ್ಯಮಿಕ ಶಾಲೆಯನ್ನು ಪ್ರಾರಂಭಿಸಲಾಯಿತು.

ತರುಣ ಸಂಘಟನೆಯ ವಿಚಾರವಂತೂ ನನ್ನ ಜೀವನದ ಉಸಿರಿನಂತಾದುದರಿಂದ ೧೯೩೫-೩೬ರಲ್ಲಿ ಫ್ರೆಂಡ್ಸ್ ಸ್ಟಡಿ ಸರ್ಕಲ್ ಎಂಬ ಹೆಸರಿನಿಂದ ಒಂದು ಅಭ್ಯಾಸಮಂಡಳವನ್ನು ಆರಂಭಿಸಿದೆ. ಅದರ ಮುಖಾಂತರ ನಮ್ಮ ಸುಶಿಕ್ಷಿತ ಯುವಕರಿಗೆ ಭಾಷಣ, ಲೇಖನ, ದೇಶ ವಿದೇಶಗಳ ರಾಜಕೀಯ ಪರಿಸ್ಥಿತಿಯ ಬಗ್ಗೆ ವಿಚಾರ ವಿನಿಮಯ ಮೊದಲಾದ ವಿಷಯಗಳ ಅಭ್ಯಾಸ ಮಾಡುವ ಕೆಲಸಕ್ಕಾರಂಭವಾಯಿತು.

ಅಂದಿನ ವರೆಗೆ ಮೋಟಾರ್ ಸಾರಿಗೆ ವ್ಯವಸಾಯಗಾರರು ತಮ್ಮ ತಮ್ಮೊಳಗೆ ಸ್ಪರ್ಧೆ ನಡೆಸುತ್ತ ತೊಂದರೆಗೀಡಾಗುತ್ತಿದ್ದರು. ಅವರೆಲ್ಲರನ್ನೂ ಒಂದು ಸಂಘಟನೆಯ ಆಳವಿನಲ್ಲಿ

ತರಬೇಕೆಂದು ಅಲ್ಲಲ್ಲಿ ಮೋಟಾರ್ ಸಾರಿಗೆ ವ್ಯವಸಾಯಗಾರರ ಸಂಘಗಳನ್ನು ಪ್ರಾರಂಭಿಸಿದೆ.

ಅದೇ ಮೇರೆಗೆ ಹೋಟೆಲ್ ವ್ಯವಸಾಯಗಾರರು ದಿನವೊಂದಕ್ಕೆ ಹೊಸ ಹೊಸ ಕಾನೂನು ಕಟ್ಟಳೆಗಳಡಿ ಸಿಕ್ಕು ಒದ್ದಾಡುತ್ತಿದ್ದರು. ಅದಕ್ಕಾಗಿ ನಗರದಲ್ಲಿಯ ಎಲ್ಲ ಹೋಟೆಲ್ ವ್ಯವಸಾಯಗಾರರನ್ನು ಒಂದುಗೂಡಿಸಿ ಅವರದೊಂದು ಸಂಘವನ್ನು ಸ್ಥಾಪಿಸುವಂತೆ ಮಾಡಿದೆ.

ಹುಬ್ಬಳ್ಳಿ ನಗರದ ಜವಳಿ ಕಾರ್ಮಿಕರಲ್ಲಿಯೂ ಒಡೆಯರಲ್ಲಿಯೂ ವೇತನ ಸಂಬಂಧದಲ್ಲಿ ಘರ್ಷಣೆ ಉಂಟಾದುದರಿಂದ ಜವಳಿ ಕಾರ್ಮಿಕರ ಸಂಘವೊಂದನ್ನು ಸ್ಥಾಪಿಸಿದೆ.

೧೯೧೫ರಲ್ಲಿ ಧಾರವಾಡ ಜಿಲ್ಲಾ ಕಲೆಕ್ಟರರಾಗಿದ್ದ ಇಮ್ಯಾನ್ಯುಅಲ್ ಎಂಬವರ ಪತ್ನಿ ಶ್ರೀಮತಿ ರೇಚೆಲ್ ಇವರು ಕೇವಲ ಹೆಣ್ಣು ಮಕ್ಕಳಿಗೆ ಔಷಧೋಪಚಾರವನ್ನು ಒದಗಿಸುವದಕ್ಕಾಗಿ ಇಂಡಿಯನ್ ವಿಮೆನ್ಸ್ ಏಡ್ ಸೊಸೈಟಿ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಅದರ ನೇತೃತ್ವದಲ್ಲಿ ಹುಬ್ಬಳ್ಳಿ ನಗರದಲ್ಲಿ ಒಂದು ರುಗ್ಣಾಲಯವನ್ನು ಪ್ರಾರಂಭಿಸಿದ್ದರು. ಮೊದಲು ನಗರದ ದಾಜಿಬಾನ ಪೇಟೆಯಲ್ಲಿ ಒಂದು ಬಾಡಿಗೆಯ ಮನೆಯಲ್ಲಿ ಪ್ರಾರಂಭಿಸಲ್ಪಟ್ಟ ಈ ರುಗ್ಣಾಲಯವು ದಿನದಿನಕ್ಕೆ ಬೆಳೆಯುತ್ತ ಸಾಗಿ ೧೯೩೪—೩೫ರಲ್ಲಿ ತನ್ನದೇ ಆದ ಸ್ವಂತ ಕಟ್ಟಡವೊಂದರಲ್ಲಿ ಅದು ರುಗ್ಣ ಸೇವೆಯನ್ನು ನಡೆಸುತ್ತಿತ್ತು. ಬಿಹಾರ ಭೂಕಂಪದ ಕಾಲಕ್ಕೆ ಪರಿಹಾರ ಕಾರ್ಯದಲ್ಲಿ ನಾನು ತೊಡಗಿದಾಗ ಬೆಳಗಾವಿಯ ಡಾ. ಸಾವಿತ್ರಿಬಾಯಿ ಮಹಾಜನ ಇವರೂ ಸೇವಾಭಾವನೆಯಿಂದ ದುಡಿಯುವದಕ್ಕಾಗಿ ಮತ್ತು ಬಿಹಾರದ ಭೂಕಂಪದಿಂದ ಸಂತ್ರಸ್ತರಾದವರಿಗೆ ಔಷಧೋಪಚಾರದ ಸೇವೆ ಸಲ್ಲಿಸುವದಕ್ಕಾಗಿ ಬಂದಿದ್ದರು. ಅಲ್ಲಿ ಅವರು ಮಾಡುತ್ತಿದ್ದ ರುಗ್ಣಸೇವೆಯನ್ನು ನಾನು ನೋಡಿದ್ದೆ. ಇಂಥ ಉದಾರಹೃದಯಿಯೊಬ್ಬರು ಹುಬ್ಬಳ್ಳಿಯ ಹೆಂಗಸರ ಆಸ್ಪತ್ರೆಗೆ ದೊರೆತರೆ ಈ ಸಂಸ್ಥೆ ಇನ್ನಷ್ಟು ಜನಸೇವೆ ಮಾಡಲು ಶಕ್ಯವಾಗುವದೆಂದು ನನಗೆನಿಸಿತು. ಆದ್ದರಿಂದ ಹುಬ್ಬಳ್ಳಿಗೆ ಬರುವಂತೆ ನಾನವರ ಮನವೊಲಿಸಿದೆ. ಅವರು ಅದರಂತೆ ಹುಬ್ಬಳ್ಳಿಗೆ ಬಂದು ಈ ಆಸ್ಪತ್ರೆಯ ಕಾರ್ಯವನ್ನು ಕೈಯಲ್ಲಿ ತೆಗೆದುಕೊಂಡ ನಂತರ ಅಲ್ಲಿಗೆ ಶುಶ್ರೂಷೆಗೆ ಬರುವ ರೋಗಿಗಳ ಸಂಖ್ಯೆ ಬೆಳೆಯತೊಡಗಿತು. ಇದ್ದ ಕಟ್ಟಡ ಸಾಲದಂತಾಯಿತು. ಈ ಕೊರತೆಯನ್ನು ನೀಗಿಸುವದಕ್ಕಾಗಿ ಹುಬ್ಬಳ್ಳಿಯ ನನ್ನ ಮಿತ್ರರಿಗೆ ಈ ವಿಷಯ ತಿಳಿಸಿದಾಗ ಅನೇಕ ಜನ ದಾನಶೂರರು ಮುಂದೆ ಬಂದು ಕೊಡುಗೈಯಿಂದ ಧನ ಸಹಾಯ ಮಾಡಿ ವಿವಿಧ ಕಟ್ಟಡಗಳನ್ನು ಕಟ್ಟಿಸಿ ಕೊಟ್ಟರು. ಅಲ್ಲಿ ಒಂದು ಪರಿಚಾರಿಕೆಯರ ಶಿಕ್ಷಣ ಕೇಂದ್ರವನ್ನು ಪ್ರಾರಂಭಿಸಿದ್ದರಿಂದ ಅಲ್ಲಿ ಕಲಿಯಲು ಬಂದ ಪರಿಚಾರಿಕೆಯರ ವಾಸ್ತವ್ಯಕ್ಕಾಗಿ ಒಂದು ವಿಶಾಲವಾದ ಕಟ್ಟಡವನ್ನೂ ಉದಾರ ಹೃದಯಿಗಳೊಬ್ಬರು ಕಟ್ಟಿಸಿಕೊಟ್ಟರು.

ಅದೇ ಕಾಲಕ್ಕೆ ಕೇಂದ್ರ ಅಸೆಂಬ್ಲಿಗಳಿಗೂ ಚುನಾವಣೆಗಳು ನಡೆದವು. ಆಗ ಕರ್ನಾಟಕ ಪಾರ್ಲಿಮೆಂಟರಿ ಬೋರ್ಡಿನ ಕಾರ್ಯದರ್ಶಿಯನ್ನಾಗಿ ನನ್ನನ್ನು ನಿಯಮಿಸಿದ್ದರಿಂದ ಆ ಚುನಾವಣೆ ಕಾರ್ಯದಲ್ಲಿ ನಾನು ನನ್ನ ಮಿತ್ರ ಪರಿವಾರದೊಂದಿಗೆ ದುಡಿಯತೊಡಗಿದೆ. ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಬಹುಮತ ದೊರೆತದ್ದರಿಂದ ಇತರ ಪ್ರಾಂತಗಳಲ್ಲಿ ಕಾಂಗ್ರೆಸ್ ಮಂತ್ರಿಮಂಡಳಗಳು ಅಸ್ತಿತ್ವಕ್ಕೆ ಬಂದಂತೆ ಮುಂಬಯಿಯಲ್ಲಿಯೂ ಕಾಂಗ್ರೆಸ್ ಮಂತ್ರಿಮಂಡಳವು ಅಧಿಕಾರ ಸೂತ್ರ ವಹಿಸಿಕೊಂಡಿತು. ಮತ್ತು ಮದ್ಯಪಾನ ಪ್ರತಿಬಂಧ, ಶಿಕ್ಷಣ ಪದ್ಧತಿಯಲ್ಲಿ ಸುಧಾರಣೆ, ಲಂಚಗುಳಿತನ ನಿವಾರಣೆ ಇವೇ ಮೊದಲಾದ ಕಾರ್ಯಕ್ರಮಗಳನ್ನು ಪ್ರಾರಂಭಿಸಿದ್ದರಿಂದ ಆ ಕಾರ್ಯಗಳಲ್ಲಿ ಆಸಕ್ತಿ ವಹಿಸತೊಡಗಿದೆ.

ಅಷ್ಟರಲ್ಲಿ ದ್ವಿತೀಯ ಜಾಗತಿಕ ಯುದ್ಧ ಪ್ರಾರಂಭವಾಯಿತು. ಕಾಂಗ್ರೆಸ್ ಮಂತ್ರಿಮಂಡಳಗಳು ರಾಜೀನಾಮೆ ಕೊಟ್ಟು ಹೊರಬಿದ್ದವು. ಮಹಾತ್ಮಾ ಗಾಂಧಿಯವರು ವೈಯಕ್ತಿಕ ಸತ್ಯಾಗ್ರಹದ ಕಾರ್ಯಕ್ರಮವನ್ನು ಆರಂಭಿಸಿದರು. ಅದರಲ್ಲಿ ನನ್ನ ಅನೇಕ ಸಹೋದ್ಯೋಗಿ



PC-50 Kan

ಗಳು ಸೆರೆಮನೆ ಸೇರಿದರು. ಆದರೆ ನನ್ನ ಪ್ರಕೃತಿ ಆಗ ತೀರ ಕೆಟ್ಟಿದ್ದರಿಂದ ಮಹಾತ್ಮಾ ಗಾಂಧಿ ಅವರು ನನಗೆ ಸತ್ಯಾಗ್ರಹ ಮಾಡಲು ಅನುಮತಿ ಕೊಡಲಿಲ್ಲ ಮಾತ್ರವಲ್ಲ, ನಾನು ಸೇವಾಗ್ರಾಮದ ಆಶ್ರಮಕ್ಕೆ ಬಂದು ಚಿಕಿತ್ಸೆ ಪಡೆಯಬೇಕೆಂದು ಪತ್ರ ಬರೆದು ನನ್ನ ದಾರಿ ವೆಚ್ಚಕ್ಕಾಗಿ ಒಂದು ನೂರು ರೂಪಾಯಿಗಳನ್ನು ಸೇಠ ಜಮುನಾಲಾಲಜಿ ಅವರ ಹಸ್ತಾಂತರ ಕಳಿಸಿಕೊಟ್ಟರು. ಆದರೆ ನಾನು ಮನೆ ಬಿಡುವಂತಿರಲಿಲ್ಲ. ಆ ಹಣವನ್ನು ಹಾಗೇ ಕಳುಹಿಸಿ ಅವರ ಕ್ಷಮೆ ಕೋರಿದೆ.

ಸಣ್ಣವನಿದ್ದಾಗಿನಿಂದಲೂ ನಾನು ರೋಗಿಷ್ಟನೇ ಆಗಿದ್ದನೆಂದು ಕಂಡವರು ಹೇಳಿದ್ದನ್ನು ಕೇಳಿದ್ದೇನೆ. ಆಗಾಗ ನನಗೆ ಒಂದಿಲ್ಲೊಂದು ಜಡ್ಡಿನ ತೊಂದರೆ ಇದ್ದೇ ಇದೆ. ೧೯೦೧–೧೯೦೨ ರಷ್ಟು ಹಿಂದೆಯೇ ನನಗೆ ಪ್ಲೇಗ್ ಬಂದಿತ್ತು. ಅದರಿಂದಾಗಿ ನಾನು ಬಹಳ ದಿವಸ ಹಾಸಿಗೆ ಹಿಡಿದಿದ್ದೆ. ಇಸಬು ರೋಗವಂತೂ ನನ್ನನ್ನು ಸಾಕಷ್ಟು ಗಾಸಿಗೊಳಿಸಿದೆ. ೧೯೦೪ರಿಂದ ೧೯೧೪ರ ವರೆಗಿನ ಹತ್ತು ವರ್ಷಗಳ ಅವಧಿಯಲ್ಲಿ ಅದು ನನಗೆ ಏಕಪ್ರಕಾರವಾಗಿ ತೊಂದರೆ ಕೊಟ್ಟಿತು. ನನ್ನಿಂದಾಗಿ ಶೇಷಮೆಯವರ ಕುಟುಂಬದವರಿಗೆ ಸಹ ಸಾಕಷ್ಟು ತೊಂದರೆ ಆಗಿದೆ. ಅನೇಕ ಆಯುರ್ವೇದ ಮತ್ತು ಅಲೋಪಥಿ ಔಷಧಿಗಳನ್ನು ಪ್ರಯೋಗಿಸಿದ್ದಾಯಿತು. ಯಾವ ಫಲವೂ ಕಂಡು ಬರಲಿಲ್ಲ. ಅಮೇರಿಕದಲ್ಲಿದ್ದಾಗ ಮಿಶಿಗನ್ ವಿಶ್ವವಿದ್ಯಾಲಯದ ಆಸ್ಪತ್ರೆಯಲ್ಲಿ ವಾಯೋಲೆಟ್ ಕಿರಣ ಚಿಕಿತ್ಸೆ ನಡೆಯಿತು. ಏಳು ಸಲ ಈ ಶುಶ್ರೂಷೆ ನಡೆದಾಗ ಪರಿಣಾಮ ಕಂಡು ಬಂದಿತು. ಎಂಟು ವರ್ಷಗಳ ವರೆಗೆ ನನಗೆ ಅದರ ನೆನಪೇ ಉಳಿಯಲಿಲ್ಲ. ಆದರೆ ೧೯೨೨ ರ ಫೆಬ್ರುವರಿಯಲ್ಲಿ ಅದು ಮತ್ತೆ ಕಾಣಿಸಿಕೊಂಡಿತು. ಮತ್ತೆ ಅದೇ ಚಿಕಿತ್ಸೆ ನಡೆಸಿದೆ. ಮತ್ತೆ ಎಂಟು ವರ್ಷಗಳ ವಿಶ್ರಾಂತಿ. ೧೯೩೦ ರ ಎಪ್ರಿಲ್‌ನಲ್ಲಿ ಅಂಕೋಲಾದಲ್ಲಿ ಉಪ್ಪಿನ ಸತ್ಯಾಗ್ರಹದ ಸಂಘಟನೆಯಲ್ಲಿ ತೊಡಗಿದಾಗ ಮತ್ತೆ ಅದು ಕಾಣಿಸಿಕೊಂಡು ನನಗೆ ಸಾಕಷ್ಟು ತೊಂದರೆ ಕೊಟ್ಟಿತು. ಎಂಟು ತಿಂಗಳುಗಳ ವರೆಗೆ ಅದು ನನ್ನ ಕೆಲಸ ಕಾರ್ಯಗಳಿಗೆ ಅಡ್ಡಿ ಅಡಚಣೆಗಳ ನ್ನುಂಟುಮಾಡಿತು. ೧೯೩೦ರಲ್ಲಿ ನಾಸಿಕ ಜೇಲಿನಲ್ಲಿದ್ದಾಗ ಮತ್ತೆ ಉಲ್ಬಣಿಸಿದಾಗ ಡೀಪ್ ಎಕ್ಸರೇ ಚಿಕಿತ್ಸೆ ನಡೆಯಿತು. ಆ ಮೇಲೆ ಅದು ಮತ್ತೆ ತಲೆಯೆತ್ತಿಲ್ಲ.

೧೯೩೨ರಲ್ಲಿ ಸಾಬರಮತಿ ಜೇಲಿನಲ್ಲಿದ್ದಾಗ ನಾನು ಕಾಮಾಲೆ ರೋಗಕ್ಕೆ ಬಲಿಯಾದೆ. ಅದರಿಂದ ಯಕೃತ್ತಿಗೆ ಉಂಟಾದ ತೊಂದರೆ ಬಹುದಿನಗಳ ವರೆಗೆ ನೋವಿನ ರೂಪದಲ್ಲಿ ಉಳಿದುಕೊಂಡು ಬಂದಿತು. ೧೯೩೪ರಲ್ಲಿ ಬಿಹಾರದಲ್ಲಿ ಪರಿಹಾರ ಕಾರ್ಯದಲ್ಲಿ ತೊಡಗಿದಾಗಂತೂ ಈ ತೊಂದರೆಯಿಂದಾಗಿ ನಾನು ಏಕಪ್ರಕಾರವಾಗಿ ಇದರ ಚಿಕಿತ್ಸೆ ಪಡೆಯುತ್ತಲೇ ಇದ್ದೆ.

ಮೂಲವ್ಯಾಧಿಯೂ ನನಗೆ ಅಲ್ಪಪ್ರಮಾಣದಲ್ಲಿ ತೊಂದರೆ ಕೊಟ್ಟಿದೆ. ಸಾಬರಮತಿ ಜೇಲಿನಿಂದ ಬಿಡುಗಡೆ ಹೊಂದಿದ ಮೇಲೆ ನಾನು ಇದಕ್ಕಾಗಿ ಮುಂಬಯಿಯ ಕೆ. ಇ. ಎಂ. ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ಒಂದು ತಿಂಗಳವರೆಗೆ ಶುಶ್ರೂಷೆ ಪಡೆದೆ.

ದೈಹಿಕವಾಗಿ ನಾನು ದುರ್ಬಲನಾಗಿಯೇ ಇದ್ದೇನೆ. ಆದರೆ ೧೯೦೬ರಿಂದ ನಾನು ಬಹುದಿನಗಳ ವರೆಗೆ ವ್ಯಾಯಾಮ ಮಾಡುತ್ತಿದ್ದೆ. ೧೯೦೭ರಲ್ಲಿ ನಾನು ಹುಬ್ಬಳ್ಳಿಯಲ್ಲೇ ಕೆಲ ಶರೀರ ಶಿಕ್ಷಣ ಸಂಸ್ಥೆಗಳನ್ನು ಸಂಘಟಿಸಿದ್ದರಿಂದ ನಾನು ಆಗಾಗ ಅಲ್ಲಿಗೆ ಹೋಗಿ ಕೆಲ ವ್ಯಾಯಾಮಗಳನ್ನು ನಿಯಮಿತವಾಗಿ ಮಾಡುತ್ತಿದ್ದೆ. ಅಮೇರಿಕದಲ್ಲಿದ್ದಾಗ ಸಹ ನಾನು ಆಗಾಗ ವಿಹಾರ ಮಾಡಿಕೊಂಡು ವಾಯ್. ಎಂ. ಸಿ. ಎ. ಇಲ್ಲವೆ ವಿಶ್ವವಿದ್ಯಾಲಯದ ವ್ಯಾಯಾಮಶಾಲೆಗಳಿಗೆ ಹೋಗುವ ರೂಢಿ ಇಟ್ಟುಕೊಂಡಿದ್ದೆ. ಇದರಿಂದಾಗಿ ನಾನು ಉತ್ಸಾಹಪೂರ್ಣನಾಗಿ ಇರುವುದು ಸಾಧ್ಯವಾಗುತ್ತಿತ್ತಲ್ಲದೆ ನನ್ನಲ್ಲಿ ಕಷ್ಟಸಹಿಷ್ಣುತೆಯೂ ಬಂದಿತು. ಆಹಾರ, ನಿದ್ರೆ, ವಿಶ್ರಾಂತಿ ಇವುಗಳ ಅನಿಯಮಿತತನದಿಂದಾಗಿ ನನ್ನ ಆರೋಗ್ಯ ಆಗಾಗ ಕೆಟ್ಟದ್ದುಂಟು. ಇದರ ಅರಿವು ನನಗಿದೆ.

ಬಾಲ್ಯದಲ್ಲಿಯೂ ನಾನು ಸದೃಢನಾಗಿದ್ದಿಲ್ಲವಾದ್ದರಿಂದ ವಿಶೇಷ ಆಟ ನೋಟಗಳಲ್ಲಿ ನಾನು



ಹಾರ್ಲಿಕ್ಸ್
ನಿಮಗೆ ಬಹಳ ಅಗತ್ಯವಿರುವಾಗ
ಅತ್ಯುತ್ತಮ ಪೋಷಣೆ ನೀಡುತ್ತದೆ
Horlicks
THE IDEAL FOOD DRINK
ಗರ್ಭಿಣಿಯರಿಗೆ
ಪೌಷ್ಟಿಕ, ಜೀರ್ಣಿಸಿಕೊಳ್ಳಲು ಸುಲಭವಾದ ಆಹಾರ ಅಗತ್ಯ. ಆದ್ದರಿಂದ ಗರ್ಭಿಣಿಯರಿಗೆ ಹಾರ್ಲಿಕ್ಸ್ ಅತ್ಯಂತ ಮಾದರಿ ಆಹಾರ. ತಾಯಿಗೂ, ಮಗುವಿಗೂ ದೇಹ ನಿರ್ಮಿಸುವ ಪ್ರೋಟೀನುಗಳು ಮತ್ತು ಕಾರ್ಬೋಹೈಡ್ರೇಟ್‌ಗಳನ್ನು ಅದು ಸಮನಾದ ರೀತಿಯಲ್ಲಿ ಒದಗಿಸುತ್ತದೆ. ರಾತ್ರಿಯ ವೇಳೆ ತೆಗೆದುಕೊಂಡಲ್ಲಿ ಅದು ಮಲಬದ್ಧತೆಯನ್ನು ತಡೆಯುತ್ತದೆ ಮತ್ತು ಬೆಳಗಿನ ವೇಳೆಯ ಓಕರಿಕೆಯನ್ನು ತಪ್ಪಿಸುತ್ತದೆ.
ಅಸ್ವಸ್ಥತೆಯಲ್ಲಿ/ನಂತರ ಚೇತರಿಸಿಕೊಳ್ಳುವಾಗ
ಅಸ್ವಸ್ಥರಾದಾಗ ನಿಮ್ಮ ದೇಹವು ಅತ್ಯಮೂಲ್ಯವಾದ ಪ್ರೋಟೀನುಗಳನ್ನು ಮತ್ತು ಪೋಷಕಾಂಶಗಳನ್ನು ಕಳೆದುಕೊಳ್ಳುತ್ತದೆ. ಇದರಿಂದ ನಿಶ್ಶಕ್ತಿ ಉಂಟಾಗುತ್ತದೆ. ಹಾರ್ಲಿಕ್ಸ್ ಜೀವಕಣಗಳನ್ನು ನಿರ್ಮಿಸುವ ಪ್ರೋಟೀನುಗಳನ್ನು, ದೇಹಕ್ಕೆ ಶಕ್ತಿ ನೀಡುವ ಕಾರ್ಬೋಹೈಡ್ರೇಟ್‌ಗಳನ್ನು ಮತ್ತು ಖನಿಜಾಂಶಗಳನ್ನು, ಜೀರ್ಣಿಸಿಕೊಳ್ಳಲು ಸುಲಭವಾದ ರೂಪದಲ್ಲಿ ಒದಗಿಸುತ್ತದೆ. ಇದರಿಂದ ಅದು ದೇಹವು ಕಳೆದುಕೊಂಡಿದ್ದ ಪೋಷಕಾಂಶಗಳನ್ನು ತುಂಬಿಕೊಡುತ್ತದೆ. ಬೇಗನೆ ಗುಣಹೊಂದಲು ನೆರವಾಗುತ್ತದೆ. ಪುನಃ ಅಸ್ವಸ್ಥರಾಗದಂತೆ ನೋಡಿಕೊಳ್ಳಲು ರೋಗನಿರೋಧಕ ಶಕ್ತಿಯನ್ನು ನಿರ್ಮಿಸುತ್ತದೆ.
ಇದರಲ್ಲಿ ಆರೋಗ್ಯ ತುಂಬಿದೆ ಹಾರ್ಲಿಕ್ಸ್.
ಹಾರ್ಲಿಕ್ಸ್ ಒಂದು ರಿಜಿಸ್ಟರ್ಡ್ ಟ್ರೇಡ್ ಮಾರ್ಕ್

ಆಸ್ಥೆ ತೋರಿಸುತ್ತಿರಲಿಲ್ಲ. ತುಂಟ ಪುಂಡ ಹುಡುಗರೊಡನೆ ಬೆರೆಯುವದಂತೂ ನನ್ನಿಂದ ಆಗುತ್ತಲೇ ಇರಲಿಲ್ಲ. ಸಾಮಾನ್ಯವಾಗಿ ನಾನು ಏಕಾಂಗಿಯಾಗಿ ಏಕಾಂತಪ್ರಿಯನಾಗಿ ಇರುತ್ತಿದ್ದೆ. ಗೋಲಿ, ಚೆಂಡು ಮುಂತಾದ ಆಟಗಳನ್ನು ಮಾತ್ರ ಆಡುತ್ತಿದ್ದೆ. ಕಠಿಣವಾದ ಶರೀರಶ್ರಮದ ವಿಶೇಷ ಆಟಗಳಲ್ಲಿ ಭಾಗವಹಿಸುತ್ತಿರಲಿಲ್ಲ. ಧಾರವಾಡದಲ್ಲಿದ್ದಾಗ ಕೆಲ ತಿಂಗಳು ಕ್ರಿಕೆಟ್ ಮತ್ತು ಹುಬ್ಬಳ್ಳಿಯಲ್ಲಿದ್ದಾಗ ಕೆಲ ಸಲ ಫುಟ್‌ಬಾಲ್ ಆಡಿದ ನೆನಪು. ಇದು ಬಿಟ್ಟರೆ ಬೇರಾವ ಆಟಗಳನ್ನೂ ನಾನು ಆಡಿದಂತಿಲ್ಲ. ಇಸ್ಪೇಟು ಮೊದಲಾದ ಕೂತು ಆಡುವ ಆಟ-ಗಳೂ ನನಗೆ ಹಿಡಿಸಲಿಲ್ಲ. ೧೯೨೧ರಲ್ಲಿ ಲಂಡನ್ನಿ-ನಿಂದ ಮುಂಬಯಿಗೆ ಬರುವಾಗ ವೇಳೆಗಳೆಯ-ಲೆಂದು ಹಡಗಿನಲ್ಲಿ ಒಮ್ಮೆ ಇಸ್ಪೇಟು ಆಡಿದೆ.

ಸಂಗೀತದ ಗಂಧ ಕೂಡ ನನಗೆ ಹತ್ತಲಿಲ್ಲ. ಲಲಿತ ಕಲಾದರ್ಶನ ನಾಟಕ ಕಂಪನಿಯ ಮಾಲಿಕರಾದ ಪೇಢಾರಕರರು ಆಗಾಗ ತಮ್ಮ ನಾಟಕಗಳನ್ನು ನೋಡಲು ಕರೆಯುತ್ತಿದ್ದರು. "ನಾಟಕ-ದಲ್ಲಿ ನೀವು ಹಾಡು ಹೇಳಲಿಕ್ಕೆ ಪ್ರಾರಂಭಿಸಿ-ದೊಡನೆಯೇ ನಾನು ಎದ್ದು ಹೊರಗೆ ಹೋಗಬೇಕೆಂದೆನಿಸುತ್ತದೆ," ಎಂದು ನಾನವರಿಗೆ ಆಗಾಗ ಹೇಳುತ್ತಿದ್ದೆ. ಅದೇನು ಕಾರಣವೋ ಏನೋ! ನನ್ನ ಕಿವಿಗಳಿಗೆ ಸಂಗೀತದ ಸವಿ ಹತ್ತಲೇ ಇಲ್ಲ. ಈ ದೃಷ್ಟಿಯಿಂದ ನಾನು ಅರಸಿಕ. ಮನಸ್ಸು ಬೇಜಾರಾದಾಗ ಯಾವಾಗಾದರೊಮ್ಮೆ ನಾನು ಸಿನೇಮಾ ನಾಟಕಗಳನ್ನು ನೋಡಲು ಹೋಗು-ತ್ತೇನೆ. ಆದರೆ ಅಲ್ಲಿಯ ನಟನಾಚಾತುರ್ಯವನ್ನು ನಾನು ಅನುಭವಿಸುತ್ತೇನೆ. ಇದನ್ನು ಸಹ ನಾನು ಅಮೇರಿಕದಲ್ಲಿದ್ದಾಗ ಕಲಿತೆ. ಅದಕ್ಕೂ ಮೊದಲು ನನಗೆ ಸಂಗೀತ ನಾಟಕಗಳೆಂದರೆ ಆಗುತ್ತಿರಲಿಲ್ಲ.

ಎಂದಿನಿಂದಲೂ ನಾನು ದೇವಭೀರು. ೧೯೧೩ರ ವರೆಗೆ ನಾನೊಬ್ಬ ಸನಾತನಿ ಹಿಂದುವಾಗಿದ್ದೆ. ದಿನಾಲು ತಪ್ಪದೆ ಸಂಧ್ಯಾವಂದನಾದಿಗಳನ್ನು ಮಾಡುತ್ತಿದ್ದೆ. ನಾನೊಬ್ಬ ಧಾರ್ಮಿಕ ಮನುಷ್ಯನೆಂದೇ ಎಲ್ಲರ ಭಾವನೆಯಿತ್ತು. ಆದರೆ ನನ್ನ ಅಮೇರಿಕ ಪ್ರವಾಸ ನನ್ನನ್ನು 'ಕೆಡಿಸಿತು.' ಇಂದು ನನ್ನಲ್ಲಿ ಉಳಿದಿರುವುದು ಒಂದೇ ಒಂದು ಧರ್ಮ. ಅದು "ನನ್ನ ದೇಶಕ್ಕಾಗಿ ನಾನು ಮಾಡಬೇಕಾದ ಕರ್ತವ್ಯ." ಯಾವ ಭೇದ ಭಾವವಿಲ್ಲದೆ ಎಲ್ಲರೂ ಸಮಾನರು.

ಮನುಷ್ಯನ ಆಗುಹೋಗುಗಳನ್ನು ನಿಯಂತ್ರಿಸುವ ಮಹಾಶಕ್ತಿಯೊಂದು ಇದೆಯೆಂದು ನಾನು ನಂಬುತ್ತೇನೆ. ಆದ್ದರಿಂದಲೇ ಶಾಂತ ಮತ್ತು ಸಮಾಧಾನದ ಗಳಿಗೆಗಳಲ್ಲಿ ದೇವರ ಹೆಸರಿನಲ್ಲಿ ಪ್ರಾರ್ಥನೆ ಮಾಡುವುದು ನನಗೆ ಇಷ್ಟ. ಶ್ರೀಕೃಷ್ಣನ ಕರ್ಮಯೋಗದಲ್ಲಿ ನಂಬುಗೆ ಇಟ್ಟ ನನಗೆ 'ಅದೃಷ್ಟ' 'ನಶೀಬ' ಎಂಬುದರಲ್ಲಿ ವಿಶ್ವಾಸವಿಲ್ಲ.

೧೯೧೯ರ ವರೆಗೆ ನನಗೆ ಯಾವ ಚಟಗಳೂ ಇರಲಿಲ್ಲ. ನಾನು ಅಡಿಕೆ ಸಹ ಹಾಕುತ್ತಿರಲಿಲ್ಲ. ಅಮೇರಿಕದ ಆರು ವರ್ಷಗಳ ವಾಸ್ತವ್ಯದಲ್ಲಿ ನನಗೆ ಅಕಸ್ಮಿಕವಾಗಿ ಧೂಮಪಾನದ ಚಟ ಅಂಟಿಕೊಂಡಿತು. ಆಗಾಗ ನಾನದನ್ನು ಬಿಡುತ್ತಿದ್ದರೂ ಮತ್ತೆ ಮತ್ತೆ ಅದು ಅಂಟಿಕೊಳ್ಳುತ್ತಲೇ ಇದೆ. ಅಮೇರಿಕದಿಂದ ಹಿಂದಿರುಗಿದ ನಂತರ ನಾನು ಅಡಿಕೆ ತಿನ್ನಲಾರಂಭಿಸಿದೆ. ೧೯೨೫ರಲ್ಲಿ ಕಾನಪುರ ಕಾಂಗ್ರೆಸ್ಸಿನ ಕಾರ್ಯದಲ್ಲಿ ತೊಡಗಿದ್ದಾಗ ನನಗೆಚಹದ ಚಟ ಅಂಟಿಕೊಂಡಿತು. ಆ ವರೆಗೆ ನಾನು ಚಹದ ರುಚಿಯನ್ನೇ ಕಂಡಿರಲಿಲ್ಲ. ಚಹ, ಧೂಮಪಾನ ಮತ್ತು ಅಡಿಕೆ ಇವು ಮೂರನ್ನು ಬಿಟ್ಟರೆ ಬೇರಾವ ಚಟಗಳೂ ನನ್ನ ಸಮೀಪಕ್ಕೂ ಹಾಯಲಿಲ್ಲ.

*

ಮೊದಮೊದಲು ಯುದ್ಧದ ಝಳ ನಮ್ಮ ದೇಶಕ್ಕೆ ತಗಲಲಿಲ್ಲ. ಆದರೆ ದಿನಗಳೆದಂತೆ ಅದರ ಪ್ರಖರತೆ ಹೆಚ್ಚತೊಡಗಿತು. ಅದರ ಪರಿಣಾಮ ನಮ್ಮ ದೇಶದ ಮೇಲೂ ಆಗತೊಡಗಿತು. ಜೀವನಾವಶ್ಯಕ ಆಹಾರ ಸಾಮಗ್ರಿಗಳ ಬೆಲೆಗಳು ದಿನ ದಿನವೂ ಏರುತ್ತ ಸಾಗಿದವು. ಬಡಬಗ್ಗರ ಜೀವನ ನಿರ್ವಹಣೆ ಕಠಿಣವಾಗತೊಡಗಿತು.

ಹುಬ್ಬಳ್ಳಿಯಲ್ಲಿಯ ವರ್ತಕರು ಒಂದು ಅಗ್ಗದರದ ಅಂಗಡಿಯನ್ನು ಪ್ರಾರಂಭಿಸಿ ಅದರ ಮುಖಾಂತರ ಪ್ರತಿ ವಾರವೂ ನೂರಾರು ಚೀಲ ಅಕ್ಕಿ ಜೋಳವನ್ನು ಯೋಗ್ಯ ಬೆಲೆಗೆ ಮಾರಾಟ

ಸಿಂಗರ್

ಕೊಡುಗೆ


ಮೆರಿಟ್*

ಹೊಲಿಗೆ ಮೆಶೀನುಗಳನ್ನು ನಗದು ಹಣ ಸಲ್ಲಿಸಿ ಕೊಂಡಾಗ

ರೂ. 25 ರಿಂದ ರೂ. 125ರ ವರೆಗಿನ

ನಗದು ರಿಯಾಯಿತಿ

ಮೆರಿಟ್* ಹೊಲಿಗೆ ಮೆಶೀನನ್ನು ಕೊಳ್ಳಿರಿ. ನೀವು ನಗದು ಹಣ ಸಲ್ಲಿಸಿ ಕೊಂಡಾಗ, ನೀವು ಆಯ್ದುಕೊಳ್ಳುವ ಮೆಶೀನನ್ನು ಹೊಂದಿಕೊಂಡು, ರೂ. 25ರಿಂದ ರೂ. 125ರ ವರೆಗಿನ ನಗದು ರಿಯಾಯಿತಿಯನ್ನು ಪಡೆಯಿರಿ.



ಅಥವಾ

120 ದಿನಗಳಲ್ಲಿ ಬೆಲೆಯನ್ನು ಸಲ್ಲಿಸಿರಿ-

—ಹೆಚ್ಚಿನ ಹಣವೇನೂ ಕೊಡಬೇಕಾಗಿಲ್ಲ. (ನೀವು ಕೊಡುವುದು ಪ್ರೈಸ್ ಲಿಸ್ಟ್‌ನಲ್ಲಿ ನಮೂದಿಸಿದ ಬೆಲೆಯನ್ನು ಮಾತ್ರ.)

ಇನ್ನೊಂದು ಸೌಲಭ್ಯ! ಎಲ್ಲರಿಗೂ ಅನುಕೂಲವಾಗುವಂತಹ ಕಂತುಗಳಲ್ಲಿ ಹಣ ಸಲ್ಲಿಸುವ ಯೋಜನೆಯೂ ಇದೆ.

ಈ ಕೊಡುಗೆ ಒಂದು ಸೀಮಿತ ಅವಧಿಯ ವರೆಗೆ ಮಾತ್ರ ಲಭ್ಯ.

ನಿಮ್ಮ ಸಮೀಪದ ಸಿಂಗರ್ ಅಂಗಡಿಗೆ ಅಥವಾ ಅಧಿಕೃತ ವ್ಯಾಪಾರಿಯಲ್ಲಿಗೆ ಇಂದೇ ಭೇಟಿ ಕೊಡಿರಿ.

ಯಾವಾಗಲೂ ಕೇವಲ ಸಿಂಗರ್ ಆಯಿಲ್, ಸಿಂಗರ್ ಸೂಜಿ, ಸಿಂಗರ್ ಕತ್ತರಿ
ಮತ್ತು ಬಿಡಿ ಭಾಗಗಳನ್ನು ಕೊಳ್ಳಿರಿ.

* ಸಿಂಗರ್ ಕಂಪೆನಿಯ ಟ್ರೇಡ್ ಮಾರ್ಕ್

CHAITRA-SM-202 KAN

ಮಾಡುತ್ತಿದ್ದರು. ನಗರದಲ್ಲಿಯ ಸಿರಿವಂತ ಜನರನ್ನು ಒಂದುಗೂಡಿಸಿ ನಗರಸಭೆಯ ಆಡಳಿತಗಾರರ ಹಿರಿತನದಲ್ಲಿ ಮತ್ತೊಂದು ಯೋಗ್ಯ ದರದ ಕಾಳಿನ ಅಂಗಡಿಯನ್ನು ಪ್ರಾರಂಭ ಮಾಡುವಂತೆ ಅವರ ಮನವೊಲಿಸಿದೆ. ಅಷ್ಟೇ ಏಕೆ, ಉರುವಲ ಕಟ್ಟಿಗೆಯ ಬೆಲೆ ವಿಪರೀತವಾಗಿ ಏರಿದ್ದರಿಂದ ಬಡಬಗ್ಗರಿಗೆ ಅಗ್ಗ ಬೆಲೆಯಲ್ಲಿ ಕಟ್ಟಿಗೆ ದೊರಕುವಂತೆ ಮಾಡುವದಕ್ಕಾಗಿ ನಗರದ ಸೀದಾ ಅಧಿಕಾರಿಗಳ ಮುಖಾಂತರ ೪-೫ ಪ್ರಮುಖ ಸ್ಥಳಗಳಲ್ಲಿ ಯೋಗ್ಯ ದರದಿಂದ ಉರುವಲು ಕಟ್ಟಿಗೆ ದೊರೆಯುವ ಎತ್ತುಗಡೆ ಮಾಡಿದೆ.

ಇದೇ ಕಾಲಕ್ಕೆ ೧೯೪೨ರ ಚಲೇಜಾವ್ ಚಳವಳಿ ಪ್ರಾರಂಭವಾಯಿತು. ೧೯೪೨ರ ಅಗಸ್ಟ ೯ರಂದೇ ನನ್ನನ್ನು ಇತರ ಅನೇಕ ಸಹಕಾರಿಗಳೊಡನೆ ಬಂಧಿಸಿದರು. ನಮ್ಮೆಲ್ಲರನ್ನೂ ಹಿಂಡಲಗಿ ಸೆರೆಮನೆಗೆ ಕಳಿಸಿದರು. ಅಲ್ಲಿ ಪ್ರಾಂತದ ಬೇರೆ ಬೇರೆ ಭಾಗಗಳಿಂದ ಸಾವಿರಾರು ಜನ ಕಾಂಗ್ರೆಸ್ ಕಾರ್ಯಕರ್ತರನ್ನು ಬಂಧಿಸಿಟ್ಟಿದ್ದರು. ಅಲ್ಲಿ ಅಕ್ಟೋಬರ್ ತಿಂಗಳ ಕೊನೆಯ ಹೊತ್ತಿಗೆ ಕಾಲರಾ ಬೇನೆ ಪ್ರಾರಂಭವಾಯಿತು. ದಿನಾಲು ನೂರಾರು ಜನ ಸತ್ಯಾಗ್ರಹಿಗಳು ಈ ಬೇನೆಯಿಂದ ಸಾವಿಗೀಡಾಗತೊಡಗಿದರು. ಹೀಗೆ ರೋಗ ಪೀಡಿತರಾದವರ ಸೇವೆ ಮಾಡುವ ಅವಕಾಶ ನನಗೆ ದೊರೆತಿತು. ನನ್ನಂತೆ ಅದೇ ಸೆರೆಮನೆಯಲ್ಲಿದ್ದ ಗದಗಿನ ಡಾ. ವೆಂಕಟರಾವ ಮುಯಿಲಗೋಳ, ಧಾರವಾಡದ ನನ್ನ ಸಹಕಾರಿಗಳಾದ ಡಾ. ನಾರಾಯಣ ಕಬ್ಬೂರ ಇವರು ರೋಗಿಗಳ ಸೇವೆ ಶುಶ್ರೂಷೆಯನ್ನು ತಮ್ಮ ಜೀವದ ಹಂಗು ಇಲ್ಲದೆ ಮಾಡುತ್ತಿದ್ದರು. ಮೃತರಾದ ಸತ್ಯಾಗ್ರಹಿಗಳನ್ನು ಸ್ಮಶಾನಕ್ಕೆ ಅಂತ್ಯಸಂಸ್ಕಾರಕ್ಕಾಗಿ ಒಯ್ಯುವ ಕಾರ್ಯವನ್ನು ಹುಬ್ಬಳ್ಳಿಯ ಶ್ರೀ ವಿಷ್ಣುಪಂತ ಗೋಖಲೆ ಅವರ ನೇತೃತ್ವದಲ್ಲಿ ಇನ್ನಿತರ ಸತ್ಯಾಗ್ರಹಿಗಳು ನೋಡಿಕೊಳ್ಳುತ್ತಿದ್ದರು. ಸುಮಾರು ಎರಡು ತಿಂಗಳ ಕಾಲ ಈ ಬೇನೆ ಅನೇಕ ಜನ ಸತ್ಯಾಗ್ರಹಿಗಳನ್ನು ಬಲಿ ತೆಗೆದುಕೊಂಡು ಶಾಂತವಾಯಿತು. ಆದರೆ ಕಾರಾಗೃಹದಲ್ಲಿ ಮನೆ ಮಾಡಿದ್ದ ಅನಾರೋಗ್ಯಕರ ವಾತಾವರಣವನ್ನು ಹೋಗಲಾಡಿಸುವದಕ್ಕಾಗಿ ನಾವು ಬಹಳ ಪ್ರಯತ್ನ ನಡೆಸಿದೆವು. ಇದಕ್ಕೆ ನಾನೇ ಮೂಲ ಕಾರಣನೆಂದು ನನ್ನನ್ನು ನಾಸಿಕ ಜೈಲಿಗೆ ಸ್ಥಳಾಂತರಿಸಲಾಯಿತು. ಅಲ್ಲಿಂದ ನಾನು ೧೯೪೩ರ ಕೊನೆಗೆ ಬಿಡುಗಡೆ ಹೊಂದಿ ಮರಳಿ ಹುಬ್ಬಳ್ಳಿಗೆ ಬಂದೆ.

ನಾನು ಸೆರೆಮನೆಯಲ್ಲಿದ್ದಾಗಲೇ ಬಂಗಾಲದಲ್ಲಿ ಭೀಕರ ಬರಗಾಲ ಬಿದ್ದಿತ್ತು. ಲಕ್ಷಾವಧಿ ಜನ ಉಪವಾಸ ಬಿದ್ದಿದ್ದರು. ಮೇಲಾಗಿ ಬ್ರಹ್ಮದೇಶದ ಕಡೆಯಿಂದ ಆಸಾಮದ ಮೇಲೆ ಜಪಾನದ ದಾಳಿಯ ಸೊಲ್ಲು ಕೇಳಿಬರುತ್ತಿತ್ತು. ಅಲ್ಲಿಯ ನಿಜಸ್ಥಿತಿಯನ್ನು ಅರಿತು ಆ ಬಗ್ಗೆ ಜನಜಾಗೃತಿ ಉಂಟು ಮಾಡುವ ಉದ್ದೇಶದಿಂದ ಶ್ರೀ ಮೊಹರೆ ಹಣಮಂತರಾಯರು ಮತ್ತು ಪುಣೆಯ ಸಕಾಳದ ಸಂಪಾದಕರಾದ ಡಾ. ನಾನಾಸಾಹೇಬ ಪರುಳೇಕರ ಅವರ ಸಲಹೆಯ ಮೇರೆಗೆ ಬಂಗಾಲಕ್ಕೆ ಹೋಗಿ ನನಗಿಂತ ಮೊದಲು ಹೋಗಿದ್ದ ಡಾ. ಪರುಳೇಕರರನ್ನು ಕೂಡಿಕೊಂಡೆ. ಸಂತ್ರಸ್ತ ಪ್ರದೇಶವೆಲ್ಲವನ್ನೂ ನಾವು ಸುತ್ತಾಡಿ ಅಲ್ಲಿಯ ಹೃದಯ ವಿದ್ರಾವಕ ಪರಿಸ್ಥಿತಿಯನ್ನು ಪ್ರತ್ಯಕ್ಷವಾಗಿ ಕಂಡೆವು ಮತ್ತು ಆಪದ್ಗ್ರಸ್ತರ ಕಷ್ಟ ನಿವಾರಣೆಗಾಗಿ ಯತ್ನಿಸಿದೆವು.

ಡಾ. ಪರುಳೇಕರರು ತಮ್ಮ ಪತ್ರಿಕೆಯಾದ 'ಸಕಾಳ'ದ ಮುಖಾಂತರ ಜನತೆಯಿಂದ ಈ ಸಂತ್ರಸ್ತರ ಪರಿಹಾರ ಕಾರ್ಯಕ್ಕಾಗಿ ನಿಧಿ ಸಂಗ್ರಹ ನಡೆಸಿದ್ದರು. ನನ್ನ ಸಾಪ್ತಾಹಿಕ ಪತ್ರಿಕೆಯಾದ 'ಹುಬಳಿ ಗೆಜೆಟ್' ಪತ್ರಿಕೆಯೂ ನಿಧಿ ಸಂಗ್ರಹ ಕಾರ್ಯ ನಡೆಸಿತ್ತು. ಮುಂದೆ ಮೊಹರೆ ಹಣಮಂತರಾಯರು 'ಸಂಯುಕ್ತ ಕರ್ನಾಟಕ'ದ ಮುಖಾಂತರ ನಿಧಿ ಸಂಗ್ರಹ ಕಾರ್ಯವನ್ನು ಪ್ರಾರಂಭಿಸಿದ್ದರಿಂದ 'ಹುಬಳಿ ಗೆಜೆಟ್' ನಡೆಸಿದ್ದ ನಿಧಿ ಸಂಗ್ರಹ ಕಾರ್ಯವನ್ನು ಸ್ಥಗಿತಗೊಳಿಸಿ ಅಂದಿನ ವರೆಗೆ ಕೂಡಿಸಿದ ನಿಧಿಯನ್ನು ಡಾ. ಶಾಮಪ್ರಸಾದ ಮುಖರ್ಜಿಯವರ ಕಡೆಗೆ ಕಳಿಸಿಕೊಡಲಾಯಿತು.

೧೯೪೫ರಲ್ಲಿ ದ್ವಿತೀಯ ಜಾಗತಿಕ ಮಹಾಯುದ್ಧ ನಿಂತಿತು. ಆ ಯುದ್ಧ ನಡೆದಾಗ





ಕೋಲ್ಗೇಟ್ ಡೆಂಟಲ್ ಕ್ರೀಮ್‌ನಿಂದ ಉಸಿರಿನ ದುರ್ವಾಸನೆಯನ್ನು ನಿವಾರಿಸಿರಿ... ದಂತಕ್ಷಯವನ್ನು ಎದುರಿಸಿರಿ

ಪ್ರತಿ ಸಲ ಊಟವಾದ ಮೇಲೆ ಕೋಲ್ಗೇಟ್‌ನಿಂದ ಹಲ್ಲುಜ್ಜಿರಿ. ಅದು ಜಗತ್ತಿನಾದ್ಯಂತ ದಂತವೈದ್ಯರು ಶಿಫಾರಸು ಮಾಡುವ ರೀತಿಯಲ್ಲಿ ನಿಮ್ಮ ಹಲ್ಲುಗಳಿಗೆ ರಕ್ಷಣೆ ನೀಡುತ್ತದೆ.

ಹಲ್ಲುಗಳ ಮಧ್ಯೆ ಉಳಿಯುವ ಆಹಾರ ಕಣಗಳಲ್ಲಿ ರೋಗಾಣುಗಳು ಬೆಳೆಯುತ್ತವೆ. ಇವು ಉಸಿರಿನ ದುರ್ವಾಸನೆಗೆ ಕಾರಣವಾಗುತ್ತವೆ—ಆಮೇಲೆ ಇವು ನೋಯಿಸುವ ದಂತಕ್ಷಯವನ್ನು ಉಂಟುಮಾಡುತ್ತವೆ.

ಆದ್ದರಿಂದ ಯಾವಾಗಲೂ ಆಹಾರವನ್ನು ಸೇವಿಸಿದ ನಂತರ ಕೂಡಲೇ ಕೋಲ್ಗೇಟ್ ರೀತಿಯಲ್ಲಿ ಹಲ್ಲುಜ್ಜಿರಿ. ನಿಮ್ಮ ಶ್ವಾಸವನ್ನು ಶುಚಿಗೊಳಿಸಲು, ಹಲ್ಲುಗಳನ್ನು ಬಿಳುಪಾಗಿಸಲು ಮತ್ತು ದಂತಕ್ಷಯವನ್ನು ಎದುರಿಸಲು ಅದು ಅತ್ಯಂತ ಪರಿಣಾಮಕಾರಿ ಎಂದು ಪ್ರಮಾಣಿತವಾಗಿದೆ.



ಕೋಲ್ಗೇಟ್‌ನ ವಿಶ್ವಸನೀಯ ಸೂತ್ರವು ಕೆಲಸ ಮಾಡುವ ರೀತಿ:



ಉಸಿರಿನ ದುರ್ವಾಸನೆಯನ್ನು ಮತ್ತು ದಂತಕ್ಷಯವನ್ನು ಉಂಟುಮಾಡುವ ರೋಗಾಣುಗಳು ನಿಮ್ಮ ಹಲ್ಲುಗಳೆಡೆಯಲ್ಲಿ ಸಿಕ್ಕಿಕೊಂಡ ಆಹಾರ ಕಣಗಳಲ್ಲಿ ಬೆಳೆಯುತ್ತವೆ.



ಕೋಲ್ಗೇಟ್‌ನ ಅಪೂರ್ವವಾದ ಕಾರ್ಯಶೀಲ ನೊರೆ ಹಲ್ಲುಗಳೆಡೆಯನ್ನು ಆಳವಾಗಿ ಪ್ರವೇಶಿಸುತ್ತದೆ ಮತ್ತು ಅಪಾಯಕರವಾದ ಆಹಾರಕಣಗಳನ್ನೂ, ರೋಗಾಣುಗಳನ್ನೂ ಹೋಗಲಾಡಿಸುತ್ತದೆ.



ಫಲಿತಾಂಶ: ಆಕರ್ಷಕವಾದ ಬಿಳುಪಾದ ಹಲ್ಲುಗಳು, ಆತ್ಮವಿಶ್ವಾಸವನ್ನುಂಟು ಮಾಡುವ ಶುಚಿಯಾದ ಉಸಿರು, ಮತ್ತು ದಂತಕ್ಷಯದ ವಿರುದ್ಧ ರಕ್ಷಣೆ.

ಅಧಿಕ ಶುಚಿಯಾದ, ದುರ್ವಾಸನೆ ರಹಿತವಾದ ಉಸಿರಿಗಾಗಿ ಮತ್ತು ಅಧಿಕ ಬಿಳುಪಾದ ಹಲ್ಲುಗಳಿಗಾಗಿ ಹೆಚ್ಚು ಜನರು ಜಗತ್ತಿನಲ್ಲಿ ಬೇರೆ ಯಾವುದೇ ಟೂಥ್‌ಪೇಸ್ಟ್‌ಗಿಂತ ಅಧಿಕವಾಗಿ ಕೋಲ್ಗೇಟನ್ನು ಕೊಳ್ಳುತ್ತಾರೆ.

ದಂತವೈದ್ಯರು ಮಾತ್ರ ನಿಮಗೆ ಉತ್ತಮತರ ದಂತರಕ್ಷಣೆಯನ್ನು ನೀಡಬಲ್ಲರು

G 62 KN

ಭಾರತದ ಬಂಧ ವಿಮೋಚನೆಗಾಗಿ ನೇತಾಜಿ ಸುಭಾಸಚಂದ್ರ ಬೋಸರು ಹಿಂದೀ ವಿಮೋಚನಾ ಸೈನ್ಯವನ್ನು ಸಂಘಟಿಸಿ ಬ್ರಿಟಿಶರೊಡನೆ ಸಶಸ್ತ್ರ ಸಂಘರ್ಷಕ್ಕೆ ಅಣಿಯಾಗಿದ್ದರು. ಈ ಸೇನೆಯು ಭಾರತದ ಗಡಿಯಲ್ಲಿ ಪ್ರವೇಶಿಸಿತ್ತು. ಆದರೆ ಅಷ್ಟರಲ್ಲಿ ನೇತಾಜಿ ಅವರು ವಿಮಾನ ಅಪಘಾತದಲ್ಲಿ ಮರಣಹೊಂದಿದ ಸುದ್ದಿ ಬಂದಿತು. ಈ ಸ್ವಾತಂತ್ರ್ಯ ಸೇನೆಯಲ್ಲಿದ್ದ ಅನೇಕ ಸೇನಾಧಿಕಾರಿಗಳೂ ಬ್ರಿಟಿಶರಿಂದ ಬಂಧಿಸಲ್ಪಟ್ಟರು. ಅವರ ಮೇಲೆ ಖಟ್ಲೆ ನಡೆದು ಎಲ್ಲರೂ ಬಿಡುಗಡೆ ಹೊಂದಿದರು.

ಈ ಸೇನೆಯಲ್ಲಿ ಸೇನಾಧಿಕಾರಿಯಾಗಿದ್ದ ಕ್ಯಾಪ್ಟನ್ ಶಹಾನವಾಜ್‌ಖಾನ್ ಅವರು ೧೯೪೬ರಲ್ಲಿ ದಿಲ್ಲಿಯಲ್ಲಿ ಅಖಿಲ ಭಾರತ ಸೇವಾದಲ ಕಾರ್ಯಕರ್ತರ ಪರಿಷತ್ತನ್ನು ಕರೆದರು. ಆ ಪರಿಷತ್ತಿಗೆ ನನ್ನನ್ನು ಅಧ್ಯಕ್ಷನನ್ನಾಗಿ ಆಯ್ಕೆ ಮಾಡಲಾಗಿತ್ತು. ಪಂಡಿತ ಜವಾಹರಲಾಲ ನೆಹರು ಅವರು ಆ ಪರಿಷತ್ತಿನ ಉದ್ಘಾಟನೆ ಮಾಡಿದರು.

೧೯೫೧ರ ನವೆಂಬರ್ ತಿಂಗಳಲ್ಲಿ ಸಿಮ್ಲಾದಲ್ಲಿ ಯುನೈಟೆಡ್ ನ್ಯಾಶನಲ್ ಟೆಕ್ನಿಕಲ್ ಅಸಿಸ್ಟನ್ಸ ಎಡ್ಮಿನಿಸ್ಟ್ರೇಶನ್ ಎಂಬ ಅಮೇರಿಕನ್ ಸರಕಾರದ ಒಂದು ವಿಭಾಗದ ಆಶ್ರಯದಲ್ಲಿ ಯುವಕ ಪರಿಷತ್ತು ಸೇರಿಯಿತು. ಅದರಲ್ಲಿ ನನ್ನನ್ನು ತರುಣರ ಕಲ್ಯಾಣ ಕಾರ್ಯದಲ್ಲಿ ಸಲಹೆಗಾರನೆಂದು ಆಯ್ಕೆ ಮಾಡಲಾಗಿತ್ತು.

೧೯೫೦ರ ಮೇ ೭ಕ್ಕೆ ೬೦ ವರ್ಷಗಳು ತುಂಬಿ ೬೧ನೆಯ ವರ್ಷ ಪ್ರಾರಂಭವಾಗುವದಿತ್ತು. ನನ್ನ ವಜ್ರಮಹೋತ್ಸವವನ್ನು ಆಚರಿಸುವದಕ್ಕಾಗಿ ಅಖಿಲ ಭಾರತ ತಳಹದಿಯ ಮೇಲೆ ಒಂದು ಸಮಿತಿ ರಚಿತವಾಯಿತು. ೧೯೫೦ರ ಮೇ ೭ ರಂದು ಮುಂಬಯಿಯಲ್ಲಿಯ ಸರ್ ಕಾವಸಜಿ ಜಹಾಂಗೀರ್ ಹಾಲಿನಲ್ಲಿ ಸಾರ್ವಜನಿಕ ಸತ್ಕಾರ ಸಮಾರಂಭ ನಡೆದು ನನಗೆ ಆ ಸತ್ಕಾರ ಸಮಿತಿಯವರು ೬೧ ಸಾವಿರ ರೂಪಾಯಿಗಳ ದಕ್ಷಿಣೆಯನ್ನು ಅರ್ಪಿಸಿದರು. ಅದರಲ್ಲಿ ೧೦ ಸಾವಿರ ರೂಪಾಯಿಗಳನ್ನು ನಾನು ಹಿಂದ್ ಸೇವಾ ಟ್ರಸ್ಟಿಗೆ ಕೊಟ್ಟೆ ಮತ್ತು ೧೫ ಸಾವಿರ ರೂಪಾಯಿಗಳನ್ನು ನನ್ನ ಹೆಸರಿನಲ್ಲಿ ಅಂದರೆ ಡಾ. ಹರ್ಡೀಕರ ಡಾಯಮಂಡ್ ಜ್ಯುಬಿಲಿ ಟ್ರಸ್ಟ್ ಎಂಬ ಸಂಸ್ಥೆಯನ್ನು [illegible] ಕೊಟ್ಟೆ. [illegible] ಆದಾಯವನ್ನು ಸಾರ್ವಜನಿಕ [illegible] ಕಾರ್ಯಕ್ಕೆ ವಿನಿಯೋಗಿಸಲಾಗುತ್ತಿದ್ದು ಡಾಯಮಂಡ್ ಜ್ಯುಬಿಲಿ ಟ್ರಸ್ಟಿನ ಆದಾಯವನ್ನು ದೇಶದಲ್ಲಿ ಸೇವಾದಲದ ಸಂಘಟನಾ ಕಾರ್ಯದಲ್ಲಿ [illegible] ಕೊಡಲಾಗುತ್ತಿದೆ.

ಇದೇ ಮೇರೆಗೆ ದೇಶದಲ್ಲಿಯ ಅನೇಕ ಸೇವಾದಲ ಘಟಕಗಳ ಕಾರ್ಯಕರ್ತರು ೪೬ ಸಾವಿರ ರೂಪಾಯಿಗಳನ್ನು ಕಲೆ ಹಾಕಿ ಆ ಹಣವನ್ನು ನನಗೆ ಅರ್ಪಿಸಿದರು. ಅದನ್ನು ನಾನು ಡಾ. ಹರ್ಡೀಕರ ಫೌಂಡೇಶನ್ ಟ್ರಸ್ಟ್ ಎಂಬ ಇನ್ನೊಂದು ಟ್ರಸ್ಟನ್ನು ಸ್ಥಾಪಿಸಿ ಅದಕ್ಕೆ ಒಪ್ಪಿಸಿದೆ. ಈ ಟ್ರಸ್ಟಿಗೆ ಶ್ರೀ ಯಶವಂತರಾವ್ ಚವ್ಹಾಣ, ದಿಲ್ಲಿಯ ಶ್ರೀ ಅಮರನಾಥ [illegible], ಶ್ರೀ ಎಸ್. ವಿ. ಇನಾಮದಾರ ಇವರು ಧರ್ಮದರ್ಶಿಗಳಾಗಿದ್ದಾರೆ.

ನಾನು ಹುಟ್ಟು ಬಡವ. ನನಗೆ ಈ ದುಡ್ಡಿನ ಉಪಯೋಗವೇನು? ಅದರಿಂದ ನನಗೇನಾಗಬೇಕಾಗಿದೆ? ನನ್ನ ಜೀವನವೇ ಜನತಾ ಜನಾರ್ದನನ ಸೇವೆಗೆ ಮೀಸಲಾಗಿರುವವರಿಂದ ಆ ಹಣವೂ ಅದೇ ಜನತಾ ರೂಪೀ ಜನಾರ್ದನನಿಗೆ ಉಪಯೋಗ ಬೀಳಬೇಕು. ಆದ್ದರಿಂದ ನನಗೆ ಕೊಡಲ್ಪಟ್ಟ ಹಣದಲ್ಲಿ ಒಂದು ಕಾಸನ್ನೂ ಮುಟ್ಟದೆ ಎಲ್ಲವನ್ನೂ ನಾನು ಕೃಷ್ಣಾರ್ಪಣ ಭಾವದಿಂದ ತಿರುಗಿ ಕೊಟ್ಟುಬಿಟ್ಟೆ.

೧೯೫೨ರಲ್ಲಿ ನನ್ನನ್ನು ರಾಜ್ಯಸಭೆಯ ಸದಸ್ಯನನ್ನಾಗಿ ಮುಂಬಯಿ ಶಾಸನ ಸಭೆಯಿಂದ ಆಯ್ಕೆ ಮಾಡಲಾಯಿತು. ಈ ಸೂಚನೆ ನನಗೆ ಬಂದಾಗ ನಾನು ನಿರಾಕರಿಸಿದ್ದೆ. ಆದರೆ ಪಂ. ಜವಾಹರಲಾಲ ನೆಹರು ಅವರ ಇಚ್ಛೆಯಂತೆ ನಾನು ಅದಕ್ಕೆ ಒಪ್ಪಿಕೊಳ್ಳಬೇಕಾಯಿತು.

೧೯೫೮ರ ಜನೆವರಿ ೨೬ರ ದಿನ ನನಗೆ 'ಪದ್ಮಭೂಷಣ,' ಪದವಿಯನ್ನು ರಾಷ್ಟ್ರಪತಿಗಳು ಕೊಡಮಾಡಿರುವರೆಂಬ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದಿ ಆಶ್ಚರ್ಯವಾಯಿತು. ನಾನೊಬ್ಬ

ಸೊಳ್ಳೆ ಕಡಿತಗಳಿಂದ, ಖಾತ್ರಿಯಾದ ದ್ವಿವಿಧ ರಕ್ಷಣೆಯನ್ನು ಕೇವಲ ಒಡೋಮಸ್ ನಿಮಗೆ ನೀಡುತ್ತದೆ...

ನಿಮಗೆ ಸುಖನಿದ್ರೆ ಪ್ರಾಪ್ತವಾಗುವಂತೆ ಮಾಡುತ್ತದೆ


ಒಡೋಮಸ್ ನಿಮ್ಮನ್ನು ರಕ್ಷಿಸುವ ಹಾಗೆ ಬೇರೆ ಯಾವುದೇ ಸೊಳ್ಳೆನಿರೋಧಕವು ರಕ್ಷಿಸಲಾರದು.

1



ಅದರ ವಾಸನೆ ಸೊಳ್ಳೆಗಳನ್ನು ದೂರಗೊಳಿಸುತ್ತದೆ.

2



ಅದರ ಅಪೂರ್ವ ಘಟಕ ನಿಮ್ಮ ಚರ್ಮಕ್ಕೆ ಸೊಳ್ಳೆಗಳಿಂದ ರಕ್ಷಣಾ ಕವಚದಂತಿರುತ್ತದೆ—ರಾತ್ರಿಯಿಡೀ!

ಇಂದು ಭಾರತದಲ್ಲಿ ಒಡೋಮಸ್ ಅತ್ಯಧಿಕ ಮಾರಾಟವಾಗುವ ಸೊಳ್ಳೆ ನಿರೋಧಕ ಆಗಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಸೊಳ್ಳೆಗಳು ನಿಮ್ಮನ್ನು ಪೀಡಿಸುವ ಮೊದಲೇ ಅವನ್ನು

ಒಡೋಮಸ್

ನಿಂದ ಓಡಿಸಿರಿ!



ಮಚ್ಛರ್ ಕಾ ದುಶ್ಮನ್

ಅದು ಮಕ್ಕಳ ಕೋಮಲ ಚರ್ಮಕ್ಕೂ ನಿರಪಾಯಕರ ವಾಗಿದೆ.

ಬಲ್ಸಾರಾ
ಸುಖಮಯ ಜೀವನಕ್ಕೆ ಆಧುನಿಕ ಸಾಧನಗಳು
BALSARA ಬಲ್ಸಾರಾ ಅಂಡ್ ಕಂಪನಿ (ಪ್ರೈ.) ಲಿ.
CHAITRA-BLS-86 KA

ಸ್ವಯಂಸೇವಕ. ನನ್ನಿಂದೇನಾದರೂ ದೇಶಸೇವೆ ಆಗಿದ್ದರೆ ಅದನ್ನು ನಾನು ನನ್ನ ಪವಿತ್ರ ಕರ್ತವ್ಯವೆಂದು ಮಾಡಿದೆನೇ ಹೊರತು ಪ್ರತಿಫಲಾಪೇಕ್ಷೆಯಿಂದಲ್ಲ. ಹೀಗಿರುವಾಗ ಈ ಪ್ರತಿಫಲ ನನಗೇಕೆ ಬೇಕು? ಎಂದು ಗೌರವ ಪೂರ್ವಕವಾಗಿ ನಿರಾಕರಿಸಿದೆ. ಆದರೆ ನನ್ನ ಪರಮ ಸ್ನೇಹಿತ ಡಾ. ಶ್ರೀಪ್ರಕಾಶ ಮತ್ತು ಸ್ವತಃ ರಾಷ್ಟ್ರಪತಿಗಳೇ ನನಗೆ ಈ ವಿಷಯವನ್ನು ತಿಳಿಸಿ ಹೇಳಿದ್ದರಿಂದ ಅದನ್ನು ಸ್ವೀಕರಿಸಲು ನಾನು ಒಪ್ಪಿಕೊಳ್ಳಬೇಕಾಯಿತು. ೧೯೫೨ರಿಂದ ೧೯೬೨ ರ ವರೆಗೂ ನಾನು ರಾಜ್ಯಸಭೆಯ ಕಾರ್ಯಕಲಾಪಗಳ ಜೊತೆಗೆ ಕಾಂಗ್ರೆಸ್ ಸೇವಾದಲದ ಕಾರ್ಯವನ್ನೂ ನಿರ್ವಹಿಸಿಕೊಂಡು ಹೋಗುತ್ತಿದ್ದೆ. ಮುಂದೆ ರಾಜ್ಯ ಸಭೆಯ ಸದಸ್ಯತ್ವದ ಅವಧಿ ಮುಗಿದ ನಂತರ ನಾನು ಮರಳಿ ಹುಬ್ಬಳ್ಳಿಗೆ ಬರದೆ ನೇರವಾಗಿ ಘಟಪ್ರಭಾದ ಆರೋಗ್ಯಧಾಮಕ್ಕೆ ಬಂದೆ.

ಈ ಸಂದರ್ಭದಲ್ಲಿ ಕರ್ನಾಟಕ ಆರೋಗ್ಯಧಾಮದ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ.

ನಾನು ಅಮೇರಿಕದಲ್ಲಿದ್ದಾಗ ನನ್ನಂಥದೇ ಉದ್ದೇಶ ಇಟ್ಟುಕೊಂಡು ಅಥಣಿಯ ಗುಂಡೂರಾವ್ ಕೊಕಟನೂರ ಅವರು ೧೯೧೬ರಲ್ಲಿ ಅಲ್ಲಿಗೆ ಬಂದರು. ಅವರೂ ವೈದ್ಯಶಾಸ್ತ್ರದ ಅಭ್ಯಾಸಕ್ಕಾಗಿ ಬಂದಿದ್ದರು. ಅಲ್ಲಿ ಬಂದ ಕೂಡಲೇ ನಮ್ಮಿಬ್ಬರ ಗೊತ್ತು ಗುರಿಗಳು ಒಂದೇಬಗೆಯವಾಗಿದ್ದುದರಿಂದ ನಮ್ಮಿಬ್ಬರ ಸ್ನೇಹ ಬೆಳೆದು ಬಂದಿತು. ಭಾರತಕ್ಕೆ ಮರಳಿ ಹೋದ ನಂತರ ಡಾ. ಗುಂಡೂರಾಯರು ಒಂದು ಸಾರ್ವಜನಿಕ ರುಗ್ಣಾಲಯವನ್ನು ಪ್ರಾರಂಭಿಸಬೇಕೆಂದೂ ಆ ಕಾರ್ಯದಲ್ಲಿ ನಾನು ಅವರೊಡನೆ ಸಹಕರಿಸಬೇಕೆಂದೂ ಆಪ್ತಾಲೋಚನೆ ಮಾಡಿಕೊಂಡಿದ್ದೆವು. ಡಾ. ಕೊಕಟನೂರರು ಎಂ. ಡಿ. ಪದವೀಧರರಾಗಿ ಭಾರತಕ್ಕೆ ಮರಳಿ ಕೆಲ ಕಾಲದ ನಂತರ ಬೆಳಗಾವಿಯಲ್ಲಿ ತಮ್ಮ ಖಾಸಗೀ ಆಸ್ಪತ್ರೆಯನ್ನು ಪ್ರಾರಂಭಿಸಿದರು.

ಅಮೇರಿಕದಲ್ಲಿದ್ದಾಗ ತಾವು ಮಾಡಿದ್ದ ಸಂಕಲ್ಪದಂತೆ ಕರ್ನಾಟಕದಲ್ಲಿ ಒಂದು ಸಾರ್ವಜನಿಕ ರುಗ್ಣಾಲಯವನ್ನು ಸ್ಥಾಪಿಸುವ ಕಾರ್ಯದಲ್ಲಿ ಮಗ್ನರಾದರು. ಆ ಕಾರ್ಯಕ್ಕಾಗಿ ಸ್ಥಳವನ್ನು ಹುಡುಕುತ್ತಿದ್ದಾಗ ಈಗ ಕರ್ನಾಟಕ ಆರೋಗ್ಯಧಾಮವಿರುವ ವಿಸ್ತಾರವಾದ ಪ್ರದೇಶವು ಅವರ ಕಣ್ಣಿಗೆ ಬಿತ್ತು. ಆಗ ಇದು ಕಲ್ಲು, ಮುಳ್ಳು, ಕೊರಕಲು ಗುಡ್ಡಗಳಿಂದ ಕೂಡಿದ ಒಂದು ರುಕ್ಷ ಪ್ರದೇಶವಾಗಿತ್ತು. ನೆರಳು ನೀಡುವಂಥ ಒಂದು ಸಣ್ಣ ಗಿಡ ಕಂಟಿ ಕೂಡ ಇದ್ದಿಲ್ಲ. ಆದರೂ ಒಣ ಹವೆ ಮತ್ತು ಶುದ್ಧ ನೀರು ಇವುಗಳ ಮೂಲಕ ಈ ಪ್ರದೇಶವು ಆರೋಗ್ಯಕರವೆಂದು ಕಂಡುಬಂದದ್ದರಿಂದ ಇದನ್ನೇ ಅವರು ಆಯ್ದುಕೊಂಡು ದಿನಾಲು ಬೆಳಗಾವಿಯಿಂದ ಈ ಸ್ಥಳಕ್ಕೆ ಬಂದು ತಾವು ತರುತ್ತಿದ್ದ ಔಷಧಿಯ ಪೆಟ್ಟಿಗೆಯೊಳಗಿಂದ ಸುತ್ತಮುತ್ತಲಿನ ಹಳ್ಳಿಗರ ರೋಗನಿದಾನ, ಔಷಧೋಪಚಾರ ಮಾಡತೊಡಗಿದರು. ಸುತ್ತಮುತ್ತಲಿನ ಹಳ್ಳಿಗಳಿಂದ ಇಲ್ಲಿಗೆ ಬಂದು ಔಷಧೋಪಚಾರ ಪಡೆಯುವವರ ಸಂಖ್ಯೆ ಬೆಳೆಯುತ್ತ ಸಾಗಿದ್ದರಿಂದ ಈ ಪ್ರದೇಶವನ್ನು ಸರಕಾರದಿಂದ ಅಲ್ಪ ಬೆಲೆಗೆ ಪಡೆದುಕೊಂಡು ಬೆಳಗಾವಿಯಲ್ಲಿಯ ಸ್ನೇಹಿತರ ನೆರವಿನಿಂದ ಒಂದು ಚಿಕ್ಕ ಕಟ್ಟಡವನ್ನು ಕಟ್ಟಿಕೊಂಡು ರುಗ್ಣಾಲಯವನ್ನು ಆರಂಭಿಸಿದರು. ಆಗ ನಾನು ರಾಜಕೀಯ ಹೋರಾಟದಲ್ಲಿ ತೊಡಗಿದ್ದರಿಂದ ಪ್ರತ್ಯಕ್ಷವಾಗಿ ಮುಂದೆ ಬಂದು ಈ ಚಟುವಟಿಕೆಗಳಲ್ಲಿ ಭಾಗವಹಿಸುವಂತಿದ್ದಿಲ್ಲ. ಹಾಗೆ ಮಾಡಿದ್ದರೆ ನನ್ನಿಂದಾಗಿ ಸರಕಾರದ ಕೋಪವು ಈ ಸಂಸ್ಥೆಯ ಮೇಲೆ ಬೀಳಬಹುದಾಗಿತ್ತು.

ಸಂಸ್ಥೆಯ ಚಟುವಟಿಕೆಗಳು ಬೆಳೆಯುತ್ತ ಸಾಗಿದಂತೆ ರೋಗಿಗಳ ಸಂಖ್ಯೆ ಏರತೊಡಗಿತು. ಅವರಿಗೆ ಸೌಕರ್ಯಗಳನ್ನೊದಗಿಸುವದಕ್ಕಾಗಿ ಹೆಚ್ಚಿನ ಕಟ್ಟಡಗಳು ಅವಶ್ಯವೆನಿಸತೊಡಗಿದವು. ಡಾ. ಕೊಕಟನೂರರು ತಮ್ಮ ಮಿತ್ರರ ಮತ್ತು ಸುತ್ತು ಮುತ್ತಲಿನ ಸಂಸ್ಥಾನಗಳ ಅಧಿಪತಿಗಳ ನೆರವಿನಿಂದ ಈ ಸಂಸ್ಥೆಯನ್ನು ಬೆಳೆಸತೊಡಗಿದರು. ರುಗ್ಣಾಲಯದಲ್ಲಿಯೂ ಇಂದು ನಂದನವನವೆಂದು ಕರೆಯಲ್ಪಡುವ ಕ್ಷಯರೋಗ ಚಿಕಿತ್ಸಾ ವಿಭಾಗದಲ್ಲಿಯೂ ಅನೇಕ ಕಟ್ಟಡಗಳು

ಕಣ್ಣಿನ ಕ್ಯಾನ್ಸರ್

ಮಹಾರೋಗದ
ನಿವಾರಣೆ-೭

ಕಣ್ಣಿನ ಕ್ಯಾನ್ಸರ್ ಚಿಕ್ಕ ಮಕ್ಕಳಿಂದ ಮಧ್ಯ ಹಾಗು ಇಳಿ ವಯಸ್ಸಿನ ವರೆಗೆ ಎಲ್ಲ ವಯಸ್ಸಿನ ಜನರಲ್ಲಿ ಕಂಡು ಬರುವ ಸಂಭವವಿದೆ.

ಕಣ್ಣುಗಳು ಸೃಷ್ಟಿಕರ್ತನ ಅಪೂರ್ವ ಕೊಡುಗೆ, ಇವುಗಳನ್ನು ಪ್ರಾರಂಭದಲ್ಲಿ ನಿರ್ಲಕ್ಷಿಸಿದರೆ ಜನ್ಮಾಪಿ ಕುರುಡರಾಗಿ ಕಾಲ ಕಳೆಯಬೇಕಾಗುವದು. ಕಾರಣ ಈ ಕೆಳಗಿನ ಅಂಶಗಳ ಕಡೆಗೆ ನಿಮ್ಮ ಗಮನವಿರುವದು ಅವಶ್ಯ.

ಶಿಶು ಹಾಗೂ ಚಿಕ್ಕ ಮಕ್ಕಳಲ್ಲಿ

ಕಣ್ಣು ಗೊಂಬೆಯಲ್ಲಿ ಹಳದಿ ವರ್ಣದ ಛಾಯೆ ಕಂಡು ಬಂದರೆ ಮತ್ತು ದೃಷ್ಟಿ ಮಾಂದ್ಯ, ಕಣ್ಣು ಮೆಳ್ಳಗಾಗುವದಾಗಲಿ ಲಕ್ಷಣ ಕಂಡು ಬಂದರೆ,

ಮಧ್ಯ ಹಾಗೂ ಇಳಿ ವಯಸ್ಕರಲ್ಲಿ

ಕಣ್ಣು ಗುಡ್ಡೆಗಳು ಹೊರ ಚಾಚಿ ಮುಂದೆ ಬಂದರೆ (PROPTOSIS)

ವಯಸ್ಕರಲ್ಲಿ

ಕಣ್ಣಿಗೆ ಹುಣ್ಣು ಹುಟ್ಟಿದರೂ ಬಹು ಕಾಲದವರೆಗೆ ಮಾಯದೆ ಉಳಿದರೆ,

ನಿಮಗೆ ಕಣ್ಣಿನ ಕ್ಯಾನ್ಸರ್ ಆಗಿದೆಯೆಂದು ತಿಳಿಯಬೇಕು ಇದರಿಂದ ನೀವು ಅಧೀರರಾಗಬೇಕಿಲ್ಲ. ಪ್ರಾರಂಭಿಕ ಅವಸ್ಥೆಯಲ್ಲಿರುವ ಕ್ಯಾನ್ಸರ್ ರೋಗವನ್ನು ಗುಣಪಡಿಸಬಹುದು. ಕಾರಣ ನೀವು ಕೂಡಲೇ ಕಣ್ಣಿನ ತಜ್ಞರನ್ನು ಭೆಟ್ಟಿಯಾಗಿ ಉಪಚಾರ ಪ್ರಾರಂಭಿಸಬೇಕು.

ಈ ರೋಗಕ್ಕೆ ಗಂಡು, ಹೆಣ್ಣು ಎಂಬ ಭೇದವಿಲ್ಲ. ವಯಸ್ಸಿನ ನಿರ್ಬಂಧವೂ ಇಲ್ಲ. ಒಂದೇ ಅವಯವದಲ್ಲಿ ಕಾಣಿಸಿಕೊಳ್ಳುವದೆಂದೂ ಹೇಳಲು ಬರುವದಿಲ್ಲ.

ಈ ರೋಗದಿಂದ ಬಳಲುವ ಬಡ ಹಾಗೂ ಮಧ್ಯಮ ವರ್ಗದ ಜನರ ಸಲುವಾಗಿ ಹುಬ್ಬಳ್ಳಿಯ ಅಮರಗೋಳದ ಬಳಿ ಒಂದು ಸುಸಜ್ಜಿತ ಆಧುನಿಕ ಕ್ಯಾನ್ಸರ್ ಆಸ್ಪತ್ರೆಯೊಂದನ್ನು ಕಟ್ಟಿಸಲಾಗುತ್ತಿದೆ, ಈ ಬೃಹತ್ ಯೋಜನೆಗೆ ಹಣ ನೀಡಲು ಕೊಡುಗೈ ದೊರೆಗಳು ಮುಂದೆ ಬರಬೇಕು.

ನಿಮ್ಮ ಪಾಲಿನ ಮಂತಿಗೆ ಬೇಗ ಬರಲಿ

ಡಾ. ಬಿ. ಆರ್. ಪಾಟೀಲ, ಚೇರಮನ್

ಕರ್ನಾಟಕ ಕ್ಯಾನ್ಸರ್ ಸುಶ್ರೂಷೆ ಹಾಗೂ ಸಂಶೋಧನ ಸಂಸ್ಥೆ
ವಿದ್ಯಾನಗರ, ಹುಬ್ಬಳ್ಳಿ

ಸ್ಥಳದಾನ :

ಸೊಂಡೂರ ಮ್ಯಾಂಗನೀಸ್
ಆ್ಯಂಡ್ ಐರನ್ ಓರ್ಸ್ ಲಿ.,
ಸೊಂಡೂರ (ಬಳ್ಳಾರಿ ಜಿಲ್ಲಾ)

ಮೇಲೆದ್ದವು.

ದೇಶವು ಸ್ವತಂತ್ರವಾದ ನಂತರ ನಾನು ಈ ಕಾರ್ಯದಲ್ಲಿ ನೇರವಾಗಿ ಆಸಕ್ತಿ ವಹಿಸತೊಡಗಿದೆ. ಆರೋಗ್ಯ ಧಾಮದ ಕೆಲಸವು ಹೆಚ್ಚೆಚ್ಚು ಬೆಳೆಯುತೊಡಗಿದ್ದರಿಂದ ಈಗ ಮುಖ್ಯ ಆರೋಗ್ಯಾಧಿಕಾರಿಗಳಾಗಿರುವ ಡಾ. ಮಾಧವ ಕೃಷ್ಣ ವೈದ್ಯರು ಡಾ. ಕೊಕಟನೂರರ ಸಹಾಯಕರಾಗಿ ಬಂದರು. ಡಾ. ಕೊಕಟನೂರರು ೨೧ ವರ್ಷಗಳ ಕಾಲ ಈ ಸಂಸ್ಥೆಯನ್ನು ಕಟ್ಟುವದಕ್ಕಾಗಿ ತಮ್ಮ ಬೆವರು ಮತ್ತು ನೆತ್ತರ ಸುರಿಸಿ ಅದಕ್ಕೊಂದು ಶಾಶ್ವತ ಸ್ವರೂಪ ತಂದುಕೊಟ್ಟು ೧೯೫೦ರಲ್ಲಿ ಮುಖ್ಯ ಆರೋಗ್ಯಾಧಿಕಾರಿಯ ಸ್ಥಾನದಿಂದ ನಿವೃತ್ತರಾದರು. ಅವರ ನಿವೃತ್ತಿಯ ನಂತರ ಡಾ. ವೈದ್ಯರು ಮುಖ್ಯ ಆರೋಗ್ಯಾಧಿಕಾರಿಯ ಸೂತ್ರಗಳನ್ನು ವಹಿಸಿಕೊಂಡು ಆತ್ಮಸಮರ್ಪಣ ಭಾವದಿಂದ ದುಡಿಯುತ್ತ ಈ ಸಂಸ್ಥೆಯ ಆಗುಹೋಗುಗಳಲ್ಲಿ ತಲ್ಲೀನರಾಗಿದ್ದಾರೆ.

ಈ ಸಂಸ್ಥೆ ಹೀಗೆ ಬೆಳೆಯುತ್ತಿರುವಾಗಲೇ ನಾನು ೧೯೬೨ರಲ್ಲಿ ರಾಜಕೀಯ ಕ್ಷೇತ್ರದಿಂದ ನಿವೃತ್ತನಾದೆ. ನಾನು ಬಾಲ್ಯದಲ್ಲಿ ಕಾಣುತ್ತಿದ್ದ ಹೋಗನಸಿಗೆ ಮೂರ್ತ ಸ್ವರೂಪ ಕೊಡುವ ಸುವರ್ಣಸಂಧಿ ನನಗೆ ಒದಗಿ ಬಂದಂತೆನಿಸಿತು. ಆದುದರಿಂದ ನಾನು 'ಕರ್ನಾಟಕ ಆರೋಗ್ಯ ಧಾಮ'ದಲ್ಲಿಯೇ ಇರತೊಡಗಿದೆ ಮತ್ತು ಈ ಸಂಸ್ಥೆಗೆ ನನ್ನ ಪೂರ್ಣಾವಧಿಯ ಸೇವೆ ಸಲ್ಲಿಸತೊಡಗಿದೆ. ಇದರಿಂದ ನನಗೆ ಒಂದು ಬಗೆಯ ಸಮಾಧಾನ ಉಂಟಾಗಿದೆ; ಕೃತಕೃತ್ಯತೆಯ ಸಂತೃಪ್ತಿ ನನಗಾಗಿದೆ. ಏಕೆಂದರೆ ೧೯೧೩ ರ ನವೆಂಬರ್ ೨೪ ರಂದು ಏಡನ್‌ನಿಂದ ನನ್ನ ಅಣ್ಣಂದಿರಿಗೆ ನಾನು ಬರೆದ ಪತ್ರದಲ್ಲಿ ನನ್ನ ಜೀವನದ ಉದ್ದೇಶವನ್ನು ಸ್ಪಷ್ಟವಾಗಿ ವಿವರಿಸಿದ್ದೆ. ರುಗ್ಣ ಸೇವೆಯನ್ನು ಮಾಡಬೇಕೆಂದು ಇಂದಿಗೆ ೭೦ ವರ್ಷಗಳ ಹಿಂದೆ ನಾನು ಇಟ್ಟುಕೊಂಡ ಗುರಿ ನನ್ನ ೮೬ನೆಯ ವಯಸ್ಸಿನಲ್ಲಿ ಈ ಸಂಸ್ಥೆಯ ಮುಖಾಂತರ ಈಡೇರಿದಂತಾಗದೆ. ಇಷ್ಟಾದರೂ ಇನ್ನೂ ನನಗೆ ಸಂಪೂರ್ಣ ತೃಪ್ತಿ ಉಂಟಾಗಿದೆಯೆಂದಲ್ಲ. ಏಕೆಂದರೆ ನನ್ನಂತೆಯೇ ಈ ಸಂಸ್ಥೆಯೂ ಬಡತನದಲ್ಲಿದೆ. ಇಂದಿನಂಥ ವಿಕ್ಷಿಪ್ತ ದಿನಗಳಲ್ಲಿ ಈ ಸಂಸ್ಥೆಯ ಚಟುವಟಿಕೆಗಳನ್ನು ಯಥೋಚಿತವಾಗಿ ನಡೆಸಿಕೊಂಡು ಹೋಗುವದಕ್ಕೆ ಆರ್ಥಿಕ ಸಹಾಯ ನಮಗೆ ಬೇಕು. ಆರ್ಥಿಕ ದೃಷ್ಟಿಯಿಂದ ಈ ಸಂಸ್ಥೆ ಸುಸ್ಥಿರವಾಗಬೇಕೆಂಬುದೇ ನನ್ನ ಅಭಿಲಾಷೆ.

ಈ ಆರ್ಯಾವರ್ತದಲ್ಲಿ ಜನ್ಮ ತಾಳಿ ಪರದಾಸ್ಯ ಶೃಂಖಲೆಯಿಂದ ಬಂಧಿತಳಾಗಿದ್ದ ನನ್ನ ಪ್ರಿಯ ತಾಯಿ ಮಾತೃಭೂಮಿಯ ಬಂಧವಿಮೋಚನೆಗಾಗಿ ದುಡಿಯುವ ಸದ್ಭಾಗ್ಯ ನನಗೆ ಲಭಿಸಿದ್ದು ನನ್ನ ಪೂರ್ವ ಜನ್ಮದ ಸುಕೃತ. ಆ ಜಗತ್ಪಾಲಕನ ಕೃಪೆಯಿಂದ ೮೬ ವರ್ಷಗಳ ಕಾಲ ನಾನು ಪ್ರಿಯ ಜನ್ಮಭೂಮಿಯ, ಪ್ರೀತಿಯ ದೇಶ ಬಾಂಧವರ ಸೇವೆಯನ್ನು ನಿಃಸ್ವಾರ್ಥ ಬುದ್ಧಿಯಿಂದ ಯಾವುದೇ ಫಲಾಪೇಕ್ಷೆ ಇಲ್ಲದೆ ಯಥಾಶಕ್ತಿ ಮಾಡಿದೆ. ಜೀವನ ಸಾಫಲ್ಯ ಪಡೆದೆ. ನನ್ನ ಆಚರಣೆಗಾಗಿ ನಾನು ನನಗಾಗಿ ಹಾಕಿಕೊಂಡ ನಿಯಮದಂತೆ ನನ್ನ ದೇಹದಲ್ಲಿ ಉಸಿರು ಇರುವವರೆಗೂ ರುಗ್ಣ ಸೇವೆ ಮಾಡುವ ಈ ಪುಣ್ಯದ ಕೆಲಸವನ್ನು ಮಾಡುತ್ತಿರುವಾಗಲೇ ನಾನು ಕೊನೆಯುಸಿರು ಎಳೆಯುವಂತೆ ಪರಮಾತ್ಮನು ಕರುಣಿಸಲಿ ಎಂದೇ ನಾನು ಅನವರತ ಆ ದಯಾಘನನನ್ನು ಪ್ರಾರ್ಥಿಸುತ್ತೇನೆ. ✡

Printed & published by Shri K. Janardana for the Karnataka Patrika Private Ltd. at the Samyukta Karnatak Press, Koppikar Road, Hubli. Rep : Bombay: V. Satyamurthy Tel. No. 522412; Calcutta : H. Muzamdar, Phone: 46-4238 : Madras; K. A. Subramaniam 611326; New Delhi : P. R. Chopra Phone : 224130.

ಫಾಸ್ಫೋಮಿನ್ ಅಯರ್ನ್


ಕುಟುಂಬದ ಎಲ್ಲರಿಗಾಗಿ...
ಪ್ರೀತಿ, ಆನಂದ, ಆರೈಕೆ



ಮತ್ತು ನಿಮಗಾಗಿ...

ಫಾಸ್ಫೋಮಿನ್ ಅಯರ್ನ್

ಸ್ತ್ರೀಯರಿಗಾಗಿ ವಿಶೇಷವಾಗಿ
ತಯಾರಿಸಲ್ಪಟ್ಟ ಟಾನಿಕ್



ಇದು ಆರೋಗ್ಯವಂತ ಕೆಂಪು ರಕ್ತಕಣಗಳನ್ನು ತಯಾರಿಸಲು ಸಹಕರಿಸುತ್ತದೆ...ಶಕ್ತಿ ನೀಡುತ್ತದೆ, ದೇಹದಾರ್ಢ್ಯವನ್ನು ಹೆಚ್ಚಿಸುತ್ತದೆ, ದೇಹದ ರೋಗನಿರೋಧಕ ಶಕ್ತಿಯನ್ನು ಬಲಪಡಿಸುತ್ತದೆ.

ಫಾಸ್ಫೋಮಿನ್ ಅಯರ್ನ್ ಪ್ರತಿದಿನ ತೆಗೆದುಕೊಳ್ಳಿರಿ.

SARABHAI CHEMICALS LTD.

Shilpi SC 34/76 kan

KASTURI PRICE: 1-25 Regd. No. KRNG 43
Registered with the Registrar of Newspapers for India under No. 3633157

ಈ ಗುರುತಿನ ಅರ್ಥವೇನು?

ಬಿಸ್ಕತ್ತಿನ ಉತ್ಕೃಷ್ಟತೆ!

ಗ್ಲೂಕೋಸ್ ಗೋಲ್ಡನ್
ಮಾರೀ ವಿನ್ನರ್

ಅಪಾರ ಅನುಭವದಿಂದ
ಅತ್ಯಾಧುನಿಕ ರೀತಿಯಲ್ಲಿ
ತಯಾರಾಗುವ ಕ್ವಾಲಿಟಿ
ಬಿಸ್ಕತ್ತುಗಳಿಗೆ ರುಚಿಯಲ್ಲಿ,
ಪೋಷಣೆಯಲ್ಲಿ, ಗರಿಗರಿಯಲ್ಲಿ
ಸಾಟಿಯೇ ಇಲ್ಲ.

ಕ್ವಾಲಿಟೀಸ್ ಎಂದರೆ **ಉತ್ಕೃಷ್ಟ** ಬಿಸ್ಕತ್ತು

ಕ್ವಾಲಿಟಿ ಫುಡ್ ಪ್ರಾಡಕ್ಟ್ಸ್
ಬೆಂಗಳೂರು–560 039

